॥ ಶ್ರೀಃ ಹರಿಃ ಓಂ ॥

ಶ್ರೀ ಹರಿದಾಸಸಾಹಿತ್ಯ ಪ್ರಚಾರಮಾಲೆ



ಶ್ರೀಜಗನ್ನಾಥದಾಸವರ್ಯಕೃತ

# ಶ್ರೀ ಮದ್ಧರಿ ಕಥಾಮೃತಸಾರ

## ನಾಮಸ್ಮರಣಸಂಧಿ

### ಸರ್ವವ್ಯಾಖ್ಯಾನಸಾರಸಂಗ್ರಹ

[ಸಂಪುಟ–೧೪]

ಪ್ರಕಾಶಕರು :

ಹೆಚ್. ಎಸ್. ಶ್ರೀನಿವಾಸಮೂರ್ತಿ
ನಂ. ೬೧, ೫ನೇ ಮು ಅಡ್ಡರಸ್ತೆ, ನರಸಿಂಹರಾಜಾ ಕಾಲೋನಿ
ಬೆಂಗಳೂರು–೫೬೦೦೧೯

ಶ್ರೀಮದ್ಧರಿಕಥಾಮೃತಸಾರ
ನಾಮಸ್ಮರಣಸಂಧಿ
ಸರ್ವವ್ಯಾಖ್ಯಾನಸಾರ ಸಂಗ್ರಹ
ಸಂಪುಟ(೧೨)


ಪ್ರಥಮ ಮುದ್ರಣ : ಕ್ರಿ.ಶ. ೧೯೯೨
ಪ್ರತಿಗಳ ಸಂಖ್ಯೆ : ೧೦೫೦

**ಬೆಲೆ : ಮೂವತ್ತು ರೂಪಾಯಿಗಳು**

ಪ್ರತಿಗಳು ದೊರೆಯುವ ಸ್ಥಳ :

(೧) **ಹೆಚ್. ಎಸ್. ಶ್ರೀನಿವಾಸಮೂರ್ತಿ**
ನಂ. ೬೧, ೫ನೆಯ ಅಡ್ಡರಸ್ತೆ
ನರಸಿಂಹರಾಜಾ ಕಾಲೋನಿ
ಬೆಂಗಳೂರು-೫೬೦೦೧೯

(೨) **ವೇದಾಂತ ಬುಕ್ ಹೌಸ್**
ಉಮಾ ಚಿತ್ರಮಂದಿರದ ಬಳಿ
ಚಾಮರಾಜಪೇಟೆ
ಬೆಂಗಳೂರು-೫೬೦೦೧೮

ಮುದ್ರಕರು :
**ವ್ಯಾಸ್ ಎಂಟರ್‌ಪ್ರೈಸಸ್**
ಬುಲ್ ಟೆಂಪಲ್ ರೋಡ್
ಬೆಂಗಳೂರು-೫೬೦೦೦೪

# ಪ್ರಕಾಶಕರ ನುಡಿ

ಹರಿದಾಸ ಸಾಹಿತ್ಯಾಭಿಮಾನಿಗಳಲ್ಲಿ ಪ್ರಕಾಶಕರ ಸವಿನಯಪೂರ್ವಕ ವಿನಂತಿ. **ಸರ್ವವ್ಯಾಖ್ಯಾನಸಾರಸಂಗ್ರಹದ** ಮಾಲಿಕೆಯಲ್ಲಿ ಶ್ರೀಮದ್ಧರಿಕಥಾಮೃತಸಾರದ **ನಾಮಸ್ಮರಣಸಂಧಿಯನ್ನು** 13ನೆಯ ಸಂಪುಟದರೂಪದಲ್ಲಿ ಪ್ರಕಟಿಸಿ, ನಿಮ್ಮ ಕೈಯೊಳಗಿಡಲು ಸಂತೋಷಿಸುತ್ತೇವೆ ಶ್ರೀಹರಿವಾಯುಗುರುಗಳ ಕೃಪಾಬಲದಿಂದ ಇಲ್ಲಿಯವರೆಗೆ 12 ಸಂಪುಟಗಳು ಪ್ರಕಟವಾಗಿ ತಮ್ಮ ಕೈಸೇರಿವೆ.

**ನಾಡೀಪ್ರಕರಣಸಂಧಿಯು** (ಸಂಪುಟ 12) ಪ್ರಕಟಣೆಯಾದ ನಂತರ, ಅಲ್ಪಾವದಿಯಲ್ಲಿಯೇ ಪ್ರಸಕ್ತ ಸಂಪುಟವು ಹೊರಬರುತ್ತಿರುವುದು ಸಂತಸದ ಸಂಗತಿ. ಸಕಾಲದಲ್ಲಿ ಭಕ್ತವೃಂದದವರಿಂದ ಸಮಗೆ ದ್ರವ್ಯಸಹಾಯ ದೊರೆಯದಿದ್ದರೂ, ಹೇಗೋ ಹಣವನ್ನು ಹೊಂದಿಸಿಕೊಂಡು ಈ ಸಂಪುಟವನ್ನು ಪ್ರಕಟಿಸಲಾಗಿದೆ. ಇತ್ತ ಕಡೆಗೆ ತಮ್ಮೆಲ್ಲರ ಗಮನವನ್ನು ಸೆಳೆಯಬೇಕೆಂಬುವೇ ನಮ್ಮ ಮುಖ್ಯ ಗುರಿ.

## ನೂತನ ಯೋಜನೆ

ದಿನಾಂಕ 1–1–1992ರಿಂದ **ನೂತನ ಯೋಜನೆಯು** ಜಾರಿಗೆಬಂದಿದೆ. ಅದರ ವಿವರಗಳನ್ನು ಹಿಂದಿನ 12ನೆಯ ಸಂಪುಟದಲ್ಲಿ ಕೊಡಲಾಗಿದೆ.

(i) ನೂತನ ಯೋಜನೆಗೆ ಸದಸ್ಯರಾಗಿ ನೋಂದಾಯಿತರಾದವರಿಗೆ 1ರಿಂದ 33 ಸಂಪುಟಗಳ ಪರ್ಯಂತ, ಮುಂದಿನ ಸಂಪುಟಗಳು ಪ್ರಕಟವಾದಂತೆಲ್ಲಾ, ಒದಗಿಸಲಾಗುವುದು. ಈ 33 ಸಂಪುಟಗಳ ಪೈಕಿ, 3, 4 ಮತ್ತು 5ನೆಯ ಸಂಧಿಗಳ ಸಂಪುಟಗಳು ಪುನರ್ಮುದ್ರಿತವಾಗಬೇಕಾಗಿವೆ ಸದ್ಯಕ್ಕೆ ಅವುಗಳನ್ನು ಬಿಟ್ಟು, 30 ಸಂಪುಟಗಳನ್ನು ಒದಗಿಸಲಾಗುವುದು. ರಿಯಾಯಿತಿ ದರದಂತೆ ಅವುಗಳ ಒಟ್ಟು ಮೌಲ್ಯ 30 ಸಂಪುಟಗಳು X 25 ರೂ. = 750 ರೂ.ಗಳು. ಈ ಮೊಬಲಗನ್ನು 7 ಮಾಸಿಕ ಕಂತುಗಳಲ್ಲಿ (125 + 125 + 100 + 100 + 100 + 100 + 100 = 750 ರೂ.ಗಳು.) ಈ ಪ್ರಕಾರ ಪ್ರಕಾಶಕರ

ಹೆಸರಿನಲ್ಲಿ **M.O/DD.** ದ್ವಾರಾ ಕಳುಹಿಸಬಹುದು. ಬೆಂಗಳೂರಿನಿಂದ ಹೊರಗಿರುವವರಿಗೆ **Regd. Post** ದ್ವಾರಾ ಪ್ರತಿಗಳನ್ನು ಕಳುಹಿಸಲಾಗುವುದು. ಅವರಿಗೆ ಅಂಚೆವೆಚ್ಚ ಉಚಿತ.

(ii) ಹಿಂದಿನ ಯೋಜನೆಗೆ ಸದಸ್ಯರಾಗಿ, ಈಗಾಗಲೇ ಅದರಂತೆ ಸಂಪುಟಗಳ ಪ್ರತಿಗಳನ್ನು ಪಡೆದಿರುವವರು, ಅಲ್ಲಿಂದ ಮುಂದಕ್ಕೆ 33ನೇಯ ಸಂಪುಟದ ಪರ್ಯಂತ, ಪ್ರತಿ ಸಂಪುಟಕ್ಕೆ 25 ರೂ. (ಸರಾಸರಿ ಬೆಲೆ) ಗಳಂತೆ ಆಗುವ ಮೊಬಲಗನ್ನು ಮಾಸಿಕ ಕಂತುಗಳಲ್ಲಿ ಕೊಡಬಹುದು.

**ವಿಶೇಷ ವಿನಂತಿ :–**

ಶ್ರೀಹರಿವಾಯುಗುರುಗಳಿಗೆ ಅತ್ಯಂತ ಪ್ರೀತಿಕರವಾದ ಈ ಗ್ರಂಥರತ್ನದ ಪ್ರಕಟಣಕಾರ್ಯ ಅಗಾಧವಾದ ವಿಷಯ. ಇನ್ನೂ 20 ಸಂಪುಟಗಳ ಪ್ರಕಟಣೆಯಾಗಬೇಕಾದ ಬೃಹತ್ಪ್ರಮಾಣದ ಕಾರ್ಯ ಉಳಿದಿದೆ. ಇದರ ಸಾಧನೆ ಪೂರ್ಣವಾಗಬೇಕಾದರೆ, ನಿಮ್ಮೆಲ್ಲರ ಅಭಿಮಾನದ ನೆರವು ಮತ್ತು ಸಹಕಾರ ಅತ್ಯಗತ್ಯವಾಗಿದೆ. ನಿಮ್ಮಿಂದ ನೆರವು ಸಕಾಲಕ್ಕೆ ಒದಗದಿದ್ದರೆ, ಈ ಕೆಲಸ ಅಪೂರ್ಣವಾಗಿ ಮಧ್ಯಕ್ಕೇ ನಿಲ್ಲುವ ಪರಿಸ್ಥಿತಿ ಉಂಟಾಗಬಹುದು. ಜ್ಞಾನಪ್ರಚಾರರೂಪವಾದ ಈ ಸತ್ಕಾರ್ಯವು ಯಶಸ್ವಿಯಾಗಿ ಪೂರ್ಣವಾಗಲು ತಮ್ಮ ಮುಂದೆ ಈ ಕೆಲವು ಸಲಹೆಗಳನ್ನು ಇಡಲಾಗಿದೆ :-

(i) ಹಿಂದಿನ ಯೋಜನೆಯ ಸದಸ್ಯರು, **ನೂತನ ಯೋಜನೆಗೆ** ನೋಂದಾಯಿತರಾಗಿ, ಮೊಬಲಗನ್ನು ಕ್ರಮವಾಗಿ ತಪ್ಪದಂತೆ ಪ್ರತಿ ತಿಂಗಳೂ ಮಾಸಿಕ ಕಂತುಗಳಲ್ಲಿ ನೀಡಿ, ಸಹಕರಿಸಬೇಕಾಗಿ ವಿನಂತಿ.

(ii) ಪ್ರತಿ ಸದಸ್ಯರೂ, ಈ ಪ್ರಕಟಣೆಯ ವಿವರಗಳನ್ನು ತಮ್ಮ ಪರಿಚಯಸ್ಥರಿಗೆ ತಿಳಿಸಿ, ಅವರವರ ಪತಿಯಿಂದ ಸಾಧ್ಯವಾದಷ್ಟು ಮಂದಿಯನ್ನು **ನೂತನ ಯೋಜನೆಗೆ** ನೋಂದಾಯಿಸಲು ಪ್ರಯತ್ನಿಸಬೇಕೆಂದು ಬಿನ್ನಹ.

(iii) ಕನಿಷ್ಠಪಕ್ಷ 5000 ರೂ.ಗಳನ್ನು **ಬಡ್ಡಿರಹಿತ ಸಾಲದರೂಪದಲ್ಲಿ** ನೀಡುವವರಿಗೆ, ಪ್ರತಿತಿಂಗಳ 10ನೆಯ ದಿನಾಂಕದೊಳಗೆ ತಪ್ಪದೇ 500 ರೂ.ಗಳಂತೆ 10 ಕಂತುಗಳಲ್ಲಿ ಹಿಂದಿರುಗಿಸಲಾಗುವುದು. ಅವರಿಗೆ ಎಲ್ಲಾ ಸಂಪುಟಗಳನ್ನೂ ಒದಗಿಸಲಾಗುವುದು.

(iv) **ಜಾಹೀರಾತುಗಳನ್ನು** ನೀಡುವವರಿಗೆ, ಜಾಹೀರಾತಿನ ಮೊಬಲಗಿನ ಪ್ರಕಾರ, ಸಂಪುಟಗಳನ್ನು ಒದಗಿಸಲಾಗುವುದು. ಸನ್ಮಾನ್ಯ ಸದಸ್ಯರು ಜಾಹೀರಾತುಗಳನ್ನು ಒದಗಿಸಿಕೊಡುವ ಕಾರ್ಯದಲ್ಲಿ ಪ್ರಯತ್ನಿಸಬೇಕಾಗಿ ವಿನಂತಿ.

(v) ಧಾರ್ಮಿಕ ಮನೋಭಾವವಿರುವ ಶ್ರೀಮಂತರು, ತಮ್ಮ ಹಿರಿಯರ ಹೆಸರಿನಲ್ಲಿ ಉದಾರ ಧನಸಹಾಯ ನೀಡಬೇಕಾಗಿ ವಿಶೇಷ ಪ್ರಾರ್ಥನೆ. 3000 ರೂ. ಮೇಲ್ಪಟ್ಟು ಧನಸಹಾಯ ನೀಡುವ ದಾನಿಗಳ ಹಿರಿಯರ ಭಾವಚಿತ್ರಗಳನ್ನು ಆಯಾಯಾ ಸಂಪುಟದಲ್ಲಿ ಹಾಕಿಸಲಾಗುವುದು. ಅವರಿಗೆ ಎಲ್ಲಾ ಸಂಪುಟಗಳನ್ನೂ ಒದಗಿಸಲಾಗುವುದು.

(vi) ಸಂದಿ 3 (ವ್ಯಾಪ್ತಿಸಂದಿ), ಸಂದಿ 4 (ಭೋಜನರಸವಿಭಾಗಸಂದಿ) ಮತ್ತು ಸಂದಿ 5 (ವಿಭೂತಿಸಂದಿ) ಇವುಗಳ **ಪುನರ್ಮುದ್ರಣಕ್ಕೆ** ಧನಸಹಾಯ ನೀಡುವವರಿಗೆ ಪ್ರಕಾಶನವು ಆಭಾರಿಯಾಗಿರುವುದು. ಅಂತಹವರ ನೆರವಿನಿಂದ 1ರಿಂದ 33 ಸಂಪುಟಗಳಪರ್ಯಂತ ಸಕಲರಿಗೂ ಎಲ್ಲಾ ಸಂಪುಟಗಳು ದೊರೆಯಲು ಸಹಾಯವಾಗುವುದು.

**ಉಪಕಾರ ಸ್ಮರಣೆ :-**

(i) ಈಚೆಗೆ ನೂತನ ಯೋಜನೆಗೆ ಸ್ವಯಂಪ್ರೇರಿತರಾಗಿ ನೋಂದಾಯಿತರಾಗಿರುವ ಸದಸ್ಯರುಗಳಿಗೆ ನಮ್ಮ ವಂದನೆಗಳು.

(ii) ಹಿಂದಿನ ಯೋಜನೆಗೆ ಸದಸ್ಯರಾಗಿದ್ದ ಎಲ್ಲರಿಗೂ ಪುನರ್ವಿನಂತಿ ಪತ್ರಗಳನ್ನು ಬರೆದು, ನೂತನ ಯೋಜನೆಗೆ ಅವರ ಸಹಕಾರವನ್ನು ಬಯಸಿ, ವಿನಂತಿಸಿಕೊಂಡಿದ್ದೆವು. ಕೆಲವರು ಮಾತ್ರ ತಮ್ಮ ಸಮ್ಮತಿ ನೀಡಿ, ಮಾಸಿಕ ಕಂತುಗಳನ್ನು ಕಳುಹಿಸಿರುತ್ತಾರೆ. ಅವರಿಗೆಲ್ಲಾ ನಮ್ಮ ಧನ್ಯವಾದಗಳು. ಉಳಿದವರೆಲ್ಲರೂ ನೂತನ ಯೋಜನೆಗೆ ಸದಸ್ಯರಾಗಿ ಮುಂದುವರಿದರೆ, ಮುಂದಿನ ಉಳಿದ ಸಂಧಿಗಳ ಪ್ರಕಟಣಾಕಾರ್ಯ ಶೀಘ್ರವಾಗಿ ಮುಂದುವರಿಯಲು ಸಹಾಯವಾಗುವುದು. ನಮ್ಮೀ ವಿನಂತಿಗೆ ಮನ್ನಣೆ ನೀಡಬೇಕೆಂದು ಕೋರುತ್ತೇವೆ.

(iii) ಪ್ರಸಕ್ತ ಸಂಪುಟವನ್ನು ಅತ್ಯಲ್ಪಕಾಲದಲ್ಲಿ ಅಂದವಾಗಿ ಮುದ್ರಿಸಿ ಕೊಟ್ಟಿರುವ ಶ್ರೀ ವೆಂಕಣ್ಣಾಚಾರ್ಯರಿಗೆ ನಮ್ಮ ವಂದನೆಗಳು.

(iv) ಮುದ್ರಣದ ಸಂಪೂರ್ಣ ಮೇಲ್ವಿಚಾರಣೆಯನ್ನು ವಹಿಸಿಕೊಂಡಿರುವ ಶ್ರೀ ಪಿ. ಆರ್. ಎಮ್. ದೇಸಾಯಿಯವರಿಗೆ ಪ್ರಕಾಶನವು ಆಭಾರಿಯಾಗಿದೆ.

**ಗಮನಿಸಿ**

ಹಿಂದಿನ 12ನೆಯ ಸಂಪುಟದ (ನಾಡೀಪ್ರಕರಣಸಂಧಿ) ಬಿಡುಗಡೆಯ ಸಮಾರಂಭವನ್ನು ನಾವು ಇಟ್ಟುಕೊಳ್ಳಲಿಲ್ಲ. ಪ್ರತಿ ಸಮಾರಂಭಕ್ಕೂ 2000 ರೂ.ಗಳ ವರೆಗೆ ಖರ್ಚಾಗುವುದು. ಈ ಹಣವನ್ನು ಪ್ರಸಕ್ತ ಸಂಪುಟದ ಮುದ್ರಣಕ್ಕೇ ಉಪಯೋಗಿಸಲಾಗಿದೆ.

**ಮುಂದಿನ ಪ್ರಕಟಣೆ :–**

**ಪಿತೃ ಗಣಸಂಧಿ– 14ನೆಯ ಸಂಪುಟದ ರೂಪದಲ್ಲಿ ಶೀಘ್ರವೇ ಪ್ರಕಟವಾಗಲಿದೆ.**

ಬೆಂಗಳೂರು-19
ದಿನಾಂಕ

ಇಂತೀ ನಿಮ್ಮ ವಿಶ್ವಾಸಿ
ಹೆಚ್. ಎಸ್. ಶ್ರೀನಿವಾಸಮೂರ್ತಿ
(ಪ್ರಕಾಶಕರು)

# ತಿದ್ದುಪಡಿ

| ಕ್ರಮ ಸಂಖ್ಯೆ | ಪುಟ ಸಂಖ್ಯೆ | ಸಾಲು | ತಪ್ಪು | ಸರಿ |
|---|---|---|---|---|
| 1 | 2 | 3 | 4 | 5 |
| 1 | ಪುಟ 3ರಿಂದ31ರವರೆಗೆ ಮೇಲ್ಭಾಗದಲ್ಲಿ 'ನಾಡಿಪ್ರಕರಣಸಂಧಿ' ಎನ್ನುವ ಬದಲು 'ನಾಮಸ್ಮರಣಸಂಧಿ' ಎಂದು ತಿದ್ದಿಕೊಳ್ಳಬೇಕು. | | | |
| 2 | 5 | 19 | ಸ್ವತಿಯುಶ್ಶ್ರೇವ | ಸ್ವಸ್ತಿೀಯುಶ್ರೇವ |
| 3 | 6 | 16 | ಷಷ್ಪುಮಸ್ಕಂಧದ | ಷಷ್ಠುಮಸ್ಕಂಧದ |
| 4 | 7 | 9 | ಶ್ರೀಶನು | ಶ್ರೀಶನ |
| 5 | 7 | 14 | ಕೌವದೀ | ಕೌಮುದೀ |
| 6 | 10 | 8 | ಶೋಭಿಸುವಾಗಲೀ | ಶೋಭಿಸುವಾಗಲಾಗಲಿ |
| 7 | 19 | 17 | ಪರವಾತ್ಮ | ಪರಮಾತ್ಮ |
| 8 | 43 | 6 | ಸರ್ವಕರ್ಮಗಳಗೂ | ಸರ್ವಕರ್ಮಗಳೂ |
| 9 | 56 | 1 | ಪಂಚಿಜ್ಞಾನೇಂದ್ರಿಯ ಗಳು | ಪಂಚಜ್ಞಾನೇಂದಿ ಯ ಗಳು |
| 10 | 64 | 2 | ದುಷ್ಪಹಾದ | ದುಷ್ಟವಾದ |
| 11 | 77 | 7 | ನಾಬುವ | ನೆಂಬುವ |
| 12 | 87 | 16 | ಅನನನೆಂಬ | ಅನಲನೆಂಬ |
| 13 | 90 | 17 | ಪರಿಹಾವಾವುವು | ಪರಿಹಾರವಾಗುವುವು |
| 14 | 94 | 21 | ಭಗವದಾಜ್ಞಾನ ಪ್ರಕಾರ | ಭಗವದಾಜ್ಞಾ ಪ್ರಕಾರ |

| | | | | |
|---|---|---|---|---|
| 15 | 97 | 10 | ಕೂಡಾಡಿದರು | ಕೂಡಾಡದಿರು |
| 16 | 101 | 23 | ಸತ್ಸಂಗದಿ | ಸತ್ಸಂಗತಿ |
| 17 | 102 | 6 | ದೊರಕಿಕಿ | ದೊರಕಿ |
| 18 | 115 | 11 | ನಿತ್ಯಾವಿಯೊಗಿಸಿ | ನಿತ್ಯಾವಿಯೋಗಿನಿ |
| 19 | 125 | 15 | ಅದರಂತೆಯೋ | ಅದರಂತೆಯೇ |
| 20 | 133 | 3 | ಸಂರಕ್ಷಸುತ್ತಾನೆ | ಸಂರಕ್ಷಿಸುತ್ತಾನೆ |
| 21 | 134 | 10 | ಪರ್ಯಾವ ಸ್ನಾಕ್ಕೆ | ಪರ್ಯಾವಸಾನಕ್ಕೆ |
| 22 | 160 | 19 | ಅನುಗ್ರವೂ ರ್ವಕ | ಅನುಗ್ರಹಪೂರ್ವಕ |
| 23 | 176 | 8ಮತ್ತು9 | ಪ್ರಸಾವೋ | ಪ್ರಸ್ತಾವೋ |
| 24 | 188 | 19 | ಜೀವನರ | ಜೀವರನ |
| 25 | 199 | 4 | ವಾಪ್ತಾಂಶಾದಿ | ವ್ಯಾಪ್ತಾಂಶಾದಿ |

|| ಶ್ರೀಃ ಹರಿಃ ಓಂ ||

|| ಗರುಡವಾಹನ ಶ್ರೀಲಕ್ಷ್ಮೀನರಸಿಂಹಾಭಿನ್ನ ಶ್ರೀಜಗನ್ನಾಥವಿಠ್ಠಲಾಯ ನಮಃ ||

# ಸಂಧಿ ೧೩

# ನಾಮಸ್ಮರಣ ಸಂಧಿ

ಹರಿಕಥಾಮೃತಸಾರ ಗುರುಗಳ |
ಕರುಣದಿಂದಾಪನಿತು ಪೇಳುವೆ |
ಪರಮ ಭಗವದ್ಭಕ್ತರಿದನಾದರದಿ ಕೇಳುವುದು || ಪ ||

## ಪದ್ಯ ೧

**ಮೂಲ:-**

ಮಕ್ಕಳಾಡಿಸುವಾಗ ಮಡದಿಯೊ |
ಳಕ್ಕರದಿ ನಲಿವಾಗ ಹಯ ಪ |
ಲ್ಲಕ್ಕಿ ಗಜ ಮೊದಲಾದ ವಾಹನಗಳೇರಿ ಮೆರೆವಾಗ ||
ಬಿಕ್ಕುವಾಗ ಆಕಳಿಸುತಲಿ ದೇ |
ವಕ್ಕಿತನಯನ ನೆನೆವುತಿಹ ನರ |
ಸಿಕ್ಕನು ಯಮದೂತರಿಗೆ ಆವಾವಲ್ಲಿ ನೋಡಿದರು || ೧ ||

**ಅವತರಣಿಕೆ:-**

ನಮ್ಮ ನಿತ್ಯ ದಿನಚರಿಯ ಜೀವನದಲ್ಲಿ ಯಾವಕಾರ್ಯಗಳಲ್ಲಿ ಆಸಕ್ತ ರಾಗಲೀ ಆಯಾಯಾ ಪ್ರಸಂಗ ವಿಶೇಷಗಳಲ್ಲಿ, ದೇಶಕಾಲಾದಿಗಳಲ್ಲಿ, ಸರ್ವಾ

ವಸ್ಥೆಗಳಲ್ಲಿಯೂ ದೇವಕೀತನಯನನ್ನು ನಿರಂತರ ನೆನೆಯುತಿಹ ಮಾನವನು ಯಮದೂತರಿಗೆ ಎಂದೆಂದಿಗೂ ಸಿಕ್ಕನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ:-**

**ಮಕ್ಕಳಾಡಿಸುವಾಗ**=ಮಕ್ಕಳನ್ನು ಆಡಿಸುತ್ತಿರುವಕಾಲದಲ್ಲಿ, **ಮಡದಿಯೊಳು**=ಪತ್ನಿಯೊಡನೆ, **ಅಕ್ಕರದಿ**=ಪ್ರೇಮದಿಂದ, **ನಲಿವಾಗ**=ರಮಿಸುತ್ತಿರುವಾಗ, **ಹಯ**=ಕುದುರೆ, **ಪಲ್ಲಕ್ಕಿ**=ಪಲ್ಲಕ್ಕಿಯಲ್ಲಿ, **ಗಜ**=ಆನೆ, **ಮೊದಲಾದ**=ಇತ್ಯಾದಿ, **ವಾಹನಗಳೇರಿ**=ವಾಹನ ವಿಶೇಷಗಳಲ್ಲಿ ಕುಳಿತು, **ಮೆರೆವಾಗ**=ವೈಭವದಿಂದ ಸಂಚರಿಸುತ್ತಿರುವಾಗ, **ಬಿಕ್ಕುವಾಗ**=ಬಿಕ್ಕಳಿಕೆ ಬಂದಾಗ, **ಆಕಳಿಸುತಲಿ**=ಆಕಳಿಸುತ್ತಿರುವಾಗ, **ದೇವಕ್ಕಿತನಯನ**=ದೇವಕೀಪುತ್ರನಾದ ಶ್ರೀಕೃಷ್ಣನನ್ನು, **ನೆನೆವುತಿಹ**=ಧ್ಯಾನರೂಪದಿಂದ ಸ್ಮರಿಸುತ್ತಿರುವ, **ನರ**=ಪುರುಷನು, **ಆವಾವಲ್ಲಿ ನೋಡಿದರು**=ಎಲ್ಲೆಲ್ಲಿಯೂ, **ಯಮದೂತರಿಗೆ ಸಿಕ್ಕನು**=ಯಮದೂತರ ವಶನಾಗುವುದಿಲ್ಲ. ॥ ೧ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಭಗವನ್ನಾಮಸ್ಮರಣೆ ಮಾಡತಕ್ಕವ ಯಮದೂತರಿಗೆ ಸಿಗೋದಿಲ್ಲ ಎಂತ ಹೇಳುತಾರೆ.

ಹಿಂದೆ ಕರುಣಾಸಂಧಿಯಲ್ಲಿ 'ಶ್ರೀ ಮುಕುಂದನ ಪರಮಮಂಗಳ ನಾಮ ನರಕಸ್ಥರನ ಸಲಹಿತು, ಪಾಮರರ ಪಂಡಿತರೆನಿಸಿ ಪುರಷಾರ್ಥ ಕೊಡುತಿಹುದು' ಎಂತ ಹರಿನಾಮೋಚ್ಚಾರಣೆಯಿಂದ ಅಧಿಕಾರಿಗಳು ಮಹಾ ಪುರಷಾರ್ಥವನ್ನು ಹೊಂದತಾರೆ ಎಂತ ನಿರೂಪಿಸಿದ ವಿಚಾರವನ್ನು ಈ ಸಂಧಿಯಲ್ಲಿ ವಿವರ ಮಾಡುತ್ತಾ, ಇನ್ನೂ ಸತ್ಸಾಧನಿಗೆ ಅನುಕೂಲವಾದ ಭಗವದ್ಭಕ್ತರ ಮಹಿಮಾ ತಿಳಿಯುವ ಪುಣ್ಯಪಾಪಗಳ ತಿಳಿಯುವ ವಿಚಾರವೂ, ಪಂಚ ಭೂತಗಳಿಂದ ನಿರ್ಮಿತವಾದ ಜೀವರ ಭೋಜನೋಪಯೋಗವಾದ ಪದಾರ್ಥ

ಗಳಲ್ಲಿ ಅನುಸಂಧಾನ ಪ್ರಕಾರವೂ, ಶ್ರೀ ಪರಮಾತ್ಮನ ವ್ಯಾಪ್ತಿ ಪ್ರಕಾರವೂ ಈ ಸಂಧಿಯಲ್ಲಿ ಹೇಳತಾರೆ.

ಮಡದಿ = ಹೆಂಡತಿ, ಜೀವಸಾಂಕೇತನಾದ ಪುರುಷಗೆ ಸುಬುದ್ಧಿ, ದುರ್ಬುದ್ಧಿ ಎನತಕ್ಕ ಇಬ್ಬರು ಹೆಂಡಿರು. ಇಂಥಾ ಇಬ್ಬರ ಹೆಂಡಿರ ಕೂಡಿಕೊಂಡು ಅವರಲ್ಲಿ ಅತಿ ಆಸಕ್ತಿಯಿಂದ ಸಂಭೋಗಸಾಂಕೇತವಾದ ಅವರ ಸಂಗಡ ಕೂಡಿಕೊಂಡು ಆಟಗಳ ಆಡೋಕಾಲದಲ್ಲಿ (ಉತ್ಪನ್ನರಾದ), ಮನಸ್ಸು ಬುದ್ಧಿ ಚಿತ್ತ ಅಹಂಕಾರ ಅಂತಃಕರಣವೆಂಬ ವೃತ್ತಿಗಳು ಐದು, ಇವು ಐದು ಪುತ್ರರು. ಇಂತಹ ಪುತ್ರರ, ದಶೇಂದ್ರಿಯಗಳೆಂಬೋವೆ ಮನಿಗಳು, ಈ ಮನಿಗಳಲ್ಲಿ ಆಡಿಸೋಕಾಲದಲ್ಲಿ ಎಂದರೆ, ಪಂಚಮನೋವೃತ್ತಿಗಳ ದಶೇಂದ್ರಿಯಗಳಲ್ಲಿಟ್ಟು ತದ್ದ್ವಾರಾ ಮಾಡ ತಕ್ಕ ಸುಬುದ್ಧಿ ಪುತ್ರರಾದ ಸುವೃತ್ತಿ ದ್ವಾರಾ, ದುರ್ಬುದ್ಧಿ ಪುತ್ರರಾದ ದುರ್ವೃತ್ತಿ ದ್ವಾರಾ ಮಾಡತಕ್ಕ ಅನೇಕ ಸುಕರ್ಮ, ದುಷ್ಕರ್ಮಗಳೆಂಬೋವೇ ಆಡಿಸೋಣ. ಇಂಥಾ ಕರ್ಮರೂಪವಾದ ಆಟಗಳ ಆಡೋ ಕಾಲದಲ್ಲಿ ಮಡದಿ ಸಾಂಕೇತರಾದ ಸುಬುದ್ಧಿ ದುರ್ಬುದ್ಧಿ ಸಂಗಡ ಏಕಾಂತದಲ್ಲಿ ರಮಿಸೋದಕ್ಕೆ ಸದೃಶವಾದ, ಸಮೀಚೀನಗಳಾದ ಆಲೋಚನಾ ಕಾಲದಲ್ಲಿ, ಆ ಆಲೋಚನಿಯಲ್ಲಿ ಉಭಯ ಮಡದಿಯರಲ್ಲಿ, ಇಂದ್ರಿಯಾಖ್ಯ ಮನಿಗಳಲ್ಲಿ, ಆ ಮನಿಗಳಲ್ಲಿ ಆಡಿಸತಕ್ಕ ವೃತ್ತಿ ರೂಪವಾದ ಪುತ್ರರಲ್ಲಿ, ಪುತ್ರರ ಆಡಿಸೋದಕ್ಕೆ ಸದೃಶವಾದ ದೇಹೇಂದ್ರಿ ಯಾದಿಗಳಿಂದ ಮಾಡತಕ್ಕ ಕರ್ಮಗಳಲ್ಲಿ, ಕುದುರೆ, ಕಾಮ್ಯವೆಂಬೋ ಕುದುರೆ, ಕ್ರೋಧವೆಂಬೋ ಆಂದೋಳಿಕ, ಅಷ್ಟಮದಗಳೆಂಬೋ ಎಂಟು ಆನೆಗಳು ಇವೇ ಮೊದಲಾದ ಎಂದರೆ, ಕಾಮ-ಕ್ರೋಧಾದಿ ಅರಿಷಡ್ವರ್ಗಗಳು, ತಮೋ ಮೋಹಾದಿ ಐದು ಅವಿದ್ಯೆಗಳು; ಸಾತ್ತ್ವಿಕಾದಿ ಗುಣಗಳು ಮೂರು, ಅಹಂಮ ಮತಾದಿಗಳು ಎರಡೂ ಇವೇ ಮೊದಲಾದ ಅನೇಕ ವಿಧಗಳಾದ, ಏರಿ ಸಂಚಾರ ಮಾಡತಕ್ಕ ವಾಹನಗಳ, ಇವುಗಳಲ್ಲಿ ದುಷ್ಟವಾಹನಗಳು, ಛಲೋ ವಾಹನಗಳು ಎಂದು ಉಭಯ ವಿಧ, ಏರೋಣಕ್ಕೆ ಸದೃಶವಾದ ಕರ್ಮವ್ಯಾಪಾರಗಳಿಂದ ಸಂಚಾರ ಮಾಡುವಾಗ ಆಯಾ ವಾಹನಗಳಲ್ಲಿ ಅಕಸ್ಮಾತ್ತಾಗಿ ಬರೋದು, ಬಿಕ್ಕು, ತತ್‌ಸದೃಶ ಅಕಸ್ಮಾತ್ತಾಗಿ ಬರುವ ಲಾಭಾಲಾಭಗಳಲ್ಲಿ, ಸುಖ-ದುಃಖಾದಿಗಳಲ್ಲಿ, ನಿದ್ರಾಕ್ಕೆ

ಸೂಚನಿ ಆಕಳಿಕೆ. ನಿದ್ರಾ ಬಾಹ್ಯಜ್ಞಾನ ಶೂನ್ಯ ಮಾಡತಕ್ಕದ್ದು, ತಲ್ಲಕ್ಷಣಯಾ ಬಾಹ್ಯಜ್ಞಾನದಿಂದ ಕ್ರಮಕ್ರಮವಾಗಿ ಶೂನ್ಯವಾಗುತ್ತಲಿ, ಪೂರ್ವೋಕ್ತ ಅಧಿಷ್ಠಾನಗಳಲ್ಲಿ, ತದನ್ಯ ಅಧಿಷ್ಠಾನಗಳಲ್ಲಿ, ನೇತ್ರಗಳು ದಾವ ಕಡೆ ನೋಡಿದರೂ, ಕರ್ಣಗಳು ದಾವಕಡೆ ಶಬ್ದಗಳು ಕೇಳಿದರೂ, ತ್ವಕ್ ದಾವ ಸ್ಪರ್ಶಮಾಡಿದರೂ, ಮನಸ್ಸು ದಾವದರಲ್ಲಿ ಸಂಚರಿಸಿದರೂ, ಇತ್ಯಾದಿ ಬಹು ವಿಧವಾದ ಅಧಿಷ್ಠಾನಗಳಲ್ಲಿ ಅಹಂ-ಮಮತಾದಿಗಳಿಂದ ರಹಿತನಾಗಿ ಅಂತರ್ಗತದಲ್ಲಿ ದೇವಕೀದೇವೇರ ಪುತ್ರನಾದ ಶ್ರೀಕೃಷ್ಣನ ಧ್ಯಾನರೂಪದಿಂದ ನೆನೆಯುತ್ತ, ಬಿಂಬಕ್ರಿಯಾ ಪ್ರತಿಬಿಂಬಕ್ರಿಯಾ ಅನುಸಂಧಾನ ಮಾಡುತ್ತಾ ಇರತಕ್ಕ, ತದ್ದ್ವಾರ ನಾಮಸ್ಮರಣ ಮಾಡತಕ್ಕ ಆ ಪುರುಷ, ದಾವ ಕಡೆ ನೋಡಿದಕಾಲಕ್ಕೂ, ಅಂತರ್ಗತನಾದ ಪರಮಾತ್ಮನ್ನೇ ನೋಡಿದವನಾದ್ದರಿಂದ [ಇಂಥಾ] ಮನುಷ್ಯ, ಪಾಪಿಗಳಿಗೆ ಬರತಕ್ಕವರು ಯಮದೂತರು, ಇಂಥಾ ಜ್ಞಾನಿ ಪಾಪಿ ಅಲ್ಲ, ಆದ್ದರಿಂದ ಯಮದೂತರಿಗೆ, ಅವರಿಗೆ ವಶನಾಗಿ ಅವರ ಕೈಲಿ ಸಿಕ್ಕೋದಿಲ್ಲ. ವಿಷ್ಣುದೂತರಿಗೆ ಸಿಗತಾನೆಂತ ತಾತ್ಪರ್ಯ.

ಪರಾಧೀನ, ಅಸ್ವತಂತ್ರನಾದ ಜೀವನ್ನ ಮಾಡು ಎಂತ ಸಂಭೋಧನ ಹ್ಯಾಂಗೆ ಕೂಡತದೆ ಎಂದರೆ, ಆಕ್ಷೇಪ ಸಮಾಧಾನ—ವೇದಶಾಸ್ತ್ರಗಳು ಜೀವನ್ನ ಸಂಭೋಧನ ಮಾಡಿ ಪಾಪಕರ್ಮ ಮಾಡಕೂಡದು, ಪುಣ್ಯಕರ್ಮ ಮಾಡು ಎಂತ ಹೇಳತವೆ. ಮತ್ತು ಜೀವ ಅಸ್ವತಂತ್ರನಾದ ಕಡಿಯಿಂದ, ಪರಮಾತ್ಮನ ವ್ಯತಿರಿಕ್ತ ದಾವಕಾರ್ಯ ಮಾಡೋದಕ್ಕೂ ಸ್ವಾತಂತ್ರ್ಯ ಸಾಲದೆಂದು ಹೇಳತವೆ. ಸ್ವತಂತ್ರಗೆ ಸಂಭೋಧನವೇ ಹೊರತು, ಅಸ್ವತಂತ್ರಗೆ ಸಂಭೋಧನ ಕೂಡದು. ಜೀವ ಅಸ್ವತಂತ್ರ, ಪರಮಾತ್ಮ ಸ್ವತಂತ್ರ ಎಂಬುದು ಪ್ರತ್ಯಕ್ಷ ಅನುಮಾನಗಳಿಂದ ಸಿದ್ಧವು. ಅನಾದಿಕರ್ಮದಿಂದಲೂ, ತ್ರಿಗುಣದಿಂದಲೂ ಬದ್ಧನಾದವನು ಜೀವ. ಇಂಥಾ ಬಂಧಕ ಪರಿಹಾರಕ್ಕೆ ಜೀವಗೆ, ವಿವಕ್ಷಾದಿಂದ ಹೇಳತದೇ ಹೊರತು, ಪರಮಾತ್ಮಗೆ ಹೇಳೋದಿಲ್ಲ. ಆದಕಡಿಯಿಂದ ವೇದಾದಿಗಳು ಜೀವಗೆ ಸಂಬೋಧನ ಮಾಡತವೆ. ಮತ್ತು ಜೀವ ತ್ರಿಗುಣಾದಿಗಳಿಂದ ಬಂಧಕನಾದ ಕಡಿಯಿಂದ ವೇದೋಕ್ತಕರ್ಮಗಳ ಮಾಡೇ ತೀರಬೇಕು. ಈ ಸಂಬೋಧನಾ ವಾಕ್ಯಗಳು ಅಸೃಜ್ಯದಶಾದಲ್ಲಿ ಪ್ರಯೋಜನವಿಲ್ಲ. ಸ್ಥಿತಿಕಾಲದಲ್ಲಿ ಪ್ರಯೋಜ

ನವು. ಕಾರ್ಯ ಎಂದರೆ, ಬಿಂಬನಾದ ಪರಮಾತ್ಮ ಪ್ರತಿಬಿಂಬನಾದ ನನ್ನಿಂದ ಮಾಡಿಸಿದ ಕರ್ಮಗಳ, ಪ್ರೇರಣಿಯಾ ಮಾಡತೇನೆ ಎಂತ ತಿಳಿದಿರಬೇಕು. ಈ ಪ್ರಕಾರ ತಿಳಿಯೋಣ, ಅನುಸಂಧಾನಜ್ಞಾನವೂ ಈಶ್ವರಾಧೀನವು ಆದ ಪ್ರಯುಕ್ತ, ಈಶ್ವರ, ಜೀವರ ಸ್ಥೂಲದೇಹದಿಂದ ಸೃಷ್ಟಿಗೆ ತಂದಾರಭ್ಯ ನಿದ್ರಾಕಾಲ ವ್ಯತಿರಿಕ್ತ ತದನ್ಯ ಸರ್ವಕಾಲಗಳಲ್ಲಿ ಕ್ಷಣಲವಕಾಲವಾದರೂ ಬಿಡದೆ ಪುಣ್ಯ-ಪಾಪಗಳ, ಇನ್ನೂ ಅನೇಕ ಜೀಪರು ಮಾಡತಕ್ಕ ಕಾರ್ಯಗಳ ಜೀವಗೆ ಸರ್ವದಾ ತಿಳಿಸತಾ ಇರ್ತಾನೆ. ಇದರನ್ನ ಜೀವ ತಿಳೀತಾ ಇರ್ತಾನೆ. ಈ ಪ್ರಕಾರ ಪರಮಾತ್ಮ ಜೀವಗೆ ತಿಳಿಸೋದಕ್ಕೆ ಶ್ರಾಂತಿಯೇ ಇಲ್ಲ. ಜೀವ ತ್ರಿಗುಣ ಬದ್ಧನಾದ್ದರಿಂದ ಅದನ್ನನುಸರಿಸಿ ಆಚರಣೆ ವ್ಯತ್ಯಾಸ ಮಾಡುತ್ತಾ ಇರತಾನೆ. ಅದರಂತೆ ಫಲ ಕೊಡತಾ ಇರ್ತಾನೆ. ರಾಜ ಭೃತ್ಯನ್ಯಾಯವಾದ್ದರಿಂದ, ಭೃತ್ಯ ರಾಜಾಜ್ಞೆ ಮೀರಕೂಡದು. ಸ್ವರೂಪ ಅಸ್ವತಂತ್ರ. **'ತೇನ ವಿನಾ ತೃಣಮಪಿ ನ ಚಲತಿ'** ಎಂಬ ಪ್ರಮಾಣಾನುಸಾರ, ಈಶ್ವರ ಪ್ರೇರಣೆಯೇ ಸರ್ವಕರ್ಮಕ್ಕೂ ಕಾರಣವೆಂದು ತಾತ್ಪರ್ಯ. ॥ ೧ ॥

**೨. ಭಾವಪ್ರಕಾಶಿಕೆ**

ಶ್ರೀಪರಮಾತ್ಮನ ನಾಮಸ್ಮರಣೆ ಮಾಡುವುದಕ್ಕೆ ಸ್ನಾನಾದಿಗಳನ್ನು ಮಾಡಿ ಜಪಾದಿಗಳನ್ನು ಜಪಿಸುವಂತೆ ಇಂತಹ ಕಾಲಗಳಲ್ಲೇ ಮಾಡಬೇಕು. ಮಿಕ್ಕ ಕಾಲದಲ್ಲಿ ಮಾಡಬಾರದೆಂತಿಲ್ಲ. ಸ್ಮರಣೆ ಮಾಡುವುದಕ್ಕೆ ಸರ್ವದಾ ಕಾಲವೇ. ಗರುಡಪುರಾಣದಲ್ಲಿ 'ಪುತ್ರಾದೀನಾಂ ಚುಂಬನೇ ಚೈವ ಕಾಲೇ ಸವೇಣು ಹಸ್ತಂ ಸಸ್ಮರೇತ್ಕೃಷ್ಣಮೇವ ॥ ಸುಸಂಗಕಾಲೆ ಸ್ವಸ್ತ್ರಿಯಶ್ಚೈವ ನಿತ್ಯಂ ಗೋಪಸ್ತ್ರೀಣಾಂ ಪೀನಪಯೋಧರಂ ಧೃತಂ' ಮಕ್ಕಳನ್ನು ಚುಂಬನಾದಿಗಳನ್ನು ಮಾಡುವಾಗ ವೇಣುಗೋಪಾಲಕೃಷ್ಣನನ್ನು ಸ್ಮರಿಸಬೇಕು. ತನ್ನ ಭಾರ್ಯಳಲ್ಲಿ ಭೋಗಿಸುವ ಕಾಲದಲ್ಲಿ ಗೋಪಿಕಾಸ್ತ್ರೀಯರ ಪೀನವಾದ ಕುಚಗಳನ್ನು ಧರಿಸಿರುವ ಶ್ರೀಕೃಷ್ಣನನ್ನು ಸ್ಮರಿಸಬೇಕು. ಎಂದು ಹೇಳಿರುವರು. ಇದೇ ಅರ್ಥವನ್ನೇ ದಾಸರಾಯರು ಈ ಪದ್ಯದಿಂದ ಹೇಳಿರುವರು. ಮಕ್ಕಳಾಡಿಸುವಾಗ, ಅವು ವಿಚಿತ್ರವಾದ ಆಟಗಳನ್ನಾಡುತ್ತಿದ್ದರೆ ಅದನ್ನು ನೋಡಿ

ಭಗವಂತನು ಶಿಶುರೂಪಿಯಾಗಿ ಅಲ್ಲಿದ್ದು ಹೀಗೆ ಆಟವಾಡುತ್ತಿರುವನೆಂದು ಚಿಂತಿಸಬೇಕು. ಸ್ತ್ರೀಯಾದಿ ಭೋಗಕಾಲದಲ್ಲಿಯೂ ದಂಪತಿಗಳಲ್ಲಿ ದಂಪತಿ ರೂ ಪಿ ಯಾ ಗಿ ಪರಮಾತ್ಮನಿದ್ದು ಕ್ರೀಡಿಸುತ್ತಿರುವನೆಂದು ಪರಮಾತ್ಮನನ್ನು ಸ್ಮರಿಸಬೇಕು. 'ಆಸೀನಃ ಸಂವಿಶಂಸ್ತಿಷ್ಠನ್ ಭುಂಜಾನಃ ಪರ್ಯಟನ್ ಪಿಬನ್ ॥ ಚಿಂತಯಾನೋ ಹೃಷೀಕೇಶಮಪಶ್ಯತ್ತನ್ಮಯಂ ಜಗತ್' ಎಂಬ ಭಾಗವತ ದಶಮಸ್ಕಂಧದ ವಾಕ್ಯದಂತೆ ಕೂಡುವಾಗಲೂ, ಮಲಗುವಾಗಲೂ, ನಿಲ್ಲು ವಾಗಲೂ, ಭುಂಜಿಸುವಾಗಲೂ, ಸಂಚರಿಸುವಾಗಲೂ, ಪಾನಮಾಡುವಾಗಲೂ, ಪರಮಾತ್ಮನನ್ನು ಚಿಂತಿಸುತ್ತಾ ಜಗತ್ತೆಲ್ಲ ತನ್ಮಯವಾಗಿಯೇ ಕಂಡನೆಂದು ಹೇಳಿ ರುವರು. ಇದೊಂದು ಸ್ಮರಣೆಗೆ ಸಾಧನವೆಂದರ್ಥ. ಮತ್ತು ಷಷ್ಠಸ್ಕಂಧದಲ್ಲಿ 'ಪತಿತಃ ಸ್ಖಲಿತೋ ಭಗ್ನಃ ಸಂದಷ್ಟಸ್ತಪ್ತ ಆಹತಃ ॥ ಹರಿರಿತ್ಯವಶೇನಾಹ ಪುಮಾನ್ನಾರ್ಹತಿ ಯಾತನಾಂ' ಬೀಳುವಾಗಲೂ, ಎಡವುವಾಗಲೂ, ಯಾವು ದಾದರೂ ಗಾಯ ಮೊದಲಾದವು ತಗಲಿದಾಗಲೂ, ತುಟಿಯನ್ನು ಕಚ್ಚಿ ಕೊಂಡಾಗಲೂ, ಸಂತಪ್ತನಾಗಿರುವಾಗಲೂ, ಏಟುತಿಂದಕಾಲದಲ್ಲೂ ಸಹ, ಅಯ್ಯೋ ಅಪ್ಪ ಅನ್ನದೆ ಹರೆ ಹರೆ ಅಂದರೆ ಸಾಕು. ಅವನು ಯಮಯಾತನೆ ಯನ್ನು ಹೊಂದನು, ಎಂದು ಹೇಳಿರುವರು. ಆದರೆ 'ಅಭಕ್ತ್ಯೋದಾಹೃತಂ ನೈವಫಲದಾತೃ ಭವಿಷ್ಯತಿ' ಎಂಬ ಷಷ್ಠಸ್ಕಂಧದ ತಾತ್ಪರ್ಯಾನುಸಾರವಾಗಿ, ಭಕ್ತಿಯಿಲ್ಲದೆ ನಾಮೋಚ್ಚರಣೆ ಮಾಡಿದರೆ ಏನೂ ಫಲವಾಗುವುದಿಲ್ಲ, ಎಂದು ಸ್ಪಷ್ಟವಾಗಿರುವುದರಿಂದ ಭಕ್ತಿಯಿಂದ ಮಾತ್ರ ಮೇಲೆ ಹೇಳಿದಂತೆ ನಾಮೋ ಚ್ಚರಣೆ ಮಾಡಿದರೆ ಯಮದೂತರನ್ನು ಕಾಣುವುದಿಲ್ಲ.

ಆದರಂತೆಯೇ ದಾಸರಾಯರು ಕುದುರೆಯ ಮೇಲೂ, ಪಲ್ಲಕ್ಕಿಯ ಒಳಗೂ, ಆನೆ ಮೊದಲಾದ ವಾಹನಗಳ ಮೇಲೆ ಕೂತು ಮೆರೆಯುವಾಗಲೂ, ಪರ ಮಾತ್ಮನನ್ನು ಭಕ್ತಿಯಿಂದ ಸ್ಮರಿಸಿದ ಮನುಷ್ಯನು ಯಮದೂತರಿಗೆ ಸಿಕ್ಕನು. ಎಂದು ಹೇಳಿರುವರು. ಇದೇ ಪ್ರಕಾರ ಭಾಗವತ ಷಷ್ಠಸ್ಕಂಧದಲ್ಲಿ 'ಸಕೃನ್ಮನಃ ಕೃಷ್ಣಪದಾರವಿಂದಯೋರ್ನಿವೇಶಿತಂ ತದ್ಗುಣರಾಗಿಯೈರಿಹ ॥ ನತೇ ಯಮಂ ಪಾಶ ಭೃತಶ್ಚ ತದ್ಭಟಾನ್ ಸ್ವಪ್ನೇಽಪಿ ಪಶ್ಯಂತಿ ಹಿ ಚೀರ್ಣ ನಿಷ್ಕೃತಾಃ' ಪರಮಾತ್ಮನ ಪಾದಾರವಿಂದದಲ್ಲಿ ಚೆನ್ನಾಗಿ ಮನಸ್ಸನ್ನಿಟ್ಟು ಒಂದಾವರ್ತಿಯಾ

ದರೂ ಪರಮಾತ್ಮನ, ಗುಣನಾಮ ಕರ್ಮನಾಮಗಳನ್ನು ಅರ್ಥ ಜ್ಞಾನ ಪೂರ್ವಕವಾಗಿ ಉಚ್ಚರಿಸಿದರೆ, ಅವರು ಯಮನನ್ನೇ ಆಗಲಿ, ಪಾಶಗಳನ್ನು ಧರಿಸಿದ ಯಮಭಟರನ್ನಾಗಲೀ ಸ್ವಪ್ನದಲ್ಲಿ ಕೂಡ ಕಾಣುವುದಿಲ್ಲ. ಏಕೆಂದರೆ, ಇದರಿಂದ ಮಾಡಲ್ಪಟ್ಟ ಪ್ರಾಯಶ್ಚಿತ್ತ ಉಳ್ಳವರಾಗಿರುವರು ಎಂದು ಹೇಳಿರುವರು. ಅದೇ ಅಭಿಪ್ರಾಯವನ್ನೇ 'ಸಿಕ್ಕುವನೇ ಯಮದೂತರಿಗೆ ಆವಲ್ಲಿ ನೋಡಿದರು' ಎಂದು ದಾಸರಾಯರು ಹೇಳಿರುವರು. ॥ ೮ ॥

## ೩. ಭಾವದರ್ಪಣ

ಪುತ್ರದಾರಾದ್ಯಾಧಿಷ್ಠಾನದಲ್ಲಿ ಸ್ವಬಿಂಬನೇ ನಿಂತು ವಿವಿಧ ಸಂತೋಷ ಪಡಿಸಿ ಪ್ರಾಂತಕ್ಕೆ ಸ್ವಸ್ವರೂಪವ್ಯಕ್ತಿ ಮಾಡುವ ಶ್ರೀಶನು ನಾಮ ಸ್ಮರಣೆಯನ್ನು ತಿಳಿದು ಮಾಡಿರಿ ಎಂದು ಹೇಳುತ್ತಾರೆ ಮಕ್ಕಳೀತಿ. "ಪುತ್ರಾದಿನಾಂ ಚುಂಬನೇ ಚೈವಕಾಲೇ ಸವೇಣುಹಸ್ತಂ ಸಂಸ್ಮರೇತ್ಕೃಷ್ಣಮೇವ । ಸುಸಂಗ ಕಾಲೇ ಸ್ವಸ್ತ್ರೀಯಶ್ಚೈವ ನಿತ್ಯಂ ಗೋಪಸ್ತ್ರೀಣಾಂ ಪೀನಪಯೋಧರಂ ಧೃತ ಮಿತಿ" ಗಾರುಡೋಕ್ತೇಃ ॥ ೧ ॥

## ೪. ಶ್ರೀ ವ್ಯಾಸದಾಸ ಸಿದ್ಧಾಂತಕೌಮದೀ

ಅಭ್ಯರ್ಹಿತನ್ಯಾಯೇನ ಕೋಮಲಾಂಗಧ್ಯಾನಂ ಆಸನಾದ್ಯಪೇಕ್ಷಂ ಉಕ್ತಂ ಪೂರ್ವತ್ರ ॥ ಅತ್ರ ತು ತದನಪೇಕ್ಷಂ ಸರ್ವದಾ ಯೋಗ್ಯ ಮುಮುಕ್ಷೂದ್ಧಾರಕ ಲಕ್ಷ್ಮೀವಕ್ಷೋಜಾಶ್ಲಿಷ್ಟ ವಕ್ಷಃ ಸ್ಮರಣಂ ವಕ್ತುಂ ಏತತ್ಸಂಧಿ ಮುಪಕ್ರಮತೇ— ಮಕ್ಕಳ ಇತಿ ॥ ಅತ್ರ ಇದಂ ಬೋಧ್ಯಮ್— "ಸ್ಮರ್ತವ್ಯಂ ಸತತಂ ವಿಷ್ಣುಃ ವಿಸ್ಮರ್ತವ್ಯಃ ನ ಜಾತುಚಿತ್" ॥ ಇತ್ಯುಕ್ತೇಃ ಸ್ಮರಣಂ ಆವಶ್ಯಕಮ್ ॥ ಕೇವಲಂ ತತ್ ಉದ್ಧಾರಣಾಯ ನ ಅಲಮ್ ॥ ಗುಣೋತ್ಕರ್ಷ ಜ್ಞಾತ (ನ) ರೀತಿ ವಿರೋಧಾತ್ ॥ ಕೇವಲಂ ನಾಮಾರ್ಥಧೀಃ ಅಪಿ ಮುಕ್ತಯೇ ನ ಕ್ಷಮಾ ॥ ಅಭಕ್ತಪಠಿತಂ ನಾಮ ಶ್ರುತಂ ಚ ನರಕಾ ವಹಮ್ ॥ ಇತ್ಯುಕ್ತೇಃ ॥ ಭಕ್ತಸ್ಯಾತೋ ನಾಮಕೀರ್ತಿಃ ಇತಿ ಚ ॥ ಅಭಕ್ತ್ಯೋದಾಹೃತಂ ನೈವ ಫಲದಾತೃ ಭವಿಷ್ಯತಿ ॥ ಇತಿ ಚ ॥ ಕುಪ್ಯತ್ಯನ್ಯಥಾ ಭಕ್ತಿಪೂರ್ವಂ ನಾಮ

ಬುದ್ಧಿಃ ಅಪಿ ಸೇತಿ ಕರ್ತವ್ಯತ್ವೇನ ಝಟಿತಿ ಜನಯತಿ ಫಲಂ ಕಾಲವಿಶೇಷೇ ಮೂರ್ತಿ ವಿಶೇಷ ಸ್ಮೃತಿರೇವ ಸಾ ॥ ಏತತ್ ಸರ್ವಂ ಅತ್ರೈವ "ದೇವಕೀ ತನಯ" ಪದೇನ ಪಂಚಮ ಪದೇನ ಸೂಚಿತಮ್ ॥ "ದೇವಕೀ ನಂದನ" (ತನಯ)– ಓಂ* ಉತವಾಸಂಶಿ ಭೂಯಸೀಃ ಪಿಬಾ ಸೋಮಮಿಂದ್ರ ಮದಂತು ತ್ವಾಯಂ ತೇ ಸುಷಾ (ಶ್ರಾ)ವ ಹರ್ಯಶ್ವಾದ್ರಿಃ ॥ ಸೋತು (ತ) ರ್ಬಾ ಹುಭ್ಯಾಂ ಸುಯತೋ ನಾರ್ವಾ ॥ *ಓಂ* ॥ ದೇವಾನಾಂ ಸ್ವಮು ಖಾನಾಂ ಸುಖಂ ಅನೇನ ಅರ್ಪಿತೇನ ಸೋಮೇನ ತದ್ವತ್ ಆಹ್ಲಾದಕಾತ್ಮೀ ಯೇನ ಭಾರ್ಯಾ ಪತ್ಯಾದಿನಾ ಅಸ್ತಿ ಇತಿ ದೇವಕಿಃ ಸೋಮಃ ॥ ತೇನ ನಂದತಿ ಮೋದಯತಿ ಇತಿ ದೇವಕೀ ನಂದನಃ ॥ ೧ ॥

"ಮಡದಿ"—ಹೆಂಡತಿ, "ಅಕ್ಕರ"—ಅಕ್ಕರತೆ.

**ಕನ್ನಡಾರ್ಥ**

"ಅಭ್ಯರ್ಹಿತಂ ಪೂರ್ವಂ"—"ಮುಖ್ಯವಾದುದು ಮೊದಲು" ಎಂದು ಹೇಳಿರುವ ಯುಕ್ತಿಯಂತೆ ಕೋಮಲಾಂಗನಾದ ಪರಮಾತ್ಮನ ಹರಿಯ ಆಸ ನಾದಿ ಕ್ರಮಗಳನ್ನೊಳಗೊಂಡ ಧ್ಯಾನಕ್ರಮವನ್ನು ಹಿಂದಿನ ಧ್ಯಾನ ಪ್ರಕ್ರಿಯಾ ಸಂಧಿಯಲ್ಲಿ ನಿರೂಪಿಸಿಯಾಯಿತು. ಆಸನ ಮುಂತಾದುವುಗಳಿರದಿದ್ದರೂ ಸಹ ಮಾಡಲು ಬರುವಂಥ (ಆಸನಾದಿಗಳ ನಿರ್ಬಂಧ—ನಿಯಮರಹಿತವಾದ) ಎಲ್ಲ ಕಾಲದಲ್ಲಿಯೂ ಸುಲಭವಾದ ಸಕಲ ಯೋಗ್ಯ ಮುಮುಕ್ಷುಗಳನ್ನೂ ಉದ್ಧರಿ ಸುವ ರಮಾರಮಣನ ನಾಮಸ್ಮರಣವನ್ನು ನಿರೂಪಿಸಲು ಈ ಸಂಧಿಯನ್ನು ಪ್ರಾರಂಭಿಸುತ್ತಾರೆ, "ಮಕ್ಕಳಾಡಿಸುವಾಗ" ಎಂಬ ಪದ್ಯದಿಂದ. ಇಲ್ಲಿ ತಿಳಿಯ ಬೇಕಾದ ಮಹತ್ವದ ಸಂಗತಿಯು ಇದು. "ಯಾವಾಗಲೂ ವಿಷ್ಣುವನ್ನು ಸ್ಮರಿಸಬೇಕು, ಅವನನ್ನು ಯಾವಾಗಲೂ ಮರೆಯಬಾರದು" ಎಂದು ಹೇಳಿರು ವದರಿಂದ ವಿಷ್ಣು ಸ್ಮರಣವು ಅತ್ಯಂತ ಅವಶ್ಯಕವಿರುತ್ತದೆ. ಆದರೆ ಬರಿಯ ವಿಷ್ಣು ಸ್ಮರಣವಷ್ಟೇ ಸಾಲದು. ಬರಿಯ ವಿಷ್ಣು ಸ್ಮರಣವು ಅಂದರೆ ಪರ ಮಾತ್ಮನ ಸರ್ವೋತ್ತಮತ್ವ ಜ್ಞಾನವಿಲ್ಲದ ಸ್ಮರಣವು ಶಾಸ್ತ್ರಸಮ್ಮತವಲ್ಲ. ಪರ ಮಾತ್ಮನ ನಾರಾಯಣನ ಸರ್ವೋತ್ತಮತ್ವವನ್ನು ತಿಳಿಯದ ಮನುಷ್ಯನನ್ನು

ಯಾವ ತೀರ್ಥವ್ರತೋಪವಾಸಗಳೂ ಪವಿತ್ರ ಗೊಳಿಸಲಾರವು, ಎಂದು ಶಾಸ್ತ್ರವು ಹೇಳುತ್ತದೆ. ಆದುದರಿಂದ ಕೇವಲ ನಾಮಾರ್ಥಸ್ಮರಣವು ಮುಕ್ತಿಗೆ ಕಾರಣ ವೆನಿಸುವುದಿಲ್ಲ. ವಿಷ್ಣು ಭಕ್ತಿಯಿಲ್ಲದವನು ಮಾಡುವ ನಾಮೋಚ್ಚಾರಣದ ಶ್ರವಣ ಪಠಣಗಳು ನರಕಕ್ಕೆ ಕಾರಣವಾಗುತ್ತವೆ. ಅಭಕ್ತನಿಂದ ಉಪದೇಶವು ಫಲದಾಯಕವಾಗುವುದಿಲ್ಲ. ವಿಷ್ಣು ಭಕ್ತಿಯು ನಾಮಸ್ಮರಣೆಯಿಂದ ಮೋಕ್ಷ ವಾಗಲಿಕ್ಕೆ ಇತಿ ಕರ್ತವ್ಯತಾ ರೂಪವಾಗಿರುತ್ತದೆ. ಸಹಕಾರಿ ಕಾರಣವಾಗು ತ್ತದೆ. ವಿಷ್ಣು ಭಕ್ತಿಯಿಂದ ಸಹಕೃತವಾದ ಭಗವನ್ನಾಮ ಸಂಸ್ಮರಣವು ಮುಕ್ತಿಯನ್ನು ತೀವ್ರವಾಗಿ ದೊರಕಿಸಿಕೊಡುತ್ತದೆ. ಕಾಲಕ್ಕೆ ತಕ್ಕಂತೆ ಭಗವ ನ್ಮೂರ್ತಿಯನ್ನು ವಾಯು ವಿಷ್ಣು ಭಕ್ತಿಃ ಪುರಸ್ಸರವಾಗಿ ಉಪಾಸಿಸಿದರೆ ಶೀಘ್ರವಾಗಿ ಮೋಕ್ಷ ಮುಂತಾದ ಫಲಗಳು ಲಭಿಸುತ್ತವೆ. ಇವೆಲ್ಲ ಸಂಗತಿ ಗಳು "ದೇವಕೀ ತನಯ"—ಮುಂತಾದ ಐದನೆಯ ಚರಣ ಪದಗಳಿಂದ ಸೂಚಿತ ವಾಗುತ್ತವೆ.

"ದೇವಕೀತನಯು" ವೆಂಬುದು "ದೇವಕೀನಂದನ" ವೆಂಬ ನಾಮಕ್ಕೆ ಸಮಾನವಾದುದು. ದಾರಾಪುತ್ರ ಮುಂತಾದ ಸರ್ವಸಮರ್ಪಣ ಭಕ್ತಿಯೆಂಬ ಸೋಮವನ್ನು ಹರಿಯಲ್ಲಿ ಅರ್ಪಿಸುವುದರಿಂದ ಸುಖವಾಗುವುದರಿಂದ "ದೇವಕಿ" ಎಂದರೆ ಸೋಮವೆಂದು ಅರ್ಥ. ಅದರಿಂದ ಆನಂದಗೊಳಿಸುವುದರಿಂದ ಅಥವಾ ಆನಂದಪಡುವುದರಿಂದ ದೇವಕೀನಂದನನೆಂದು ಕರೆಯುತ್ತಾರೆ. ಇದು ಬೃಹತೀಮಂತ್ರಾನುಗುಣವಾದ ಅರ್ಥವು. ॥ ೧ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಹರಿಃ ಓಂ॥ ಭಕ್ತಿಪೂರ್ವಕ ಶ್ರೀಹರಿನಾಮಸ್ಮರಣೆಯಿಂದಲೇ ಪಾಪಪರಿ ಹಾರವಾಗುತ್ತಿರುವಲ್ಲಿ, ಉಕ್ತ ಉಪಾಸನೆಗಳು ಸದ್ಗತಿ ಕೊಡುವವೆಂದು ಹೇಳ ತಕ್ಕದ್ದೇನಿದೆ, ಎಂಬ ಅಭಿಪ್ರಾಯ ಸೂಚಿಸುತ್ತಾ ನಾಮಸ್ಮರಣೆ ಮಹಿಮೆ, ಜೀವತ್ರೈವಿಧ್ಯಜ್ಞಾನಲಕ್ಷಣ, ಪಂಚಭೂತಸ್ಥ ಪಂಚಮೂರ್ತಿಸ್ಮರಣೋಪಾಸನೆ, ವೃಷ್ಟಿಗತ ಪಂಚಮೂರ್ತಿ ಉಪಾಸನೆ, ಗೋಚಾದ್ರಿಜಾದಿ ರೂಪಸ್ಮರಣೆ, ಕಾರಣಾದಿ ಷಡ್ರೂಪಕ್ಕೆ ಸಾರಶುಭಾದಿ ಷಡ್ರಸಾರ್ಪಣೆ ಚಿಂತನೆ ಮೊದಲಾದ

ವಿವರವನ್ನು ನಾಮಸ್ಮರಣೆ ಎಂಬ ೧೩ನೆಯ ಸಂಧಿಯಲ್ಲಿ ನಿರೂಪಿಸಿರುತ್ತಾರೆ, ಹರಿಕಥಾ ಎಂತ. ಶ್ರೀಹರಿಯ ಸ್ಮರಣೆ ಉಪಾಸನೆಯನ್ನು ಹೇಳುವ ಕಥೆಯೇ ಹರಿಕಥೆ. ಇದು ಮೋಕ್ಷಕ್ಕೆ ಮುಖ್ಯಸಾಧನವಾದ್ದರಿಂದ ಅಮೃತಸಾರ. ಗುರು ಕೃಪಾಬಲದಿಂದ ಹೇಳಿದ್ದನ್ನು ಅತ್ಯಂತ ಶ್ರೀಹರಿಪ್ರಿಯರು ಕೇಳಬೇಕು ॥ಸಂ।ಸೂ॥

ಆದಿಯಲ್ಲಿ ಮಕ್ಕಳಾಡಿಸುವಾಗ ಇತ್ಯಾದಿ ಮೂರು ಪದ್ಯಗಳಿಂದ ದೇವರ ನಾಮಸ್ಮರಣೆ ಮಹಿಮೆ ತಿಳಿಸುತ್ತಾರೆ. ಮಕ್ಕಳನ್ನು ಆಡಿಸುತ್ತಾಗಲೀ, ಪತ್ನಿ ಯಲ್ಲಿ ಆಸಕ್ತಿಯಿಂದ ವಿನೋದಿಸುವಾಗಲಾಗಲೀ, ಕುದುರೆ ಪಲ್ಲಕ್ಕಿ ಆನೆ ಮೊದ ಲಾದ ಉತ್ತಮವಾಹನಗಳನ್ನು ಹತ್ತಿ ಸವಾರಿ ಮಾಡುತ್ತಾ ಶೋಭಿಸುವಾಗಲೀ, ವಾತಪಿತ್ತಜನ್ಯ ಬಿಕ್ಕಳಿಕೆ ಬಂದಾಗಲಾಗಲೀ, ಆಕಳಿಸುವಾಗಲಾಗಲೀ ತತ್ತದ್ಗತ ಕೃಷ್ಣಾದಿರೂಪ ನಾಮಸ್ಮರಣೆ ಮಾಡಿದ ಭಕ್ತನು ಯಮದೂತರ ಕೈಲಿ ಸಿಕ್ಕಿ ನರಕ ವನ್ನು ಹೊಂದುವುದಿಲ್ಲ. ಆವಾವಲ್ಲಿ ನೋಡಿದರು ಎಂದರೆ, ಭಾಗವತಾದಿ ಎಲ್ಲಾ ಗ್ರಂಥಗಳಲ್ಲಿ ನೋಡಿದರೂ, ಇದು ತಿಳಿಯುವುದೆಂದರ್ಥ ॥ ೧ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರೀಹರಿಯ ನಾಮಸ್ಮರಣೆಯ ಮಹಾತ್ಮ್ಯೆಯನ್ನು ವಿವರಿಸುತ್ತಾರೆ. ಸಮಸ್ತಪಾಪಕ್ಷಾಳನೆಗೈಸುವ ಏಕೈಕ ಉಪಾಯವೆಂದರೆ, ಶ್ರೀಹರಿನಾಮಸ್ಮರಣೆ ಕೇವಲ ಯಾಂತ್ರಿಕವಾಗಿ ಕೇಶವ, ನಾರಾಯಣಾದಿ ಶ್ರೀಹರಿಯ ನಾಮಗಳನ್ನು ಉಚ್ಚರಿಸಿದ ಮಾತ್ರದಿಂದ ಪಾಪಗಳು ಪರಿಹಾರವಾಗುವುದಿಲ್ಲ. ನಾಮದ ಮಹಾತ್ಮ್ಯೆಯನ್ನು ಅರ್ಥಾನುಸಂಧಾನಪೂರ್ವಕ ತಿಳಿಯದೇ, ಕೇವಲ ನಾಮೋ ಚ್ಚಾರಣೆಯಿಂದ ದುರಿತ ಪರಿಹಾರವಾಗುವುದಿಲ್ಲ.

ನಮ್ಮ ದಿನಚರಿಯ ಜೀವನದಲ್ಲಿ ಅನುಭವಕ್ಕೆ ಬಂದಿರುವ ಅನೇಕ ಪ್ರಸಂಗ ವಿಶೇಷಗಳನ್ನು ತಿಳಿಸುತ್ತಾರೆ. ಮಕ್ಕಳನ್ನು ಅಕ್ಕರೆಯಿಂದ ಮುದ್ದಿಸುತ್ತಾ ಆಟ ವಾಡಿಸುತ್ತಿರುವಾಗ, ಕೇವಲ ಪುತ್ರವ್ಯಾಮೋಹದಿಂದ ಮಕ್ಕಳಾಡಿಸದೆ, ಶಿಶು ವಂತರ್ಗತ ಬಾಲರೂಪೀ ಶ್ರೀಕೃಷ್ಣನನ್ನು ಸ್ಮರಿಸುತ್ತಾ, ಅವನು ಕೊಟ್ಟ ಪರಮಭಾಗ್ಯವೆಂದರಿತು, ಮಕ್ಕಳನ್ನು ಆಡಿಸುತ್ತಿರುವ ಸಮಯದಲ್ಲಿ ಶ್ರೀಹರಿಯ

ಸ್ಮರಣೆ ಮಾಡಬೇಕು. ಇದರ ಅಧ್ಯಾತ್ಮಅರ್ಥವೇನೆಂದರೆ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ, ಅಂತಃಕರಣಗಳೆಂಬ ಪಂಚಮನೋವೃತ್ತಿಗಳೇ ಪುತ್ರಸದೃಶರು. ಪಂಚಕರ್ಮೇಂದ್ರಿಯಗಳು ಮತ್ತು ಪಂಚಜ್ಞಾನೇಂದ್ರಿಯಗಳೆಂಬೋ ದಶೇಂದ್ರಿಯಗಳೇ ಮನೆಗಳು ಈ ಮನೆಗಳಲ್ಲಿ ಪಂಚಮನೋವೃತ್ತಿಗಳೆಂಬ ಪಂಚಪುತ್ರರನ್ನು ಇಟ್ಟು, ಆಡಿಸುವ ಅಂದರೆ ಅವುಗಳೊಡನೆ ವ್ಯವಹರಿಸುವ ಕಾಲದಲ್ಲಿ ಇಂದ್ರಿಯಾಂತರ್ಗತ, ಮನೋವೃತ್ತ್ಯಂತರ್ಗತ ಭಗವದ್ರೂಪಗಳನ್ನು ಸ್ವಬಿಂಬನಲ್ಲಿ ಐಕ್ಯಚಿಂತನ ದ್ವಾರಾ ಶ್ರೀಹರಿಯ ಸ್ಮರಣೆ ಮಾಡುತ್ತಿರಬೇಕೆಂದು ತಾತ್ಪರ್ಯ.

ಪ್ರೀತಿಯ ಪತ್ನಿಯೊಡನೆ ಸರಸಸಲ್ಲಾಪಗಳಲ್ಲಿರುವಾಗ, ಅವಳು ನನ್ನ ಮಡದಿ ಎಂಬ ವ್ಯಾಮೋಹಕ್ಕೆ ವಶನಾಗದೆ, ದಂಪತಿಗಳಲ್ಲಿ ಅಂತರ್ಗತನಾಗಿದ್ದು, ಸಕಲಕಾರ್ಯನಿಯಾಮಕನಾದ ಶ್ರೀಲಕ್ಷ್ಮೀನಾರಾಯಣನನ್ನು ಸ್ಮರಿಸುತ್ತಿರಬೇಕು. ಜೀವಸಾಂಕೇತನಾದ ಪುರುಷನೇ ಪತಿ. ಸುಬುದ್ಧಿ ಮತ್ತು ದುರ್ಬುದ್ಧಿಗಳೆಂಬ ಎರಡು ಪ್ರಕಾರವಾದ ಚಿತ್ತವೃತ್ತಿಗಳೇ ಇಬ್ಬರು ಪತ್ನಿಯರು. ಜೀವನು ಸ್ವಬುದ್ಧಿಯದ್ವಾರಾ ವಿವೇಚನಾಶಕ್ತಿಯಿಂದ ಯಾವುದು ಗ್ರಾಹ್ಯ, ಯಾವುದು ತ್ಯಾಜ್ಯ ಎಂದು ಭಗವತ್ಪ್ರೇರಣೆಯಿಂದ ನಿರ್ಧಾರಕ್ಕೆ ಬರುವನೋ ಆ ಕ್ರಿಯಾ ವಿಶೇಷವೇ ಮಡದಿಯೊಳು ಅಕ್ಕರದಿ ನಲಿಯುವ ಪ್ರಸಂಗವು. ಆ ಕಾಲದಲ್ಲಿ ಹರಿಸ್ಮರಣೆ ಮಾಡುತ್ತಾ ಆದರ ಫಲರೂಪವಾದ ಅನುಭವವನ್ನು ಪರೇಶನಿಗರ್ಪಿಸಬೇಕು.

ಕುದುರೆ, ಪಲ್ಲಕ್ಕಿ, ಆನೆ ಇತ್ಯಾದಿ ವಾಹನವಿಶೇಷಗಳನ್ನು ಏರಿ ಸಂಚರಿಸುವಾಗ, ಸಮಸ್ತ ಜಗತ್ತಿಗೆ ಆಧಾರಭೂತನೂ, ವಾಹನಾದಿ ರೂಪಗಳಲ್ಲಿ ಆಧಾರನಾಗಿರುವ ಆ ಅಪಾರಮಹಿಮಾಸಂಪನ್ನನಾದ ಅಪ್ರಮೇಯನನ್ನು ಸ್ಮರಿಸಬೇಕೆಂದು ತಿಳಿಸುತ್ತಾರೆ.

ಕಾಮ್ಯವಿಷಯಗಳು ಹಯಸದೃಶ. ನೇರವಾಗಿ ಒಂದೇ ಗುರಿಯತ್ತ ಸಾಗುವ ಕುದುರೆಯ ಗಮನದಂತೆ, ನಮ್ಮ ಮನಸ್ಸಿನ ಬಯಕೆಗಳು ಗುರಿ ತಲಪುವ ಪರ್ಯಂತ ಚಲಿಸುತ್ತಿರುವವು-ಕ್ರೋಧವೆಂಬುದು ಪಲ್ಲಕ್ಕಿ ಸದೃಶ.

ನಾವು ಏರಿರುವ ಪಲ್ಲಕ್ಕಿಯು ಅತ್ತಿತ್ತ ಅಲುಗಾಡುತ್ತಿರುವುದು. ಅಂತಯೇ ನೆಲೆಯು ಕಾಣದ ಕ್ರೋಧಕ್ಕೆ ನಮ್ಮ ಮನಸ್ಸು ವಶವಾಗಿರುವುದು. ಅಷ್ಟ ಮದಗಳು ಗಜಸದೃಶ. ಮದಿಸಿದ ಗಜದಂತೆ ಅಷ್ಟಮದಗಳಿಂದ ಉನ್ಮತ್ತ ವಾದ ನಮ್ಮ ಮನಸ್ಸು ಪೂರ್ವೋಕ್ತ ಕಾಮಾದಿ ಅರಿಷಡ್ವರ್ಗಗಳೇ ವಾಹನ ಗಳು. ಮನಸ್ಸು ಅವುಗಳನ್ನು ಏರಿ ಮೆರೆಯುತ್ತಿರುವುದು. ಆ ಸಮಯದಲ್ಲಿ ಹರಿನಾಮಸ್ಮರಣೆ ಮಾಡುತ್ತಿರುವವನು ಯಮದೂತರಿಗೆ ಎಂದೆಂದಿಗೂ ಸಿಕ್ಕನು. ವಾಹನಗಳಲ್ಲಿ ಸಂಚರಿಸುತ್ತಿರುವಾಗ ಅಹಂಕಾರ ಮತ್ತು ಠೀವಿ ಎಂಬ ದೋಷಗಳಿಂದ ಮನಸ್ಸು ಗ್ರಸ್ತವಾಗುವುದರಿಂದ, ಮೆರೆವಾಗ ಎಂಬ ಶಬ್ದ ಪ್ರಯೋಗ ಮಾಡಿದ್ದಾರೆ, ಆಧುನಿಕ ಯುಗದಲ್ಲಿ ಕಾರು, ವಿ ಮಾ ನ ಮುಂತಾದ ವಾಹನವಿಶೇಷಗಳನ್ನು ಪರಿಗಣಿಸಬಹುದು.

ಬಿಕ್ಕಳಿಕೆ ಬಂದಾಗ ಹರಿಸ್ಮರಣೆ ಮಾಡಿದರೆ ದೇಹಾಯಾಸ ಪರಿಹಾರ ವಾಗುವುದು. ಚಿತ್ತಶಾಂತಿ ದೊರೆಯುವುದು. ಅದು ಬಿಟ್ಟು ಸಂಕಟದಿಂದ ಪರಿತಪಿಸುತ್ತೇವೆಯೇ ಹೊರತು ಈಶನ ಸ್ಮರಣೆ ಮಾಡುವುದಿಲ್ಲ.

ಆಕಳಿಸುವಾಗ, ಅಯ್ಯೋ ಅಪ್ಪಾ ಎನ್ನುತ್ತೇವೆಯೇ ಹೊರತು, ನಾರಾ ಯಣ ಕೃಷ್ಣ ಇತ್ಯಾದಿ ನಾಮಗಳನ್ನು ಉಚ್ಚರಿಸುವುದಿಲ್ಲ. ಕರ್ಮಾಚರಣೆ ಯಿಂದ ಫಲರೂಪವಾಗಿ ಬರುವ ಲಾಭಾಲಾಭ, ಸುಖದುಃಖಾದಿ ದ್ವಂದ್ವಗಳೇ ನಿದ್ರಾಕ್ಕೆ ಸಾಂಕೇತವಾದ ಆಕಳಿಕೆ. ಆಕಳಿಸುವಾಗ ಅರವಿಂದದಳಾಯತಾಕ್ಷ ನಾದ ಶ್ರೀಹರಿಯ ಸ್ಮರಣೆ ಪರಮತಾರಕವು.

ಪೂರ್ವೋಕ್ತ ನಿತ್ಯಜೀವನದ ಕರ್ಮಗಳಲ್ಲಿ ದೇವಕಿತನಯನನ್ನು ಮಹಾ ತ್ಮ್ಯಜ್ಞಾನಪೂರ್ವಕ ಸದಾ ಮರೆಯದೇ ನೆನೆವುತಿಹ ನರರು ಎಂದೆಂದಿಗೂ

ಯಮದೂತರಿಗೆ ಸಿಕ್ಕರು. ಯಾವ ಕಾಲದಲ್ಲಾಗಲೀ, ದೇಶದಲ್ಲಾಗಲೀ, ನರಕಾದ್ಯನರ್ಥಗಳಿಂದ ಅವರನ್ನು ಕರುಣಾಮಯನಾದ ಕಮಲಾಪತಿಯು ಪಾರುಮಾಡುವನೆಂದು ತಾತ್ಪರ್ಯ. ॥ ೦ ॥

## ಪದ್ಯ ೨

### ಮೂಲ

ಸರಿತು ಪ್ರವಹಗಳಲ್ಲಿ ದಿವ್ಯಾಂ ।
ಬರದಿ ಪುತ್ರಾದಿಯಲಿ ಹರ್ಷಾ ।
ಮರ್ಷ ವಿಸ್ಮೃತಿಯಿಂದಲಾಗಲಿ ಒಮ್ಮೆ ಬಾಯ್ದೆರದು ॥
ಹರಿ ಹರೀ ಹರಿಯೆಂಬ ಎರಡ ।
ಕ್ಷರ ನುಡಿದ ಮಾತ್ರದಲಿ ದುರಿತಗ ।
ಳಿರದೆ ಪೋಪುವು ತೂಲರಾಶಿಯೊಳನಲ ಪೊಕ್ಕಂತೆ ॥ ೨ ॥

### ಅವತರಣಿಕೆ

ಒಂದು ಸಾರಿ ತುಂಬಿದ ಹೃದಯದಿಂದ ಬಾಯ್ದೆರದು ಹರಿಸ್ಮರಣೆ ಮಾಡಿದ ತಕ್ಷಣ, ಹತ್ತಿಯ ರಾಶಿಯಲ್ಲಿ ಸೇರಿದ ಕಿಡಿಯು ಇಡೀ ರಾಶಿಯನ್ನೇ ಸುಡುವಂತೆ, ಅವನ ಸಮಸ್ತ ಪಾಪಗಳನ್ನೂ ಪರಿಹರಿಸುವುದೆಂದು ತಿಳಿಸುತ್ತಾರೆ.

### ಪ್ರತಿಪದಾರ್ಥ

**ಸರಿತು ಪ್ರವಹಗಳಲಿ** = ಹರಿಯುತ್ತಿರುವ ಗಂಗಾದಿ ಪುಣ್ಯನದಿಗಳಲ್ಲಿ, ಸ್ನಾನಮಾಡುತ್ತಿರುವ ಸಮಯದಲ್ಲಿ (ದೇಹಗತ ನಾಡ್ಯಸ್ಥ ನದಿಗಳಲ್ಲಿ ರೋಮ ಕೂಪಗತ ತೀರ್ಥಾದಿಗಳಲ್ಲಿ) **ದಿವ್ಯಾಂಬರದಿ** = ಉತ್ತಮವಾದ ನೂತನ ವಸ್ತ್ರಗಳನ್ನು ಉಡುವಾಗ (ಅಂಬರದಿ–ಹೃದಯಾಕಾಶದಲ್ಲಿ ವಿದ್ಯಮಾನನಾದ,

ದಿವ್ಯ=ಶ್ರೇಷ್ಠನಾದ ಹರಿ) **ಪುತ್ರಾದಿಯಲಿ**=ತನ್ನ ಮಕ್ಕಳೊಡನೆ ಇರುವಾಗ, (ಮನಸ್ಸು ಬುದ್ಧಿಗಳೆಂಬ ಪುತ್ರರ ಸಂಗದಲ್ಲಿ). **ಹರ್ಷ**=ಆನಂದ (ಸುಖ) **ಅಮರ್ಷ**=ದ್ವೇಷ, ಕೋಪಾದಿಗಳಿಂದ ಸಂಭವಿಸತಕ್ಕ ದುಃಖಸ್ಥಿತಿಯಲ್ಲಿ **ವಿಸ್ಮೃತಿಯಿಂದಲಾಗಲಿ**=ಸ್ಮೃತಿರಹಿತನಾಗಿ (ಸರ್ವತ್ರ ವ್ಯಾಪ್ತನಾಗಿರುವ ಶ್ರೀಪರಮಾತ್ಮನನ್ನು ಮರೆತು, ಅಕಸ್ಮಾತಾಗಿ ತಾನೇ ಅರಿಯದಂತೆ ಹರೀ ಎಂದು ನುಡಿದಾಲು) **ಒಮ್ಮೆ**=ಒಂದು ಬಾರಿಯಾದರೂ, **ಬಾಯ್ದೆರೆದು**=ಘಂಟಾಘೋಷಪೂರ್ವಕವಾಗಿ, **ಹರಿ ಹರೀ ಹರಿಯೆಂದು**=ಹರಿ ಎಂಬ, **ಎರಡಕ್ಷರ**=ಎರಡಕ್ಷರದಿಂದ ಕೂಡಿದ, **ನುಡಿದ ಮಾತ್ರದಲಿ**=ಹರಿಸ್ಮರಣೆಮಾಡಿದ ತಕ್ಷಣದಲ್ಲಿಯೇ, **ತೂಲರಾಶಿಯೊಳು**=ಹತ್ತಿಯ ರಾಶಿಯಲ್ಲಿ, **ಅನಳ**=ಅಗ್ನಿಯು, (ಒಂದೇ ಒಂದು ಕಿಡಿ ಸಾಕು) **ಪೊಕ್ಕಂತೆ**=ಪ್ರವೇಶ ಮಾಡಿದಂತೆ, **ದುರಿತಗಳು**=ಸಮಸ್ತ ಪಾಪರಾಶಿಗಳೂ, **ಇರದೆ ಪೋಪುವು**=ಭಸ್ಮೀಭೂತವಾಗುವುವು. ॥ ೨ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮನ ನಾಮಸ್ಮರಣೆಯಿಂದ ಮಹಾಪಾಪಗಳು ನಾಶವಾಗ ತಕ್ಕ ಕ್ರಮ ಹೇಳುತಾರೆ.

ಹೃದಯಾಕಾಶದಲ್ಲಿ ವಿದ್ಯಮಾನನಾದ, ಮನೋಹರನಾದ, ಹರಿಶಬ್ದ ವಾಚ್ಯ ನಾರಾಯಣದೇವರು ದೇಹಗತ ನಾಡೀಸ್ಥ ನದಿಪ್ರವಾಹಗಳಲ್ಲಿ, ರೋಮ ಕೂಪಗತ ತೀರ್ಥಾದಿಗಳಲ್ಲಿ, ಹಾಂಗೇ ಬಾಹ್ಯನದೀ ತೀರ್ಥಾದಿಗಳಲ್ಲಿ ಸ್ನಾನ ವೇನು, ಪೂರ್ವೋಕ್ತ ಮನೋ ಬುದ್ಧ್ಯಾದಿಗಳೆಂಬ ಪುತ್ರಾದಿಗಳಲ್ಲಿ, ತಥಾ ಬಾಹ್ಯರಾದ ಪುತ್ರಾದಿಗಳಲ್ಲಿ ಬಿಂಬರೂಪ ಹರಿನಾಮಕ ಪರಮಾತ್ಮನ ಐಕ್ಯ ಚಿಂತನ ಮಾಡಿ, ಆ ಪುತ್ರನ ಸಂಗಡ ಆಟಗಳ ಆಡೋಣವೇನು, ದ್ವೇಷ, ಕೋಪ, ದುಃಖಾದಿಗಳು, ಅಹಂ–ಮಮತಾ ಇವುಗಳಲ್ಲಿ ಸಂಪೂರ್ಣ ದ್ವೇಷ ಯುಕ್ತನಾಗಿ, ಇವುಗಳನ್ನ ಮನಃ ಸಮೀಪದಲ್ಲಿ ಸೇರಿಸಧಾಂಗೆ ದೂರಮಾಡಿ,

ಸರ್ವಾಧಿಷ್ಠಾನಗಳಲ್ಲಿ ಅಂತರ್ಗತ ಪರಮಾತ್ಮನ ಚಿಂತಿಸುತ್ತ, ಸಂತೋಷದಿಂದ ಯುಕ್ತನಾಗಿ, ದೇವರನ್ನ ಹೃದಯಾಕಾಶದಲ್ಲೂ, ಬಹಿಃ ಸರ್ವತ್ರದಲ್ಲೂ ನೋಡುತ್ತಾ ಧ್ಯಾನಮಾಡುತ್ತಾ ಆನಂದೋದ್ರಿಕ್ತನಾಗಿ, ದೇಹದಲ್ಲಿ ಸ್ಮೃತಿ ರಹಿತನಾಗಿ, **ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಧಿಕಃ** ಎಂಬ ಪ್ರಮಾಣಾನುಸಾರ ಕೇವಲ ಭಕ್ತಿ ಎಂಬ ಸ್ನೇಹದಿಂದ ಹರಿ ಎಂಬ **ಬುದ್ಧ್ಯಾಬುದ್ಧ್ಯಾ ವದಂಶ್ಚೈವ ಹರಿರಿತ್ಯಕ್ಷರ ದ್ವಯಂ । ಸ್ಮರಣಾತ್ ಕೀರ್ತನಾದ್ಯಶ್ಚ ನ ಪುನರ್ಜಾಯತೇ ಕ್ವಚಿತ್** ಇನ್ನೂ, **ಇಡೋಪಹೂತಂ ಗೇಹೇಷು ಹರೇಃ ಭಾಗಂ ಕ್ರತುಷ್ವಹಂ । ವರ್ಣೋ ಮೇ ಹರಿತಃ ಶ್ರೇಷ್ಠಸ್ತಸ್ಮಾದ್ಧರಿರಿತಿ ಸ್ಮೃತಃ । ಇತೀ ಮೋಕ್ಷಧರ್ಮೇ । ಗೀತಾಭಾಷ್ಯ ೧೧ನೇ ಅಧ್ಯಾಯ ೯ನೇ ಶ್ಲೋಕೋಕ್ತ ಪ್ರಕಾರವೂ,** ದುರಿತ ಪರಿಹಾರ ಮಾಡುವಂಥ ಶ್ರೀಹರಿ ಎನತಕ್ಕ, ಏತಾದೃಶ ಮಹಾ ಮಹಾತ್ಮ್ಯವುಳ್ಳ ಶ್ರೀಹರಿ ಎಂಬ ಎರಡು ವರ್ಣಗಳು ದಾವಕಾಲ ದಾವ ದೇಶದಲ್ಲಿ ಇದ್ದ ಕಾಲಕ್ಕೂ ಕೇವಲ ದೀನನಾಗಿ ಒಂದಾವರ್ತಿ ಮುಖವನ್ನೇ ತೆರೆದು ಘರ್ಜನೆಯಿಂದ ಉಚ್ಚಾರಮಾಡೋ ಮಾತ್ರದಿಂದ ಪಾಪಗಳು ಇರದೆ ಹೋಗೋವಾಗತವೆ. ಜ್ಞಾನಕ್ಕೆ ಪ್ರತಿಬಂಧಕವಾದ ಅಜ್ಞಾನಾಖ್ಯ ಪಾಪಗಳು ಪರಿಹಾರವಾಗತವೆ. ಅಜ್ಞಾನದಿಂದ ಕೃತ ಪಾಪಗಳೂನೂ ಹ್ಯಾಂಗೆ ನಾಶವಾಗತವೆ, ಇನ್ನೂ ಅವಶಿಷ್ಟ ಪಾಪಗಳೂನೂ ಹ್ಯಾಂಗೆ ನಾಶವಾಗತವೆ ಎಂದರೆ, ಹತ್ತಿರಾಶಿ ಒಳಗೆ ಅಗ್ನಿಯು ಪ್ರವೇಶ ಮಾಡಿದರೆ ಹ್ಯಾಂಗೆ ಸುಟ್ಟು ಹೋಗೋದೋ ಹಾಂಗೆ ಭಸ್ಮವಾಗತವೆ ಎಂತ ತಾತ್ಪರ್ಯ. ಇಂಥಾ ಮಹಾತ್ಮ್ಯಜ್ಞಾನಸುದೃಢಸ್ನೇಹದಿಂದ ಮಾಡಿದ ನಾಮಸ್ಮರಣೆಯಿಂದ ಭಗವದಪರೋಕ್ಷವಾಗಿ, ಸಂಚಿತಕರ್ಮಸಾಂಕೇತವಾದ ಹತ್ತಿರಾಶಿ ಭಸ್ಮವಾಗಿಹೋಗತದೆ. ಆಗಾಮಿಕರ್ಮ ನಿರ್ಲೇಪವಾಗೋದಾಗತದೆ. ನಂತರ ಪ್ರಾರಂತಕ್ಕೆ ಲಿಂಗಭಂಗವಾಗಿ ಸ್ವರೂಪಾನಂದವನ್ನು ಭೋಜನ ಮಡೋವನಾಗತಾನೆ. ಆದಕಡಿಯಿಂದ ಭಗವನ್ನಾಮಸ್ಮರಣೆ ಇಂಥಾ ಮಹಾತ್ಮ್ಯ ಉಳ್ಳದ್ದು ಎಂತ ತಾತ್ಪರ್ಯ.

## ವಿಶೇಷಾರ್ಥ

ಶ್ರೀ ವಿಜಯದಾಸರಾಯರು ನಾಮಸ್ಮರಣೆ ಮಹಾತ್ಮ್ಯ, ತಾವು ಮಾಡಿದ ಹರಿನಾಮಸುಳಾದಿಯಲ್ಲಿಯೂ, ಹರಿಚರಿತೆ ಸುಳಾದಿಯಲ್ಲಿಯೂ ನಿರೂಪಿಸಿದ್ದಾರೆ. ವಿಸ್ತಾರವಾಗಿ ಹೇಳಲಿಕ್ಕೆ ಗ್ರಂಥಗಹನ ಭೀತಿಯಿಂದ ಸ್ವಲ್ಪಮಟ್ಟಿಗೆ ಹೇಳಲ್ಪಡುತ್ತದೆ.

## ಹರಿನಾಮಸುಳಾದಿ

ಹರಿನಾಮ ಲಕ್ಷ್ಮೀ ಕಾಣೋ ದಾರಿದ್ರ್ಯ ಜನರಿಗೆ
ಹರಿನಾಮ ಬ್ರಹ್ಮ ಕಾಣೋ ಅಲ್ಪಾಯು ಉಳ್ಳ ಜನಕೆ
ಹರಿಪಾದ ಪಾಶ ಕಾಣೋ ದುರಿತಘನಾವಳಿಗೆ
ಹರಿ ಗರುಡ ಕಾಣೋ ಕಾಲಾಖ್ಯ ಸರ್ಪಗಳಿಗೆ
ಹರಿ ಶೇಷ ಕಾಣೋ ಜ್ಞಾನಧನ ಪಾಲಿಪುದಕೆ
ಹರಿ ರುದ್ರ ಕಾಣೋ ಭವವೆಂಬೋ ಮೃತ್ಯುವಿಗೆ
ಹರಿ ಇಂದ್ರ ಕಾಣೋ ದುಷ್ಕರ್ಮ ಪರ್ವತಕ್ಕೆ
ಹರಿ ಸೂರ್ಯ ಕಾಣೋ ಅಜ್ಞಾನ ಕತ್ತಲೆಗೆ
ಹರಿ ಚಂದ್ರ ಕಾಣೋ ಹೃತ್ತಾಪ ನಿರ್ಮೂಲನಕ್ಕೆ
ಹರಿ ವರುಣ ಕಾಣೋ ತುಷ್ಟಿಯ ಕೊಡುವಾದಕ್ಕೆ
ಹರಿ ಅಗ್ನಿ ಕಾಣೋ ದುರಿತ ಕಾನನಕ್ಕೆ
ಹರಿ ಬಡಬಾನಲವೋ ಬಹು ದುಃಖ ಸಾಗರಕ್ಕೆ
ಹರಿ ಸಂಜೀವನವೋ ಮೃತ್ಯುಪ್ರಾಯ ಜೀವಿಗಳಿಗೆ
ಹರಿ ವೈದ್ಯ ಕಾಣೋ ಭವರೋಗ ಕಳಿಯೋದಕ್ಕೆ
ಹರಿ ಗಂಗೆ ಕಾಣೋ ಮನಮಲವ ಕಳಿಯೋದಕ್ಕೆ
ಹರಿ ಕಲ್ಕಿಯೇ ಕಾಣೋ ಅನಾಚಾರ ಬಿಡಿಸೋದಕ್ಕೆ
ಹರಿ ಪ್ರಾಣ ಕಾಣೋ ಇಂದ್ರಿಯಂಗಳ ಬಲಕ್ಕೆ
ಹರಿ ವ್ಯಾಘ್ರ ಕಾಣೋ ಆಪತ್ತು ಮೃಗಂಗಳಿಗೆ
ಹರಿ ಸಿಂಹ ಕಾಣೋ ಕೋಪವೆಂಬ ಗಜಕ್ಕೆ

ಹರಿ ಗಜ ಕಾಣೋ ಆನೆ ಎಂಬೋ ಕದಳೀಗೆ
ಹರಿ ಶಸ್ತ್ರ ಕಾಣೋ ಕಾಮಬಲ ಖಂಡ್ರಿಪೋದಕ್ಕೆ
ಹರಿ ವಿತ್ತ ಕಾಣೋ ಸತ್ಕರ್ಮ ಕೊಂಬುವೋದಕ್ಕೆ
ಹರಿ ಆಭರಣ ಕಾಣೋ ಶರೀರಾಲಂಕಾರಕ್ಕೆ
ಹರಿ ಅಂಬರ ಕಾಣೋ ಭಯವೆಂಬೋ ಶೀತಕ್ಕೆ
ಹರಿ ವಜ್ರಪಂಜರ ಕಾಣೋ ಶರಣಾರ್ತಕುಲಕೋಟಿಗೆ
ಹರಿ ನೆನೆದವರ ಅಶುಭವೇ ಓಡಿಸೂವಾದು
ಹರಿ ನಂಬಿದರೆ ಸರ್ವ ದೃಷ್ಟಿಗೋಚರ
ಹರಿ ಅವಾವಾಪೇಕ್ಷಿತ ಕೊಡುವಾದು
ಹರಿ ಮೂರುತೀ ನಮ್ಮ ವಿಜಯವಿಠ್ಠಲರೇಯ
ಹರಿಯೆಂದ ಮನುಜಗೆ ಹರುಷಪ್ರವಹವೆನ್ನೋ ॥

ಹರಿಚರಿತಸುಳಾದಿ

ಹರಿ ಚರಿತಶ್ರವಣ ದುರಿತದುಚ್ಛಾಟನ
ಹರಿನಾಮಕೀರ್ತನೆ ಭವರೋಗಕೆ ಸಿದ್ಧೌಷಧ
ಹರಿಚರಣಸ್ಮರಣ ಮುಕ್ತರೊಳಗರ್ಪಣ
ಇಂತು ಹರಿಸೇವೆ ಅನಂತಫಲಸಾಧನ
ಇಂತೆಂಬೋದೊಂದು ಪೇರ್ಮೆಗೆ ಹರಿಸೇವೆ ಫಲರೂಪ
ಶ್ರವಣವೇ ಶುಭದ ಬೆಳಕು ಕೀರ್ತನೆಯೇ ಲೇಸಿನ ಹೆಚ್ಚಿಗೆ
ಸ್ಮರಣವಚ್ಚ ಸುಖದೊಳು ಎಂಬದನುಭವ ಸಿದ್ಧ
ಸಿರಿಕೃಷ್ಣ ಪಾದಸೇವೆಯಲ್ಲದಿಲ್ಲ

ಇನ್ನೂ ದಾಸರಾಯರುಗಳು ಲೋಕೋದ್ಧಾರಾರ್ಥವಾಗಿ ಮಾಡಿರುವ ದೇವರ ಪದಗಳೂ ಇವೆ. ॥ ೨ ॥

೨. ಭಾವಪ್ರಕಾಶಿಕೆ

ನದಿಯಲ್ಲಿ ನೀರು ಹರಿಯುತ್ತಿರುವಾಗ ಅದನ್ನು ನೋಡಿ ನೀರು ಹರಿಯುತ್ತದೆ ಎಂದು ಹೇಳುವಾಗ ಬರುವ ಹರಿಶಬ್ದವು, ವಸ್ತ್ರವನ್ನು ಹರಿ ಎಂದು

ಹೇಳುವಾಗ ಬರುವ ಶಬ್ದವು, ಎಲೆಯನ್ನು ಹರಿಯೆಂದು ಹೇಳುವಾಗ ಬರುವ ಹರಿಶಬ್ದವು, ಇವೇ ಮೊದಲಾದುವುಗಳಲ್ಲಿ ನಮ್ಮ ಪ್ರಯತ್ನವಿಲ್ಲದೆ ತಾನಾಗಿ ಹೊರಡುವ ಹರಿಶಬ್ದವೂ ಕೂಡ ಮಹಾಫಲಪ್ರದವಾಗುವುದು. ಮತ್ತು ಹರ್ಷದಿಂದಲಾಗಲೀ, ಕೋಪದಿಂದಲಾಗಲೀ, ಯಾವದೋ ಕಾರಣ ದಿಂದ ವಿಸ್ಮೃತಿ ಬಂದಿರುವಾಗಾಗಲೀ, ಒಂದುಸಲ ಬಾಯಿ ತೆರದು ಆದರೆ ಗಟ್ಟಿಯಾಗಿ ಹರಿ ಹರಿ ಹರಿ ಎಂದು ಉಚ್ಚರಿಸಿದರೂ ಹಂಜಿಯ ರಾಶಿಯಲ್ಲಿ ಬೆಂಕಿಯ ಕಿಡಿ ಸೋಕಿದಂತೆ ಪಾಪರಾಶಿಯು ಸುಟ್ಟು ಹೋಗುವುದು, ಎಂದು ಹೇಳಿರುವರು. ಇದರಲ್ಲಿ ಒಂದು ವಿಶೇಷವನ್ನು ಗ್ರಹಿಸಬೇಕು. ನಾವು ಮಾಡು ವುದು ಹರಿಸ್ಮರಣೆಯೆಂಬ ಜ್ಞಾನವೇ ನಮಗಿಲ್ಲದೆ ಎಲೆಯನ್ನು ಹರಿ, ಆ ಧೋತ್ರ ವನ್ನು ಹರಿ ಎಂದು ಹೇಳಿದ ಮಾತ್ರದಿಂದಲೇ ಪಾಪರಾಶಿ ಎಲ್ಲವೂ ಸುಟ್ಟು ಹೋಗುವುದೆಂದು ಇದರರ್ಥವಲ್ಲ. ಎಲೆಯನ್ನು ಹರಿ ಎಂದು ಹೇಳುವಾಗ, ಹರಿಶಬ್ದವನ್ನು ಅರ್ಥಜ್ಞಾನಪೂರ್ವಕ, ಪಾಪಹರಣ ಮಾಡುವುದರಿಂದ ಹರಿ ಯೆಂದು ಪರಮಾತ್ಮನಿಗೆ ಹೆಸರು ಬಂದಿತು, ಎಂಬ ಜ್ಞಾನವನ್ನು ತಕ್ಷಣ ತಂದು ಕೊಂಡು ಆ ಹರಿಶಬ್ದವು ಇಲ್ಲಿಯೂ ಪ್ರತಿಪಾದ್ಯವಾಗಿರುವುದೆಂದು ಭಾವಿಸಬೇಕು. ಅಂದರೆ ವಸ್ತ್ರಾದಿಗಳನ್ನು ಹರಿ ಎಂದು ಹೇಳುವಕಾಲದಲ್ಲಿ ಹೊರಡುವ ಹರಿ ಶಬ್ದವು ಹರಿಯನ್ನು ನೆನಪುಮಾಡಿಕೊಡಲು ಅನುಕೂಲಿಸುವುದೆಂಬುದೇ ಈ ಪದ್ಯಾರ್ಥ. ಹೀಗೆ ಹೇಳಿದರೆ ದಾಸರಾಯರ ಅಭಿಪ್ರಾಯಕ್ಕೆ ವಿರುದ್ಧವೆಂದು ಭಾವಿಸಬಾರದು. ಇದೇ ಅಭಿಪ್ರಾಯವನ್ನು ಇಟ್ಟುಕೊಂಡೇ ದಾಸರಾಯರು ಈ ಪದ್ಯವನ್ನು ರಚಿಸಿರುತ್ತಾರೆಂದು ನಿಶ್ಚಯ. ಹೇಗೆಂದರೆ ಭಾಗವತ ಷಷ್ಠಸ್ಕಂ ಧದ ಅಜಾಮಿಳನ ಚರಿತ್ರೆಯ ಸಂದರ್ಭದಲ್ಲಿ 'ಸಾಂಕೇತ್ಯಂ ಪಾರಿಹಾಸ್ಯಂ ವಾಸ್ತೋಭಂ ಹೇಳನಮೇವ ವಾ ॥ ವೈಕುಂಠನಾಮ ಗ್ರಹಣಮಶೇಷಾಘ ಹರಂ ವಿದುಃ' ಎಂದು ಭಾಗವತ ಮೂಲದಲ್ಲಿ ಹೇಳಿರುವರು. ಇದರರ್ಥವನ್ನು ಸಾಮಾನ್ಯವಾಗಿ ಯೋಚಿಸಿದರೆ, ಯಾರಿಗಾದರೂ ಇವನು ಇಂಥವನೆಂದು ತಿಳಿದು ಕೊಳ್ಳುವುದಕ್ಕಾಗಿ ರಾಮ, ಕೃಷ್ಣ ಎಂಬ ಹೆಸರನ್ನು ಇಟ್ಟಿರುತ್ತಾರೆ. ಆ ಸಂಕೇತ ವುಳ್ಳ ಹೆಸರು ಹಿಡಿದು ಯಾವನನ್ನಾದರೂ ಕರೆಯುವಾಗ ಎಲೈ ರಾಮ ! ಕೃಷ್ಣಾ ! ಎಂದು ಕರೆದರೂ ಸರಿ, ರಾಮಾದಿ ಹೆಸರುಳ್ಳ ಒಬ್ಬನನ್ನು ಪರಿಹಾಸ

ಮಾಡುವಾಗಾಗಲೀ, ಕೋಪವನ್ನು ಹುಟ್ಟಿಸುವುದಕ್ಕಾಗಲೀ, ದೂಷಿಸುವಾಗಾಗಲೀ, ಯಾವದಾದರೂ ನಿಮಿತ್ತದಿಂದ ಶ್ರೀಪರಮಾತ್ಮನ ನಾಮವು ಬಾಯಿಂದ ಬಂದರೆ ಸಾಕು, ಎಲ್ಲಾ ಪಾಪಗಳೂ ಸುಟ್ಟು ಹೋಗುವುವು. ಎಂದು ಭಾಗವತ ಕರ್ತರಾದ **ವೇದವ್ಯಾಸದೇವರು** ಹೇಳಿರುವರು. ಆದಕ್ಕೆ **ಶ್ರೀಮದಾಚಾರ್ಯರು** ಮಾಡಿರುವ ತಾತ್ಪರ್ಯವನ್ನು ಅನುಸರಿಸಿ ಮಾಡಿರುವ **ವಿಜಯಧ್ವಜೀಯ ವ್ಯಾಖ್ಯಾನದಲ್ಲಿ** ಇದರ ಅರ್ಥವನ್ನು ಹೇಳಿರುವರು ಅದೆಂತೆನೆ, ತನ್ನ ಮಕ್ಕಳು ಮೊದಲಾದವರನ್ನು ರಾಮ ಕೃಷ್ಣ ಎಂಬ ಹೆಸರು ಹಿಡಿದು ಕರೆದರೆ ಸಾಕು, ಅಷ್ಟಕ್ಕೆ ಪಾಪಪರಿಹಾರವಾಗುವುದೆಂಬ ತಾತ್ಪರ್ಯವಲ್ಲ. ಸಾಂಕೇತ್ಯಂ ಅಂದರೆ ಮಕ್ಕಳನ್ನು ರಾಮ ಎಂದು ಕರೆದ ಕಾಲದಲ್ಲಿ ಹೀಗೆ ಯೋಚಿಸಬೇಕು. ಮಕ್ಕಳಿಗೆ ಹೆಸರಿಡುವಾಗಲೆ ರಾಮಾದಿ ದೇವರ ಹೆಸರನ್ನು ಇಡುವ ಉದ್ದೇಶವೇನು ? ನಾವು ಸಂಸಾರದಲ್ಲಿ ಮೈಮರೆತು ಗೃಹಕೃತ್ಯ ಲೋಲುಪರಾಗಿರುತ್ತೇವೆ. ಅಂತಹಕಾಲದಲ್ಲಿ ಮಕ್ಕಳನ್ನು ಕರೆಯುವಾಗಾದರೂ ಈ ಹೆಸರು ನೆನೆಪಿಗೆ ಬರಲಿ ಎಂಬ ಉದ್ದೇಶವಾಗಿ ದೇವರ ಹೆಸರನ್ನು ಇಟ್ಟಿರುವರು ಆದ್ದರಿಂದ ರಾಮ ! ಎಂದು ಮಗನನ್ನು ಕರೆವಾಗ 'ರಮಯತೀತಿ ರಾಮ !' ಲೋಕದಲ್ಲೆಲ್ಲರಿಗೂ ಸಂತೋಷಪಡಿಸುವ ಗುಣವು ಇವನಲ್ಲಿರುವುದರಿಂದ ರಾಮನೆಂದು ಪರಮಾತ್ಮನಿಗೆ ಹೆಸರೆಂದು ಚಿಂತಿಸುತ್ತಾ ಯಾವ ಯಾವ ಕಾಲದಲ್ಲಿ ಮಗನನ್ನು ಕರೆವನೊ ಆಯಾ ಕಾಲದಲ್ಲೆಲ್ಲಾ ಹೀಗೆ ಪರಮಾತ್ಮನನ್ನು ಚಿಂತಿಸಬೇಕೆಂಬ ತಾತ್ಪರ್ಯ. ಹಾಗಾದರೆ ಅಜಾಮಿಳನು ಅಂತ್ಯಕಾಲದಲ್ಲಿ ಮಗನನ್ನು ನಾರಾಯಣನೆಂದು ಕರೆದಮಾತ್ರದಲ್ಲಿ ವಿಷ್ಣು ದೂತರು ಕರೆದೊಯ್ದಿರಲ್ಲವೆ? ಅವನಿಗೆ ಹೇಗೆ ಗತಿಯಾಯಿತು ? ಅಂದರೆ ಅವನಾದರೂ ತನ್ನ ಮಗನನ್ನೇ ಕರೆಯಲಿಲ್ಲ. ಯಮದೂತರನ್ನು ಕಣ್ಣನಲ್ಲಿ ನೋಡಿದ ಮಾತ್ರದಿಂದ ಮಗನಲ್ಲಿ ವಾತ್ಸಲ್ಯ ಹುಟ್ಟಿ 'ದೂರೇಕ್ರೀಡನಕಾಸಕ್ತಂ ಪುತ್ರಂ ನಾರಾಯಣಾಹ್ವಯಂ॥ ಪ್ಲಾವಿತೇನ ಸ್ವರೇಣೋಚ್ಚೈರಾಜುಹಾವಾ ರಾಜುಹಾವಾ ಕುಲೇಂದ್ರಿಯಃ | ದೂರದಲ್ಲಿ ಆಟವಾಡುತ್ತಿದ್ದ ತನ್ನ ಮಗನಾದ ನಾರಾಯಣನನ್ನು ಗದ್ಗದಕಂಠದಿಂದ ವ್ಯಾಕುಲ ಚಿತ್ತನಾಗಿ ನಾರಾಯಣಾ ಎಂದು ಕರೆದನು ಎಂದು ಶ್ಲೋಕಾರ್ಥ ತೋರುವುದು. ಇದರಂತೆಯೇ

ಇದರ ಹಿಂದಿನ ಶ್ಲೋಕದಲ್ಲಿ "ಮತಿಂ ಚಕಾರ ತನಯೇ ಬಾಲೇ ನಾರಾಯಣಾಹ್ವಯೇ" ಪಾಶ ಹಸ್ತರಾದ, ಭಯಂಕರರಾದ ಮೂರು ಮಂದಿ ಯಮಭಟರನ್ನು ಕಣ್ಣಿನಿಂದ ನೋಡಿದ ಕೂಡಲೇ ಬಾಲಕನಾದ ನಾರಾಯಣ ಶಬ್ದವಾಚ್ಯನಾದ ತನ್ನ ಮಗನಲ್ಲಿ ಮನಸ್ಸು ಮಾಡಿದನು ಎಂದು ಅರ್ಥವಾಗುವುದು. ಇದರ ತಾತ್ಪರ್ಯವೇನೆಂದರೆ, ಯಮದೂತರನ್ನು ಕಣ್ಣಿನಲ್ಲಿ ಕಂಡಕೂಡಲೆ ಭಯದಿಂದ ಪುತ್ರವಾತ್ಸಲ್ಯದಿಂದ ಮಗನನ್ನು ಕರೆಯಲು ಉದ್ದೇಶವನ್ನು ಮಾಡಿದನು. ಅಷ್ಟರಲ್ಲಿ ಇವನ ಪ್ರಾರಬ್ಧ ಪರಿಹಾರವಾಗಿ ಯೋಗ್ಯ ಜೀವನಾದುದರಿಂದ ನಾರಾಯಣನೆಂಬ ಮಗನನ್ನು ಕರೆಯಲು ಯಾವಾಗ ಪ್ರಯತ್ನಪಟ್ಟನೋ ಆ ತಕ್ಷಣ ಪರಮಾತ್ಮನ ಜ್ಞಾಪಕವೇ ಬಂದಿತು. ಆದ್ದರಿಂದ 'ಮತಿಂ ಚಕಾರ ತನಯೇ ಬಾಲೇ ನಾರಾಯಣಾಹ್ವಯೇ' ತನಯ ಅಂದರೆ 'ತನುವಿಸ್ತಾರೆ, ಯೇತಿ ಜ್ಞಾನಂ ಸಮುದ್ದಿಷ್ಟಂ' ಅಂದರೆ ಜ್ಞಾನ, ತನುವಿಸ್ತಾರ, ವಿಸ್ತಾರವಾದ ಜ್ಞಾನ ಉಳ್ಳವನೆಂದರ್ಥ. ಬಾಲ ಅಂದರೆ ಪ್ರಾದೇಶಮಾತ್ರನಾಗಿ ೫ವರ್ಷದ ಹುಡುಗನಂತೆ ನಮ್ಮ ಹೃದಯಾಕಾಶದಲ್ಲಿ ಶೋಭಿಸುವುದರಿಂದ ಬಾಲನೆಂದು ಪರಮಾತ್ಮನಿಗೆ ಹೆಸರು ಇಂತಹಾ ಬಾಲನಾಮಕನಾದ, ವಿಸ್ತಾರವಾದ ಜ್ಞಾನವುಳ್ಳ ನಾರಾಯಣನಲ್ಲಿ ಮನಸ್ಸನ್ನಿಟ್ಟನು. 'ದೂರೇ ಕ್ರೀಡನಕಾಸಕ್ತಂ' ದೂರದಲ್ಲಿ ಅಂದರೆ ಬ್ರಹ್ಮಾಂಡದ ಹೊರಭಾಗದಲ್ಲಿ ಆಟವಾಡುವವನು, ಯಾವ ಆಟ ? ಸೃಷ್ಟಿ ಮಾಡುವುದು, ಸ್ಥಿತಿ ಮಾಡುವುದು ಇಂತಹ ಕ್ರೀಡಾಸಕ್ತನಾದವನು. ಪುತ್ರ ಶಬ್ದವಾಚ್ಯನು "ಪುನ್ನಾಮ್ನೋ ನರಕಾತ್ತ್ರಾತಾ ಪುತ್ರ ಇತ್ಯಾಭಿ ಶಬ್ದ್ಯತೆ" ಪುತ್ ಎಂಬ ನರಕದಿಂದ ಬಿಡಿಸಿಬಿಡುವುದರಿಂದ ಪುತ್ರನೆಂದು ಪರಮಾತ್ಮನಿಗೆ ಹೆಸರು. ಇಂತಹಾ ಪುತ್ರನಾದ ನಾರಾಯಣನನ್ನು ಉಚ್ಚಧ್ವನಿಯಿಂದ ಕೂಗಿದನು. ಆಗ ವಿಷ್ಣುದೂತರು ಬಂದರೆಂದು ವ್ಯಾಖ್ಯಾನಮಾಡಿರುವರು. ಆದ್ದರಿಂದ 'ಸಾಂಕೇತ್ಯಂ' ಅಂದರೂ ಪರಮಾತ್ಮನ ನಾಮವು ಜ್ಞಾಪಕಕ್ಕೆ ಬರುವುದಕ್ಕಾಗಿ ಈ ಹೆಸರೆಂದು ಭಾವಿಸಿ ಮಕ್ಕಳನ್ನು ರಾಮಾದಿ ಹೆಸರಿನಿಂದ ಕೂಗುವಾಗ ಪರಮಾತ್ಮನ ನಾಮವನ್ನು ಸ್ಮರಣೆಗೆ ತರಬೇಕೆಂದು ಅರ್ಥ. 'ಪಾರಿಹಾಸ್ಯಂ ವಾ' ಅಂದರೆ ಪರಮಾತ್ಮನ ಹೆಸರುಳ್ಳ ಒಬ್ಬನನ್ನು ಹಾಸ್ಯ ಮಾಡುವಾಗ ಅವನ ಹೆಸರು ಹೇಳಿದರೂ ಸಾಕೆಂದು ಅರ್ಥವಲ್ಲ. ನಾರಾಯಣ ಎಂದು ಹೆಸರುಳ್ಳ ಒಬ್ಬನನ್ನು ಹಾಸ್ಯ

ಮಾಡುವಾಗ 'ಓಹೋ ! ನಾರಾಯಣನು ಇವನು ! ಕ್ಷೀರಸಾಗರಭಟ್ಟ ಇವನೇ! ಬಡ್ಡಿ ಮಗನೇ ! ಮನೆಯಲ್ಲಿ ನೀರು ಮಜ್ಜಿಗೆಗೆ ಗತಿಯಿಲ್ಲ. ನಾರಾಯಣನಂತೆ ಇವನು. ಆ ಸ್ವಾಮಿಯು ಕ್ಷೀರಸಮುದ್ರಶಾಯಿ, ಮುಕ್ತಾಶ್ರಯ, ದೋಷ ದೂರ, ಈ ಕಾರಣಗಳಿಂದ ನಾರಾಯಣನು ಸ್ವಾಮಿ, ಇವನು ಪರಾಶ್ರಯೀ, ದೋಷಪೂರ, ಇವನೂ ನಾರಾಯಣನೇ? ಎಂದು ಹಾಸ್ಯ ಮಾಡುವಾಗಲೂ, ನಾರಾಯಣನು ಮುಕ್ತಾಶ್ರಯ, ಇತ್ಯಾದಿ ನಾರಾಯಣನ ಗುಣೋಚ್ಚಾರಣ ಪೂರ್ವಕ ಸ್ಮರಣೆ ಮಾಡಿದಂತಾಯಿತು. ಇದರಿಂದ ಪಾಪಪರಿಹಾರವೆಂದರ್ಥ. ಸ್ತೋಭಂ ಅಂದರೆ ಕೋಪ ಉಂಟು ಮಾಡಿಸುವುದು, ಅಥವಾ ದೂಷಿಸುವುದು ಅಂದರೆ ಮಧುಸೂದನ ಎಂಬ ಹೆಸರುಳ್ಳ ಒಬ್ಬನನ್ನು ದೂಷಿಸಿ ಅವನಿಗೆ ಕೋಪ ಬರುವಂತೆ ಮಾಡುತ್ತಾನೆ. ಅವಾಗದರೂ ನಮ್ಮ ಸ್ವಾಮಿಯು ಮಧು ಎಂಬ ದೈತ್ಯನನ್ನು ಸಂಹರಿಸಿದನು, ಅವನಿಗೆ ಮಧುಸೂದನನೆಂಬ ಹೆಸರು ಬಂದಿತು,-ಎಲೈ ಪಾಪಿ ! ನೀನೆಂತಹ ಮಧುಸೂದನ ! ಮಧು ಅಂದರೆ (ಮಧು ಮಕ್ಷಿಕ) ಜೇನು ಹುಳ, ಅದನ್ನು ಕೊಲ್ಲುವ ಯೋಗ್ಯತೆಯು ಕೂಡ ನಿನ್ನಲ್ಲಿಲ್ಲ. ಹೀಗಿರಲು ನೀನು ಮಧುಸೂದನನೇ ? ಎಂದು ಒಬ್ಬನನ್ನು ದೂಷಿಸುವಾಗಲಾದರೂ ಪರ ಮಾತ್ಮನ ಕರ್ಮನಾಮಾರ್ಥ ಜ್ಞಾನಪೂರ್ವಕ ಸ್ಮರಣೆ ಮಾಡಲು ಅಶೇಷಪಾಪವು ಪರಿಹಾರವೆಂದು ಅರ್ಥವೇ ಹೊರತು ನಾರಾಯಣಾದಿ ಹೆಸರುಳ್ಳ ಒಬ್ಬನನ್ನು ದೂಷಿಸುತ್ತಿರುವಾಗ ಆ ಹೆಸರು ಬಂದರೆ ಸಾಕು, ಪಾಪಪರಿಹಾರವೆಂದು ತಿಳಿದರೆ ಜಗತ್ತಿನಲ್ಲಿ ಪಾಪಿಯೇ ಇಲ್ಲ. ದುರ್ಯೋಧನಾದಿಗಳು ಎಷ್ಟೋಸಲ ಕೃಷ್ಣನ ಹೆಸರನ್ನು ಹೇಳುತ್ತಿದ್ದರು ಸಾಯುವಕಾಲದಲ್ಲಿ ಕೃಷ್ಣನ ಸಮೀಪದಲ್ಲೇ ಸತ್ತರು. ಆದರೂ ಅವರಿಗೆ ಮುಕ್ತಿಯಾಗಲಿಲ್ಲ. ಆದ್ದರಿಂದಲೇ ಅಭಕ್ತಿಯಿಂದ ಉಚ್ಚರಿಸಿದ ನಾಮಕ್ಕೆ ಫ ಲ ವಿ ಲ್ಲ ವೆಂ ದು ಹೇಳಿರುವರು. ಹಾಗಿರಲು ಎಲೆಯನ್ನು ಹರಿ, ಧೋತ್ರವನ್ನು ಹರಿ, ಎಂದು ಹೇಳಿದ ಮಾತ್ರದಿಂದಲೇ ಇವನಿಗೆ ಗತಿ ಆಗುವದೆಂದು ದಾಸರಾಯರ ಅಭಿಪ್ರಾಯವೆಂದು ಹೇಳಲು ಸಾಧ್ಯವಿಲ್ಲ. ವ್ಯಾಸವಾಕ್ಯವನ್ನು ನೋಡಿದ ಶ್ರೀಮದಾಚಾರ್ಯರಿಗೆ ತೋರುವ ಅರ್ಥವನ್ನು ಬಿಟ್ಟು, ಪ್ರಾಕಾರಾಂತರ ಅರ್ಥವನ್ನು ಅಂದರೆ ವ್ಯಾಸವಾಕ್ಯಕ್ಕೆ ತೋರಿದ ವಿರೋಧಾರ್ಥವನ್ನು ಕಲ್ಪಿಸಿದ ರೆಂದು ಹೇಳಲು ಹೇಗೆ ಸಾಧ್ಯವಿಲ್ಲವೋ, ಅಂದರೆ ವೇದವ್ಯಾಸರ ಅಭಿಪ್ರಾಯ

ವನ್ನು ತಿಳಿದೇ ಅದರ ವ್ಯಾಖ್ಯಾನವನ್ನು ಮಾಡಿರುವರೆಂಬ ಅಭಿಪ್ರಾಯವು. ಹಾಗೆಯೇ ಆಚಾರ್ಯರ ವಾಕ್ಯಕ್ಕೆ ವಿರುದ್ಧವಾಗಿ ದಾಸರಾಯರು ಎಂದಿಗೂ ಹೇಳು ವುದಿಲ್ಲವಾದುದರಿಂದ ಥೋತ್ರವನ್ನು ಹರಿ ಇತ್ಯಾದಿಗಳಲ್ಲಿ ಬರುವ ಹರಿಶಬ್ದವು ಭಕ್ತರಾಗಿದ್ದು ಸಂಸಾರದಲ್ಲಿ ನಿರತರಾಗಿ ಮೈಮರೆತಕಾಲದಲ್ಲಿ ಈ ನಿಮಿತ್ತ ಹರಿ ಶಬ್ದ ಬಂದರೂ ತಕ್ಷಣ ಹರಿಯನ್ನು ನೆನಪಿಗೆ ತಂದು ಹರಿಯನ್ನು ಸ್ಮರಿಸಿದರೆ ಪಾಪ ಪರಿಹಾರವೆಂದೇ ಅವರ ಅಂತರ ಅಭಿಪ್ರಾಯವು ಎಂದು ನಿಶ್ಚಯಿಸ ಬೇಕು. ॥ ೨ ॥

## ३. ಭಾವದರ್ಪಣ

ನದೀ ಪ್ರವಾಹ ಹರೀತದೆ ಎಂತಲೂ ; ನೂತನವಸ್ತ್ರ ಭೋಜನ ಪತ್ರ ಗಳು ಹರಿ ಹರಿ ಎಂತಲೂ ವಿಷಯ ಪದಾರ್ಥಗಳ ಮೂಲಕ ಅನ್ಯಭಾವದಿಂದಾ ದರೂ ಹರಿನಾಮೋಚ್ಚಾರ ಯಾವನಿಂದಾಗುವದೋ ಅಂಥವನ ಪಾಪಸಮೂಹವು ಸುಟ್ಟುಹೋಗುತ್ತದೆ. ಹೀಗಿದ್ದು ಹರಿನಾಮೋಚ್ಚಾರದಿಂದ ಅನಿಷ್ಟವೆಲ್ಲವೂ ನಾಶವಾಗುವವೆಂಬ ಜ್ಞಾನದಿಂದ ಹರಿಯನ್ನು ಸ್ಮರಿಸುವ ಪುರುಷಗೆ ಫಲ ಎಷ್ಟೆಂದು ಹೇಳಬೇಕು ಎಂತ ತಾತ್ಪರ್ಯದಿಂದ ಹೇಳುತ್ತಾರೆ. ಸರಿತ್ಪ್ರವಾಹೇತಿ. ॥ ೨ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

"ಸರಿತ್" ಇತಿ ॥ "ಹಸತ್ಯಥೋ ರೋದಿತಿ" ಇತಿ "ವಾಗ್ಗದ್ಗದಾ ದ್ರವತೇ ಯಸ್ಯ ಚಿತ್ತಂ ನೇತ್ರಜಲಂ ಗಾತ್ರ ರುದೇಷು ಹರ್ಷಃ ॥ ಇತ್ಯೇತ್ತಲ್ಲಕ್ಷಣ ಲಕ್ಷಿ ತಾಶೇಷಭಗವತ್ಪ್ರಿಯೋಚ್ಚರಿತ ಹರಿನಾಮ ಏವ ತೂಲರಾಶಿಂ ಅನಲವತ್ ಪಾಪರಾಶಿಂ ದಹತಿ ನಾಪರಥಾ ॥ ತೂಲರಾಶಿರಥಾಗ್ನೇಯೇ ಧರ್ಮಪ್ರಶ್ನೇ ದ್ವಿತೀಯಕ್ಕೆ ॥ ವೇದ (ವದೇ) ರಾಶೇ ರುಪಾಖ್ಯಾನೇ ಖಂಡೇವ್ಯಕ್ತೇಬ್ರವೀಮಿ ತತ್" ॥ ಪಂಚಮ (ಮಃ) ವೇದರಾಶಿಃ ॥ ಸ್ತೇನಃ ಸುರಾಪಃ ಮಿತ್ರಧುತ್ ಬ್ರಹ್ಮಹಾ ಗುರುತಲ್ಪಗಃ ॥ ಸ್ತ್ರೀರಾಜಪಿತೃಗೋಹಂತಾ ಯೇಚ ಪಾತಕಿನೋ ಪರೇ ॥ ದಗ್ಧ ಪಾಪಾಃ ಸ್ಯುಃ ಉಚ್ಚಾರ್ಯ ಹರಿಃ ಇತ್ಯಕ್ಷರ ದ್ವಯಮ್ ಸ್ನಾನಂ ನ ಕುರ್ಯಾತ್ ಯೋ ಮಾಘೇ ಮಾಧವೇ ಮಾಧವ ಪ್ರಿಯೇ ॥ ಔಪಾ

ಸನವಿಹೀನಾಃ ಚ ಪ್ರಾತಃಸ್ನಾನ ವಿವರ್ಜಿತಾಃ ॥ ಪಂಚಯಜ್ಞ ವಿಹೀನಾ । ಚ ಗಾಯತ್ರ್ಯತಿಥಿ ವರ್ಜಿತಾಃ ॥ ದಗ್ಧಪಾಪಾಃ ಸ್ಯುಃ ಉಚ್ಚಾರ್ಯ ಹರಿರಿತ್ಯಕ್ಷರ ದ್ವಯಮ್ ॥ ३ ॥ ಪರಾರ್ಥ ಘಾತಕಾಃ ಪಾಪಾಃ ಪರ ನಿಂದಾಸು ತತ್ಪರಾಃ ॥ ದಗ್ಧ ಪಾಪಾಃ ॥ ४ ॥ ಅಸದ್ವಾರ್ತಾರತಾಃ ವಿಷ್ಣುಕಥಾಶ್ರವಣವರ್ಜಿತಾಃ ॥ ದಗ್ಧಪಾಪಾಃ ॥ ೫ ॥ ನಿತ್ಯನೈಮಿತ್ತಿಕಭ್ರಷ್ಟಾಃ ತೀರ್ಥಯಾತ್ರಾವಿವರ್ಜಿತಾಃ ದ್ವಾದಶಾಕ್ಷರಹೀನಾ (ಹಿ) ಚ ಅಷ್ಟಾಕ್ಷರವಿವರ್ಜಿತಾಃ ॥ ಅರಾಮಾಯಣ ಗಾಥಾಃ ಚ ಪ್ರಾತಃ ಭಾರತವರ್ಜಿತಾಃ ॥ ದಗ್ಧಪಾಪಾಃ ॥ ಶಾಲಗ್ರಾಮಾರ್ಚನಹೀನಾಃ ॥ ಭಗವದ್ಭಕ್ತನಿಂದಕಾಃ ॥ ಸಂಕಲ್ಪಕರ್ಮಕರ್ತಾರಃ ಸದಾ ಶೂದ್ರಾನ್ನಭೋಜಿನಃ ॥ ನಿಜಧರ್ಮಪ್ರವಕ್ತಾರಃ ನಿಜಪಾಪನಿ(ವಿ)ಗೂ ಹತಾಃ ॥ ದಗ್ಧ ಪಾಪಾಃ ॥ ಅದ್ವಾದಶೀವ್ರತಾಃ ಮೂರ್ಖಾಃ ಏಕಾದಶ್ಯನ್ನ ಭೋಜಿನಃ ॥ ದುಷ್ಟತಿಗ್ರಹಕರ್ತಾ ರೋऽಪ್ಯವೇದಾಃ ವೇದವಿಕ್ರಯಾಃ ॥ ಪಂಚಾಕ್ಷರವಿಹೀನಾಃ ಚ ಶೂದ್ರದ್ರವ್ಯೈಃ ಚ ಯಾಚಕಾಃ ॥ ಊರ್ಧ್ವಪುಂಡ್ರವಿಹೀನಾಃ ಚ ಅಪವಿತ್ರಕರಾಃ ತಥಾ॥ ದಗ್ಧಪಾಪಾಃ ॥ ಅಮಹಾಲಯಕರ್ತಾರಃ ಅಮಾಶ್ರಾದ್ಧವಿವರ್ಜಿತಾಃ॥ ಗುರು ದ್ರುಹಃ ಪಿತೃಘ್ನಾಃ ಚ ಮಾತಾಪಿತೃವಿನಿಂದಕಾಃ ॥ ದಗ್ಧಪಾಪಾಃ ॥ ಅದತ್ವಾ ಭೋಜನಃ ಅಸತ್ಯಾಃ ಅತಿಥಿಘ್ನಃ ಅಗ್ರ ಭೋಜಿನಃ ॥ ಯೇತೇಚಿತ್ ಪಾಪ ಕರ್ತಾರಃ ಪಂಙ್ತಿಭೇದಕರಾಃ ॥ ಚ ಯೇ ॥ ಸರ್ವೇಽಚ ಮುಕ್ತಿಭಾಜಃ ॥ ಇತ್ಯ ನೇನ ಉಕ್ತಂ ಪ್ರಮಾಪಿತಂ ಚ ॥ ಚತ್ವಾರಿಂಶಾಧ್ಯಾಯೇ ಬ್ರಹ್ಮಕಾಂಡೇ ಗಾರುಡೇ.

"ಹರಿಪ್ರೀತಿಕರಾನ್ ಧರ್ಮಾನ್ ವಕ್ಷ್ಯೇ ಶೃಣು ಖಗಾಧಿಪ" ಇತ್ಯಾರಭ್ಯ ಅಧ್ಯಾಯಪೂರ್ತಿಪರ್ಯಂತಂ ಕಾಲವಿಶೇಷೆ ಮೂರ್ತಿವಿಶೇಷಾಂ ಉಕ್ತಾಃ ಕೃಷ್ಣೇನ ವಾಹನಂ ಪ್ರತಿ—"ಪ್ರಾತಃಕಾಲೇ ಸಮುತ್ಥಾಯ ಸ್ಮರೇತ್ ನಾರಾಯಣಂ ಹರಿಂ॥ ಇತ್ಯಾದಿನಾ ॥ ತುಲಸೀ ವಂದನೇ ಶ್ರೀಕೃಷ್ಣಃ ॥ ೨ ॥ ವಿಣ್ಮೂತ್ರೋತ್ಸರ್ಗೇ ಅಪಾನಾತ್ಮಕ ಕೇಶವಃ ॥ ३ ॥ ಶೌಚಕಾಲೇ ಗಂಗಾಜನಕತ್ರಿವಿಕ್ರಮಃ ॥ ४ ॥ ದಂತಧಾವನೇ ಚಂದ್ರಾಂತರ್ಯಾಮೀ ಹರಿಃ ॥ ೫ ॥ ಮುಖಪ್ರಕ್ಷಾಲನೇ ಮಾಧವಃ ॥ ೬ ॥ ಗವಾಂ ಕಂಡೂಯನೇ ಗೋವರ್ಧನಧೃಕ್ ॥ ೭ ॥ ವತ್ಸಸ್ತನ ಪಾನೇ ಬಾಲಕೃಷ್ಣಃ ॥ ೮ ॥ ಗೋದೋಹನೇ ಗೋಪಾಲಕೃಷ್ಣಃ ॥ ೯ ॥ ದಧಿನಿ ಮರ್ಥನೇ ಮಂಥಧರಃ ॥ ೧೦ ॥ ಮೃತ್ತಿಕಾಸ್ನಾನೇ ವರಾಹಃ ॥ ೧೧ ॥ ಪುಂಡ್ರ

ಧಾರಣೇ ಕೇಶವಾದಿ ದ್ವಾದಶ ರೂಪಾಣಿ ॥ ೧೨ ॥ ಚಕ್ರಾದಿ ಮುದ್ರಾಧಾರಣ-ಕಾಲೇ ಕೃದ್ಧೋಲ್ಕಾದಿ ಮೂರ್ತೀಃ ॥ ೧೩ ॥ ಪ್ರಾಣಾಗ್ನಿಹೋತ್ರೇ ಅನಿರುದ್ಧಾದಿ ಪಂಚಕಂ ॥ ೧೪ ॥ ವಸ್ತ್ರಪ್ರಾವರಣೇ ವಾಸುದೇವಃ ॥ ೧೫ ॥ ಶ್ರೀರಾಮಂ ಸಂಧ್ಯಾಯಾಮ್ ॥ ೧೬ ॥ ಶ್ರಾದ್ಧೇ ಅಚ್ಯುತಾನಂತಗೋವಿಂದಾನ್ ॥ ೧೭ ॥ ಪೂರ್ವೋತ್ತರಾಪೋಶನಯೋಃ ವಾಯುಯುಗಮ್ ॥ ೧೮ ॥ ವಸ್ತ್ರಧಾರಣೇ ಉಪೇಂದ್ರಮ್ ॥ ೧೯ ॥ ಯಜ್ಞೋಪವೀತಧಾರಣೇ ನಾರಾಯಣ ವಾಮನೌ ॥೨೦॥ ಆರ್ತಿಕ್ಯಗ್ರಹಣೇ ಪರಶುರಾಮಃ ॥೨೧॥ ಔಪಾಸನ–ವೈಶ್ವದೇವಹೋಮ ಭಸ್ಮಧಾರಣಾದಿಷು ಜಾಮದಗ್ನ್ಯ ॥೨೨॥ ತ್ರಿವಾರ ತೀರ್ಥಗ್ರಾಹಣೇ ಕೃಷ್ಣರಾಮ ವಾಸುದೇವಾಃ ॥೨೩॥ ಶಂಖೋದಕ ಧಾರಣೇ ಮುಕುಂದಃ ॥೨೪॥ ಏಕೈಕಗ್ರಾಸೇ ಗೋವಿಂದಃ ॥೨೫॥ ಭಕ್ಷ್ಯ ಭಕ್ಷಣೇಅಚ್ಯುತಃ ॥೨೬॥ ಶಾಖಾದಿ ಭಕ್ಷಣೇ ಧನ್ವಂತರಿಃ ॥೨೭॥ ಪರಮಾನ್ನ ಭೋಜನೇ ಪಾಂಡುರಂಗಃ ॥೨೮॥ ನವನೀತ ಭಕ್ಷಣೇ ತಾಂಡವ ಕೃಷ್ಣಃ ॥೨೯॥ ದಧ್ಯನ್ನೇ ಗೋಪಾಲಕೃಷ್ಣಃ ॥೩೦॥ ದುಗ್ಧಾನ್ನ ಭೋಜನೇ ಶ್ರೀನಿವಾಸಃ ॥೩೧॥ ತೈಲಂಘೃತಪಕ್ವಾಶನೇ ವೆಂಕಟೇಶಃ ॥೩೨॥ ಕದಲೀ ಜಂಬೂ ದ್ರಾಕ್ಷಾ ಖರ್ಜೂರ ಚೂತ ನಾರಂಗ ಪೂಗ ದಾಡಿಮ ಕಿಂ ತಳ ನಾರಿಕೇಳ ಧಾತ್ರೀ ಭಕ್ಷಣೇ ಬಾಲಕೃಷ್ಣಃ ॥೩೩॥ ಪಾನಕಪಾನೇ ನಾರಸಿಂಹಃ ॥೩೪॥ ಗಂಗಾಮೃತಪಾನೇ ಗಂಗಾಜನಕಃ ॥೩೫॥ ಪ್ರಯಾಣೇ ಗರುಡಧ್ವಜ ನಾರಾಯಣಃ ॥೩೬॥ ಪುತ್ರಚುಂಬನೇ ವೇಣು ಹಸ್ತ ಕೃಷ್ಣಃ ॥೩೭॥ ಸ್ವಸ್ತ್ರೀಸಂಸರ್ಗೇ ಗೋಪಸ್ತ್ರೀಪೀನ ಪಯೋಧರಧರ್ತಾ ॥೩೮॥ ಪ್ರದ್ಯುಮ್ನ ವಾಸುದೇವೌ ತಾಂಬೂಲ ಕಾಲೇ ॥೩೯॥ ಸಂಕರ್ಷಣ ವಿಷ್ಣೂ ಶಯ್ಯಾಯಾಮ್ ॥೪೦॥ ನಿದ್ರೋದಯೇ ಪದ್ಮನಾಭಃ ॥೪೧॥ ಕಥಾಯಾಂ ವ್ಯಾಸಕೃಷ್ಣಹಯಾಸ್ಯಾಃ ॥೪೨॥ ಗೋಪೀಕಾಂತಃ ಗಾನೇ ॥೪೩॥ ಪ್ರತಿಪಾದೇ ಲಕ್ಷ್ಮೀ ಶ್ರೀಕಾಂತೌ ದಕ್ಷಿಣಾದಾನೇ ॥೪೪॥ ರಾಮ ರಾಮ ಇತಿ ತುಲಸೀಛೇದನೇ ॥೪೫॥ ಪುಷ್ಪಛೇದನೇ ಶ್ರೀಕೃಷ್ಣಕೃಷ್ಣ ಇತಿ ॥೪೬॥ ಅನಂತಶಾಯೀ ಪತ್ರಚ್ಛೇದನೇ ॥೪೭॥ ದೂರ್ವಾಚ್ಛೇದನೇ ಕಪಿಲಃ॥೪೮॥ ಗರುಡಾಂತರ್ಗತೇ ಪ್ರದಕ್ಷಿಣೇ ॥೪೯॥ ಶೇಷಾಂತರ್ಯಾಮಿ ಪ್ರಣಾಮೇ ॥೫೦॥ ಭೀತಿಕಾಲೇ ನೃಸಿಂಹಃ ॥೫೧॥ ಸದಾ ನಾರಾಯಣಃ ॥೫೨॥ ಉದರಪೂರ್ತೌ (ರ್ತೇಃ) ವಾಸುದೇವಃ ॥೫೩॥ ಇತ್ಯಾದೀನಿ ಚ ಕರ್ಮಾಣಿ ವಿಷ್ಣು ಪ್ರೀತಿಕರಾಣಿ

ಇತ್ಯುಕ್ತ್ವಾ "ಯಃ ಶೃಣೋತಿ ಆಚರತಿ ಚ ಇಮಾನಿ । ಹರಿಪ್ರೀತಿಕರೋ ಧರ್ಮೋ ಪ್ರವಣೋ ಭವಿತಾ ಸದಾ"॥ ಇತ್ಯತ್ರ ಅಧ್ಯಾಯಃ ಪರ್ಯವಸಿತಃ ॥೪೦॥೩॥೨॥ "ಸರಿತ್"—ನದೀ "ಅಂಬರ"—ಧೋತರ.

**ಕನ್ನಡಾರ್ಥ**

"ಪರಮಾತ್ಮನ ಭಕ್ತಿಯ ಭರದಲ್ಲಿ ಮೈಮರೆದು ಒಮ್ಮೆ ನಗುವನು, ಒಮ್ಮೆ ಅಳುವನು, ಒಮ್ಮೆ ಕುಣಿಯುವನು," "ವಾಕ್ಕು ನುಡಿಯು ಗದ್ಗರಿಸುವುದು, ಚಿತ್ತವು ದ್ರವಿಸುತ್ತದೆ, ನಯನಗಳಲ್ಲಿ ಭಾಷ್ಪಗಳು, ರೋಮಗಳಲ್ಲಿ ಹರ್ಷವು ಅಂದರೆ ರೋಮಾಂಚನವು ಉದಯಿಸುತ್ತದೆ." ಎಂದು ಮುಂತಾಗಿ ಉಕ್ತವಾಗಿರುವ ಭಗವದ್ಭಕ್ತಲಕ್ಷಣಗಳಿಂದ ಕೂಡಿರುವ ಹರಿಭಕ್ತನುಚ್ಚರಿಸಿದ ನಾಮವೇ ಅರಳೆಯ ರಾಶಿಯನ್ನು ಬೆಂಕಿಯು ಸುಡುವಂತೆ ಪಾಪರಾಶಿಗಳನ್ನು ಸುಡುತ್ತದೆ. ಹಿಂದೆ ಹೇಳಲ್ಪಟ್ಟ ಭಗವದ್ಭಕ್ತಿರಹಿತವಾದ ನಾಮಸಂಕೀರ್ತನವು ಪಾಪರಾಶಿಗಳನ್ನು ಸುಡುವುದಿಲ್ಲ. ಪರಮಾತ್ಮನಲ್ಲಿ ಭಕ್ತಿಯುಕ್ತವಾದ ನಾಮೋಚ್ಚಾರಣವು ಪಾಪರಾಶಿಗಳನ್ನು ಅರಳೆಯನ್ನು ಸುಡುವ ಅಗ್ನಿಯಂತೆ ದಹಿಸವುದು. ಈ ವಿಷಯದಲ್ಲಿ ಉದಾಹೃತ ವಚನಗಳು ಆಧಾರವಾಗಿರುತ್ತವೆ.

"ಕಳವು ಮಾಡುವನ—ಸುರಾಪಾನಿಯ (ಸುರೆಯನ್ನು ಕುಡಿಯುವವನ) ಮಿತ್ರದ್ರೋಹಿ, ಬ್ರಹ್ಮಘಾತಿ, ಗುರುಪತ್ನಿಗಾಮಿ, ಸ್ತ್ರೀ—ರಾಜ–ಪಿತೃ, ಗೋವುಗಳ ಘಾತುಕ, ಇದಲ್ಲದೇ ಇನ್ನುಳಿದ ಪಾಪಿಗಳು, ಇವರೆಲ್ಲರೂ ಹರಿಯೆಂಬ ಎರಡು ಅಕ್ಷರಗಳನ್ನು, ಉಚ್ಚರಿಸಿ (ಭಕ್ತಿಯಿಂದ) ಪಾಪಗಳನ್ನು ಕಳೆದುಕೊಳ್ಳುತ್ತಾರೆ." ಮಾಧವಪ್ರಿಯವಾದ—ಮಾಘದಲ್ಲಿ ಸ್ನಾನಮಾಡದವನೂ, ಔಪಾಸನ, ಪ್ರಾತಃಸ್ನಾನ, ಗಾಯತ್ರೀಜಪ, ಪಂಚಮಹಾಯಜ್ಞಗಳನ್ನು ಅನುಷ್ಠಿಸದವನೂ, ಹರಿನಾಮ ಸಂಕೀರ್ತನದಿಂದ ಪಾಪಗಳನ್ನು ಕಳೆದುಕೊಳ್ಳುತ್ತಾನೆ.

ಪರಾರ್ಥಘಾತುಕರು, ಪರನಿಂದಾರತರು, ದುಷ್ಟವರ್ತನದವರು, ಭಗವತ್ಕಥಾ ಶ್ರವಣವಿಲ್ಲದವರು, ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನ ವಿವರ್ಜಿತರು,

ತೀರ್ಥಯಾತ್ರಾವಿಹೀನರು, ವಾಸುದೇವ ದ್ವಾದಶಾಕ್ಷರ ನಾರಾಯಣಾಷ್ಟಾಕ್ಷರ ಮಂತ್ರಗಳನ್ನು ಜಪಿಸದವರು, ಪ್ರಾತಃ-ಸಾಯಂಕಾಲಗಳಲ್ಲಿ ಭಾರತ ರಾಮಾಯಣ ಗಳನ್ನು ಶ್ರವಣ ಪಠಣಮಾಡದವರು, ಶಾಲಗ್ರಾಮಗಳನ್ನು ಪೂಜಿಸದವರು, ಭಗ ವದ್ಭಕ್ತ ನಿಂದಕರು, ಫಲಸಂಕಲ್ಪದಿಂದ ಕರ್ಮಮಾಡುವವರು (ಯಾವಾಗಲೂ) ಶೂದ್ರಾನ್ನವನ್ನುಣ್ಣುವವರು, ತಮ್ಮ ಪಾಪವನ್ನು ಬಚ್ಚಿಟ್ಟು, ಪುಣ್ಯವನ್ನಷ್ಟೇ ಹೊಗಳಿ ಕೊಳ್ಳುವವರು, ದ್ವಾದಶೀವ್ರತರಹಿತರು, ಏಕಾದಶಿಯಲ್ಲಿ ಅನ್ನವನ್ನು ಣ್ಣುವ ಮೂರ್ಖರು, ದುಷ್ಟವಾದ ದಾನವನ್ನು ಸ್ವೀಕರಿಸುವವರು, ವೇದಾಧ್ಯಯನ ರಹಿತರು, ವೇದವನ್ನು ದ್ರವ್ಯಕ್ಕೆ ಮಾರುವವರು, ಪಂಚಾಕ್ಷರಮಂತ್ರವನ್ನು ಜಪಿಸದವರು ಶೂದ್ರನ ಧನದಿಂದ ಯಾಗ ಮಾಡಿಸುವವರು, ಊರ್ಧ್ವಪುಂಡ್ರ ಗಳಿಲ್ಲದವರು, ಅಪವಿತ್ರಕರ್ಮ ಮಾಡುವವರು, ಮಹಾಲಯಶ್ರಾದ್ಧ ಮಾಡದ ವರು, ದರ್ಶಶ್ರಾದ್ಧವನ್ನು ಬಿಟ್ಟವರು, ಗುರುದ್ರೋಹಿಗಳು, ಪಿತೃಸಂಹಾರ ಕರು, ತಂದೆತಾಯಿಗಳ ನಿಂದಕರು, ಪರರಿಗೆ ಕೊಡದೆ ಊಟ ಮಾಡುವವರು, ಸತ್ಯ ನುಡಿಯದವರು, ಅತಿಥಿಗಳಿಗಿಂತ ಮುಂಚೆಯೇ ಉಣ್ಣುವವರು, ಪಂಙ್ತಿ ಭೇದ ಮಾಡುವವರು, ಇವರೆಲ್ಲರೂ ಇಂಥವರೇ ಆದ ಸುಜೀವಿಗಳ ಈ ಎಲ್ಲ ಪಾಪಗಳು ಭಕ್ತಿಯುಕ್ತವಾದ ಹರಿನಾಮ ಸಂಕೀರ್ತನಗಳಿಂದ ನಾಶವಾಗುತ್ತವೆ. ಎಂಬುದಾಗಿ ಪುರಾಣಗಳಲ್ಲಿ ಹೇಳಲಾಗಿರುತ್ತದೆ.

ಇದೇ ವಿಷಯವು ಗರುಡಪುರಾಣ—ಬ್ರಹ್ಮಕಾಂಡದ ೪೨ನೆಯ ಅಧ್ಯಾಯ ದಲ್ಲಿಯೂ ಸಹ ಹೇಳಲಾಗಿರುತ್ತದೆ.

"ಹರಿಪ್ರೀತಿಕರವಾದ ಧರ್ಮಗಳನ್ನು ಹೇಳುವೆ. ಗರುಡ ! ಕೇಳು !" ಎಂದು ಪ್ರಾರಂಭಿಸಿ ಅಧ್ಯಾಯ ಕೊನೆಯವರೆಗೂ ಒಂದೊಂದು ಕಾಲದಲ್ಲಿ ಧ್ಯಾನ ಮಾಡಬೇಕಾಗಿರುವ ಮೂರ್ತಿಗಳನ್ನು ನಿರೂಪಿಸಿರುತ್ತಾರೆ. ಕೃಷ್ಣನು ಗರುಡ ನನ್ನು ಕುರಿತು ಹೇಳಿರುತ್ತಾನೆ. "೧. ಮುಂಜಾವಿನಲ್ಲಿ ಎದ್ದು ನಾರಾಯಣನನ್ನು ಚಿಂತಿಸಬೇಕು. ೨. ತುಲಸಿಯನ್ನು ವಂದಿಸುವಾಗ ಶ್ರೀಕೃಷ್ಣ. ೩. ಮಲಮೂತ್ರ ವಿಸರ್ಜನಕಾಲದಲ್ಲಿ ಅಪಾನಾತ್ಮಕ ಕೇಶವ. ೪. ಮೃತ್ತಿಕಾಶೌಚಕಾಲದಲ್ಲಿ ಗಂಗಾ ಜನಕನಾದ ತ್ರಿವಿಕ್ರಮ. ೫. ದಂತಧಾವನದಲ್ಲಿ ಚಂದ್ರಾಂತರ್ಯಾಮಿಯಾದ ಹರಿ.

೬. ಮುಖವನ್ನು ಪ್ರಕ್ಷಾಲಿಸುವಾಗ (ತೊಳೆಯುವಾಗ) ಮಾಧವ. ೭. ಗೋವುಗಗನ್ನು ತುರಿಸುವಾಗ ಗೋವರ್ಧನಧಾರಿ. ೮. ವತ್ಸಕ್ಕೆ ಮೊಲೆಯುಣಿಸುವಾಗ ಬಾಲಕೃಷ್ಣ. ೯. ಗೋವುಗಳನ್ನು ಕರೆ(ಹಿಂಡು)ಯುವಾಗ ಗೋಪಾಲಕೃಷ್ಣ. ೧೦. ಮೊಸರು ಕಡೆಯುವಾಗ ಕಡಗೋಲಕೃಷ್ಣ. ೧೧. ಮೃತ್ತಿಕಾಸ್ನಾನದಲ್ಲಿ ವರಾಹ. ೧೨, ಊರ್ಧ್ವಪುಂಡ್ರಧಾರಣಕಾಲದಲ್ಲಿ ಕೇಶವ ಮುಂತಾದ ೧೨ ರೂಪಗಳು. ೧೩. ಚಕ್ರ ಮುಂತಾದ ಪಂಚಮುದ್ರಾಧಾರಣಕಾಲದಲ್ಲಿ ಕೃದ್ಧೋಲ್ಕ ಮುಂತಾದ ಪಂಚಮೂರ್ತಿಗಳು. ೧೪. ಪ್ರಾಣಾಗ್ನಿಹೋತ್ರಕಾಲದಲ್ಲಿ ಅನಿರುದ್ಧ ಮುಂತಾದ ಪಂಚಮೂರ್ತಿಗಳು. ೧೫. ವಸ್ತ್ರಪ್ರಾವರಣದಲ್ಲಿ (ಹೊದಿಸುವಾಗ_ಹೊದಿಯುವಾಗ) ವಾಸುದೇವನು. ೧೬. ಸಂಧ್ಯಾವಂದನಕಾಲದಲ್ಲಿ ಶ್ರೀರಾಮನು. ೧೭. ಶ್ರಾದ್ಧಕಾಲದಲ್ಲಿ ಅಚ್ಯುತಾನಂತ ಗೋವಿಂದರು. ೧೮. ಮೊದಲಿನ ಹಾಗೂ ಕೊನೆಯ ಆಪೋಶನಗಳಲ್ಲಿ ಎರಡು ಪ್ರಾಣರೂಪಗಳು. ೧೯. ವಸ್ತ್ರಧಾರಣಕಾಲದಲ್ಲಿ ಉಪೇಂದ್ರ. ೨೦. ಯಜ್ಞೋಪವೀತ ಧಾರಣ ಕಾಲದಲ್ಲಿ ನಾರಾಯಣ ವಾಮನ ರೂಪಗಳು. ೨೧. ಆರ್ತಿಕ್ಯವನ್ನು ಸ್ವೀಕರಿಸುವಾಗ ಪರಶುರಾಮನು. ೨೨. ಔಪಾಸನ ವೈಶ್ವದೇವಹೋಮ ಭಸ್ಮಧಾರಣ ಈ ಕಾಲಗಳಲ್ಲಿ ಪರಶುರಾಮ ೨೩. ಮೂರುಸಲ ತೀರ್ಥವನ್ನು ಸ್ವೀಕರಿಸುವಾಗ ರಾಮ ಕೃಷ್ಣ ವಾಸುದೇವ ರೂಪಗಳು. ೨೪. ಶಂಖೋದಕವನ್ನು ಧರಿಸುವಾಗ ಮುಕುಂದ. ೨೫. ಒಂದೊಂದು ತುತ್ತನ್ನು ತಿನ್ನುವಾಗ ಗೋವಿಂದ. ೨೬. ಭಕ್ಷ್ಯಗಳನ್ನು ಭಕ್ಷಿಸುವಾಗ ಅಚ್ಯುತ. ೨೭. ಕಾಯಿಪಲ್ಯೆಗಳನ್ನು ತಿನ್ನುವಾಗ ಧನ್ವಂತರಿ. ೨೮. ಪರಮಾನ್ನವನ್ನು ಭುಂಜಿಸುವಾಗ ಪಾಂಡುರಂಗ. ೨೯. ನವನೀತ ಭಕ್ಷಣದಲ್ಲಿ ತಾಂಡವಕೃಷ್ಣ. ೩೦. ಮೊಸರುಬುತ್ತಿಯಲ್ಲಿ ಗೋಪಾಲಕೃಷ್ಣ. ೩೧. ಹಾಲು ಅನ್ನ ಭೋಜನದಲ್ಲಿ ಶ್ರೀನಿವಾಸನು. ೩೨. ತುಪ್ಪ ಎಣ್ಣೆಗಳಲ್ಲಿ ಸಿದ್ಧಪಡಿಸುದುದನ್ನು ತಿನ್ನುವಾಗ ವೆಂಕಟೇಶನು. ೩೩. ಬಾಳೆಹಣ್ಣು ನೇರಲ, ದ್ರಾಕ್ಷಿ, ಖರ್ಜೂರ, ಮಾವು, ನಾರಂಗಿ (ಕಿತ್ತಳೆ), ಅಡಿಕೆ, ದಾಳಿಂಬ, ಕೊಬ್ಬರಿ, ನೆಲ್ಲಿಗಳ ಫಲಗಳನ್ನು ತಿನ್ನುವಾಗ ಬಾಲಕೃಷ್ಣ. ೩೪. ಪಾನಕವನ್ನು ಕುಡಿಯುವಾಗ ನರಸಿಂಹ. ೩೫. ಗಂಗಾಪಾನದಲ್ಲಿ, ಗಂಗಾಜನಕ ತ್ರಿವಿಕ್ರಮ. ೩೬. ಪ್ರಯಾಣ ಕಾಲದಲ್ಲಿ ಗರುಡಧ್ವಜ ನಾರಾಯಣ ೩೭. ಮಕ್ಕಳನ್ನು ಮುದ್ದಿಸುವಾಗ ವೇಣುಧರಕೃಷ್ಣನು. ೩೮. ಸ್ವಸ್ತ್ರೀಸಂಭೋಗ

ಕಾಲದಲ್ಲಿ ಗೋಪಿಕಾರಮಣ ಗೋಪಾಲಕೃಷ್ಣ. ೩೯. ತಾಂಬೂಲವನ್ನು ಸೇವಿಸುವಾಗ ಪ್ರದ್ಯುಮ್ನ ವಾಸುದೇವ ರೂಪಗಳು. ೪೦. ಶಯನದಲ್ಲಿ ಸಂಕರ್ಷಣ— ವಿಷ್ಣುರೂಪಗಳು. ೪೧. ನಿದ್ರೆಯಿಂದ ಏಳುವಾಗ ಪದ್ಮನಾಭ. ೪೨. ಕಥೆಯನ್ನು ಕೇಳುವಾಗ ವ್ಯಾಸ ಕೃಷ್ಣ ಹಯಗ್ರೀವ ಮೂರ್ತಿಗಳು. ೪೩. ಗಾನಕಾಲದಲ್ಲಿ ಲಕ್ಷ್ಮೀಕಾಂತನು (ಯೋಗೇಶ್ವರ). ೪೪. ದಕ್ಷಿಣೆಯನ್ನು ಕೊಡುವಾಗ ಶ್ರೀಲಕ್ಷ್ಮೀಪತಿಗಳು. ೪೫, ಹೂವು ಕೊಯ್ಯುವಾಗ ಕೃಷ್ಣ. ೪೬. ಪತ್ರಗಳನ್ನು ಹರಿಯುವಾಗ ಅನಂತ ಶಯನ. ೪೭. ಗರಿಕೆ (ದೂರ್ವಾ)ಯನ್ನು ಹರಿಯುವಾಗ ಕಪಿಲ. ೪೮. ಪ್ರದಕ್ಷಿಣ ಕಾಲದಲ್ಲಿ ಗರುಡಾಂತರ್ಗತ ಹರಿ. ೪೯. ನಮಸ್ಕರಿಸುವಾಗ ಶೇಷಾಂತರ್ಯಾಮಿ ಸಂಕರ್ಷಣರೂಪ. ೫೦. ಭಯ ಬಂದಾಗ ನರಸಿಂಹ ರೂಪ. ೫೧.ಎಲ್ಲ ಕಾಲಗಳಲ್ಲಿ ನಾರಾಯಣ. ೫೨. ಉದರ ಪೂರ್ಣವಾಗುವಾಗ ವಾಸುದೇವ. ಹೀಗೆ ರೂಪಗಳನ್ನು ಚಿಂತಿಸಬೇಕು. ಈ ಮುಂತಾದ ಕರ್ಮಗಳು ವಿಷ್ಣುವಿನ ಪ್ರೀತಿಯನ್ನುಂಟು ಮಾಡುವವು" ಎಂದು ಹೇಳಿ "ಈ ಧರ್ಮಗಳನ್ನು ಕೇಳುವ ಹಾಗೂ ಆಚರಿಸುವವರು ಶ್ರೀಭಗವತ್ಪ್ರೀತಿಕರಧರ್ಮಗಳಲ್ಲಿ ಸದಾ ನಿರತರಾಗುತ್ತಾರೆ." ಎಂಬುದಾಗಿ ಅಧ್ಯಾಯವನ್ನು ಪರಿಸಮಾಪ್ತಿ ಗೊಳಿಸಿರುತ್ತಾರೆ. ॥ ೨ ॥

## ೫. ಶ್ರೀಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ.

ಸರಿತ್ಪ್ರವಹವೆಂಬ ನದಿಯ ಪ್ರವಾಹ ನೋಡಿ, ಸಂತೋಷದಿಂದ ಈ ನದಿ ಹೇಗೆ ಹರಿಯುತ್ತಿದೆ ಎಂದು ಹೇಳುವ ನೆವದಿಂದಾಗಲಿ, ಹೊಸವಸ್ತ್ರ ಒಂದು ಜೊತೆಯಾಗಿರುವುದನ್ನು ಪ್ರತ್ಯೇಕಿಸುವುದಕ್ಕಾಗಿ ಉಡುವ ನೆವದಿಂದಾಗಲಿ, ಆ ವಸ್ತ್ರವನ್ನು ಎರಡಾಗಿ ಹರಿದು ಪ್ರತ್ಯೇಕಿಸೆಂದು ಹೇಳಿಯಾಗಲೀ; ಎಲೆಯನ್ನು ಎರಡಾಗಿ ಹರಿದು ಭಾಗಿಸೆಂದು ಹೇಳಿಯಾಗಲೀ ಸಂತೋಷ ವಿಸ್ಮೃತಿಗಳಿಂದಾಗಲೀ, ಒಮ್ಮೆ ಅಂದರೆ ಒಂದು ಸಾರಿ ಬಾಯ್ತೆರದು ಅಂದರೆ ಗಟ್ಟಿಯಾಗಿ ಹರಿ ಹರಿ ಎಂದು ಹೇಳಿದಾಗ್ಯೂ, ಆ ಹರಿ ಎಂಬ ದೇವರ ನಾಮೋಚ್ಚಾರಣೆ ಮಾತ್ರದಿಂದ ದುರಿತಗಳೆಂಬ ಪಾಪದುಃಖಾದಿಗಳು, ತರಣಿ ಎಂಬ ಸೂರ್ಯಬಿಂಬವನ್ನು ಕಂಡ ಹಿಮದಂತೆ ಇರದೆ ಎಂದರೆ ನಷ್ಟವಾಗಿ ಹೋಗುವವು. ತೂಲರಾಶಿ ಎಂಬ ಹತ್ತಿಯ

ರಾಶಿಯಲ್ಲಿ ಅನಲನೆಂಬ ಅಗ್ನಿಯು ಪ್ರವೇಶಿಸಿದ ಮಾತ್ರಕ್ಕೆ, ಅದು ಸುಟ್ಟು ನಾಶವಾಗುವಂತೆ ಎಂದು ದೃಷ್ಟಾಂತವನ್ನು ಹೇಳುತ್ತಾರೆ. ॥ ೨ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಹರಿಯುತ್ತಿರುವ ನದಿಯ ನೀರನ್ನು ಕಂಡಾಗ ಅವುಗಳಲ್ಲಿ ಸ್ಥಿತನಾಗಿ ಇರುವ ಶ್ರೀಹರಿಯ ನಾಮಸ್ಮರಣೆ ಮಾಡಬೇಕು. ಜುಳು ಜುಳನೆ ಹರಿಯುತ್ತಿರುವ ನೀರಿನ ಕ್ರಿಯಾಭಿವ್ಯಕ್ತಿ—"ಹರಿ" ಎಂದು.

ಹೊಸಬಟ್ಟೆಯನ್ನು ಉಡುವಾಗ ಹರಿನಾಮಸ್ಮರಣೆ ಪರಮತಾರಕ. ಈ ಶರೀರಗತನಾದ ಬಿಂಬರೂಪೀ ಶ್ರೀಹರಿಗೆ ಉಡುವ ಬಟ್ಟೆಯು ದಿವ್ಯಾಂಬರವೆಂಬ ಅನುಸಂಧಾನಪೂರ್ವಕ ಶ್ರೀಹರಿಯ ನಾಮಸ್ಮರಣೆ. ಬಟ್ಟೆಯನ್ನು ಹರಿಯುವಾಗ, ಉಂಟಾಗುವ ಫರ್ರೆಂಬ ಶಬ್ದವು ಶ್ರೀಹರಿಯ ನಾಮಸ್ಮರಣ ಸೂಚಕವಾಗಿದೆ. ಎಂಬ ಉತ್ತಮ ಜ್ಞಾನಾನುಸಂಧಾನ. ಪುತ್ರಾದಿಗಳೊಡನೆ ವಿಹರಿಸುತ್ತಿರುವಾಗ, ಮಕ್ಕಳ ಲಾಲನ ಪಾಲನಾ ಸಮಯದಲ್ಲಿ ಪುತ್ರಾಂತರ್ಗತ ಶ್ರೀಹರಿಯ ನಾಮಸ್ಮರಣೆ ಮಾಡಬೇಕು. ಪುತ್ರಾದಿಗಳಲ್ಲಿ ಕೇವಲ ಮೋಹವನ್ನಿಡದೆ, ಅವರಲ್ಲಿ ಸ್ಥಿತನಾಗಿದ್ದು ಸಕಲಚೇಷ್ಟಾಪ್ರವರ್ತಕನಾದ ಶ್ರೀಹರಿಯನ್ನು ಸ್ಮರಿಸಬೇಕೆಂದು ತಿಳಿಸುತ್ತಾರೆ. ಈ ಪ್ರಸಂಗದಲ್ಲಿ ಅಜಾಮಿಳನ ಕಥಾವಿಶೇಷವನ್ನು ಉದಹರಿಸಬಹುದು. ತನ್ನ ಅಂತ್ಯಕಾಲದಲ್ಲಿ ದೂರದಲ್ಲಿ ಆಟವಾಡುತ್ತಿದ್ದ ತನ್ನ ಪುತ್ರನನ್ನು ನಾರಾಯಣ ಎಂಬ ಹೆಸರಿನಿಂದ ಕರೆದನು. ಸುಸಂಸ್ಕೃತನಾದ ಅಜಾಮಿಳನಿಗೆ ತನ್ನ ದುಷ್ಕರ್ಮಗಳ ಆಚರಣೆಯಿಂದ ಪಶ್ಚಾತ್ತಾಪ ಉಂಟಾಗಿ, ಅಂತ್ಯಕಾಲದಲ್ಲಿ ಪುತ್ರ ನಿಮಿತ್ತವಾಗಿ ಶ್ರೀಹರಿಯ ನಾಮೋಚ್ಚಾರಣೆ ಮಾಡಿದ ಮಾತ್ರದಿಂದ ಅವನಿಗೆ ಸದ್ಗತಿಯಾಯಿತು. "ಪುನ್ನಾಮ್ನೋ ನರಕಾತ್ತ್ರಾತಾ ಪುತ್ರ ಇತ್ಯಾಭಿಶಬ್ದ್ಯತೇ" ಎಂಬ ವಚನ ರೀತ್ಯಾ, ಪುತ್

ಎಂಬ ನರಕದಿಂದ ದಾಟಿಸುವುದರಿಂದ ಶ್ರೀಪರಮಾತ್ಮನಿಗೆ ಪುತ್ರನೆಂದು ಹೆಸರು. ಪುತ್ರಾದಿಗಳಲ್ಲಿ ಪುತ್ರನಾಮಕ ಶ್ರೀಪರಮಾತ್ಮನ ಸ್ಮರಣೆ ಮಾಡಬೇಕು.

ಆನಂದಸ್ಥಿತಿಯಲ್ಲಿರಲಿ, ಕೋಪೋದ್ರೇಕದಿಂದ ಮನಸ್ಸು ಬಾಧಿತವಾದಾಗ ದುಃಖತಪ್ತನಾದ ಸಮಯದಲ್ಲಿರಲಿ, ಶ್ರೀಹರಿಯ ಸ್ಮರಣೆ ಮಾತ್ರದಿಂದ ಕೋಪ ಶಾಂತವಾಗುವುದು. ದುಃಖ ಪರಿಹಾರವಾಗುವುದು. ತತ್ಫಲವಾಗಿ ಚಿತ್ತಶಾಂತಿ ಉಂಟಾಗುವುದು. ಶ್ರೀಹರಿನಾಮ ಸ್ಮರಣೆಯು ಕ್ರೋಧ ಮತ್ತು ದುಃಖಗಳಿಂದ ಉಂಟಾಗಬಹುದಾದ ಅನರ್ಥಗಳನ್ನು ಪರಿಹರಿಸುವುದು.

ಪ್ರಾಪಂಚಿಕ ವಿಷಯಭೋಗಗಳಲ್ಲಿ ಮನಸ್ಸು ಆಸಕ್ತವಾಗಿ ಶ್ರೀಪರಮಾತ್ಮನನ್ನು ಮರೆತಾಗ, ಅಕಸ್ಮಾತ್ತಾಗಿ ತನಗೇ ತಿಳಿಯದಂತೆಯೇ ಹರಿಯನಾಮ ಶಬ್ದೋಚ್ಚಾರಣೆಯಾದಾಗ, ಅಷ್ಟರಿಂದಲೇ ದೋಷ ಪರಿಹಾರ. ಇನ್ನು ಮಹಾತ್ಮ್ಯ ಜ್ಞಾನಪೂರ್ವಕವಾಗಿ ಶ್ರೀಹರಿಯ ಸ್ಮರಣೆ ಮಾಡಿದರೆ, ಸಕಲ ಪಾಪಗಳ ಕ್ಷಾಳನೆಯಾಗುವುದರಲ್ಲಿ ಸಂದೇಹವೇ ಇಲ್ಲ.

ಇಂತಹ ಪರಿಸ್ಥಿತಿಗಳಲ್ಲಿ ಒಮ್ಮೆ ತುಂಬಿದ ಕಂಠದಿಂದ ಹರಿ ಹರೀ ಎಂಬ ಎರಡು ಅಕ್ಷರಗಳನ್ನು ಉಚ್ಚರಿಸಿದ ಮಾತ್ರಕ್ಕೆ ಸಮಸ್ತ ಪಾಪಗಳೂ ತಕ್ಷಣ ಪರಿಹಾರವಾಗುವುವು. ಶ್ರೀಹರಿಯ ನಾಮೋಚ್ಚರಣೆಯ ಮಹಿಮಾತಿಶಯವನ್ನು ದಾಸರಾಯರು ಸುಂದರವಾದ ದೃಷ್ಟಾಂತದಿಂದ ನಿರೂಪಿಸುತ್ತಾರೆ. ಹತ್ತಿಯ ರಾಶಿಯಲ್ಲಿ ಒಂದು ಸಣ್ಣ ಬೆಂಕಿಯ ಕಿಡಿ ಬಿದ್ದರೂ ಸಾಕು, ಅದು ಇಡೀ ಹತ್ತಿಯ ರಾಶಿಯನ್ನೇ ಸುಟ್ಟು ಬೂದಿ ಮಾಡುವುದು. ಶ್ರೀಹರಿನಾಮಸ್ಮರಣೆಯು ಬೆಂಕಿಯ ಸದೃಶ. ಬೆಂಕಿ ಪರಮ ಪವಿತ್ರವಾದ ವಸ್ತು. ಅಂತೆಯೇ ಶ್ರೀಪರಮಾತ್ಮನು ಸಮಸ್ತದೋಷರಹಿತನು. ಪಾವನಕೆ ಪಾವನನು. ಮಂಗಳಸ್ವರೂಪಿಯು. ಜೀವರಿಂದ ಕೃತ ಪಾಪರಾಶಿಗಳು ತೂಲರಾಶಿ ಸದೃಶ. ಹತ್ತಿಯ ರಾಶಿಯ ನಾಶಕ್ಕೆ ಒಂದೇ ಒಂದು ಕಿಡಿ ಸಾಕು. ಅಂತೆಯೇ ಸಕಲ ದುರಿತರಾಶಿಗಳ ನಾಶಕ್ಕೆ ಹರೀ ಎಂಬ ಒಂದೇ ನಾಮಸ್ಮರಣೆ ಸಾಕೆಂದು ಪ್ರಸಕ್ತ ಪದ್ಯದ ತಾತ್ಪರ್ಯ. ॥ ೨ ॥

## ಪದ್ಯ ೩

**ಮೂಲ**

**ಮಲಗುವಾಗಲಿ ಏಳುವಾಗಲಿ ।**
**ಕುಳಿತು ಮಾತಾಡುತಲಿ ಮನೆಯೊಳು ।**
**ಕೆಲಸಗಳ ಮಾಡುತಲಿ ಮೈದೊಳೆವಾಗ ಮೆಲುವಾಗ ॥**
**ಕಲುಷದೂರನ ಸಕಲ ಠಾವಿಲಿ ।**
**ತಿಳಿಯೆ ತತ್ತನ್ನಾಮರೂಪವ ।**
**ಬಳಿಯಲಿಪ್ಪನು ಒಂದರಕ್ಷಣ ಬಿಟ್ಟಗಲನವರ ॥ ೩ ॥**

**ಅವತರಣಿಕೆ**

ಆ ಸರ್ವೋತ್ತಮನ ನಾಮರೂಪಗಳ ಆಯಾಯಾ ದೇಶಕಾಲಾದಿ ಅವಸ್ಥಾ-ವಿಶೇಷಗಳಲ್ಲಿ ನಿತ್ಯ ಸ್ಮರಿಸುತ್ತಿರುವ ಭಕ್ತರನ್ನು ಒಂದರೆಕ್ಷಣ ಬಿಟ್ಟಗಲದೆ, ಅವರ ಬಳಿಯಲ್ಲಿಪ್ಪನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಮಲಗುವಾಗಲಿ** = ನಾವು ಮಲಗಿಕೊಳ್ಳುವ ಕಾಲದಲ್ಲಿ, **ಏಳುವಾಗಲಿ** = ಹಾಸಿಗೆಯಿಂದ ಏಳುವ ಸಮಯದಲ್ಲಿ. **ಕುಳಿತು ಮಾತಾಡುತಲಿ** = ಬಂಧು ಬಾಂಧವರು ಇಷ್ಟಮಿತ್ರರೊಡನೆ ಕುಳಿತು ಸಂಭಾಷಿಸುತ್ತಿರುವಾಗ, **ಮನೆಯೊಳು** = ಗೃಹದಲ್ಲಿ, **ಕೆಲಸಗಳ ಮಾಡುತಲಿ** = ನಾನಾಪರಿಯಾದ ಗೃಹಕೃತ್ಯ ಸಂಬಂಧವಾದ ಕೆಲಸಗಳನ್ನು ಮಾಡುತ್ತಿರುವಾಗ, **ಮೈದೊಳೆವಾಗ** = ಸ್ನಾನಮಾಡುತ್ತಿರುವಾಗ (ದೇಹಶುದ್ಧ್ಯರ್ಥವಾಗಿ) **ಮೆಲುವಾಗ** = ಭೋಜನ ಮಾಡುತ್ತಿರುವಾಗ (ವಿವಿಧ ವಿಷಯಗಳನ್ನು ಇಂದ್ರಿಯಗಳ ದ್ವಾರಾ ಸ್ವೀಕರಿಸಿ, ಅನುಭವಿಸುತ್ತಿರುವಾಗ), **ಕಲುಷದೂರನ** = ಸರ್ವದೋಷವಿವರ್ಜಿತನಾದ ಶ್ರೀಪರಮಾತ್ಮನ, **ಸಕಲ ಠಾವಿನಲಿ** = ಒಳಗೆ ಹೊರಗೆ, ಸರ್ವದೇಶ ಮತ್ತು ಕಾಲಗಳಲ್ಲಿ **ತತ್ತ**

**ನ್ನಾಮರೂಪವ** = ಸರ್ವಸ್ಥಳಗಳಲ್ಲಿ ತದಾಕಾರ, ತನ್ನಾಮಕ, ತದ್ರೂಪಗಳನ್ನು, **ತಿಳಿಯೆ** = ಉಪಾಸನಾದ್ವಾರ ಅರಿಯಲು, **ಅವರ** = ಅಂತಹ ಉಪಾಸಕರಾದ ಭಗವದ್ಭಕ್ತರ, **ಒಂದರಕ್ಷಣ** = ಒಂದು ಕ್ಷಣಕಾಲವಾದರೂ, **ಬಿಟ್ಟಗಲನು** = ಬಿಟ್ಟಿರುವುದಿಲ್ಲ. **ಬಳಿಯಲಿಪ್ಪನು** = ಅವರ ಸಮೀಪವರ್ತಿಯಾಗಿರುತ್ತಾನೆ. ॥ ೩ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಇನ್ನೂ ಹರಿನಾಮಸ್ಮರಣೆ ಮಹಾತ್ಮ್ಯೆಯನು ಹೇಳುತ್ತಾರೆ. ನಿದ್ರಾಪ್ರಾಪ್ತವಾದ ಕಾಲದಲ್ಲಿ ಮಲಗಿಕೊಂಬೋ ಕಾಲದಲ್ಲಿ, ಇಂದ್ರಿಯಗಳು ಯಾವತ್ತೂ ಬಾಹ್ಯವಿಷಯಗಳಲ್ಲಿ ಹೋಗದೆ ಏಕತ್ರ ನಿಂದಿರೋವಾಗತವೆ. ತದ್ವತ್ ಜ್ಞಾನಭಕ್ತಿವೈರಾಗ್ಯಗಳಿಂದ ಬಾಹ್ಯವಿಷಯಗಳಲ್ಲಿ ಹೇಯತಾಬುದ್ಧಿ ಮಾಡಿ ಅಹಂ–ಮಮತಾದಿಗಳ ಬಿಟ್ಟು ಮಲಗಿದ ಕಾಲದಲ್ಲಿ, ಏಳೋ ಕಾಲದಲ್ಲಿ, ಮನೋ ಇಂದ್ರಿಯ ಚಂದಾಗಿ ನಿಂತಿದ್ದ ಕಾಲದಲ್ಲಿ, ಧ್ಯಾನೋಪಾಸನೆಯಿಂದ ಮನಸ್ಸು ಸ್ಥಿರವಾಗಿ ನಿಂದರಿಸಿ, ತನ್ನ ಉಪಾಸನಾಮೂರ್ತಿಯ ಕೂಡ ಮಾತಾಡುತ್ತಲೇ ತಥಾ ಪ್ರಾಕೃತವಿಷಯ ಮಾತಾಡುವಾಗಲೂ, ದೇವರಲ್ಲಿ ಸ್ಮೃತಿ ಇರಬೇಕೆಂದು ತಾತ್ಪರ್ಯ. ತನ್ನ ದೇಹಾಖ್ಯ ಮನೆಯಲ್ಲಿ ಕಾರ್ಯರೂಪವಾದ ಇಂದ್ರಿಯಜನ್ಯ ವ್ಯಾಪಾರದ ಪ್ರತಿ ಕರ್ಮಗಳಲ್ಲಿ ಬಿಂಬನ್ನ ಐಕ್ಯಚಿಂತನಾ ಮಾಡಿ, ಆ ಕರ್ಮಗಳ ಕರ್ಮಾಂತರ್ಗತ ಪರಮಾತ್ಮಗೆ ಸಮರ್ಪಿಸಿ, ಬಿಂಬಕ್ರಿಯಾ ದ್ವಾರಾ ಪ್ರತಿಬಿಂಬನ ಕ್ರಿಯಾ ಎಂತ ತಿಳಿದು, ಬಹಿಃ ಮನೆಯಲ್ಲಿ ತಾನು ಏನು ಕಾರ್ಯಗಳು ಮಾಡೋ ಕಾಲದಲ್ಲೂನೂ ಪರಮಾತ್ಮನ ನಾಮೋಚ್ಚಾರಣ ಮಾಡತಾ, ಶುಚಿ ಆಗೋ ನಿಮಿತ್ತ ತಾನು ಸ್ನಾನ ಮಾಡುವಾಗ, ಮೈಲಿಗೆರೂಪವಾದ ಅರಿಷಡ್ವರ್ಗಗಳನ್ನು ವೈರಾಗ್ಯವೆಂಬ ಉದಕದಲ್ಲಿ ಸ್ನಾನರೂಪವಾದ ಶುಚಿರ್ಭೂತನಾಗೋ ಕಾಲದಲ್ಲಿ, ಪೂರ್ವೋಕ್ತ ಕರ್ಮಗಳನುಸರಿಸಿ ಪ್ರಾಪ್ತವಾದ ಸುಖ ದುಃಖಾದಿಗಳ

ಅನುಭವರೂಪವಾದ ಭೋಜನ ಕಾಲದಲ್ಲಿ ಮತ್ತು ಭಗವದ್ಧ್ಯಾನದಿಂದ ಆನಂದ ವಾಗಿ ಇರೋ ಕಾಲದಲ್ಲಿ, ಲೇಶವಾದರೂ ಕಲ್ಮಷರಹಿತನಾದ ಶ್ರೀಪರಮಾತ್ಮನ ಅಂತರ್ಬಹಿಃ ಸರ್ವದೇಶಕಾಲಗಳಲ್ಲಿ ಸರ್ವಸ್ಥಳದಲ್ಲಿ ತದಾಕಾರ ತದ್ರೂಪ ತದ್ಭಿನ್ನ ನಾಗಿರುವ ಶ್ರೀದೇವರ, ಉಪಾಸನಾರೂಪವಾದ ಚಿಂತನ ಮಾಡಿದರೆ, ಸಮೀ ಪಸ್ಥ ಪದಾರ್ಥದೋಷಾದಿಯಲ್ಲಿ ಕಣ್ಣುಗಳಿಗೆ ಕಾಣತಾ ಇರತಾನೆ. ಮನಸ್ಸಿಗೆ ಹೃದಯಾಕಾಶದಲ್ಲಿ ಅಪರೋಕ್ಷದಿಂದ ತೋರತಾನೆ. ವಾಸನಾಮಯ ಬಿಂಬಾ ಪರೋಕ್ಷವಾಗತದೆ ಎಂತ ತಾತ್ಪರ್ಯ. ಈ ಪ್ರಕಾರ ಮಹಾತ್ಮ್ಯಜ್ಞಾನಸುದೃಢ ಸ್ನೇಹಪೂರ್ವಕ ಹರಿನಾಮೋಚ್ಚಾರಣೆ ಮಾಡುವಂಥ ಭಗವದ್ಭಕ್ತರನ್ನ ಒಂದು ಕ್ಷಣಲವಕಾಲವಾದರೂ ಬಿಟ್ಟು ಇರೋದಿಲ್ಲ ಎಂತ ತಾತ್ಪರ್ಯ.

ತಾತ್ಪರ್ಯ–ಸರ್ವಪ್ರಕಾರದಲ್ಲೂ ಪರಮಾತ್ಮನ ನಾಮೋಚ್ಚಾರಣ ಸದಾ ಮಾಡಬೇಕು, ಇದರಿಂದ ಹೃದಯಾಕಾಶಗತ ಬಿಂಬಾಪರೋಕ್ಷವಾಗತದೆ ಎಂತ ತಾತ್ಪರ್ಯ.

ವಿಶೇಷಾರ್ಥ—ಪ್ರಮಾಣ

**ಹರಿರ್ಹರ್ಹತಿ ಹರಿರ್ಹರ್ಹತಿ ದಸ್ಯುನ್ಯಾಜೇನ ಯೋ ವದೇತ್ ।**
**ಸೋಽಪಿ ಸದ್ಗತಿಮಾಪ್ನೋತಿ ಗತಿಂ ಸುಕೃತಿನೋ ಯಥಾ ॥ ೩ ॥**

೨. ಭಾವಪ್ರಕಾಶಿಕೆ

ಮಲಗುವುದು ಮೊದಲಾದ ಕಾಲದಲ್ಲಿಯೂ, ಸಕಲ ಸ್ಥಳಗಳಲ್ಲಿಯೂ, ತತ್ತನ್ನಾಮರೂಪವ ತಿಳಿಯಬೇಕೆಂದು ಈ ಪದ್ಯದಲ್ಲಿ ಹೇಳಿರುವರು. ತತ್ತನ್ನಾಮ ರೂಪವೆಂದರೇನು? ಅಂದರೆ ನಾವು ಮಲಗುವಾಗ ನಮ್ಮ ಹಾಸಿಗೆಯಲ್ಲಿ ಶೇಷನು ಶ್ರೀಪರಮಾತ್ಮನಿಗೆ ಶಯ್ಯಾರೂಪನಾಗಿರುವಂತೆ ಈ ಶಯ್ಯಾದಲ್ಲಿ ಶ್ರೀಪರ

ಮಾತ್ಮನಿರುವನು. ಇದರ ಮೇಲೆ ನನ್ನೊಳಗೆ ಶ್ರೀಪರಮಾತ್ಮನು ನನ್ನ ರೂಪದಿಂದಲೂ, ನನ್ನ ಹೆಂಡತಿಯಲ್ಲಿ ಲಕ್ಷ್ಮೀದೇವಿಯುವರು ನನ್ನ ಸತಿಯ ರೂಪದಿಂದಲೂ ಇದ್ದು ಇಲ್ಲಿ ಮಲಗಿ ಭೋಗಾದಿಗಳನ್ನು ಅನುಭವಿಸಿ ನಿದ್ರೆ ಮಾಡುವರು. ಅವರ ಅನುಗ್ರಹದಿಂದ ಆ ಸುಖವನ್ನು ಯತ್ಕಿಂಚಿತ್ ನಮ್ಮ ಯೋಗ್ಯತಾನುಸಾರವಾಗಿ ನಮಗೆ ಕೊಡುತ್ತಿರುವರು ಎಂದು ನಮ್ಮೊಳಗೂ, ಹಾಸಿಗೆಯೊಳಗೂ, ಸತಿಯೊಳಗೂ ಸಹ ಲಕ್ಷ್ಮೀನಾರಾಯಣರನ್ನೇ ಚಿಂತಿಸಬೇಕೆಂಬ ಭಾವ. ಅಥವಾ ತನ್ನ ಹಾಸಿಗೆಯಲ್ಲಿ ಶೇಷಪರ್ಯಂಕರೂಪಿಯಾಗಿಯೂ, ತನ್ನಲ್ಲಿ ಪುರುಷರೂಪದಿಂದಲೂ, ತನ್ನ ಹೆಂಡತಿಯಲ್ಲಿ ಸ್ತ್ರೀರೂಪದಿಂದಲೂ, ಅದೇ ಆಕಾರ, ಅದೇ ನಾಮದಿಂದ ಒಂದೊಂದು ಸ್ಥಳದಲ್ಲಿಯೂ, ಶ್ರೀಪರಮಾತ್ಮನು ಲಕ್ಷ್ಮೀಸಮೇತನಾಗಿರುವನೆಂದು ಭಾವಿಸಬೇಕು. ಇದರಂತೆ ಏಳುವಾಗಲೂ ಲಕ್ಷ್ಮೀನಾರಾಯಣರು ನಮ್ಮೊಳಗಿದ್ದು ಹಾಸಿಗೆ ಬಿಟ್ಟೆದ್ದರು ಎಂದು ತಿಳಿಯಬೇಕು. ಎದ್ದ ಮೇಲೆ ಸುತ್ತಮುತ್ತಲೂ ಯಾವ ವಸ್ತುಗಳನ್ನು ಕಾಣುವೆವೋ, ಮಲಗುವಾಗ ಶಯ್ಯಾಗೃಹದಲ್ಲಿ ಯಾವ ಪದಾರ್ಥಗಳನ್ನು ಕಾಣುವೆವೋ ಆ ವಸ್ತುಗಳಲ್ಲಿಯೂ ತದ್ರೂಪ ತದಾಕಾರನಾಗಿ ಭಗವಂತನಿರುವನೆಂದು ತಿಳಿಯಬೇಕು. ಕುಳಿತು ಮಾತಾಡುವಾಗ, ನಮ್ಮ ಬಾಯಿಯಿಂದ ಹೊರಡುವ ಎಲ್ಲಾ ಅಕ್ಷರ ಶಬ್ದ ವಾಚ್ಯಾನು ಪರಮಾತ್ಮನು ಆಡಿದ ಮಾತುಗಳೇ ಭಗವಂತನ ಸ್ತೋತ್ರಗಳು ಎಂದು ಭಾವಿಸಬೇಕು. ಮನೆಯಲ್ಲಿ ಯಾವ ಕೆಲಸವನ್ನು ಮಾಡುತ್ತಿದ್ದರೂ ಇವೆಲ್ಲವೂ ಭಗವತ್ಸೇವೆ ಎಂದು ಭಾವಿಸಿ ಅಲ್ಲಿ ಕಾಣುವ ಸಕಲ ಪದಾರ್ಥಗಳಲ್ಲಿಯೂ ತದಾಕಾರನಾಗಿ ತನ್ನಾಮಗಳಿಂದ ಪರಮಾತ್ಮನಿರುವನೆಂದು ತಿಳಿಯಬೇಕು. ಸ್ನಾನಮಾಡುವಾಗ, ಈ ನನ್ನ ದೇಹವು ಪರಮಾತ್ಮನಿಗೆ ಪ್ರತಿಮಾರೂಪವು, ಈ ಪ್ರತಿಮಾಕ್ಕೆ ಅಭಿಷೇಕವೆಂದು ಭಾವಿಸಿ ಸ್ನಾನ ಮಾಡಬೇಕು. ಅಥವಾ ಪರಮಾತ್ಮನಿಗೆ ಈ ನನ್ನ ದೇಹವು ರಥವು. ಇದರೊಳಗೆ ಪರಮಾತ್ಮನನ್ನು ಚಿಂತಿಸಲು ಶುದ್ಧಿಗೋಸ್ಕರ ರಥವನ್ನು ತೊಳೆಯುವಂತೆ ಈ ದೇಹರಥವನ್ನು ತೊಳೆಯುವೆನು ಎಂದು ಭಾವಿಸಬೇಕು. ದೇಹದಲ್ಲಿ ವಸ್ತ್ರಾಭರಣಗಳನ್ನು ಧರಿಸುವಾಗಲೂ ಪ್ರತಿಮಾಭೂತವಾದ ಈ ಶರೀರಕ್ಕೆ ಅಲಂಕರಿಸುವೆನು, ಅಥವಾ ಈ ರಥವನ್ನು ಅಲಂಕರಿಸುವೆನು, ಎಂದು ಚಿಂತಿಸಬೇಕು. ಭೋಜನಮಾಡುವಾಗ, ಅನ್ನರೂಪಿಯಾದ ಪರಮಾತ್ಮನನ್ನು ನನ್ನೊಳ

ಗಿರುವ ಪರಮಾತ್ಮನಲ್ಲಿ ಸೇರಿಸುವೆನು ಎಂದು ಚಿಂತಿಸಬೇಕು ಎಂಬ ಅರ್ಥವನ್ನೇ 'ಸರ್ವಥಾವಿಲಿ ದುರಿತ ದೂರನ ತತ್ತನ್ನಾಮ ರೂಪ ತಿಳಿಯೇ' ಎಂದು ಹೇಳಿರುವರೆಂದು ತಿಳಿಯಬೇಕು. ಇದಲ್ಲದೆ ಮಲಗುವಾಗಲು, ಕೂಡುವಾಗಲು, ಏಳುವಾಗಲು, ಕೆಲಸ ಮಾಡುತ್ತಲೂ, ಭೋಜನ ಮಾಡುತ್ತಲೂ ಸಹ ಸರ್ವಕಾಲದಲ್ಲಿಯೂ ಹರಿನಾಮಸ್ಮರಣೆಯನ್ನು ಮಾಡುತ್ತಿರಬೇಕೆಂಬ ಭಾವ ಅಲ್ಲಲ್ಲಿ ತತ್ತನ್ನಾಮ ರೂಪವ ತಿಳಿಯುವುದು ಉಪಾಸನೆಯ ಕ್ರಮವು. ಸರ್ವಕಾಲದಲ್ಲಿಯೂ ನಾರಾಯಣ ಕೃಷ್ಣ ಎಂದು ಅನ್ನುವುದು ಭಕ್ತಿಪ್ರದರ್ಶಕ. ಉಪಾಸನೆಯು ಮನಸ್ಸಿನ ಕಾರ್ಯವು. ನಾಮೋಚ್ಚರಣೆಯು ಬಾಹ್ಯವ್ಯಾಪಾರವು ಎರಡೂ ಇರಬೇಕೆಂಬ ತಾತ್ಪರ್ಯ. ॥ ೩ ॥

**೩. ಭಾವದರ್ಪಣ**

ಶಯ್ಯಾಕಾಲೇ ಸಂಸ್ಮರೇಚ್ಚೈವ ನಿತ್ಯಂ ಸಂಕರ್ಷಣಾಖ್ಯಂ ವಿಷ್ಣುರೂಪಂ ಹರಿಂ ಚ । ಏಳುವಾಗಲೇ ಪ್ರಾತಃಕಾಲೇ ಸಮುತ್ಥಾಯ ಸ್ಮರೇನ್ನಾರಾಯಣಂ ಹರಿಮಿತಿ ಗಾರುಡೇ. ॥ ೩ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದಿ.**

ಮಲಗಿ ಇತಿ ॥ ಮೆಲುವಾಗ ತಿಂಬುವಾಗ, ತತ್ತತ್ ಇತಿ ಬ್ರಹ್ಮಕಾಂಡೋಕ್ತೇನ (ಬ್ರಹ್ಮಕಾಂಡೋಕ್ತ ಪ್ರಕಾರೇಣ) ॥ ೩ ॥

**ಕನ್ನಡಾರ್ಥ**

ಮಲಗಿ ಎದ್ದು ಪುನಃ ಮಲಗುವವರೆಗೆ ಮಾಡುವ ಅನೇಕ ವ್ಯಾಪಾರಗಳಲ್ಲಿ ಬ್ರಹ್ಮಕಾಂಡದಲ್ಲಿ ಹೇಳಿದಂತೆ ಆಯಾ ವ್ಯಾಪಾರ—ಕಾಲಗಳಿಗನುರೂಪವಾದ ಭಗವದ್ರೂಪನಾಮಗಳಿಂದ ಶ್ರೀಹರಿಯನ್ನು ಸ್ಮರಿಸಿದರೆ, ಶ್ರೀಹರಿಯು ಅವರನ್ನು ಎಲ್ಲ ಠಾವುಗಳಲ್ಲಿ ಒಂದರೆಕ್ಷಣ ಕೂಡ ಬಿಡದೆ ಸಂರಕ್ಷಿಸುವನು. ಎಂದು ಈ ಪದ್ಯದಿಂದ ದಾಸವರ್ಯರು ನಿರೂಪಿಸುತ್ತಾರೆ. ಮೆಲುವಾಗ-ತಿನ್ನುತ್ತಿರುವಾಗ,

ತತ್ತನ್ನಾಮರೂಪವ ತಿಳಿಯೇ ಎಂದರೆ ಬ್ರಹ್ಮಕಾಂಡದಲ್ಲಿ ಹೇಳಿದಂತೆ ಆಯಾ ವ್ಯಾಪಾರಗಳಲ್ಲಿ ಭಗವಂತನ ರೂಪನಾಮಗಳನ್ನು ತಿಳಿದರೆ ಎಂದು ಅರ್ಥ ॥ ೩ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಮಲಗುವಕಾಲದಲ್ಲಾಗಲೀ, ಏಳುವ ಸಮಯದಲ್ಲಾಗಲೀ, ಕುಳಿತು ಮಾತನಾಡುತ್ತಾಗಲೀ, ಮನೆಗೆಲಸ ಮಾಡುವಾಗಲಾಗಲೀ, ಮೈ ತೊಳೆಯುವಾಗ, ಮೆಲುವಾಗ ಅಂದರೆ ಊಟ ಮಾಡುವಾಗಲಾಗಲೀ, ಕಲುಷದೂರನ ಅಂದರೆ ಪಾಪರಹಿತ, ಪಾಪನಿವಾರಕನಾದ ದೇವರ ಆಯಾಯಾ ನಾಮರೂಪಗಳನ್ನು ಸಕಲಸ್ಥಳಗಳಲ್ಲೂ ಸ್ಮರಿಸಿದರೆ, ಹಾಗೆ ಸ್ಮರಿಸುವ ಭಕ್ತರನ್ನು ಒಂದು ಕ್ಷಣವೂ ಬೆಂಬಿಡದೆ ಸಮೀಪದಲ್ಲಿದ್ದು ರಕ್ಷಿಸುವನೆಂದರ್ಥ. **ಸಾಂಕೇತ್ಯಂ ಪಾರಿಹಾಸ್ಯಂವಾ** ಎಂಬ ಭಾಗವತಾರ್ಥ. ಮತ್ತು

**ಹರಿರ್ಯಾತಿ ಹರಿರ್ಯಾತಿ ದಸ್ಯುವ್ಯಾಜೇನ ವಾ ವದೇತ್ ।**
**ಸೋಽಪಿ ಸದ್ಗತಿಮಾಪ್ನೋತಿ ಗತಿಂ ಸುಕೃತಿನೊ ಯಥಾ ॥**

ಎಂಬ ಕೃಷ್ಣಾಮೃತಮಹಾರ್ಣವಾರ್ಥ ಸಹ ವಿವರಿಸಿತು ॥ ೩ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ನಿದ್ರಾವಸ್ಥೆಯು ಪ್ರಾಪ್ತವಾಗುವ ಸಮಯದಲ್ಲಿ ಶೇಷಶಯನನಾದ ಶ್ರೀಹರಿಯ ಸ್ಮರಣೆ ಮಾಡಬೇಕು. ನಿದ್ರಾಸಮಯದಲ್ಲಿ ಸಕಲ ಇಂದ್ರಿಯಗಳೂ ಬಾಹ್ಯವಿಷಯದಲ್ಲಿ ಆಸಕ್ತವಾಗದೆ, ಏಕತ್ರ ಸ್ಥಿತವಾಗಿರುವುವು. ಸ್ವಪ್ನಾವಸ್ಥೆಯಲ್ಲಿ ದಶೇಂದ್ರಿಯಗಳು ಉಪರತವಾಗಿರುವುವು. ಸುಷುಪ್ತ್ಯವಸ್ಥೆಯಲ್ಲಿ ಮನಸ್ಸೂ ಸೇರಿ ಏಕಾದಶೇಂದ್ರಿಯಗಳೂ ಉಪರತವಾಗಿರುವುವು. ಹೀಗೆ ಮಲಗುವಾಗಲೂ ಹರಿಯನ್ನು ಸ್ಮರಿಸುತ್ತಾ ನಿದ್ರೆಹೋಗಬೇಕೆಂದು ತಿಳಿಸುತ್ತಾರೆ.

ಎಚ್ಚರವಾಗಿ ಏಳುವ ಸಮಯದಲ್ಲಿ ನಿದ್ರಾವಸ್ಥೆಯಲ್ಲಿ ಉಪರತವಾಗಿದ್ದ ಇಂದ್ರಿಯಗಳು ಎಚ್ಚೆತ್ತು ಮನಸ್ಸನ್ನು ಶ್ರೀಪರಮಾತ್ಮನ ಧ್ಯಾನೋಪಾಸನೆಯಲ್ಲಿ ಸ್ಥಿರವಾಗಿರಿಸಿ ಸ್ಮರಿಸಬೇಕು.

ಆಸನದಲ್ಲಿ ಕುಳಿತುಕೊಳ್ಳುವ ಸಮಯದಲ್ಲಿ ಹರಿಯ ನಾಮಾವಳಿಗಳ ಧ್ಯಾನ ಪರಮತಾರಕ. ಆಸನದಲ್ಲಿ ಸ್ಥಿತನಾದ ಜಗದಾಧಾರರೂಪನಾದ, ಆಶ್ರಯದಾತನಾದ ಅರವಿಂದನಾಭನನ್ನು ಸ್ಮರಿಸಬೇಕು.

ಪತ್ನೀಪುತ್ರಾದಿಗಳೊಡನೆ, ಬಂಧುಬಾಂಧವರ ಜೊತೆಯಲ್ಲಿ ಇಷ್ಟಮಿತ್ರರ ಸಹವಾಸದಲ್ಲಿ ಸಂಭಾಷಿಸುತ್ತಿರುವಾಗ, ಸರ್ವೇಶನನ್ನು ಧ್ಯಾನಿಸುತ್ತಿರಬೇಕು. ತನ್ನಲ್ಲಿ ಪುರುಷರೂಪದಿಂದಲೂ, ಪತ್ನಿಯಲ್ಲಿ ಲಕ್ಷ್ಮ್ಯಂತರ್ಗತ ಸ್ತ್ರೀರೂಪದಿಂದಲೂ ಪುತ್ರಾದಿಗಳಲ್ಲಿ ತತ್ತದಾಕಾರ ಬಿಂಬರೂಪಗಳಿಂದಲೂ, ಇಂದ್ರಿಯಗಳಲ್ಲಿ ಹೃಷೀಕೇಶರೂಪದಿಂದಲೂ, ಅಣುರೇಣುತೃಣಕಾಷ್ಠಗಳಲ್ಲಿ ಪರಿಪೂರ್ಣನಾಗಿ ವ್ಯಾಪ್ತನಾಗಿರುವ ಶ್ರೀಹರಿಯನ್ನು ಧ್ಯಾನಿಸುತ್ತಿರಬೇಕೆಂದು ತಿಳಿಸುತ್ತಾರೆ. ಪಂಚಪ್ರಾಣರು ಪಂಚಮನೋವೃತ್ತಿಗಳೇ ಪುತ್ರಸದೃಶರು. ಇಂದ್ರಿಯಗಳು ಅವುಗಳೊಡನೆ ವ್ಯವಹರಿಸುವಾಗ ತದ್ರೂಪ, ತದಾಕಾರನಾದ ತಾಮರಸದಳನೇತ್ರನ ನಿರಂತರ ಚಿಂತನೆ.

ಮನೆಯಲ್ಲಿ ನಾನಾಪರಿಯಾದ ಗೃಹಕೃತ್ಯದ ವಿಷಯಗಳಲ್ಲಿ ತೊಡಗಿರುವಾಗ ಆಯಾಯಕಾರ್ಯ ಪ್ರೇರಕನಾದ ಕಂಜದಳಾಯತಾಕ್ಷನನ್ನು ಸ್ಮರಿಸುತ್ತಿರಬೇಕು. ಸಾಧನಶರೀರವೆಂಬ ನಮ್ಮ ಸ್ಥೂಲದೇಹವೇ ದೇವಮಂದಿರವೆಂಬ ಮನೆಯು, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳದ್ವಾರಾ ವಿಧವಿಧವಾದ ವ್ಯಾಪಾರ ವಿಶೇಷಗಳು ನಡೆಯುತ್ತಿರವುವು. ಅವೆಲ್ಲವೂ ದೇಹಗತ ಹೃತ್ಪದ್ಮಸ್ಥಿತನಾದ ಬಿಂಬನ ಪೂಜೆ ಎಂಬ ಅನುಸಂಧಾನದಿಂದ ಧ್ಯಾನೋಪಾಸನೆ ಮಾಡುತ್ತಿರಬೇಕು.

ದೇವಮಂದಿರವಾದ ಈ ದೇಹವನ್ನು ಸ್ನಾನಮಾಡಿ, ತೊಳೆದು ಶುದ್ಧಗೊಳಿಸುತ್ತೇವೆ. ಸ್ನಾನೋದಕವು ಬಿಂಬನಿಗೆ ಅಭಿಷೇಕವೆಂದರಿತು ಮಜ್ಜನಗೈಯಬೇಕು.

ಭೋಜನವು ಒಂದು ಯಜ್ಞರೂಪವಾದ ವ್ಯಾಪಾರವಿಶೇಷವು, ಸರ್ವಸುಭೋಜ್ಯವಸ್ತುಗಳಲ್ಲಿ ಖಂಡಾಖಂಡರೂಪದಿಂದ ಇರುವ ಅಗಣಿತಾತ್ಮನ ಭಗವ

ದ್ರೂಪಗಳನ್ನು ಚಿಂತಿಸುತ್ತಾ, ಭೋಕ್ತೃವಾದ ತನ್ನಲ್ಲಿದ್ದು ಉಂಡು ಉಣಿಸುವ ಬಿಂಬನಿಗೆ ಉಂಬುವ ಅನ್ನ ನೈವೇದ್ಯವೆಂದರಿತು, ಭೋಜನಮಾಡಬೇಕು.

ಶ್ರೀಹರಿಯು ಸಕಲದೋಷವಿದೂರನು ಎಲ್ಲಾ ದೇಶ, ಕಾಲ, ಅವಸ್ಥಾ ವಿಶೇಷಗಳಲ್ಲಿ ಪೂರ್ಣನಾಗಿ ವ್ಯಾಪ್ತನಾಗಿದ್ದಾನೆಂದು, ಅವನನ್ನು ಧ್ಯಾನೋಪಾಸನೆಯುದ್ವಾರಾ ಅರಿತು ಸ್ಮರಿಸುತ್ತಿರಬೇಕು.

ಈ ರೀತಿಯಲ್ಲಿ ಸರ್ವತ್ರವ್ಯಾಪ್ತನಾಗಿರುವ ಸರ್ವೇಶನನ್ನು ತತ್ತನ್ನಾಮಕನೂ, ತತ್ತದ್ರೂಪನೂ, ತತ್ತದಾಕಾರನೂ, ತತ್ತತ್‌ಶಬ್ದವಾಚ್ಯನೂ ಆದ ಲೋಕವಿಲಕ್ಷಣನಾದ ಆ ಜಗನ್ನಿಯಾಮಕನನ್ನು ಉತ್ತಮಜ್ಞಾನಾನುಸಂಧಾನ ಪೂರ್ವಕ ಸದಾ ಸ್ಮರಿಸುತ್ತಿರುವ ಭಕ್ತರ ಸಮೀಪದಲ್ಲಿಯೇ ಇರುತ್ತಾನೆ.

ಅಂತರಂಗಭಕ್ತರನ್ನು ಭಗವಂತನು ಅವರ ಸಮೀಪಸ್ಥನಾಗಿ, ಪರಮಾಪ್ತನಾಗಿದ್ದು ಸಂರಕ್ಷಿಸುತ್ತಿರುವನು. ॥ ೩ ॥

## ಪದ್ಯ ೪

**ಮೂಲ**

**ಆವ ಕುಲದವನಾದರೇನಿ ।**
**ನ್ನಾವ ದೇಶದೊಳಿದ್ದರೇನಿ ।**
**ನ್ನಾವ ಕರ್ಮವ ಮಾಡಲೇನಿನ್ನಾವ ಕಾಲದಲಿ ॥**
**ಶ್ರೀವರನ ಸರ್ವತ್ರದಲಿ ಸಂ ।**
**ಭಾವಿಸುತ ಪೂಜಿಸುತ ಮೋದಿಪ ।**
**ಕೋವಿದರಿಗುಂಟೇನೊ ಭಯದುಃಖಾದಿ ದ್ವಂದ್ವಗಳು ॥ ೪ ॥**

**ಅವತರಣಿಕೆ**

ಶ್ರೀವರನ ಸರ್ವತ್ರ ಠಾವಿನಲಿ, ಅನುಸಂಧಾನಪೂರ್ವಕ ಧ್ಯಾನಿಸುತ್ತಾ, ತದ್ರೂಪನನ್ನು ತತ್ತಸ್ಥಾನಗಳಲ್ಲಿ ಪೂಜಿಸುತ, ಸಂತೋಷದಿಂದ ಹಿಗ್ಗುತ್ತಿರುವ ಜ್ಞಾನಿಗಳಿಗೆ ನರಕಾದ್ಯನರ್ಥಗಳ ಭಯ, ಸಾಂಸಾರಿಕದುಃಖಗಳು ಎಂದಿಗಾದರೂ ಇಲ್ಲ–ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಆವಕುಲದವನಾದರೇನು** = ಅಧಿಕಾರಿಯಾದ ಭಗವದ್ಭಕ್ತನು ಯಾವ ಕುಲದಲ್ಲಿ ಜನಿಸಿದ್ದರೇನು, ಯಾವ ವರ್ಣದವನಾದರೂ ಸರಿಯೆ, **ಇನ್ನಾವದೇಶದೊಳಿದ್ದರೇನು** = ಜಗತ್ತಿನ ಯಾವ ಪ್ರದೇಶದಲ್ಲಿ ವಾಸಿಸುತ್ತಿದ್ದರೇನು, **ಇನ್ನಾವ ಕರ್ಮವನಾಡಲೇನು** = ಯಾವ ವಿಧವಾದ ಕರ್ಮಗಳನ್ನು ಆಚರಿಸುತ್ತಿದ್ದರೇನು, **ಇನ್ನಾವ ಕಾಲದಲಿ** = ಯುಗ ಪ್ರಭೇಧಗಳಿಂದ ಯಾವ ಕಾಲದಲ್ಲಿದ್ದರೇನು, **ಶ್ರೀವರನ** = ಶ್ರೀಲಕ್ಷ್ಮೀಪತಿಯಾದ ಶ್ರೀಹರಿಯನ್ನು, **ಸರ್ವತ್ರದಲಿ** = ಸರ್ವಾಧಿಷ್ಠಾನಗಳಲ್ಲಿ, **ಸಂಭಾವಿಸುತ** = ಅನುಸಂಧಾನಪೂರ್ವಕ ಸ್ಮರಿಸುತ್ತಿರುವ, **ಪೂಜಿಸುತ** = ಆಯಾಯಾ ಅಧಿಷ್ಠಾನಗತ ಭಗವದ್ರೂಪಗಳಿಗೂ ಸ್ವಬಿಂಬನಿಗೂ ಐಕ್ಯಚಿಂತನಾಪೂರ್ವಕ ಪೂಜೆ ಮಾಡುತ್ತಾ, **ಮೋದಿಪ** = ಆನಂದಿಸುತ್ತಿರುವ, **ಕೋವಿದರಿಗೆ** = ಜ್ಞಾನಿಗಳಿಗೆ, **ಭಯ** = ಯಮಲೋಕದ ಭಯ, ನರಕಾದ್ಯನರ್ಥಗಳ ಭೀತಿ, **ದುಃಖ** = ಸಂಸಾರದಲ್ಲಿ ಒದಗುತ್ತಿರುವ ಕ್ಲೇಶ, **ಆದಿದ್ವಂದ್ವಗಳು** = ಇತ್ಯಾದಿ ಜಯ ಅಪಜಯ, ಲಾಭ ಅಲಾಭ, ಸುಖದುಃಖಾದಿ ದ್ವಂದ್ವಗಳು, **ಉಂಟೇನೋ** = ಉಂಟೇ, ಅಂದರೆ ಎಂದೆಂದಿಗೂ ಇಲ್ಲವೆಂದರ್ಥ. ॥ ೪ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಪೂರ್ವೋಕ್ತರಾದಂಥ ಭಗವದ್ಭಕ್ತರಿಗೆ ದಾವ ಭಯವೂ ಇಲ್ಲ ಎಂತಲೂ, ಸರ್ವರೂ ಭಗವನ್ನಾಮ ಉಚ್ಚಾರ ಮಾಡಬಹುದೆಂದೂ ಹೇಳತಾರೆ.

ಪೂರ್ವೋಕ್ತ ಅಧಿಕಾರಿ ದಾವ ವರ್ಣದವನಾದರೂ ಸರಿಯೇ ಉಕ್ತಂ ಚ ಆಗ್ನೇಯೇ **ನ ವಿದ್ಯಾ ನ ಕುಲಂ ರೂಪಂ ನ ಧನಂ ಚ ಬಹುಶ್ರುತಂ ।**
**ನ ಹರೇಃ ಪ್ರೀಯಮಾಣಸ್ಯ ಭಕ್ತಿಮಾತ್ರಪ್ರಿಯೋ ಹರಿಃ**
**॥ಇತಿ॥**

ಮತ್ತು ದಾವ ಪ್ರದೇಶದಲ್ಲಿ ಇದ್ದ ಕಾಲಕ್ಕೂ ಸರಿಯೆ ಮತ್ತು ದ್ವಂದ್ವಕರ್ಮಗಳೊಳಗೆ ದಾವ ಕರ್ಮ ಮಾಡಿದರೂ ಸರಿಯೆ ಮತ್ತು ಸರ್ವಕಾಲಗಳಲ್ಲೂ ಶ್ರೀಲಕ್ಷ್ಮೀದೇವಿಯರ ಪತಿಯಾದ ನಾರಾಯಣದೇವರ ಪೂರ್ವೋಕ್ತ ಸರ್ವಾಧಿಷ್ಠಾನಗಳಲ್ಲಿ ಚಂದಾಗಿ ಅನುಸಂಧಾನದಿಂದ ಧ್ಯಾನಮಾಡಿ, ಭಗದ್ರೂಪಗಳಿಂದ ಭಗವದ್ರೂಪಗಳಿಗೆ ಐಕ್ಯಚಿಂತನಾರೂಪವಾದ ಪೂಜಾ ಮಾಡತಾ ಭಗವದ್ವಿಷಯಕವಾದ ಜ್ಞಾನಾನಂದಾದಿಗಳಿಂದ ಸಂತೋಷಪಡತಕ್ಕ ಜ್ಞಾನಿಗಳಿಗ್ಯೆಯಮಲೋಕದ ಭಯವೇನು, ನರಕಭಯು, ಐಹಿಕಸಂಬಂಧವಾದ ವಿಷಯಾದಿಗಳು ಇವೇ ಮೊದಲಾದ ಅನೇಕವಿಧ ತಾಪತ್ರಯಗಳು, ದುಃಖಗಳು, ಇನ್ನೂ ಲಾಭಾಲಾಭ ಜಯಾಪಜಯಗಳು ಇವುಗಳು ಉಂಟಾ ಎಂದರೆ, ಲೇಪ ಇಲ್ಲ ಎಂತ ಸಂಶೋಧನದಿಂದ ಹೇಳಿದ್ದಾರೆಂದು ತಾತ್ಪರ್ಯ. ॥ ೪ ॥

## ೨. ಭಾವಪ್ರಕಾಶಿಕೆ

ಪರಮಾತ್ಮನನ್ನು ಭಜಿಸಬೇಕಾದರೆ ಇಂತಹ ಕುಲದವನೇ ಆಗಬೇಕೆಂಬುವುದಿಲ್ಲ. ಇಂತಹ ದೇಶದಲ್ಲಿ ಭಜಿಸಬೇಕು, ಇಂತಹ ಕಾಲದಲ್ಲೇ ಇಂತಹ ಕರ್ಮವನ್ನೇ ಮಾಡಬೇಕೆಂಬುದೇನೂ ಇಲ್ಲ, ಯಾವ ದೇಶದಲ್ಲಾಗಲೀ, ಯಾವ ಕಾಲದಲ್ಲೇ ಆಗಲಿ, ಯಾವ ಕುಲದವನಾದರೂ ಪರಮಾತ್ಮನಲ್ಲಿ ಭಕ್ತಿ ಒಂದಿದ್ದರೆ ಸಾಕು ಪರಮಾತ್ಮನು ಇವನ ಭವದುಃಖಾದಿಗಳನ್ನು ಪರಿಹರಿಸುವನು. ಭಾಗವತ ಸಪ್ತಮಸ್ಕಂಧ ೭ನೆಯ ಅಧ್ಯಾಯದಲ್ಲಿ **'ದೇವೋಽಸುರೋ ಮನುಷ್ಯೋ ವಾ ಯಕ್ಷೋ ಗಂಧರ್ವ ಏವ ಚ॥ ಭಜನ್ ಮುಕುಂದ ಚರಣಂ ಸ್ವಸ್ತಿಮಾನ್**

**ಸ್ಯಾದ್ಯಥಾವಯಂ || ೫೨ || ನಾಲಂ ದ್ವಿಜತ್ವಂ ದೇವತ್ವಂ ಋಷಿತ್ವಂ ವಾಽಸುರಾತ್ಮಜಾಃ || ಪ್ರೀಣನಾಯ ಮುಕುಂದಸ್ಯ ನವೃತ್ತಂ ನ ಬಹು ಜ್ಞತಾ || ೫೩ || ನ ದಾನಂ ನ ತಪೋಽನೇಜ್ಯಾ ನ ಶೌಚಂ ನ ವ್ರತಾನಿ ಚ|| ಪ್ರೀಯತೇಽಮಲಯಾ ಭಕ್ತ್ಯಾ ಹರಿರನ್ಯದ್ವಿಡಂಬನಂ || ೫೪ ||'**

ಪ್ರಹ್ಲಾದನು ದೈತ್ಯ ಬಾಲಕರಿಗೆ ಉಪದೇಶ ಮಾಡುವ ಪ್ರಕರಣ, ಪ್ರಹ್ಲಾದನು ಹೇಳಿದುದು : ಎಲೈ ದೈತ್ಯ ಬಾಲಕರುಗಳಿರಾ ! ದೇವತೆಯೇ ಆಗಲಿ, ದೈತ್ಯನೇ ಆಗಲಿ, ಮನುಷ್ಯನೇ ಆಗಲಿ, ಯಕ್ಷನಾಗಲೀ, ಗಂಧರ್ವನಾಗಲೀ, ಮೋಕ್ಷಪ್ರದ ನಾದ ಶ್ರೀಪರಮಾತ್ಮನನ್ನು ಭಜಿಸಿದರೆ ಯಾರಾದರೂ ನಮ್ಮಂತೆ ಸುಖವನ್ನು ಹೊಂದುವರು || ೫೨ || ಬ್ರಾಹ್ಮಣನಾಗಿ ಹುಟ್ಟೋಣ ಮಾತ್ರದಿಂದಲೇ ಆಗಲಿ, ದೇವತೆಯಾಗಿ ಹುಟ್ಟುವುದರಿಂದಲಾಗಲೀ, ಋಷಿತ್ವವೇ ಆಗಲಿ, ಪರಮಾತ್ಮನನ್ನು ಪ್ರೀತಿಪಡಿಸುವುದಕ್ಕೆ ಕಾರಣವಲ್ಲ. ಎಲೈ ದೈತ್ಯ ಬಾಲಕರಿರಾ ! ಸದಾಚಾರ ಸಂಪನ್ನನಾಗಿರುವುದೂ ಕಾರಣವಲ್ಲ, ಬಹಳ ತಿಳಿದಿರುವುದೂ ಕಾರಣವಲ್ಲ. ||೫೩|| ದಾನವೂ ಕಾರಣವಲ್ಲ. ವ್ರತಗಳೂ ಕಾರಣವಲ್ಲ. ಶ್ರೀಹರಿಯು ನಿರ್ಮಲವಾದ (ನಿಷ್ಕಲ್ಮಷವಾದ) ಅಂದರೆ ದ್ವೇಷಾದಿ ಸಂಬಂಧವಿಲ್ಲದ ಭಕ್ತಿಯೊಂದಕ್ಕೆ ಮೆಚ್ಚು ವನು. ಮಿಕ್ಕವೆಲ್ಲ ಬರೇ ಡಾಂಭಿಕವು ಎಂದು ಹೇಳಿರುವನು. ಇದೇ ಅಭಿಪ್ರಾಯ ವನ್ನೇ ದಾಸರಾಯರು ಇಲ್ಲಿ ಹೇಳಿರುವರು.

ಪರಮಾತ್ಮನನ್ನು ಸದಾ ಸ್ಮರಿಸುತ್ತಿರುವವನು ಸಂಸಾರ ಸಮುದ್ರವನ್ನು ದಾಟುವನು ಸದಾ ದುರ್ವಿಷಯಾಸಕ್ತನು ಸಂಸಾರದಲ್ಲಿ ಕ್ಲೇಶವನ್ನನುಭವಿಸುತ್ತಿ ರುವನೆಂದು ಹೇಳುತ್ತಾರೆ.

**೩. ಭಾವದರ್ಪಣ**

ಉಕ್ತಂಚಾಗ್ನೇಯೇ "ನ ವಿದ್ಯಾ ನ ಕುಲಂ ರೂಪಂ ನ ಧನಂ ನ ಬಹುಶ್ರುತಂ| ನ ಹರೇಃ ಪ್ರೀಣನಾಯ ಸ್ಯಾದ್ಭಕ್ತಿಮಾತ್ರಪ್ರಿಯೋ ಹರಿರಿತಿ ||೪||

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದಿ**

"ಆವ" ಇತಿ|| "ಆದೊಡೆ" = ಆದರೆ || ||

**ಕನ್ನಡಾರ್ಥ**

ಶ್ರೀವರನನ್ನು ಸರ್ವತ್ರದಲಿ ಸಂಭಾವಿಸುತ್ತ ಪೂಜಿಸುತ್ತ ಮೋದಪಡುವ ಕೋವಿದನಿಗೆ ಭಯ ದುಃಖ ಮುಂತಾದುವುಗಳು ಉಂಟಾಗುವುದಿಲ್ಲವೆಂದು ತಿಳಿಸುತ್ತಾರೆ–"ಆವಕುಲದವನಾದೊಡೇನು" ಎಂಬ ಪದ್ಯದಿಂದ ॥೪॥

**೫. ಶ್ರೀಗುರುಹೃದಯಪ್ರಕಾಶಿಕೆ**

ಯಾವ ಜಾತಿಯವರಾದರೂ ದೇವರನ್ನು ಸರ್ವತ್ರ ಚಿಂತಿಸಿ ಸ್ಮರಿಸಬಹುದೆಂದು ತಿಳಿಸುತ್ತಾರೆ, ಆವ ಎಂದು, ಶೂದ್ರಾದಿ ಯಾವ ಜಾತಿಯವನಾಗಲೀ, ಮ್ಲೇಂಛಾದಿ ಯಾವ ದೇಶದಲ್ಲಿದ್ದಾಗ್ಯೂ, ಕಲಿಯುಗ ಮೊದಲಾದ ಯಾವ ಕಾಲದಲ್ಲಾಗಲೀ, ಲಕ್ಷ್ಮೀಪತಿಯಾದ ದೇವರನ್ನು ಸರ್ವತ್ರದಲ್ಲೂ ಬಹುಮಾನಿಸುತ್ತಾ ಅಧಿಷ್ಠಾನಾನುಸಾರಪೂಜೆ ಎಂಬ ಮರ್ಯಾದೆಯನ್ನು ಮಾಡುತ್ತಾ ಸಂತೋಷಪಡುವ ಕೋವಿದನೆಂಬ ಜ್ಞಾನಿಗೆ ಭಯ ದುಃಖ ಮೊದಲಾದ ದ್ವಂದ್ವವೆಂಬ ಎರಡಾದ ಸುಖದುಃಖರೂಪ ಸಂಸೃತಿಯು ಉಂಟೆ ಎಂದರೆ ಜ್ಞಾನಾನುಸಾರ ಲೋಪವಾಗುದಿಲ್ಲವೆಂದರ್ಥ ॥೪॥

—

## ಸರ್ವವ್ಯಾಖ್ಯಾನಸಾರಸಂಗ್ರಹ

ಮಾನವನು ಯಾವ ಕುಲದಲ್ಲಿ ಜನಿಸಿದ್ದರೇನು ? ಶೂದ್ರಾದಿ ಯಾವ ವರ್ಣದವನಾದರೇನು ? ಸರ್ವತ್ರವ್ಯಾಪ್ತನಾದ ಆ ಸರ್ವನಿಯಾಮಕನ ಧ್ಯಾನೋಪಾಸನೆಯುಳ್ಳ ಭಗವದ್ಭಕ್ತರಿಗೆ ಕುಲ ಅಥವಾ ವರ್ಣದ ಪ್ರತಿಬಂಧಕವಿಲ್ಲ. ಶ್ರೀಹರಿಯು ಅವರ ಅಂತಃಕರಣಪೂರಿತವಾದ ನಿರ್ಮಲಭಕ್ತಿಗೆ ಒಲಿಯುವನೇ ಹೊರತು, ಅವನ ಕುಲ, ವರ್ಣಗಳನ್ನು ಎಣಿಸುವುದಿಲ್ಲ. ಇದಕ್ಕೆ ವಿದುರ, ಗುಹ, ಶಬರೀ ಮೊದಲಾದ ಭಕ್ತರೇ ದೃಷ್ಟಾಂತ.

ಭಕ್ತರು ಯಾವ ದೇಶದಲ್ಲಿದ್ದರೇನು ? ಬ್ರಹ್ಮಾಂಡದ ಒಳಗೂ ಹೊರಗೂ ಹರಡಿರುವ ಆ ಬ್ರಹ್ಮೇಶನನ್ನು ಸದಾ ಸ್ಮರಿಸುತ್ತಿರುವ ಸದ್ಭಕ್ತನು ಜಗತ್ತಿನ

ಯಾವ ದೇಶದಲ್ಲಿದ್ದರೇನು ? ಅವನ ಕುಲವಾಗಲೀ ವರ್ಣವಾಗಲೀ ದೇಶವಾಗಲೀ ಅಮುಖ್ಯ. ಅವನ ಭಕ್ತಿಯೆಂಬ ಒಂದು ಸಾಮಗ್ರಿ ಸಾಕು, ಆ ಸಾಮಜವರದನ ಅನುಗ್ರಹ ಪ್ರಾಪ್ತಿಗೆ.

ತನ್ನ ವರ್ಣ ಮತ್ತು ಆಶ್ರಮೋಚಿತವಾದ ಯಾವ ಕರ್ಮಗಳನ್ನು ಮಾಡುತ್ತಿರಲಿ, ಕರ್ಮಪತಿಯಾದ ಆ ಕರುಣಾರ್ಣವನು, ಅವನ ಅನುಸಂಧಾನಕ್ಕೆ ಒಲಿದು ಅನುಗ್ರಹಿಸುವನು ಸರ್ವಕರ್ಮಗಳಗೂ ಆ ಸರ್ವೇಶ್ವರನಿಂದ ಪ್ರೇರಿತವಾಗಿ ಜೀವನ ಕರ್ಮಕ್ಷಯಕ್ಕಾಗಿ, ಪ್ರವರ್ತಿತವಾಗಿ ನಡೆಯುತ್ತಿವೆ ಎಂಬ ಸ್ವಕರ್ತೃತ್ವಾಭಿಮಾನ–ರಹಿತವಾದ ಜ್ಞಾನದಿಂದ ಮಾಡುವ ಕರ್ಮಗಳು ಆ ಪರಾವರೇಶನ ಪ್ರೀತ್ಯರ್ಥವಾಗಿರಬೇಕು.

ಕಾಲವು ಮುಖ್ಯವಿಷಯವಲ್ಲ. ಒಂದು ದಿನಮಾನದಲ್ಲಿ ಯಾವ ಕಾಲದಲ್ಲಾದರೂ, ಕೃತ, ತ್ರೇತ, ದ್ವಾಪರ, ಕಲಿ ಆದಿ ಯಾವ ಯುಗಪ್ರಭೇದದಲ್ಲಿದ್ದರೂ ಸರಿಯೇ ಭಕ್ತೈಕಲಭ್ಯನು ಸಾಧಕನ ಶುದ್ಧಭಕ್ತಿಭಾವಕ್ಕೆ ಒಲಿಯುವನು.

ರಮಾದೇವಿಯ ಪತಿಯಾದ ಪರಮಾತ್ಮನು ಶ್ರೀವರನು. ಆ ಶ್ರೀವರನು ಜಗತ್ತಿನ ಒಳಗೆ ಹೊರಗೆ, ಪಿಂಡಾಂಡರೂಪಾವಾದ ನಮ್ಮ ದೇಹದ ಬಾಹ್ಯದಲ್ಲಿ ಅಂತರಂಗದಲ್ಲಿ, ಸರ್ವತ್ರ, ಸರ್ವಕಾಲ ದೇಶಗಳಲ್ಲಿ ಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆ. ಸರ್ವಾಧಿಷ್ಠಾನಗತ ಭಗವದ್ರೂಪಗಳಿಗೂ ಸ್ವಬಿಂಬನಿಗೂ ಐಕ್ಯಚಿಂತನಾ ಕ್ರಮವೇ ಸಂಭಾವಿಸುತ ಎಂದೆನಿಸುವುದು. ಇಂತು ಭಗವದ್ರೂಪಗಳ ಐಕ್ಯಚಿಂತನಾ ರೂಪವಾದ ಅನುಸಂಧಾನಪೂರ್ವಕ ಪೂಜಿಸುವ ಭಗವದ್ಭಕ್ತರೇ ಕೋವಿದರು. ಭಕ್ತಿಭಾವದಿಂದ ಪರವಶರಾಗಿರುವವರಿಗೆ ದುಃಖ, ತಾಪತ್ರಯ, ರೋಗಬಾಧೆ, ನರಕಾದ್ಯನರ್ಥಗಳು ಇತ್ಯಾದಿಗಳ ಭಯಗಳು ಯಾವತ್ತೂ ಇಲ್ಲವೇ ಇಲ್ಲ. ಸುಖ ದುಃಖ, ಲಾಭ ಅಲಾಭ, ನಿಂದಾ ಸ್ತೋತ್ರ, ಜಯ ಅಪಜಯ ಮುಂತಾದ ದ್ವಂದ್ವಗಳಿಂದ ದೂರರಾಗಿರುವರು. ॥ ೪ ॥

## ಪದ್ಯ ೫

### ಮೂಲ

ವಾಸುದೇವನ ಗುಣಸಮುದ್ರದೊ।
ಳೀಸ ಬಲ್ಲವ ಭವಸಮುದ್ರಾ।
ಯಾಸವಿಲ್ಲದೆ ದಾಟುವನು ಶೀಘ್ರದಲಿ ಜಗದೊಳಗೆ ||
ಬೇಸರದೆ ದುರ್ವಿಷಯಗಳ ಅಭಿ।
ಲಾಷೆಯಲ್ಲಿ ಬಳಲುವವ ನಾನಾ ।
ಕ್ಲೇಷಗಳನನುಭವಿಪ ಭಕ್ತಿಸುಮಾರ್ಗ ಕಾಣದಲೆ || ೫ ||

### ಅವತರಣಿಕೆ

ವಾಸುದೇವನ ಅಪಾರವಾದ ಗುಣಸ್ತೋಮವೆಂಬ ಮಹಾಸಮುದ್ರದಲ್ಲಿ ಮುಳುಗಿ ಈಜಬಲ್ಲವನು ಜನನಮರಣಾಖ್ಯವಾದ ಈ ಸಂಸಾರವೆಂಬ ಸಾಗರವನ್ನು ನಿರಾಯಾಸವಾಗಿ ಈಜಿ ದಾಟಬಲ್ಲನು. ಈ ಹರಿನಾಮಸ್ಮರಣೆ ತ್ಯಜಿಸಿ, ಕೇವಲ ಪ್ರಾಪಂಚಿಕ ವಿಷಯಭೋಗಾದಿಗಳಲ್ಲಿ ಮುಳುಗಿರುವವನು ಭಕ್ತಿಸುಮಾರ್ಗ ಕಾಣದೆ, ನಾನಾಪರಿಯಿಂದ ಕ್ಲೇಶಗಳನ್ನು ಅನುಭವಿಸುವನೆಂದು ತಿಳಿಸುತ್ತಾರೆ.

### ಪ್ರತಿಪದಾರ್ಥ

**ವಾಸುದೇವನ** = ವಾಸುದೇವನಾಮಕವಾದ (ಮೋಕ್ಷಪ್ರದರೂಪ) ಶ್ರೀಪರಮಾತ್ಮನ, **ಗುಣಸಮುದ್ರದೊಳು** = ಅಪರಿಚ್ಛಿನ್ನ, ಅಪಾರವಾದ ಕಲ್ಯಾಣಗುಣಗಳೆಂಬ ಮಹಾಸಾಗರದಲ್ಲಿ **ಈಸಬಲ್ಲವ** = ಧ್ಯಾನೋಪಾಸನೆಗಳ ದ್ವಾರಾ ಈಜಬಲ್ಲವನು, **ಭವಸಮುದ್ರ** = ನಶ್ವರವಾದ ಜನನಮರಣಾಖ್ಯವಾದ ಸಂಸಾರವೆಂಬ ಈ ಸಮುದ್ರವನ್ನು, **ಆಯಾಸವಿಲ್ಲದೆ** = ನಿರಾಯಾಸವಾಗಿ, **ದಾಟುವನು** = ಈಜಿ ದಾಟುವನು, **ಬೇಸರದೆ** = ಬೇಸರಿಕೆಯಿಲ್ಲದೆ, **ದುರ್ವಿಷಯಗಳ** = ಅನಿತ್ಯವಾದ, ಕ್ಷಣಿಕಸುಖಪ್ರದವಾದ, ದುಷ್ಟವಿಷಯಾದಿ ಭೋಗ

ಗಳಲ್ಲಿ, **ಅಭಿಲಾಷೆಯಲಿ**=ಆಸಕ್ತಿ ಉಳ್ಳವನಾಗಿ, ಅವುಗಳನ್ನೇ ಅಪೇಕ್ಷಿಸುವವನು, **ಬಳಲುವವ**=ಅಂತಹ ಪುರುಷನು ಸಂಸಾರಸಮುದ್ರದಲ್ಲಿ ಮುಳುಗಿ ಪ್ರಯಾಸಪಡುವನು. **ನಾನಾಕ್ಲೇಶಗಳನು**=ಸಾಂಸಾರಿಕವಾದ ಪರಿಪರಿಯಾದ ದುಃಖಗಳನ್ನು, **ಅನುಭವಿಪ**=ಅನುಭವಿಸುವನು. **ಭಕ್ತಿಸುಮಾರ್ಗ**=ಸದ್ಗತಿಯನ್ನು ಹೊಂದುವುದಕ್ಕೆ ಸಾಧನವಾದ ಭಕ್ತಿಯೆಂಬ ಸಮೀಚೀನವಾದ ದಾರಿಯನ್ನು, **ಕಾಣದಲೆ**=ಕಾಣದೆ, ಬಳಲುತ್ತಿರುವನು. ॥ ೫ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಸಂಸಾರವೆಂಬ ಸಮುದ್ರ ದಾಟತಕ್ಕವನು ಎಂಥಾವನೆಂದರೆ ಅವನನ್ನ ಹೇಳತಾರೆ. ದುಃಖಾನುಭವ ಮಾಡತಕ್ಕವನ ವಿಚಾರವನ್ನೂ ಹೇಳತಾರೆ.

ಶ್ರೀವಾಸುದೇವರೂಪನಾದ ಪರಮಾತ್ಮನ ಕಲ್ಯಾಣಗುಣಗಳೆಂಬ ಸಮುದ್ರೋದಕದಲ್ಲಿ, ಧ್ಯಾನೋಪಾಸನೆಗಳೆಂಬ ಚಿಂತನೆಯಿಂದ ಈಸತಕ್ಕವ ಸಂಸಾರವೆಂಬ ಸಮುದ್ರವನ್ನು ಏನೇನೂ ಆಯಾಸಪಡಧಾಂಗೆ ಬಹು ತೀವ್ರದಿಂದ ದಾಟೋವನಾಗತಾನೆ, ಪರಮಾತ್ಮನ ಗುಣಗಳು ಅಪರಿಚ್ಛಿನ್ನವಾದವು. ಅದರಲ್ಲಿ ಈಸಿದವಗೆ ಭವಾಖ್ಯ ಸಮುದ್ರ ದಾಟೋಣ ಆಶ್ಚರ್ಯವಲ್ಲ. ಪರಮಾತ್ಮನ ಗುಣೋಪಾಸನ ಮಾಡತಕ್ಕವ ಬ್ಯಾಗಲೇ ಅಪರೋಕ್ಷ ಹೊಂದಿ ನ ಚ ಪುನರಾವರ್ತತೆ ಲೋಕವನ್ನು ಹೊಂದತಾನೆ. ಈ ಲೋಕದಲ್ಲಿ ಜನ್ಮವೆತ್ತಿ ಎಂದರೆ ಮನುಷ ಜನ್ಮ ಹೊಂದಿ, ಬ್ಯಾಸರಿಕೆ ಇಲ್ಲದೆ ಅನಿತ್ಯವಾದ ಪದಾರ್ಥಗಳಲ್ಲಿ, ದಾರಾಪುತ್ರಾದಿಗಳಲ್ಲಿ ಮಮತಾಯುಕ್ತನಾಗಿ ನಿಸ್ಪೃಹನಾಗದೆ ಇದ್ದವ, ದುರ್ವಿಷಯಗಳಲ್ಲಿ, ಆಸಕ್ತಿ ಉಳ್ಳಂಥಾವನಾಗಿ ದೇಹತ್ಯಾಗ ಮಾಡತ, ಪುನಶ್ಚ ಜನ್ಮಧರಿಸಿ ಅದೇ ವಿಷಯಗಳಲ್ಲಿ ಬಿದ್ದು ದುಃಖಗಳ ಅನುಭವ ಮಾಡುತಾ ಇರತಾನೆ. ಯಾತರಿಂದ ಅಂದರೆ, ಶ್ರೀಪರಮಾತ್ಮನಲ್ಲಿ ಸದ್ಭಕ್ತಿ ಮಾಡಿ ಸದ್ಗತಿ ಐದೋದಕ್ಕೆ ಸಮೀಚೀನವಾದ ಮಾರ್ಗವನ್ನ ತಿಳಕೊಳ್ಳದೆ ದುಃಖಾದಿಗಳನ್ನು ಭೋಜನ ಮಾಡತಾ ಇರತಾನೆ. ಅಂದರೆ ಸಂಗತದಿಂದ ಭಗವನ್ಮಾಹತ್ಮ್ಯ ತಿಳಿಯಬೇಕು ಎಂತ ತಾತ್ಪರ್ಯ ॥ ೫ ॥

೨. ಭಾವಪ್ರಕಾಶಿಕೆ

ಈ ಜಗತ್ತಿನಲ್ಲಿ ಯಾವ ಪುರುಷನು, ವಾಸುದೇವನ ಗುಣಸಮುದ್ರದಲ್ಲಿ ಈಸಲು ತಿಳಿದವನೋ ಅಂದರೆ ಸರ್ವದಾ ಪರಮಾತ್ಮನ ಗುಣಗಳನ್ನೇ ಕೊಂಡಾಡುತ್ತಾ, ಸ್ಮರಿಸುತ್ತಾ, ನಾಮಗಳನ್ನುಚ್ಚರಿಸುತ್ತಾ ಕಾಲವನ್ನು ಕಳೆಯುವನೋ, ಆ ಪುರುಷನು, ಆಯಾಸವಿಲ್ಲದೆ ಸಮುದ್ರದಂತೆ ದಾಟಲಶಕ್ಯವಾದ ಸಂಸಾರದಿಂದ ಪಾರಾಗುವನು. ಹಾಗಿಲ್ಲದೆ ಯಾವನು ಯಾವಾಗಲೂ ಹೆಂಡತಿ, ಮಕ್ಕಳು ಮನೆ ಬಾಗಿಲೆಂದು ಇದರಲ್ಲೇ ಸ್ವಲ್ಪವೂ ಬೇಸರವಿಲ್ಲದೆ ಆಸಕ್ತನಾಗಿರುವನೋ ಅವನು ಭಕ್ತಿಮಾರ್ಗವನ್ನೇ ಕಾಣದೆ ಸಂಸಾರದಲ್ಲಿ ಅನೇಕ ಪ್ರಕಾರ ಕಷ್ಟಗಳನ್ನನುಭವಿಸುತ್ತಿರುವನು. ॥ ೫ ॥

೩. ಭಾವದರ್ಪಣ

"ಆತ್ಮಾಪ್ರಿಯಪ್ರಹಾಣಾಯ ಕೋಯತೇತ್ತತ್ತ್ವಬುದ್ಧಿಮಾನ್" ಎಂಬ ವಚನಾನುಸಾರ ಮಜ್ಜನಸ್ಥಳ ತೋರಿಸುತ್ತಾರೆ. ವಾಸುದೇವೇತಿ. ॥ ೫ ॥

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

"ವಾಸುದೇವ" ಇತಿ॥ ಭಕ್ತ್ಯಾ (ಸೌಷ್ಠವಂ) ಪುಷ್ಟ್ವಂ ನಿರ್ವ್ಯಾಜತ್ವೇ ಸತಿ ನಿಶ್ಚಲತ್ವೇ ಸತಿ ಸದ್ಗುಣಭರಿತತ್ವೇ ಸತಿ ಶಾಶ್ವತತ್ವಮ್ ॥೫॥

"ಸದ್ಭಕ್ತಿಯಿಂದ ಹರಿಗುಣನಾಮರೂಪ ಸ್ಮರಣಗಳಲ್ಲಿ ಮಗ್ನನಾದವನು ಸಂಸಾರಸಮುದ್ರವನ್ನು ನಿರಾಯಾಸದಿಂದ ದಾಟುತ್ತಾನೆ. ಹರಿಯಲ್ಲಿ ಸದ್ಭಕ್ತಿವಿಹೀನನು ಮಾತ್ರ ಹೇಯವಿಷಯಗಳಲ್ಲಿಯೇ ಮಗ್ನನಾಗಿ ಸನ್ಮಾರ್ಗವನ್ನು ಕಾಣದೆ ಕ್ಲೇಶವನ್ನನುಭವಿಸುತ್ತ ಬಳಲುವನು" ಎಂದು "ವಾಸುದೇವನ" ಎಂಬ ಈ ಪದ್ಯದಿಂದ ಹೇಳುತ್ತಾರೆ.

ವಾಸುದೇವನಲ್ಲಿ ಸುಭಕ್ತಿಯಿರಬೇಕು. ಯಾವದಾದರೊಂದು ನಿಮಿತ್ತ ಕಾರ್ಯ ವ್ಯಾಜವುಳ್ಳದಾಗಿರಬಾರದು. ಅಂದರೆ ದ್ರವ್ಯ—ಪುತ್ರ ಮುಂತಾದ

ಫಲಗಳನ್ನು ಅವಲಂಬಿಸಿರಕೂಡದು. ಸಂದೇಹಾಕಾರ ಜ್ಞಾನದಿಂದ ಚಲಿತವಾಗ ಬಾರದು. ಅನೇಕ ಗುಣಗಳಿಂದ ಯುಕ್ತವಾಗಿರಬೇಕು. ಇಂಥ ಭಾವವು ಶಾಶ್ವತ "ಸದಾ ಇರುವಂತಹುದು," ಆಗಿರಬೇಕು. ಇದೇ ಸುಭಕ್ತಿಯೆನಿಸುತ್ತದೆ. ॥೫॥

## ೫. ಶ್ರೀಗುರುಹೃದಯಪ್ರಕಾಶಿಕೆ

ಹಿಂದೆ ಹೇಳಿದ್ದೇ ವಿವರಿಸುತ್ತಾರೆ, ವಾಸುದೇವ ಎಂದು. ಸರ್ವತ್ರ ವ್ಯಾಪ್ತ ನಾದ ವಾಸುದೇವರೂಪ ದೇವರ ಜ್ಞಾನಾನಂದಾದಿ ಗುಣಗಳೆಂಬ ಸಮುದ್ರದಲ್ಲಿ ಈಸಬಲ್ಲವ ಎಂದರೆ, ಸ್ವಲ್ಪ ತಿಳಿದವನಾದಾಗ್ಯೂ, ಅಥವಾ ಈಸಬಲ್ಲವ ಎಂದರೆ ಈಜಾಡಬಲ್ಲವ ಎಂದರೆ, ದೇವರ ಗುಣಚಿಂತನಾಭ್ಯಾಸವುಳ್ಳವನು, ಜನನಮರ ಣಾಖ್ಯ ದ್ವಂದ್ವಸಂಸ್ಕೃತಿ ಸಮುದ್ರವನ್ನು ಜಾಗ್ರತೀಯಾಗಿ ಅನಾಯಾಸದಿಂದ ದಾಟುತ್ತಾನೆ. ಬೇಸರದೆ ಎಂದರೆ, ಹಾಗೆ ಭಗವದ್ಗುಣಾದಿಗಳಲ್ಲಿ ರತನಾಗದೆ, ನಿತ್ಯ ಮಾಡುವ ಭೋಜನ ನಿದ್ರಾದಿ ದುಃಖಮಿಶ್ರ ಸುಖಗಳಲ್ಲಿ ಜಿಗುಪ್ಸೆ ಹುಟ್ಟದೆ, ನಿತ್ಯಾನಿತ್ಯವಿವೇಕಸ್ಮರಣೆ ಹುಟ್ಟದೆ, ದುರ್ವಿಷಯಗಳೆಂಬ ಶಾಸ್ತ್ರನಿಷಿದ್ಧಭೋಗ ಗಳಲ್ಲಿ ಅಭಿಲಾಷೆಯೆಂಬ ಆಶೆಯಿಂದ ಕಂದುತ್ತಿರುವವನು, ದೇವರ ಭಕ್ತಿ ಜ್ಞಾನಗ ಳೆಂಬ ಸನ್ಮಾರ್ಗ ತಿಳಿಯದೆ, ನಾನಾ ಎಂದರೆ, ಇಹಪರದ ನಾನವಿಧ ದುಃಖಗಳನ್ನು ಅನುಭವಿಸುವನು. ಆ ನರಗೆ ಹರಿಭಕ್ತಿಯೆಂಬ ಸುಮಾರ್ಗ ಕಾಣುವುದಿಲ್ಲವು. ಇದರಿಂದ,

**ಗುಣೇಷು ಸಕ್ತಂ ಬಂಧಾಯ ರತಂ ವಾ ಪುಂಸಿ ಮುಕ್ತಯೆ ॥**

ಎಂಬ ಭಾಗವತಾರ್ಥ ವಿವರಿಸಲ್ಪಟ್ಟಿತು ॥ ೫ ॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಮೋಕ್ಷಪ್ರದನಾದ ವಾಸುದೇವನ ಗುಣಸಮುದ್ರದಲ್ಲಿ ಮುಳುಗಿ, ಈಸಬಲ್ಲ ವನೆಂದರೆ, ಸದಾ ಶ್ರೀಹರಿಯ ಅಪಾರಗುಣಸ್ತೋಮಗಳನ್ನೇ ತನ್ನ ಧ್ಯಾನಕ್ಕೆ ವಿಷಯವನ್ನಾಗಿಸಿ ಸ್ಮರಣೆ ಮಾಡುವವನೆಂದರ್ಥ. ಹಾಗೆ ನಿತ್ಯ ಭಗವಚ್ಚಿಂತನಾ ಸಾಗರದಲ್ಲಿ ಮನಸ್ಸು ಆಸಕ್ತವಾಗಿರುವವನು ಜನನಮರಣಾಖ್ಯವಾದ, ಸುಖ

ದುಃಖಾದಿ ದ್ವಂದ್ವಗಳಿಂದ ಯುಕ್ತವಾದ ನಶ್ವರವಾದ ಸಂಸಾರಸಮುದ್ರವನ್ನು ನಿರಾಯಾಸವಾಗಿ ದಾಟಬಲ್ಲನು.

ಹರಿಸ್ಮರಣೆರಹಿತನಾಗಿ, ಸದಾ ದುರ್ವಿಷಯಗಳಲ್ಲಿ ಮಗ್ನನಾಗಿರುವವನು ವಿಷಯಭೋಗಗಳ ಸುಳಿಗೆ ಸಿಕ್ಕಿ ನೆಲೆಗಾಣದೆ ಪರಿತಪಿಸಿ ಬಳಲುವನು. ಶ್ರೀಹರಿಯ ಪ್ರಸಾದಪ್ರಾಪ್ತಿಗೆ ಸಾಧನಮಾರ್ಗವಾದ ಸುಭಕ್ತಿಯ ದಾರಿಯನ್ನು ಕಾಣದೇ, ದುಸ್ತರವಾದ ಸಂಸಾರಸಾಗರದ ಕ್ಲೇಶಾದಿ ತರಂಗಗಳಿಂದ ತಾಡಿತನಾಗಿ ತನ್ನ ಗುರಿಯನ್ನು ಮುಟ್ಟದೇ ವೃಥಾ ಶ್ರಮಿಸುವನೆಂದು ತಿಳಿಸುತ್ತಾರೆ. ॥ ೫ ॥

## ಪದ್ಯ ೬

**ಮೂಲ**

**ಸ್ನಾನ ಜಪ ದೇವತಾರ್ಚನೆಯು ವ್ಯಾ ।**
**ಖ್ಯಾನ ಭಾರತಮುಖ ಮಹೋಪಪು ।**
**ರಾಣ ಕಥೆಗಳ ಪೇಳಿ ಕೇಳಿದರೇನು ದಿನದಿನದಿ ॥**
**ಜ್ಞಾನಕರ್ಮೇಂದ್ರಿಯಗಳಿಂದೇ ।**
**ನೇನು ಮಾಡುವ ಕರ್ಮಗಳು ಲ ।**
**ಕ್ಷ್ಮೀನಿವಾಸನ ಪೂಜೆಯೆಂದರ್ಪಿಸದ ಮಾನವನು ॥ ೬ ॥**

**ಅವತರಣಿಕೆ**

ಜ್ಞಾನಕರ್ಮೇಂದ್ರಿಯಗಳ ದ್ವಾರ ನಡೆಯುತ್ತಿರುವ ಸಮಸ್ತ ಕ್ರಿಯಾಕಲಾಪಗಳೂ ಲಕ್ಷ್ಮೀನಿವಾಸನ ಪೂಜೆಗಳೆಂದು ಅರಿತು, ಭಗವದರ್ಪಣಾನುಸಂಧಾನದಿಂದ ಮಾಡದ ಕರ್ಮಗಳು, ಸತ್ಕರ್ಮಗಳಾದಾಗ್ಯೂ ನಿಷ್ಫಲವೆಂದು ಹೇಳುತ್ತಾರೆ.

**ಪ್ರತಿಪದಾರ್ಥ**

**ಸ್ನಾನ**=ಗಂಗಾದಿ ತೀರ್ಥಗಳಲ್ಲಿ ಹಾಗೂ ದೇಹಶುಚಿತ್ವಕ್ಕಾಗಿ ಮನೆಯಲ್ಲಿ ಸ್ನಾನ ಮಾಡುವ ಕಾಲದಲ್ಲಿ, **ಜಪ**=ತಂತ್ರಸಾರೋಕ್ತ ಮಹಾಮಂತ್ರಗಳನ್ನು ಮನಸಾ ಧ್ಯಾನಿಸುತ್ತಿರುವಾಗ, **ದೇವತಾರ್ಚನೆಯು**=ದೇವರಪೂಜಾಸಮಯ ದಲ್ಲಿ **ವ್ಯಾಖ್ಯಾನ**=ಸಚ್ಛಾಸ್ತ್ರ, ಮೂಲಗ್ರಂಥಗಳಿಗೆ ವ್ಯಾಖ್ಯಾನ ರೂಪವಾದ ಗ್ರಂಥಗಳನ್ನು, **ಭಾರತಮುಖ**=ಶ್ರೀಮನ್ಮಹಾಭಾರತ ಇತ್ಯಾದಿ, **ಮಹಾ**= ಭಾಗವತಾದಿ ಪುರಾಣಗಳನ್ನು, **ಉಪಪುರಾಣಕಥೆಗಳ**=ಅನೇಕ ಉಪಪುರಾ **ಣೋಕ್ತ** ಕಥಾವಿಶೇಷಗಳನ್ನು, **ಪೇಳಿ**=ಪ್ರವಚನರೂಪದಲ್ಲಿ ಹೇಳುವುದು, **ಕೇಳಿ ದರೇನು**=ಅವುಗಳನ್ನು ಶ್ರವಣಕ್ರಿಯಾದ್ವಾರಾ ಕೇಳಿದರೇನು, ಇಂತಹ ಸತ್ಕರ್ಮ ಗಳನ್ನು ಮಾಡಿದ್ದಾಗ್ಯೂ ಪ್ರಯೋಜನವಿಲ್ಲ. ಹಾಗಾದರೆ, ಅವು ಫಲಪ್ರದ ಯಾವಾಗ ಆಗುತ್ತವೆ ಎಂದರೆ, **ದಿನದಿನದಿ**=ಪ್ರತಿದಿವಸದಲ್ಲಿ, **ಜ್ಞಾನ**=ಕಿವಿ, ಕಣ್ಣು, ತ್ವಗಿಂದ್ರಿಯ, ಮೂಗು, ನಾಲಿಗೆ ಎಂಬ ಐದು ಜ್ಞಾನೇಂದ್ರಿಯಗಳ ದ್ವಾರಾ, **ಕರ್ಮೇಂದ್ರಿಯಗಳಿಂದೇನೇನು**=ಹಸ್ತ, ಪಾದ, ವಾಕ್ಕು, ಗುದ, ಉಪಸ್ಥ ಎಂಬ ಐದು ಕರ್ಮೇಂದ್ರಿಯಗಳ ದ್ವಾರಾ, ಯಾವಾವ ಜ್ಞಾನರೂಪ ವಾದ ಹಾಗೂ ಕ್ರಿಯಾರೂಪವಾದ ಕರ್ಮಗಳೇನೇನು ನಡೆಯುತ್ತಿರುವುವೋ, **ಮಾಡುವ ಕರ್ಮಗಳು**=ಆ ಸಕಲಕರ್ಮಗಳನ್ನೂ, **ಲಕ್ಷ್ಮೀನಿವಾಸನ**= ಲಕ್ಷ್ಮೀಪತಿಯ, **ಪೂಜೆಯೆಂದು**=ಪೂಜಾಪ್ರಕರಣಗಳೆಂದು ತಿಳಿದು **ಅರ್ಪಿಸದ ಮಾನವನು**=ಅರ್ಪಿಸದಿರುವ ನರನು ॥ ೬ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಭಗವತ್ಸಂಬಂಧವಾದ ಜ್ಞಾನದಿಂದ ರಹಿತನಾಗಿರುವ ಪಂಡಿತನು, ಏನು ಸತ್ಕರ್ಮ ಮಾಡಿದರೂ ಪ್ರಯೋಜನವಿಲ್ಲ ನಿಷ್ಫಲ ಎಂತ ಹೇಳತಾರೆ.

ಗಂಗಾದಿ ತೀರ್ಥಗಳಲ್ಲಿ ಸ್ನಾನಮಾಡೋ ಕಾಲದಲ್ಲಿ ತನ್ನ ದೇಹಾಂತರ್ಗತ ಪರಮಾತ್ಮನ್ನ ತೀರ್ಥಾಂತರ್ಗತ ಪರಮಾತ್ಮನಲ್ಲಿ ಐಕ್ಯಚಿಂತನಾ ಮಾಡಿ, ದೇವರು ಸರ್ವತ್ರವ್ಯಾಪ್ತನೆಂದು ತಿಳಿದು, ತೀರ್ಥಮಹಾತ್ಮ್ಯಗಳ ತಿಳಿದು ಸ್ನಾನವೇನು, ತಂತ್ರಸಾರೋಕ್ತ ಮಹಾಮಂತ್ರಗಳೇನು, ತಂತ್ರಸಾರೋಕ್ತ ಭಗವತ್ಪೂಜಾವೇನು, ಸಚ್ಛಾಸ್ತ್ರ, ಮೂಲಟೀಕಾ, ಪಾಠಪ್ರವಚನವೇನು, ಶ್ರೀಮಹಾಭಾರತ ಭಾಗವತ ಮೊದಲಾದ ಇನ್ನೂ ಅನೇಕವಾದ ಪುರಾಣಗಳ, ಮಹಾ ಉಪಪುರಾಣಗಳ, ವೇದಾಧ್ಯಯನಾದಿಗಳ, ಭಗವತ್ಕಥಾದಿಗಳ ತಾನು, ತಾನು ಹೇಳೋಣ ಅನ್ಯರಿಂದ ತಾನು ಕೇಳೋಣವೇನು ಇವು ಯಾವತ್ತೂ ಸತ್ಕ್ರಿಯಗಳಾಗಿ ಇದ್ದಾಗ್ಯೂ ಅನು ಸಂಧಾನವಿಲ್ಲದಿದ್ದರೆ ಏನೂ ಪ್ರಯೋಜನವಿಲ್ಲ ಎಂತ ತಾತ್ಪರ್ಯ. ಅನುಸಂಧಾನ ಎಂಬುದು ಎಂಥಾದ್ದೆಂದರೆ, ಅಹಂಮಮತಾ ತ್ಯಾಗಪೂರ್ವಕ ಏಕಾದಶೇಂದ್ರಿಯ ಗಳಲ್ಲಿ ನಿಯಾಮಕನಾದ ಪರಮಾತ್ಮನ್ನ ಚಿಂತನಾ ಮಾಡಿ, ಸರ್ವಕರ್ತ್ರಗಳಲ್ಲಿ ತನ್ನ ಈ ಉಭಯವಿಧ ಕರ್ಮಗಳು ಇಂದ್ರಿಯನಿಯಾಮಕ ಪರಮಾತ್ಮನ ದ್ವಾರಾ ನಡೆ ಯುತ್ತವೆ ಎಂತ ತಿಳಿದು, ಕರ್ಮಾಂತರ್ಗತ ಪರಮಾತ್ಮನ್ನ ಕ್ಷಣಲವಕಾಲದಲ್ಲಿ ವಿಸ್ಮೃತಿಬಾರದಂತೆ ಯಾವತ್ತೂ ಕರ್ಮಗಳು ಲಕ್ಷ್ಮೀಪತಿಯಾದ ಶ್ರೀನಾರಾಯಣ ದೇವರ ಪೂಜಾ ಎಂದು ಸಕಲಕರ್ಮಗಳ ಪರಮಾತ್ಮಗೆ ಅರ್ಪಿಸಿದರೆ ಇದೇ ಪೂಜಾ ಎಂತನ್ನಿಸುತ್ತದೆ. ಇದೇನೇ ಪರಮಾತ್ಮನ ಪೂಜಾ ಎಂತ ತಿಳಿದು ಕರ್ಮಾಂತ ರ್ಗತ ದೇಹಾಂತರ್ಗತ ರೂಪಗಳಿಗೆ ಐಕ್ಯಚಿಂತನಯೇ ಪೂಜಾತ್ವೇನ ಅನುಸಂಧಾನ ದಿಂದ ಅರ್ಪಿಸೋವನಾಗಬೇಕು ಎಂತ ತಾತ್ಪರ್ಯ. ಈ ಪ್ರಕಾರ ಮಾಡದೇ ಇರತಕ್ಕ ಮನುಷ್ಯ ಪ್ರತಿದಿನದಲ್ಲಿ ಮಾಡಿದ ಸತ್ಕರ್ಮಗಳು ಪ್ರಯೋಜನರಹಿತವಾಗಿ ಪರಮಾತ್ಮಗೆ ಪ್ರಿತಿ ಇಲ್ಲದೇ ಹೋಗತವೆ ಎಂತ ತಾತ್ಪರ್ಯ.

**ವಿಶೇಷಾರ್ಥ**

**ತಪಸ್ವಿನೋ ದಾನಪರಾ ಯಶಸ್ವಿನೋ ಮನಸ್ವಿನೋ ಮಂತ್ರವಿದಸ್ಸು ಮಂಗಳಾಃ ।**
**ಕ್ಷೇಮಂ ನ ವಿಂದಂತಿ ವಿನಾ ಯದರ್ಪಣಂ ತಸ್ಮೈ ಸುಭದ್ರ ಶ್ರವಸೇ ನಮೋ ನಮಃ ॥ ಇತಿ ಭಾಗವತ ದ್ವಿತೀಯಸ್ಕಂದೇ ॥ ೬ ॥**

**೨. ಭಾವಪ್ರಕಾಶಿಕೆ**

ಭಾಗವತ ಪ್ರಥಮಸ್ಕಂಧ ೫ನೇಯ ಅಧ್ಯಾಯ ಶ್ಲೋಕ ೧೨ "ನೈಷ್ಕರ್ಮ್ಯ ಮಪ್ಯಚ್ಯುತ ಭಾವವರ್ಜಿತಂ ನ ಶೋಭತೇ ಜ್ಞಾನಮಲಂ ನಿರಂಜನಂ ॥ ಕುತಃ ಪುನಃ ಶಶ್ವದ ಭದ್ರಮೀಶ್ವರೇ ನ ಚಾರ್ಪಿತಂ ಕರ್ಮಯದಪ್ಯಕಾರಣಂ" ನೈಷ್ಕರ್ಮ್ಯ ವೆಂದರೆ ಫಲಾಪೇಕ್ಷೆ ಇಲ್ಲದೇ ಮಾಡುವ ಕರ್ಮಗಳು, ಇವು ಮುಕ್ತಿಸಾಧನವೆಂದು ಪ್ರಸಿದ್ಧವಾಗಿರುವುದು. ಇಂತಹ ನೈಷ್ಕರ್ಮ್ಯವೆನಿಸುವ "ನಿರಂಜನಂ" ವಿಷಯಾದಿ ಕಲ್ಮಷರಹಿತವಾಗಿ ಶುದ್ಧವಾದ ವೈರಾಗ್ಯದಿಂದ ಕೂಡಿದ, ಅಲಂ = ಮುಕ್ತಿಸಾಧನಕ್ಕೆ ಸಾಧಕವಾಗುವ ಜ್ಞಾನವಿದ್ದರೂ, ಭಗದ್ಭಕ್ತಿಮಾತ್ರ ಇಲ್ಲದಿದ್ದರೆ, ಆ ಅಧಿಕಾರಿಗೆ ಸಂಪೂರ್ಣಫಲವು ಬರುವುದಿಲ್ಲ, ಅಥವಾ ಅವಿಚ್ಛಿನ್ನವಾಗಿ ಪರಮಾತ್ಮನ ಪಾದಾರವಿಂದದಲ್ಲಿ ನಿಲ್ಲಿಸದಿದ್ದರೆ ಸಂಪೂರ್ಣ ಫಲಪ್ರಾಪ್ತಿಯಾಗುವುದಿಲ್ಲ. ಹೀಗಿರಲು ವಿಷಯಾದಿಗಳಲ್ಲಿ ಆಸಕ್ತನಾಗಿ, ಬಂಧಕ ಶಕ್ತಿಯುಳ್ಳ, ಸರ್ವದಾ ಅಮಂಗಳ ವೆನಿಸುವ, ಭಗವಂತನಿಗರ್ಪಿಸದ ಕರ್ಮಗಳನ್ನು ಫಲಾಪೇಕ್ಷೆಯಿಲ್ಲದೆ ಮಾಡಿದರೂ ಕೂಡ ಫಲಕಾರಿಯಲ್ಲವೆಂದು ಹೇಳಲೂ ಬೇಕೆ ? ಎಂದು ಹೇಳಿರುವರು. ಅದೇ ಅಭಿಪ್ರಾಯವನ್ನೇ ದಾಸರಾಯರು ಇಲ್ಲಿ ಹೇಳಿರುತ್ತಾರೆ.

ತನ್ನ ಜ್ಞಾನೇಂದ್ರಿಯಗಳಿಂದಲೂ, ಕರ್ಮೇಂದ್ರಿಯಗಳಿಂದಲೂ ಮಾಡುವ ಕರ್ಮಗಳನ್ನು ಭಗವಂತನ ಪೂಜೆ ಎಂದು ಭಾವಿಸಿ ಎಲ್ಲಾ ಕರ್ಮಗಳನ್ನೂ ಪರಮಾತ್ಮನಿಗೆ ಅರ್ಪಿಸಿದರೆ ಮಾಡಿದುದೆಲ್ಲ ಸಾರ್ಥಕವೇ ಆಗುವವು. ಹಾಗಿಲ್ಲದಿದ್ದರೆ, ಇವನು ಬೇಕಾದ ನದಿಗಳಲ್ಲಿ ಸ್ನಾನಮಾಡಿ ಜಪಾದಿಗಳನ್ನು ಜಪಿಸುತ್ತಿರಲಿ, ಜನ ಮೆಚ್ಚುವಂತೆ ದೇವರ ಪೂಜೆಯನ್ನು ಆಡಂಬರದಿಂದ ಮಾಡುತ್ತಿರಲಿ, ಭಾರತಾದಿಗಳನ್ನು ಉಪನ್ಯಾಸ ಮಾಡಲಿ, ಭಾರತ ಭಾಗವತ ಮೊದಲಾದ ಪುರಾಣಗಳು, ಬ್ರಹ್ಮವೈವರ್ತ ಮೊದಲಾದ ಪುರಾಣಗಳನ್ನು ಹೇಳಲಿ, ಕೇಳಲಿ ಪರಮಾತ್ಮನನ್ನು ಮನಸ್ಸಿನಲ್ಲಿ ಸರ್ವದಾ ನಿಲ್ಲಿಸದಿದ್ದರೆ, ಇವುಗಳಾವವೂ ಫಲಕಾರಿಗಳಾಗುವುದಿಲ್ಲ. ॥ ೬ ॥

**೩. ಭಾವದರ್ಪಣ**

ಸಕಲೇಂದ್ರಿಯಗಳಿಂದ ಆಗತಕ್ಕ ಸಮಸ್ತ ಕರ್ಮಗಳು ಶ್ರೀಶನ ಅರ್ಚನೆ

ಎಂದು ತಿಳಿಯಬೇಕು. ಹಾಗೆ ತಿಳಿಯದೆ ಇದ್ದಲ್ಲಿ, ಏನು ಮಾಡಿದಾಗ್ಯೂ ವ್ಯರ್ಥ ವೆಂದು ತೋರಿಸುತ್ತಾರೆ, ಸ್ನಾನೇತಿ. ॥ ೬ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

"ಸ್ನಾನ್" ಇತಿ ॥ ದಶಮಪೂರ್ವಾರ್ಧೇ ಚ ಗರ್ಭಸ್ತುತೌ ಕ್ರಿಯಾ ಕರಣ ಪ್ರಕಾರಃ ಉಕ್ತಃ ॥ "ಶೃಣ್ವನ್ ಗೃಣನ್ ಸಂಸ್ಮರಯಂಶ್ಚ ಚಿಂತಯನ್ ನಾಮಾನಿ ರೂಪಾಣಿ ಚ ಮಂಗಳಾನಿ ತೇ ॥ ಕ್ರಿಯಾಸುಯಃ ತ್ವಚ್ಚರಣಾರವಿಂದಯೋಃ ಆವಿಷ್ಟ ಚಿತ್ತಃ ನ ಭವಾಯ ಕಲ್ಪತೇ ॥" ಇತಿ ॥ "ಸರ್ವಕ್ರಿಯಾಸು ಕರ್ತೃತ್ವ— ಪೂಜ್ಯತ್ವೇನ ಜನಾರ್ದನಮ್ ॥ ಯಃಸ್ಮರ್ವೇತ್ತಿ ನೈತಿ ಸಂಸಾರಂ ತತ್ಪ್ರಸಾದಾತ್ ನ ಸಂಶಯಃ ॥ "ಇತಿ ತತ್ತ್ವಾತ್ರಯೇಣೇಚ ॥ ಪಂಚದಶಾಧ್ಯಾಯೇ ವಿಷ್ಣುರಹಸ್ಯೇ ಚ ಉಕ್ತಮ್ ॥ ನ ಚ ಅರ್ಚಿತಂ ಕರ್ಮ ಇತ್ಯರ್ಥ ಏವ ದೃಢೀಕೃತಃ। ಅನ್ಯಥಾ ಬಾಧಕೋಕ್ತ್ಯಾ "ಶೃತಿಸ್ಮೃತೀತು ತಸ್ಯಾಜ್ಞೇ" ತತ್ರೋಕ್ತಂ ಪುಣ್ಯಂ ಆಚರೇತ್ ॥ ಅರ್ಪಯೇತ್ ತದ್‌ಹರೌ ಭಕ್ತ್ಯಾ ಸಂತುಷ್ಟಃ ಫಲದಃ ಭವೇತ್॥ ಅನರ್ಚಿತಂ ವೃಥಾಯಾತಿ ಯಥೋಕ್ತಂ ಬೀಜಮೂಷರೇ ॥ ಇತಿ ॥ ೬ ॥

### ಕನ್ನಡಾರ್ಥ

"ಕರ್ಮ ಜ್ಞಾನೇಂದ್ರಿಯಗಳಿಂದ ಮಾಡುವ ಸಕಲ ವ್ಯಾಪಾರಗಳನ್ನೂ ಶ್ರೀಹರಿಯ ಪೂಜೆ ಎಂದು ಸಮರ್ಪಿಸಿದರೆ ಮಾತ್ರ ಆ ಆ ಸತ್ಕರ್ಮಗಳು ಸಫಲ ವಾಗುತ್ತವೆ. ಇಲ್ಲದಿದ್ದರೆ ವಿಷ್ಣ್ವನರ್ಪಿತವಾದ ಆ ಕರ್ಮಗಳಿಂದ ಯಾವ ಫಲವೂ (ಶ್ರೀವಿಷ್ಣುಪ್ರೀತಿಯು) ದೊರೆಯುವುದಿಲ್ಲ." ಎಂಬುದು ಈ ಪದ್ಯದ ಭಾವ.

ಭಾಗವತ ದಶಮಸ್ಕಂಧ ಪೂರ್ವಾರ್ಧ ಗರ್ಭಸ್ತುತಿಯಲ್ಲಿ ಕ್ರಿಯೆಗಳನ್ನು ಮಾಡುವ ಈ ರೀತಿಯನ್ನು ನಿರೂಪಿಸಿರುತ್ತಾರೆ. "ಪರಮಾತ್ಮನೇ ! ನಿನ್ನ ಮಂಗಲಮಯ ಗುಣರೂಪ ನಾಮಗಳನ್ನು ಶ್ರವಣ ಮಾಡುತ್ತ, ಸಂಸ್ಮರಿಸುತ್ತ, ಅಖಂಡವಾಗಿ ಧ್ಯಾನಿಸುತ್ತ ತಾನು ಸಕಲ ಸತ್ಕರ್ಮಗಳನ್ನು ಆಚರಿಸುವಾಗ ನಿನ್ನ

ಚರಣಸರೋಜಗಳಲ್ಲಿ ಚಿತ್ತವನ್ನು ಸೇರಿಸಿದವನು, ಅಂದರೆ ತದೇಕಮಗ್ನವಾದ ಮನಸ್ಸುಳ್ಳವನು ಸಂಸಾರದಲ್ಲಿ ಶಿಲುಕುವುದಿಲ್ಲ" ಎಂಬುದಾಗಿ ನಿರೂಪಿಸಲ್ಪಟ್ಟಿರುತ್ತದೆ.

ಶ್ರೀ ವಿಷ್ಣುರಹಸ್ಯದ ಹದಿನೈದನೆಯ ಅಧ್ಯಾಯದಲ್ಲಿಯೂ ಈ ವಿಷಯವು ಹೇಳಲ್ಪಟ್ಟಿರುತ್ತದೆ. "ಭಗವಂತನಲ್ಲಿ ಸಮರ್ಪಿಸಲ್ಪಡದ ಕರ್ಮವು ಶ್ರೀವಿಷ್ಣು ಪ್ರೀತಿಗೆ ಕಾರಣವಾಗುವುದಿಲ್ಲ" ಎಂಬ ವಿಷಯವನ್ನೇ ದೃಢಪಡಿಸಿರುತ್ತಾರೆ. ವಿಷ್ಣ್ವನರ್ಪಿತವಾದ ಕರ್ಮವು ತ್ಯಾಜ್ಯವೆಂದು ನಿಷಿದ್ಧವಾಗಿರುತ್ತದೆ. "ಶ್ರುತಿ ಸ್ಮೃತಿಗಳು ಶ್ರೀಹರಿಯ ಆಜ್ಞೆಗಳು. ಅಲ್ಲಿ ವಿಧಿಸಲ್ಪಟ್ಟ ಕರ್ಮಗಳನ್ನು ಸತ್ಕರ್ಮಗಳನ್ನು ಆಚರಿಸತಕ್ಕದ್ದು. ಅದನ್ನು ಶ್ರೀಹರಿಯಲ್ಲಿ ಭಕ್ತಿಯಿಂದ ಸಮರ್ಪಿಸಬೇಕು, ಅದರಿಂದ ಶ್ರೀಹರಿಯು ಪ್ರಸನ್ನನಾಗಿ ಫಲವನ್ನು ದಯಪಾಲಿಸುವನು. ಮರು (ಸವಳು) ಭೂಮಿಯಲ್ಲಿ ಬಿತ್ತಲ್ಪಟ್ಟ ಬೀಜದಂತೆ, ವಿಷ್ಣ್ವನರ್ಪಿತವಾದ ಕರ್ಮವು ವಿಫಲವಾಗುವುದು." ಎಂದು ಶ್ರೀವಿಷ್ಣುರಹಸ್ಯ ವಚನಗಳ ಸಾರಾರ್ಥ ॥೬॥

**೫. ಶ್ರೀಗುರುಹೃದಯಪ್ರಕಾಶಿಕೆ**

ಸರ್ವವೂ ದೇವರ ಅಧೀನವೆಂದೂ ಸರ್ವ ಸಮರ್ಪಣೆ ಮಾಡದವನಿಗೆ ಸತ್ಕರ್ಮಫಲವಿಲ್ಲೆಂದು ತಿಳಿಸುತ್ತಾರೆ, ಸ್ನಾನವೆಂದು. ಗಂಗಾದಿ ತೀರ್ಥಸ್ನಾನ, ಗಾಯತ್ರ್ಯಾದಿ ಮಂತ್ರಜಪ, ಸಾಲಿಗ್ರಾಮಾದಿಸ್ಥಿತ ದೇವರ ಪೂಜಾ, ವ್ಯಾಖ್ಯಾನವೆಂಬ ವೇದಶಾಸ್ತ್ರಾರ್ಥ ಹೇಳುವ ಪಾಠ, ಭಾರತಾದಿ ಮಹಾಪುರಾಣ, ವಾಯುಪುರಾಣಾದಿ ಉಪಪುರಾಣಗಳನ್ನು ತಾನು ಓದಿಯಾಗಲೀ, ಇನ್ನೊಬ್ಬರಿಗೆ ಹೇಳಿಯಾಗಲೀ ಮಾಡಿದ ಶ್ರವಣ ಅಧ್ಯಾಪನಾದಿಗಳೂ, ಜ್ಞಾನಕರ್ಮೇಂದ್ರಿಯಗಳೆಂಬ ಕಣ್ಣು ಮೊದಲಾದ ಇಂದ್ರಿಯಗಳಿಂದ ಮಾಡಿದ ಸಕಲ ಕಾರ್ಯಗಳನ್ನೂ, ಲಕ್ಷ್ಮೀ ನಿವಾಸನಾದ ದೇವರ ಅಧೀನವಾದ್ದರಿಂದ ಅವನ ಪೂಜಾರೂಪವೆಂದು ತಿಳಿದು ಪರಮಾತ್ಮಗೆ ಅರ್ಪಿಸದೆ ಇರುವವನು, ಏನು ಮಾಡಿದರೇನು ಎಂದರೆ, ಅವನು ಮಾಡಿದ ಎಲ್ಲಾ ಕರ್ಮಗಳೂ ನಿಷ್ಫಲಗಳಾಗುವುವೆಂದರ್ಥ. ಇದರಿಂದ

**ತಪಸ್ವಿನೋ ದಾನಪರಾ ಯಶಸ್ವಿನೊ । ಮನಸ್ವಿನೋ ಮಂತ್ರವಿದಸ್ಸು ಮಂಗಳಾಃ ॥**
**ಕ್ಷೇಮಂ ನ ವಿಂದಂತಿ ವಿನಾ ಯದರ್ಪಣಂ । ತಸ್ಮೈ ಸುಭದ್ರ ಶ್ರವಸೇ ನಮೋ ನಮಃ ॥**

ಎಂಬ ಭಾಗವತಾರ್ಥ ವಿವರಿಸಲ್ಪಟ್ಟಿತು ॥ ೬ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಉತ್ತಮಾಧಿಕಾರಿಯ ಸಾಧನಕ್ರಮ ಯಾವ ರೀತಿ ಇರುವುದೆಂಬ ವಿಷಯವನ್ನು ತಿಳಿಸುತ್ತಾರೆ.

ಕೇವಲ ಯಾಂತ್ರಿಕವಾಗಿ ಶರೀರದ ಮೇಲೆ ನೀರನ್ನು ಹುಯ್ದುಕೊಳ್ಳುವುದು ನಿಜವಾದ ಸ್ನಾನವೆನಿಸುವುದಿಲ್ಲ. ನಮ್ಮ ಶರೀರವು ಸಾಧನದೇಹ. ಇದರಲ್ಲಿ ಬಿಂಬರೂಪಿಯಾದ ಶ್ರೀಹರಿಯು ಹೃತ್ಪದ್ಮದಲ್ಲಿ ವಿರಾಜಮಾನನಾಗಿದ್ದಾನೆ. ನಾನು ಮಾಡುವ ಸ್ನಾನ ಬಿಂಬನಿಗೆ ಅಭಿಷೇಕವೆಂಬ ಅನುಸಂಧಾನದಿಂದ ಸ್ನಾನ ಮಾಡಬೇಕು. ನೀರಿನಲ್ಲಿ ಅಭಿಮಾನಿಯಾದ ವರುಣದೇವರಲ್ಲಿ ಅಂತರ್ಯಾಮಿಯಾಗಿರುವ ಭಗವದ್ರೂಪಕ್ಕೂ, ಸ್ವಬಿಂಬರೂಪಕ್ಕೂ ಐಕ್ಯಚಿಂತನೆಗೈದು ಸ್ನಾನ ಮಾಡಿದರೆ ಮಾತ್ರ ಫಲ. ಗಂಗಾದಿ ತೀರ್ಥಗಳಲ್ಲಿ ಮಜ್ಜನ ಮಾಡುವಾಗ, ಆ ಉದಕದಲ್ಲಿ ಪರೇಶನ ಪಾದೋದ್ಭವೆಯಾದ ಗಂಗಾಸಾನ್ನಿಧ್ಯವಿರುವುದೆಂದು ತಿಳಿದು ನದ್ಯಭಿಮಾನಿ ಹಾಗೂ ಕ್ಷೇತ್ರಾಭಿಮಾನಿದೇವತೆಗಳ ಚಿಂತನೆ, ತದಂತರ್ಗತ ಭಗವದ್ರೂಪಗಳ ಧ್ಯಾನಪೂರ್ವಕವಾಗಿ ಸ್ನಾನಮಾಡಬೇಕೆಂದು ತಾತ್ಪರ್ಯ. ಆ ಅನುಸಂಧಾನರಹಿತವಾದ ಸ್ನಾನಕ್ರಿಯೆಯು ಕಾಗೆಗುಬ್ಬಿಗಳ ಮಜ್ಜನದಂತೆ.

ಸ್ನಾನಾನಂತರ ಗುರೂಪದೇಶಿತ ಮಂತ್ರಗಳನ್ನು ಹೇಳಿಕೊಳ್ಳುತ್ತಾ ಜಪಾದಿಗಳನ್ನು ಆಚರಿಸುತ್ತೇವೆ. ಗಾಯತ್ರೀಮಂತ್ರಜಪ, ನಾರಾಯಣಾಷ್ಟಾಕ್ಷರೀ ಮಂತ್ರ ಜಪ, ವಾಸುದೇವ ದ್ವಾದಶಾಕ್ಷರೀ ಮಂತ್ರಜಪ, ಇತ್ಯಾದಿ ಜಪಗಳನ್ನು ಮಾಡುತ್ತಿರುವಾಗ, ಸಕಲಮಂತ್ರಪ್ರತಿಪಾದ್ಯನಾದ ಶ್ರೀಪರಮಾತ್ಮನನ್ನು

ನೆನೆದು, ಮಂತ್ರಾಂತರ್ಗತ ಸರ್ವವರ್ಣವಾಚ್ಯ ಭಗವದ್ರೂಪಗಳ ಉಪಾಸನೆ ಮಾಡುತ್ತಾ, ಕೇವಲ ವಿಷ್ಣು ಪ್ರೇರಣೆಯಾ ವಿಷ್ಣುಪ್ರೀತ್ಯರ್ಥವಾಗಿ ಜಪಗಳನ್ನು ಮಾಡಿದರೆ, ಜಪದ ಫಲಪ್ರಾಪ್ತಿ ಹಾಗೂ ಮಂತ್ರಸಿದ್ಧಿ ಪ್ರಾಪ್ತಿ. ಜ್ಞಾನಶೂನ್ಯ ನಾಗಿ ಮಾಡಿದ ಜಪ ಬಕಪಕ್ಷಿಯ ಧ್ಯಾನದಂತೆ ನಿಷ್ಫಲ.

ಜಪಾಚರಣೆಯ ನಂತರ ಮಾಡುವ ದೇವತಾರ್ಚನೆ, ಸಾಲಿಗ್ರಾಮ ಪ್ರತಿ ಮಾದಿಗಳನ್ನು ಹರಡಿಕೊಂಡು, ಜ್ಞಾನಾನುಸಂಧಾನವಿಲ್ಲದೇ ಜನರು ಮೆಚ್ಚಲಿ ಎಂಬ ದೃಷ್ಟಿಯಿಂದ ವೈಭವಯುತವಾಗಿ ಸಡಗರ ಸಂಭ್ರಮಗಳಿಂದ ಮಾಡುವ ಪೂಜೆಯು ಕೇವಲ ಆಡಂಬರವೆನಿಸುವುದೇ ಹೊರತು ಭಗವತ್ಪ್ರೀತಿಗೆ ಕಾರಣ ವಾಗುವುದಿಲ್ಲ. ಸಾಲಿಗ್ರಾಮದಲ್ಲಿ ಸ್ವಯಂವ್ಯಕ್ತಭಗವದ್ರೂಪಗಳ ಚಿಂತನೆ, ಪ್ರತಿಮಾದಿಗಳಲ್ಲಿ ತತ್ವನ್ಯಾಸ, ಮಾತೃಕಾನ್ಯಾಸ ವಿಧಿಯಿಂದ ಬಿಂಬಾವಾಹನ ಕ್ರಮ, ಇತ್ಯಾದಿ ವಿಧ್ಯುಕ್ತರೀತಿಯಲ್ಲಿ ಭಗವದ್ರೂಪ ಚಿಂತನಾಪೂರ್ವಕ ದೇವತಾ ರ್ಚನೆ ಮಾಡುವ ಸಮಯದಲ್ಲಿ ಸ್ವರಮಣನೂ, ಆಪ್ತಕಾಮನೂ ಆದ ಅಚಿಂತ್ಯಾ ದ್ಭುತ ಶಕ್ತನು ತನ್ನ ಪೂಜೆಯನ್ನು ತಾನೇ ಮಾಡಿಕೊಳ್ಳುತ್ತಾನೆ. ತನ್ನ ಭಗವ ದ್ರೂಪಗಳಲ್ಲಿ ರಮಣಮಾಡುತ್ತಾನೆಂಬ ಅನುಸಂಧಾನವಿರಬೇಕೇ ಹೊರತು "ನಾನು ದೇವತಾರ್ಚನೆ ಮಾಡುತ್ತಿದ್ದೇನೆ. ಇದರಿಂದ ಶ್ರೀಹರಿಯು ಸುಪ್ರೀತ ನಾಗುತ್ತಾನೆ" ಎಂದು ಅಹಂಕರ್ತೃತ್ವಾಭಿಮಾನ ಕೂಡದೆಂದು ತಾತ್ಪರ್ಯ.

ಪಂಚಮವೇದವೆಂದು ವಿಖ್ಯಾತವಾದ ಶ್ರೀಮನ್ಮಹಾಭಾರತ, ಭಾಗವತಾದಿ ಮಹಾಪುರಾಣಗಳು, ಉಪಪುರಾಣಗಳು, ಅವುಗಳಲ್ಲಿ ಉಕ್ತವಾಗಿರುವ ಕಥೆಗ ಳನ್ನು ಪ್ರವಚನ ರೂಪದಲ್ಲಿ ಹೇಳುವುದು, ಶ್ರೋತೃವರ್ಗದಲ್ಲಿದ್ದು ಶ್ರವಣ ಮಾಡುವುದು, ಈ ಕ್ರಿಯೆಗಳಿಂದ ಫಲ ಉಂಟಾಗುವುದಿಲ್ಲ. ವಕ್ತೃವಿನಲ್ಲಿದ್ದು ಹೇಳಿ ಹೇಳಿಸುವವನೂ ಶ್ರೀಹರಿಯೇ, ಶ್ರೋತೃವಿನಲ್ಲಿದ್ದು ಕೇಳಿ ಕೇಳಿಸುವವನೂ ಅವನೇ ಎಂಬ ನಿಷ್ಕಾಮಭಾವನೆಯಿಂದ, ಕಥಾಪ್ರಸಂಗದಲ್ಲಿ ಬರುವ ಭಗವಂತನ ಮಹಾಮಹಿಮೆಗಳನ್ನು ಭಕ್ತಿಪರವಶನಾಗಿ, ಮೈಮರೆದು ಕೊಂಡಾಡುತ್ತಿದ್ದರೆ, ಆಗ ಪ್ರವಚನ, ಶ್ರವಣಾದಿಗಳು ಸಾರ್ಥಕ.

ನಮ್ಮ ಶರೀರಗತ ಶ್ರವಣೇಂದ್ರಿಯಾದಿ ಪಂಚಜ್ಞಾನೇಂದ್ರಿಯಗಳು, ಹಸ್ತಪಾದಾದಿ ಪಂಚಕರ್ಮೇಂದ್ರಿಯಗಳ ದ್ವಾರಾ, ಇಂದ್ರಿಯಾಭಿಮಾನಿ ದೇವತೆಗಳ ದ್ವಾರಾ, ವಾಯ್ವಂತರ್ಗತ ಶ್ರೀರಮಾವರನೇ ಸಮಸ್ತ ಕ್ರಿಯಾ ವಿಶೇಷಗಳನ್ನೂ ಮಾಡಿ ಮಾಡಿಸುತ್ತಿರುವನೆಂದು ಗುರೂಪದೇಶದ್ವಾರಾ ತಿಳಿದು ಸ್ವಾನುಭವದಿಂದ ಆನಂದಿಸುತ್ತಾ, ಆ ಸಮಸ್ತ ಕರ್ಮಗಳನ್ನೂ ಲಕ್ಷ್ಮೀರಮಣನಾದ ಶ್ರೀಹರಿಯ ಪೂಜೆಯೆಂದರಿತು, ಅವನ ಚರಣ ನೀರಜಗಳಿಗೆ ಅರ್ಪಿಸದ ಮಾನವನು ಮಾಡುವ ಸ್ನಾನ–ಜಪ–ದೇವತಾರ್ಚನೆ–ವ್ಯಾಖ್ಯಾನರೂಪವಾದ ಪಾಠಪ್ರವಚನಗಳು–ಭಾರತಾದಿ ಗ್ರಂಥಗಳ ಪುರಾಣಕಥನ–ಶ್ರವಣ ಇತ್ಯಾದಿಗಳು ಸತ್ಕರ್ಮಗಳೇ ಆದರೂ ಅವು ಭಗವತ್ಪರವಲ್ಲದಿರಲು ನಿರರ್ಥಕವೆಂದು ತಾತ್ಪರ್ಯ ॥ ೬ ॥

## ಪದ್ಯ ೭

**ಮೂಲ:-**

**ದೇವಗಂಗೆಯೊಳುಳ್ಳವಗೆ ದುರಿ ।**
**ತಾವಳಿಗಳುಂಟೇ ವಿಚಾರಿಸೆ ।**
**ಪಾವುಗಳ ಭಯವುಂಟೆ ವಿಹಗಾಧಿಪನ ಮಂದಿರದಿ ॥**
**ಜೀವಕರ್ತೃತ್ವವನು ಮರೆದು ಪ ।**
**ರಾವರೇಶನೆ ಕರ್ತೃ ಎಂದರಿ ।**
**ದಾವ ಕರ್ಮವ ಮಾಡಿದರು ಲೇಪಿಸವು ಕರ್ಮಗಳು ॥ ೭ ॥**

**ಅವತರಣಿಕೆ**

ರಮಾಬ್ರಹ್ಮರಿಗೂ ಈಶನಾದ ಶ್ರೀಹರಿಯೇ ಕರ್ತೃವೆಂದರಿತು, ಯಾವ ಕರ್ಮಗಳನ್ನು ಆಚರಿಸಿದಾಗ್ಯೂ, ಅವುಗಳಿಂದ ಅವನು ಲಿಪ್ತನಾಗುವುದಿಲ್ಲ ಎಂದು ತಿಳಿಸುತ್ತಾರೆ.

## ಪ್ರತಿಪದಾರ್ಥ

**ದೇವಗಂಗೆಯೊಳುಳ್ಳವಗೆ** = ಶ್ರೀಹರಿಯ ಪಾದದಿಂದ ಉದ್ಭೂತಳಾದ, ಅಮರತರಂಗಿಣಿ ಎಂದೆನಿಪ ಗಂಗಾನದಿಯಲ್ಲಿರುವ್ವಗೆ, **ದುರಿತಾವಳಿಗಳು ಉಂಟೆ** = ದುಷ್ಕರ್ಮಫಲರೂಪವಾದ, ಪಾಪಸಮೂಹಗಳು ಬಾಧಿಸುತ್ತವೆಯೇ ? **ವಿಚಾರಿಸೆ** = ಶಾಸ್ತ್ರಾರ್ಥಗಳ ದ್ವಾರಾ ಈ ವಿಷಯವನ್ನು ಜಿಜ್ಞಾಸೆಮಾಡಲು, **ವಿಹಗಾಧಿಪನ** = ಪಕ್ಷಿಶ್ರೇಷ್ಠರಾದ ಗರುಡದೇವರ, (ವಿಹಗ = ಆಕಾಶದಲ್ಲಿ ಸಂಚರಿಸುವ ಪಕ್ಷಿಗಳು, ಅಧಿಪ = ಅವುಗಳಲ್ಲಿ ಶ್ರೇಷ್ಠನಾದ) **ಮಂದಿರದಿ,** = ಆಶ್ರಯದಲ್ಲಿ ಇರುವವರಿಗೆ, **ಹಾವುಗಳ** = ಸರ್ಪಗಳ, **ಭಯವುಂಟೇ** = ಭಯವು ಎಂದಿಗಾದರೂ ಇರುವುದೇ ? **ಜೀವಕರ್ತೃತ್ವವನು** = ಎಲ್ಲಾ ಕರ್ಮಗಳಿಗೂ ನಾನೇ ಕರ್ತಾ ಎಂಬ ಅಹಂಕರ್ತೃತ್ವಭಾವವನ್ನು, (ಜೀವರು ಅಸ್ವತಂತ್ರರು, ಅವರ ಕರ್ತೃತ್ವ ಪರಾಧೀನವಾದದ್ದು) **ಮರೆದು** = ತ್ಯಜಿಸಿ, **ಪರಾವರೇಶನೆ** = ಬ್ರಹ್ಮಾದಿಗಳಿಗಿಂತಲೂ ಶ್ರೇಷ್ಠಳಾದ, ಪರನಾಮಕಳಾದ, ಶ್ರೀಲಕ್ಷ್ಮೀದೇವಿಗೆ ನಿಯಾಮಕನಾದ ಶ್ರೀಪರಮಾತ್ಮನೇ, **ಕರ್ತೃ** = ಸ್ವತಂತ್ರಕರ್ತನು, **ಎಂದರಿತು** = ಗುರೂಪದೇಶದ್ವಾರಾ, ಶಾಸ್ತ್ರದ್ವಾರಾ ತಿಳಿದು, ಸ್ವಾನುಭವದಿಂದ ಅನುಸಂಧಾನ ಮಾಡುತ್ತಾ, **ಆವಕರ್ಮವ ಮಾಡಿದರು** = ಶುಭ, ಅಶುಭ, ಮಿಶ್ರ ಇತ್ಯಾದಿ ಯಾವಪ್ರಕಾರವಾದ ಕ್ರಿಯೆಗಳನ್ನು ಆಚರಿಸಿದಾಗ್ಯೂ, **ಕರ್ಮಗಳು** = ಆ ಕರ್ಮಗಳು, **ಲೇಪಿಸವು** = ಅವನಿಗೆ ಅಂಟುವುದಿಲ್ಲ. ಅಂದರೆ ಕರ್ಮಗಳ ಫಲಗಳಿಂದಲೂ ಸಹ ನಿರ್ಲಿಪ್ತನಾಗಿರುವನು. ಇದು ಸಾಧನೆಯ ಪಾರಮ್ಯಸ್ಥಿತಿ ॥ ೭ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಭಗವದ್ಭಕ್ತಗೆ ಕರ್ಮಸಮೂಹಗಳ ಲೇಪನವಾಗೋದಿಲ್ಲ ಎಂತ ಹೇಳತಾರೆ.

ಕ್ರೀಡಾದಿ ಗುಣವಿಶಿಷ್ಟನಾದ ವಾಸುದೇವನಿಂದ ಜನ್ಯವಾದ ಬೆವರೋದಕವೆಂಬ ಲಕ್ಷ್ಮ್ಯಾತ್ಮಕವಾದ ಗಂಗಾ ಸಾಂಕೇತವಾವ ಉದಕದೊಳು ವಾಸವಾಗಿರ

ತಕ್ಕವಗೆ, ಜನನ ಮರಣಕ್ಕೆ ಕಾರಣವಾದ ಸುಕರ್ಮ ದುಷ್ಕರ್ಮಗಳೆಂಬ ಉಭಯ ವಿಧ ಪಾಪಸಮೂಹಗಳು ಇಲ್ಲ ಎಂತ ಅರ್ಥ. ಅಹಂಮಮತಾ ಎಂಬುದರನ್ನ ವಹಿಸಿ ಮಾಡುವ ಪುಣ್ಯಕರ್ಮ ಪಾಪಕರ್ಮ ಇವುಗಳು ಜನ್ಮಕ್ಕೆ ಕಾರಣವಾಗತವೆ. ಪುಣ್ಯಕರ್ಮ, ಪಾಪವೇ ಆಗತದೆ. ಕ್ಷೀರದಲ್ಲಿ ವಿಷ ಮಿಶ್ರಮಾಡಿ ಪಾನ ಮಾಡಿದರೂ ಒಂದೇ, ಬರೀ ವಿಷ ಪಾನ ಮಾಡಿದರೂ ಒಂದೇ ಅಂತೂ ಎರಡು ವಿಧದಿಂದಲೂ ಮೃತಿ ಐದಿಸತಕ್ಕ ದೋಷರೂಪಗಳೇ. ಸತ್ಕರ್ಮಾನುಷ್ಠಾನ ಮಾಡುವಗೆ ಅಹಂಮಮತಾ ಎಂಬುದು ಇರಬಾರದು. ಸಾಮಾನ್ಯ ವಿಷದಲ್ಲಿ ಕಾಳಕೂಟ ಮೇಳನ ಮಾಡಿದಂತಾಗುತ್ತದೆ. ಮತ್ತು ಪಕ್ಷಿಶ್ರೇಷ್ಠನಾದ ಗರುಡದೇವರ ಮನೆ ಒಳಗೆ ಆವಾಸವಾಗಿ ಗರುಡದೇವರ ಆಶ್ರಯ ಮಾಡಿದವಗೆ, ಅಲ್ಪವಾದ ಸರ್ಪಗಳ ಭಯವಿಲ್ಲ ಎಂತ ತಾತ್ಪರ್ಯ. ವಿಚಾರ ಮಾಡೋದರಲ್ಲಿ ಗಂಗಾ, ಗರುಡ ಇವರ ಆಶ್ರಯು ಮಾಡಿದವರಿಗೆ ದಾವ ಪಾಪಗಳ ಭಯವೂ, ವಿಷದ ಭಯವೂ ಇಲ್ಲ. ತದ್ವತ್, ಜೀವ ಅಸ್ವತಂತ್ರನಾದ, ಪರಾಧೀನಕರ್ತನಾದ, ಅನಾದಿಯಿಂದ ಸ್ವರೂಪವನ್ನನುಸರಿಸಿ ಇರುವ ಸ್ವರೂಪಭೂತಸ್ವಾತಂತ್ರ್ಯರೂಪವಾದ ಕರ್ತೃತ್ವ ಮರೆತವನಾಗಿ, ತನ್ನ ಕರ್ತೃತ್ವ, ಈಶಾಧೀನಕರ್ತೃತ್ವ ಎಂತ ಸ್ಮೃತಿಯುಕ್ತನಾಗಿ, ಪರಾ = ಜೀವೋತ್ತಮರಾದ ವಾಯುದೇವರು, ವರ = ಇವರಕ್ಕಿಂತಲೂ ಉತ್ತಮರಾದ ರಮಾದೇವಿಯರಿಗೆ ಸ್ವಾಮಿಯಾದ ಪರಮಾತ್ಮನೇ ಮತ್ತು ಶ್ರೇಷ್ಠ ನಿಕೃಷ್ಟ ಎಲ್ಲಾದಕ್ಕೂ ಸ್ವಾಮಿಯಾದವ

**ಅಪಿ ಚೇತ್ಸು ದುರಾಚಾರೋ ಭಜತೇ ಮಾಮನನ್ಯಭಾಕ್ ।**
**ಸಾಧುರೇವ ಸ ಮಂತವ್ಯಸ್ಸಮ್ಯಗ್ವ್ಯವಸಿತೋ ಹಿ ಸಃ ॥ ಇತಿ ಗೀತಾ ।**

ಪರಾಧೀನನಲ್ಲದ ಸ್ವತಂತ್ರಕರ್ತ ಎಂತ ಗುರು ಮುಖದಿಂದಲೂ, ಪ್ರತ್ಯಕ್ಷಾನುಮಾನಾಗಳಿಂದಲೂ ತಿಳಿದು, ಬಿಂಬಕ್ರಿಯಾದಿಂದ ಪ್ರತಿಬಿಂಬಕ್ರಿಯಾ ಅಂತ ಅನುಸಂಧಾನದಿಂದ ಮಾಡಿದ ಯಾವತ್ತೂ ಕರ್ಮಗಳ ಮಾಡಿದಾಗ್ಯೂ, (ಇಂಥಾ) ಜನನ ಮರಣಕ್ಕೆ ಕಾರಣವಾದ ಪಾಪಪುಣ್ಯ ಕರ್ಮಸಮೂಹಗಳು ಲೇಪವಾಗಿ ಜನನ ಮರಣ ಐದಿಸೋದಿಲ್ಲ. ಇಂಥಾ ಅನುಸಂಧಾನದಿಂದ ಭಗವದಪರೋಕ್ಷವಾಗತದೆ. ರಾಜಾಜ್ಞಾದಿಂದ ಮಾಡಿದ ಹತ್ಯಾದಿಗಳಿಗೆ ಭೃತ್ಯರು ಹ್ಯಾಂಗೆ ಶಿಕ್ಷಾರ್ಹರಲ್ಲವೋ.

ತದ್ವತ್ ಈಶಾಜ್ಞಾದಿಂದ ಮಾಡಿದ ಪಾಪಗಳು ಶಿಕ್ಷಾರ್ಹವಲ್ಲ ಎಂತ ತಾತ್ಪರ್ಯ ॥ ೭ ॥

## ೨. ಭಾವಪ್ರಕಾಶಿಕೆ

ಗಂಗೆಯ ಮಹಾತ್ಮ್ಯಜ್ಞಾನವಿಲ್ಲದೆ ಅದರಲ್ಲಿ ಕಾಗೆ ಮುಳುಗುವಂತೆ ಮುಳುಗಿದರೆ ಫಲವಿಲ್ಲ. ಭಗವದ್ಭಕ್ತಿಯಿಂದ ಅದರ ಮಹಾತ್ಮ್ಯಜ್ಞಾನಪೂರ್ವಕ, 'ಸ ಏವ್ಹ್ಯದ್ರವರೂಪೇಣ ಗಂಗಾಂಭೋ ನಾತ್ರ ಸಂಶಯಃ' ಶ್ರೀಹರಿಯೇ ದ್ರವ (ಉದಕ) ರೂಪನಾಗಿ ಗಂಗೆಯ ಉದಕದಲ್ಲಿರುವನು, ಈ ವಿಷಯದಲ್ಲಿ ಸಂಶಯವೇ ಇಲ್ಲ ಎಂದು ತಿಳಿದು ಸ್ನಾನ ಪಾನಾದಿಗಳನ್ನು ಮಾಡುತ್ತ ಅಲ್ಲೇ ವಾಸ ಮಾಡುತ್ತಿದ್ದರೆ ಅವನಿಗೆ ಪಾಪಲೇಪವು ಹೇಗಿಲ್ಲವೊ, ಗರುಡಮಂತ್ರವನ್ನು ಜಪಿಸಿ ಗರುಡನನ್ನು ಸ್ವಾಧೀನದಲ್ಲಿಟ್ಟುಕೊಂಡಿರುವವನ ಮನೆಯಲ್ಲಾಗಲೀ, ಗರುಡನು ವಾಸಮಾಡುವ ಸ್ಥಳದಲ್ಲೇ ಆಗಲಿ ಸರ್ಪದ ಭಯವು ಹೇಗಿರುವುದಿಲ್ಲವೋ ಹಾಗೆ "ನಾಹಂ ಕರ್ತಾ ಹರಿಃ ಕರ್ತಾ" ಎಂದು ತಿಳಿದು, ಜೀವರು ಸ್ವತಂತ್ರದಿಂದ ಯಾವ ವಿಧವಾದ ಕರ್ಮಗಳನ್ನು ಮಾಡುವುದಕ್ಕೂ ಶಕ್ತರಲ್ಲ. ತೇನ ವಿನಾ ತೃಣಮಪಿ ನ ಚಲತಿ' ಪರಮಾತ್ಮನ ಹೊರತು ತೃಣಗಳೂ ಸಹ ಚಲಿಸುವಂತಿಲ್ಲ. ಅಂದರೆ ಅಲ್ಪಕಾರ್ಯವೂ ಸಹ ಆಗುವಂತಿಲ್ಲವೆಂದು ತಿಳಿದು, ಪರಮಾತ್ಮನು ಮಾಡಿಸಿದಂತೆ ಅಸ್ವತಂತ್ರದಿಂದ ಮಾಡುವವನು ನಾನು, ಸ್ವತಂತ್ರ ಕರ್ತಾ ಪರಮಾತ್ಮನೆಂದು ಭಾವಿಸಿ ಉಪಾಸನೆ ಮಾಡುವವನು ಪ್ರಾಯಶಃ ಪಾಪಗಳನ್ನು ಮಾಡುವುದೇ ಇಲ್ಲ. ಒಂದು ವೇಳೆ ಆಕಸ್ಮಿಕವಾಗಿ ಮಾಡಿದರೂ ಅವು ಅವನನ್ನು ಬಾಧಿಸುವುದಿಲ್ಲವೆಂದು ತಾತ್ಪರ್ಯ.

ಏನು ಮಾಡಿದರೂ ಅಂದರೆ ಮನಃ ಪೂರ್ವಕವಾಗಿ ನಿಷಿದ್ಧವಾದ ಬ್ರಹ್ಮಹತ್ಯಾದಿಗಳನ್ನು ಮಾಡಿ ದೇವರು ಮಾಡಿಸಿದನೆಂದು ಹೇಳುವುದೆಂದರ್ಥವಲ್ಲ. ಏಕೆಂದರೆ, ಯಾವನು ಬ್ರಹ್ಮಹತ್ಯಾದಿ ಮಹಾ ಪಾಪಗಳನ್ನು ಮಾಡಲು ಹೆದರುವುದಿಲ್ಲವೋ ಅವನಿಗೆ ಭಗದ್ಭಕ್ತಿ ಇರುವುದೇ ಇಲ್ಲ. ಯಾವನು ಸರ್ವತ್ರ ಭಗವಂತನನ್ನು ಚಿಂತಿಸುತ್ತಿರುವನೋ ಅವನು ಇರುವು, ತಗಣೆ ಮೊದಲಾದುವುಗಳಲ್ಲಿಯೂ

ಸಹ ತದ್ರೂಪಿಯಾಗಿ ಪರಮಾತ್ಮನೇ ಇರುವನೆಂದುತಿಳಿದಿರುವನು. ಅಂತಹವನು ಅವುಗಳನ್ನು ಹಿಂಸಿಸುವುದೆಂತು ? ಆದ್ದರಿಂದ ಪಾಪಕೃತ್ಯಕ್ಕೆ ಭಕ್ತರು ಪ್ರವರ್ತಿಸುವುದೇ ಇಲ್ಲ. ಪ್ರಾರಬ್ಧಕರ್ಮವಶದಿಂದಲೂ, ದೈವೇಚ್ಛೆಯಿಂದಲೂ ಆಕಸ್ಮಿಕವಾಗಿ ಪಾಪಕೃತ್ಯಗಳು ನಡೆದರೆ ಅದಕ್ಕೆ ಪಶ್ಚಾತಾಪ ಹುಟ್ಟುತ್ತದೆ. ಪಶ್ಚಾತ್ತಾಪದಿಂದ ಪರಮಾತ್ಮನನ್ನು ಚಿಂತಿಸಿ, ಪರಮಾತ್ಮನೇ ಮಾಡಿಸಿದನೆಂದು ತಿಳಿದು ಅವನಿಗೆ ಅದನ್ನು ಸಮರ್ಪಿಸಿದರೆ ಆ ಪಾಪಗಳೆಲ್ಲವೂ ಭಸ್ಮವಾಗುವುವು. ಭಾಗವತ ಷಷ್ಠಸ್ಕಂಧ ಅಜಾಮಿಳನ ಚರಿತ್ರೆಯಲ್ಲಿ "ಪ್ರಾಯಶ್ಚಿತ್ತಾನಿ ಜೀರ್ಣಾನಿ ನಾರಾಯಣ ಪರಾಙ್ಮುಖಂ । ನ ವೈ ಪುನಂತಿ ರಾಜೇಂದ್ರ ಸುರಾಕುಂಭಮಿವಾಪಗಾಃ" ಮದ್ಯದಿಂದ ತುಂಬಿದ ಮಡಿಕೆಯನ್ನು ಯಾವ ನದಿಯಲ್ಲಿ ತೊಳೆದರೂ ಹೇಗೆ ಶುದ್ಧಿಯಾಗದೋ, ಹಾಗೆ ನಾರಾಯಣನಲ್ಲಿ ವಿಮುಖರಾದವರು ಯಾವ ಪ್ರಾಯಶ್ಚಿತ್ತವನ್ನು ಮಾಡಿಕೊಂಡರೂ ಪಾಪ ಪರಿಹಾರವಾಗುವುದಿಲ್ಲ, ಎಂದು ಹೇಳಿ, ಮತ್ತು 'ಸ್ತೇನಸ್ಸುರಾಪೋಮಿತ್ರಧ್ರುಕ್ ಬ್ರಹ್ಮಹಾ ಗುರುತಲ್ಪಗಃ ॥ ಸ್ತ್ರೀ ರಾಜ ಪಿತೃ ಗೋ ಹಂತಾ ಏತ ಪಾತಕಿ ನೋಪರೆ॥ ಸರ್ವೇಷಾಮಪ್ಯಘವತಾಮಿದಮೇವ ಸುನಿಷ್ಕೃತಂ' ಸ್ವರ್ಣಸ್ತೇಯ, ಸುರಾಪಾನ, ಮಿತ್ರದ್ರೋಹ, ಬ್ರಹ್ಮಹತ್ಯೆ, ಗುರುಸ್ತ್ರೀಗಮನ, ಸ್ತ್ರೀಹತ್ಯೆ, ರಾಜಹತ್ಯೆ, ಪಿತೃಹತ್ಯಾ, ಗೋಹತ್ಯಾ, ಇನ್ನು ಇತರವಾದ ಪಾಪಗಳನ್ನು ಮಾಡಿದವರಿಗೂ, ಹೆಚ್ಚಿಗೇಕೆ ಎಲ್ಲಾ ಪಶ್ಚಾತ್ತಾಪದಿಂದ ಭಕ್ತಿಪೂರ್ವಕವಾಗಿ ಮಾಡುವ ಪರಮಾತ್ಮನ ಸ್ಮರಣೆಯೇ ಪ್ರಾಯಶ್ಚಿತ್ತವೆಂದು ಹೇಳಿರುವರು. ಇದರಲ್ಲಿ ಮುಖ್ಯ ಸಾಧನವು ಭಕ್ತಿ ಮತ್ತು ಪಶ್ಚಾತ್ತಾಪ. ಇವೆರಡು ಹುಟ್ಟಬೇಕಾದರೆ ಮನಃಪೂರ್ವಕ ಪಾಪಮಾಡುವ ಪಾಪಿಗಳಿಗೆ ಹುಟ್ಟುವುದೇ ಇಲ್ಲ. ಮಾರ್ಗಸ್ಥರನ್ನು ಹೊಡೆದು ದ್ರವ್ಯವನ್ನಪಹರಿಸುವ ದಂಗೆಕೋರರಿಗೂ ಕುರಿಮೇಕೆಗಳನ್ನು ನಿರ್ದಯವಾಗಿ ಕಡಿಯುವ ಕಟುಕರಿಗೂ ಪಶ್ಚಾತ್ತಾಪ ಹುಟ್ಟುವುದುಂಟೆ ? ಎಂದಿಗೂ ಇಲ್ಲ. ಆದ್ದರಿಂದ ಆಕಸ್ಮಿಕವಾಗಿ ನಡೆದ ಪಾಪಗಳು ಮಾತ್ರ ಲೇಪಿಸುವುದಿಲ್ಲವೆಂಬುದೇ ಈ ಪದ್ಯಾರ್ಥವು ॥ ೭ ॥

**೩. ಭಾವದರ್ಪಣ**

ಜೀವಕರ್ತೃತ್ವ ವಿಷಯದಲ್ಲಿ ದತ್ತ ಸ್ವಾತಂತ್ರ್ಯ ಸಂಧಿಯಲ್ಲಿ ವಿವರಮಾಡುತ್ತಾರೆ. ಅಲ್ಲೇ ಅವಲೋಕನಮಾಡತಕ್ಕದ್ದು. ದೇವಗಂಗೇತಿ ॥ ೭ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದಿ

ದೇವ ಇತಿ ॥ ಆವಳಿ—ಪಂಕ್ತಿ ॥ ಪಾವು=ಸರ್ಪ ॥ ಅಧಿಪ=ಗರುಡ॥ ೭ ॥

**ಕನ್ನಡಾರ್ಥ**

ಸರ್ವ ಕರ್ಮಗಳನ್ನೂ ಸಮರ್ಪಿಸುವ ನರನಿಗೆ ಕರ್ಮಲೇಪವಿಲ್ಲವೆಂಬುದಾಗಿ ನಿದರ್ಶನಗಳಿಂದ ತಿಳಿಸುತ್ತಾರೆ. "ದೇವಗಂಗೆಯೊಳುಳ್ಳವಗೆ" ಎಂಬ ಪದ್ಯದಿಂದ.

ದುರಿತಾವಳಿ=ಪಾಪಗಳ ಸಮೂಹ. ಪಾವು—ಸರ್ಪ—ಹಾವು. "ವಿಹಗಾಧಿಪ"—ಪಕ್ಷಿರಾಜನಾದ ಗರುಡ. ॥ ೭ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಸರ್ವಸಮರ್ಪಣೆ ಮಾಡಿದವನಿಗೆ ಪಾಪಲೇಪವಿಲ್ಲೆಂದು ದೃಷ್ಟಾಂತ ಸಹಿತ ತಿಳಿಸುತ್ತಾರೆ, ದೇವಗಂಗೆ ಎಂದು. ದೇವಗಂಗಾತೀರದಲ್ಲಿ ಭಕ್ತಿಪೂರ್ವಕ ಆವಾಸ ಮಾಡುವವನಿಗೆ ದುರಿತವೆಂಬ ಪಾಪ ಹೇಗೆ ಇಲ್ಲವೋ, ಗರುಡದೇವರ ಮನೆಯಲ್ಲಿರುವನಿಗೆ ಹಾವುಗಳ ಭಯ ಹೇಗೆ ಇಲ್ಲವೋ ಹಾಗೆ, ಜೀವಕರ್ತೃತ್ವಾಭಿಮಾನವಿಲ್ಲದೆ ದೇವರ ಸ್ವಾತಂತ್ರ್ಯವನ್ನೇ ಚಿಂತಿಸುತ್ತಾ, ಪರಾವರೇಶನೆ ಕರ್ತೃ ಎಂದರಿತು ಎಂದರೆ, ಶ್ರೇಷ್ಠ ನಿಕೃಷ್ಟ ಎಲ್ಲಕ್ಕೂ ಸ್ವಾಮಿಯಾದ ದೇವರೇ ನಿಯಾಮಕನೆಂದು ಭಾವಿಸುತ್ತಾ ಯಾವ ಕರ್ಮ ಮಾಡಿದಾಗ್ಯೂ ಕರ್ಮಗಳ ಪಾಪಲೇಪವಿಲ್ಲ.

**ಅಪಿ ಚೇತ್ಸು ದುರಾಚಾರೋ ಭಜತೇ ಮಾಮನನ್ಯಭಾಕ್ । ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ**

ಎಂಬ ಗೀತಾರ್ಥವು ಹೇಳಲ್ಪಟ್ಟಿತು. ಕ್ವಚಿತ್ ಗಂಗಾತೀರದಲ್ಲಿದ್ದ ಪಾಪಿಗೆ ಪ್ರಾರಬ್ಧವಶದಿಂದ ದುರ್ಗತಿ ಬಂದಾಗ್ಯೂ, ಗರುಡನ ಮನೆಯಲ್ಲಿ ಸರ್ಪದ ಭಯ ಸರ್ವಾತ್ಮನಾ ಇಲ್ಲದಂತೆ, ಸರ್ವಕರ್ಮಸಮರ್ಪಣೆ ಮಾಡಿದವಗೆ ಪಾಪಲೇಪವಿಲ್ಲೆಂದು ತಿಳಿಸುವುದಕ್ಕೆ ಎರಡನೆಯ ದೃಷ್ಟಾಂತ ॥ ೭ ॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಸದಾ ಸರ್ವದುರಿತ ಪರಿಹಾರಕನಾದ ಶ್ರೀಹರಿಯ ಸ್ಮರಣೆಯಲ್ಲಿಯೇ ಆಸಕ್ತ ಮನಸ್ಸುಳ್ಳವನಿಗೆ ಯಾವ ವಿಧವಾದ ಭಯಗಳೂ ಇಲ್ಲವೆಂದು ತಿಳಿಸುತ್ತಾರೆ.

ಸರ್ವಪಾಪಗಳನ್ನು ಕ್ಷಾಳನಗೈಯುವ ಶ್ರೀಹರಿಯ ಪಾದೋದ್ಭವೆಯಾದ ದೇವಗಂಗೆಯಲ್ಲಿ ಮುಳುಗಿ ಮಜ್ಜನ ಮಾಡುವವನಿಗೆ, ಅಥವಾ ಆದರ ಆಶ್ರಯದಲ್ಲಿಯೇ ಇರುವವನಿಗೆ ಪಾಪಭಯಗಳುಂಟೇ ? ಕೇವಲ ಸ್ನಾನಮಾತ್ರದಿಂದ ದುರಿತಾವಳಿಗಳ ಪರಿಹಾರವಾಗುವುದಿಲ್ಲ. ಆ ದೇವಗಂಗೆಯೇ ಶ್ರೀಹರಿಯ ಚರಣೋದ್ಭವೆ ಎಂದೂ, ಗಂಗಾತೀರ್ಥದಲ್ಲಿರುವ ನದ್ಯಭಿಮಾನಿದೇವತಾ, ತದಂತರ್ಗತ ಪ್ರಾಣಾಂತರ್ಗತ ಆ ಪರಾವರೇಶನ ರೂಪಗಳನ್ನು ಸ್ಮರಿಸುತ್ತಾ, ಮಜ್ಜನ ಮಾಡಿದಾಗ ಮಾತ್ರ ದುರಿತಗಳು ಪರಿಹಾರವಾಗುವುವು.

ವಿಹಗ ಎಂದರೆ ಆಕಾಶದಲ್ಲಿ ಚರಿಸುವ ಪಕ್ಷಿಗಳೆಂದರ್ಥ. ಆ ಪಕ್ಷಿ ಸಂಕುಲದಲ್ಲಿ ಶ್ರೇಷ್ಠನಾದವನು ಗರುಡನು. ಅಂತಹ ಗರುಡನ ಆಶ್ರಯದಲ್ಲಿ ಅಥವಾ ಸಮೀಪದಲ್ಲಿರುವವನಿಗೆ ಸರ್ಪಗಳ ಭಯವು ಎಂದಿಗಾದರೂ ಉಂಟೇ ?

ಜೀವರು ಜಡವಸ್ತುಗಳಿಗಿಂತ ಭಿನ್ನರು. ಜೀವರಿಗೆ ಜ್ಞಾನೇಚ್ಛಾಕ್ರಿಯಾ ಶಕ್ತಿಗಳು ಸ್ವರೂಪದ ಧರ್ಮಗಳಾಗಿವೆ. ಅವರ ಕರ್ತೃತ್ವ ಪರಾಧೀನವಾಗಿದೆ. ಅಹಂಕರ್ತೃತ್ವಭಾವವನ್ನು ಮರೆತು "ನಾಹಂ ಕರ್ತಾ ಹರಿರೇವ ಕರ್ತಾ" ಎಂಬ ಉತ್ತಮ ಜ್ಞಾನಾನುಸಂಧಾನದಿಂದ ಅರಿತು, ಸರ್ವೇಶ್ವರನಾದ ಆ ಶ್ರೀಹರಿಯನ್ನು ಸರ್ವಕರ್ತನೆಂದು ತಿಳಿದು ಸ್ಮರಿಸುತ್ತಿರುವ ನರರಿಗೆ ಪಾಪಾದಿಗಳ ಭಯ, ಕರ್ಮಗಳ ಲೇಪವಿಲ್ಲ.

ವಾಯು, ಬ್ರಹ್ಮ, ರಮಾ ಇವರುಗಳಿಗಿಂತ ಉತ್ತಮೋತ್ತಮನಾದ ಶ್ರೀಹರಿಯು ಪರಾವರೇಶನು. ಅವನ ನಿಯಮನದಂತೆ ಸಕಲ ಕಾರ್ಯಗಳ ಅಭಿ

ವ್ಯಕ್ತಿ ತೇನ ವಿನಾ ತೃಣಮಪಿ ನ ಚಲತಿ. ಅವನ ಆಜ್ಞೆಯಿಲ್ಲದೆ ಹುಲ್ಲುಕಡ್ಡಿಯೂ ಅಲುಗಾಡಲಾರದು. ಸರ್ವೋತ್ತಮನ ಸರ್ವತಂತ್ರಸ್ವಾತಂತ್ರ್ಯ ಹಾಗೂ ಸರ್ವ ಕರ್ಮಪ್ರೇರಕತ್ವಗಳನ್ನು ಅರಿತು ಯಾವಕರ್ಮ ಮಾಡಿದರೂ ಸರಿ, ಅವುಗಳ ಲೇಪ ಆ ಉಪಾಸಕನಿಗೆ ಇಲ್ಲ. ॥ ೭ ॥

❋❋❋❋

## ಪದ್ಯ ೮

**ಮೂಲ**

**ಏನು ಮಾಡುವ ಪುಣ್ಯಪಾಪಗ ।**
**ಳಾನೆ ಮಾಡುವೆನೆಂಬುವಾಧಮ ।**
**ಹೀನಕರ್ಮಕೆ ಪಾತ್ರ ನಾ ಪುಣ್ಯಕ್ಕೆ ಹರಿಯೆಂಬ ॥**
**ಮಾನವನು ಮಧ್ಯಮನು ದ್ವಂದ್ವಕೆ ।**
**ಶ್ರೀನಿವಾಸನೆ ಕರ್ತೃವೆಂದು ಸ ।**
**ದಾನುರಾಗದಿ ನೆನೆದು ಸುಖಿಸುವನೇ ನರೋತ್ತಮನು ॥ ೮ ॥**

**ಅವತರಣಿಕೆ**

ತ್ರಿವಿಧ ಜೀವರ ಅನಾದಿಸ್ವಭಾವಕ್ಕನುಗುಣವಾದ ಕರ್ಮಾಚರಣೆಯ ಚಿಂತನಾಕ್ರಮವನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ :–**

**ಏನುಮಾಡುವ**=ದೇಹೇಂದ್ರಿಯಗಳಿಂದ ಏನೇನು ಕರ್ಮಗಳು ನಡೆಯುತ್ತವೆಯೋ, **ಪುಣ್ಯಪಾಪಗಳನು**=ಪುಣ್ಯರೂಪವಾದ ಕರ್ಮಗಳೇನು, ಪಾಪರೂಪವಾದ ಕ್ರಿಯಾದಿಗಳೇನು, **ಆನೆಮಾಡುವೆನೆಂಬುವ**=ನಾನೇ ಮಾಡುತ್ತಿದ್ದೇನೆ. ಅವೆಲ್ಲಕ್ಕೂ ನಾನೇ ಸ್ವತಂತ್ರಕರ್ತನು ಎಂದು ಭಾವಿಸುವವನು,

**ಅಧಮ**=ಅತ್ಯಂತ ಕನಿಷ್ಠ ಜೀವನು ಎಂದರೆ, ತಮೋಯೋಗ್ಯಜೀವಿಯು. **ಹೀನಕರ್ಮಕೆ**=ದುಷ್ಟಹಾದ ಪಾಪಕರ್ಮಗಳಿಗೆ, **ಪಾತ್ರ ನಾ**=ಈಶವ್ಯತಿರಿಕ್ತ ನಾನೇ ಪಾತ್ರನು. (ಪಾಪಕರ್ಮಗಳ ಕರ್ತನು ನಾನು), **ಪುಣ್ಯಕೆ**=ಪುಣ್ಯಕರ್ಮಗಳಿಗೆ, **ಹರಿಯೆಂಬ**=ಹರಿಯು ಕರ್ತನು ಎಂಬ ಅನುಸಂಧಾನವಿರುವವನು (ಪಾಪಗಳಿಗೆ ಮಾತ್ರ ನಾನು ಕರ್ತನು, ಪುಣ್ಯಕರ್ಮಗಳನ್ನು ಹರಿಯು ಮಾಡಿಸುವನು ಎಂಬ ಭಾವ), **ಮಾನವನು**=ನರನು, **ಮಧ್ಯಮನು**=ಮಧ್ಯಮಾಧಿಕಾರಿಯಾದ ನಿತ್ಯಸಂಸಾರಿಯಾದ ರಜೋಜೀವನು. **ದ್ವಂದ್ವಕೆ**=ಪುಣ್ಯಪಾಪಗಳೆಂಬ ಸಮಸ್ತ ಕರ್ಮಗಳಿಗೂ, **ಶ್ರೀನಿವಾಸನೆ**=ಲಕ್ಷ್ಮೀಪತಿಯಾದ ಶ್ರೀಪರಮಾತ್ಮನೇ, **ಕರ್ತೃವೆಂದು**=ಸರ್ವಕರ್ತನೆಂಬುದಾಗಿ, **ಸದಾನುರಾಗದಿ**=ನಿರಂತರ ಅವಿಚ್ಛಿನ್ನವಾದ ಭಕ್ತಿಭಾವದಿಂದ, **ನೆನೆದು**=ಸ್ಮರಿಸುತ್ತಾ, **ಸುಖಿಸುವನೇ**=ಆನಂದ ಪಡುತ್ತಿರುವವನೇ, **ನರೋತ್ತಮನು** ಮನುಷ್ಯೋತ್ತಮನಾದ ಉತ್ತಮಾಧಿಕಾರಿಯಾದ ಸಾತ್ವಿಕಜೀವನು ॥ ೮ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ತ್ರಿವಿಧಜೀವರಿಗೆ ಸ್ವರೂಪಭೂತಕರ್ತೃತ್ವ ಈಶಾಧೀನದಿಂದ ಇದೆ. ಆ ಕರ್ತೃತ್ವದ ಸ್ವಭಾವಗಳ, ಅವನ್ನನುಸರಿಸಿದ ಯೋಗ್ಯತಾಭೇದಗಳ ಹೇಳತಾರೆ.

ತಮೋಯೋಗ್ಯನ ಸ್ವರೂಪಗತ ಅನಾದಿಭೂತವಾದ, ಈಶಾಧೀನವಾದ ಸ್ವಾತಂತ್ರ್ಯಸ್ವಭಾವ ಎಂಥಾದ್ದೆಂದರೆ, ದೇಹೇಂದ್ರಿಯಾದಿಗಳಿಂದ ಏನೇನು ಮಾಡತಕ್ಕ ಪುಣ್ಯಪಾಪಕರ್ಮಗಳ ಸ್ವತಂತ್ರಕರ್ತ ನಾನೇ ಹೊರತು ಈಶನಲ್ಲ, ದೇವರು ಕರ್ತನಲ್ಲ, 'ಅಹಂ ಬ್ರಹ್ಮ' ಎನ್ನತಕ್ಕವ ಮುಕ್ತಿಯೋಗ್ಯ ನಿತ್ಯಸಂಸಾರಿಗಳಿಗಿಂತಲೂ ಅಧಮ. ಇವ ಭಗದ್ವೇಷಿ, ತಮೋಯೋಗ್ಯ. ಇವನ ಅನಾದಿ ಸ್ವರೂಪ ಭೂತ ಕರ್ತೃತ್ವ ಇಂಥಾದ್ದು. ಇದು ಈಶ್ವರನಿಂದ ರಚಿತವಲ್ಲ. ತದ್ಗತ ಪರಮಾತ್ಮ ಅದರಂತೆ ಅಭಿವ್ಯಕ್ತಿ ಮಾಡತಾನೆ. ಈಶ್ವರಾಧೀನವೇ ಇವನ ಕರ್ತೃತ್ವವೂ.

ಪಾಪಕರ್ಮಗಳ ಮಾಡೋದಕ್ಕೆ ಪಾತ್ರ ನಾನು, ಎಂದರೆ, ಈಶ ವ್ಯತಿರಿಕ್ತ ತಾನೇ ಮಾಡೋದಕ್ಕೆ ಸ್ವಾತಂತ್ರ್ಯವುಳ್ಳವನೆಂತಲೂ, ಪುಣ್ಯಕರ್ಮ ಮಾಡೋದಕ್ಕೆ ಸ್ವತಂತ್ರ ತಾನಲ್ಲ, ಅಂಥಾ ಸ್ವಾತಂತ್ರ್ಯ ತನಗಿಲ್ಲ, ಇದಕ್ಕೆ ಈಶ ಸ್ವತಂತ್ರ ಎಂತ, ಈ ಪ್ರಕಾರ ಪುಣ್ಯಕ್ಕೆ ಹರಿ ಸ್ವತಂತ್ರ ಎನತಕ್ಕ ಮನುಷ್ಯನು ಮಧ್ಯಮಾಧಿಕಾರಿಯಾದ ನಿತ್ಯಸಂಸಾರಿ. ಇವನ ಅನಾದಿಸ್ವರೂಪಸ್ವಾತಂತ್ರ್ಯ ಇಂಥಾದ್ದೆ. ಇದೂನೂ ಈಶಾಧೀನವು. ತದ್ಗತ ಪರಮಾತ್ಮ ಅದರಂತೆ ಅಭಿವ್ಯಕ್ತಿ ಮಾಡತಾನೆ. ಇವನ ಸ್ವಾತಂತ್ರ್ಯವೂ ಈಶ್ವರನಿಂದ ರಚಿತವಲ್ಲ.

ದೇಹೇಂದ್ರಿಯಾದಿಗಳಿಂದ ಮಾಡತಕ್ಕ ಪುಣ್ಯ ಪಾಪಕರ್ಮಗಳ ಮಾಡೋದರಲ್ಲಿ ಶ್ರೀಲಕ್ಷ್ಮೀಪತಿಯಾದ ಪರಮಾತ್ಮನೇ ಮಾಡಸತಾನೆಂದು ತಿಳಿದು, ದ್ವಂದ್ವಕರ್ಮಗಳ ಮಾಡೋವಿಷಯದಲ್ಲಿ ನಾವು ಅಸ್ವತಂತ್ರಕರ್ತೃವೆಂದು ತಿಳಿದು, ನಿರಂತರ ಅತಿ ಸ್ನೇಹದಿಂದ ಶ್ರೀಪರಮಾತ್ಮನ ಸದಾ ಧ್ಯಾನೋಪಾಸನ ಮಾಡಿ, ಸುಖಪಡತಕ್ಕವರು ಎಂದರೆ, ಲಿಂಗಭಂಗಾನಂತರ ಸುಖಪಡತಕ್ಕವರು, ಇಂಥಾವರೇ ಮನುಷ್ಯರಲ್ಲಿ ಭಗವದನುಗ್ರಹಕ್ಕೆ ಪಾತ್ರರಾಗಿ ಸದ್ಗತಿ ಐದತಕ್ಕವರು. ಇವರ ಸ್ವರೂಪಭೂತಸ್ವಾತಂತ್ರ್ಯಕರ್ತೃತ್ವ ಇಂಥಾದ್ದೇ, ಇದೂನೂ ಈಶನಿಂದ ರಚಿತವಲ್ಲ. ತದ್ಗತ ಪರಮಾತ್ಮ ಅದರಂತೆ ಪ್ರವರ್ತನ ಮಾಡತಾ ಇರತಾನೆ.

ತ್ರಿವಿಧಜೀವರ ಸ್ವರೂಪಭೂತಸ್ವಾತಂತ್ರ್ಯಕ್ಕೂ ಆ ಜೀವರಿಗೂ ಅಭೇಧ, ತದ್ಗತ ಪರಮಾತ್ಮಗೂ ಆಯಾ ಜೀವರ ಸ್ವಾತಂತ್ರ್ಯಕ್ಕೂ ಭೇದ. ಈ ರೀತ್ಯಾ ಇರೋಣದರಿಂದ ದ್ವಂದ್ವಕರ್ಮ ಅರ್ಪಣ ವಿಷಯದಲ್ಲಿ ಅಧಿಕಾರಿಗಳಿಗೆ ವ್ಯತ್ಯಸ್ತವಾಗಿ ಜ್ಞಾನ ಇರೋದಾಗತದೆ. ಇದಕ್ಕೆ ಇದೇ ಕಾರಣವು ಎಂತ ತಾತ್ಪರ್ಯ ॥ ೮ ॥

## ೨. ಭಾವಪ್ರಕಾಶಿಕೆ

ತಾನು ಮಾಡಿದ ಪುಣ್ಯಪಾಪಗಳನ್ನು ಸ್ವತಂತ್ರದಿಂದ ತಾನೆ ಮಾಡಿದೆನೆಂದು ತಿಳಿದುಕೊಳ್ಳುವವನು ಮನಷ್ಯರಲ್ಲಿ ಅಧಮನು. ಪಾಪಮಾಡುವವನು ನಾನು, ಪುಣ್ಯ ಮಾಡಿಸುವವನು ಪರಮಾತ್ಮನೆಂಬುವನು ಮಧ್ಯಮನು, ಏಕೆಂದರೆ ಸ್ವತಂತ್ರ ಕರ್ತೃತ್ವವು ಜೀವರಿಗೆ ಇಲ್ಲದ ಮೇಲೆ ಪಾಪಗಳನ್ನು ಮಾತ್ರ ಮಾಡುವುದೆಂತು ?

ಆದ್ದರಿಂದ ಪುಣ್ಯ ಮಾಡಲಿ ಪಾಪ ಮಾಡಲಿ ಸಕಲಕ್ಕೂ ಕರ್ತನು ಪರಮಾತ್ಮನೇ ಎಂದು ಎಲ್ಲವನ್ನೂ ಪರಮಾತ್ಮನಿಗೆ ಒಪ್ಪಿಸಿ ಪರಮಾತ್ಮನನ್ನು ಸ್ಮರಿಸುತ್ತ ಸುಖ ಪಡುವವನೇ ಮನುಷ್ಯೋತ್ತಮನು. ॥ ೮ ॥

೩. ಭಾವದರ್ಪಣ

ಅಧಮ, ಮಧ್ಯಮ, ಉತ್ತಮಜೀವರ ಲಕ್ಷಣ ಹೇಳುತ್ತಾರೆ. ಏನು ಮಾಡುವ, ಉಕ್ತಂ ಚ ವಿಜಯದಾಸರಾಜೈಃ। "ನಾನೇ ಸರ್ವಕರ್ತಾ" ಎಂಬುವಾತ ತಾಮಸಿ. ನಾನೇ ಹರಿಯೊಡನೆ ಮಾಳ್ಪನೆಂಬವ ಬದ್ಧಾ ನಾನೇ ಪಾಪಕ್ಕೆ ಕರ್ತಾ ಹರಿ ಪುಣ್ಯಕ್ಕೆ ಎಂದು ಈ ನುಡಿ ನುಡಿದವನು ಸತ್ವಾಗುಣದವನೊ. ನಾನ್ಯಾತಕ್ಕೆ ಸಲ್ಲೇ ಹರಿ ಎನ್ನಿಂದಾಲಿ ತನ್ಮಾತ್ರಗಳಿಂದ ಬಗೆ ಬಗೆ ವೈಷಿಕ ಏನೇನು ಮಾಡಿಸುವ ಮಾಡುವವನಂತೆ ಹೀನಾ ಲೇಸುಗಳಲ್ಲಿ ಹಿತಾಹಿತದಲ್ಲಿ ಮಾಣಾದೇ ಮರಿಯಾದ ಲೆಂದಾವ ನಿರ್ಗುಣನೋ । ಎಂದು ಪರಮ ರಹಸ್ಯವಾದ ಮರ್ಮ ತೋರಿಸಿದ್ದಾರಾದ ಪ್ರಯುಕ್ತ ಈ ಪದ್ಯದಲ್ಲಿ ಮೂರು ವಿಧ ಮಾಡಿ ಸಂಕೋಚವಾಗಿ ಹೇಳಿರುತ್ತಾರೆ. ಸಜ್ಜನರು ಅದನ್ನು ಪರಿಗ್ರಹಿಸಿ ಆಚರಣಕ್ಕೆ ತರತಕ್ಕದ್ದೆಂಬ ತಾತ್ಪರ್ಯ ॥ ೮ ॥

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಕ್ರಿಯಾದ್ವೈತಂ ಸ್ಮಾರಯತಿ—ಯೇನ ಇತಿ ॥ ೮ ॥

ಕನ್ನಡಾರ್ಥ

ಕ್ರಿಯಾದ್ವೈತವೆಂಬುದನ್ನು ನೆನಪಿಸುತ್ತಾರೆ—ಏನು ಎಂಬ ಪದ್ಯದಿಂದ.

ಶ್ರೀಹರಿಯೇ ಸಕಲ ಕರ್ಮಗಳಿಗೆ ಸ್ವತಂತ್ರಕರ್ತೃ, ಅವನ ಪ್ರೇರಣೆ ಇಲ್ಲದೇ ಒಂದು ತೃಣವೂ ಚಲಿಸದು ಅವನ ಪ್ರೇರಣೆಯಿಂದಲೇ ಅವನು ಮಾಡಿ ಮಾಡಿಸಿದಂತೆ ಮಾಡುವೆನು ಸ್ವಲ್ಪವೂ ನಾನು ಸ್ವತಂತ್ರನಲ್ಲ ಎಂದು ತಿಳಿದು ಶ್ರೀಹರಿಯಲ್ಲಿ ಭಕ್ತಿಯಿಂದ ಕರ್ಮಗಳನ್ನರ್ಪಿಸುವವನು ಉತ್ತಮನೆಂದು ಈ ಪದ್ಯದ ಭಾವ.॥೮॥

೫. ಶ್ರೀಗುರುಹೃದಯಪ್ರಕಾಶಿಕೆ

ಪರಮಸಾತ್ತ್ವಿಕರೇ ಸರ್ವಸಮರ್ಪಣೆ ಮಾಡುವರಲ್ಲದೆ ಇತರರಿಗೆ ದೊರಕ ದೆಂದು ತಿಳಿಸುತ್ತಾ ತ್ರಿವಿಧಜೀವರ ಸ್ವಾಭಾವಿಕಮನೋವೃತ್ತಿ ತಿಳಿಸುತ್ತಾರೆ, ಏನು ಎಂದು. ಏನೇನು ಮಾಡುವ ಸಮಸ್ತಕೃತ್ಯಗಳು ನಾನೇ ಸ್ವತಂತ್ರನಾಗಿ ಮಾಡುವೆ ನೆಂದು ತಿಳಿಯುವವನು ಅಧಮನೆಂಬ ತಾಮಸಜೀವನು. ಪಾಪಕರ್ಮ ನಾನೇ ಸ್ವತಂತ್ರ ನಾಗಿ ಮಾಡುವೆನು, ಪುಣ್ಯಕರ್ಮ ಮಾತ್ರ ದೇವರ ಪ್ರೇರಣೆಯಿಂದ ಮಾಡುವೆನೆಂದು ತಿಳಿಯುವ ಜೀವ ಮಧ್ಯಮನೆಂಬ ರಾಜಸನು. ದ್ವಂದ್ವವೆಂಬ ಪುಣ್ಯ ಪಾಪ ಸಕಲ ಕರ್ಮಕ್ಕೂ ಶ್ರೀನಿವಾಸನೇ ಸ್ವತಂತ್ರಕರ್ತ, ನಾನು ಆತನ ಪ್ರೇರಣೆಯಿಂದಲೇ ಮಾಡುವೆನು, ಸ್ವತಂತ್ರನಲ್ಲವೆಂದು ತಿಳಿದರ್ಪಿಸಿ ಭಕ್ತಿಯಿಂದ ಸ್ಮರಿಸುವವನೇ ನರೋತ್ತಮನೆಂಬ ಮಾನುಷೋತ್ತಮನಾದ ಸಾತ್ತ್ವಿಕನು.
**ಪ್ರಮಾಣ— ಸಾತ್ತ್ವಿಕಃ ಕಾರಕೋಽಸಂಗೀರಾಗಾಂಧೊ ರಾಜಸಸ್ಮೃತಃ** ಇತ್ಯಾದಿ ಗೀತಾ ತಾತ್ಪರ್ಯ ವಿವರಿಸಿತು ॥ ೮ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ತಾಮಸ, ರಾಜಸ, ಸತ್ತ್ವಗುಣಯುಕ್ತರಾದ ತ್ರಿವಿಧಜೀವರ ಸ್ವರೂಪ ಯೋಗ್ಯತಾನುಗುಣವಾದ ಕ್ರಿಯಾಭಿವ್ಯಕ್ತಿಯನ್ನು ತಿಳಿಸುತ್ತಾರೆ.

ನಮ್ಮ ಶರೀರಗತ ಇಂದ್ರಿಯಗಳು, ಮಾನಸಿಕ, ಬೌದ್ಧಿಕ ಇತ್ಯಾದಿ ಮಾಧ್ಯ ಮಗಳ ದ್ವಾರಾ ನಡೆಯುತ್ತಿರುವ ಸರ್ವಕರ್ಮಗಳನ್ನೂ, ನಾನೇ ಮಾಡುತ್ತಿರುವೆ ನೆಂದು ತಿಳಿಯುವ ನರನು ಅಧಮನು. ಪಾಪ, ಪುಣ್ಯ, ಮಿಶ್ರಕರ್ಮಗಳಿಗೆಲ್ಲಾ ನಾನೇ ಕರ್ತನೆಂಬುವನು ತಮೋಯೋಗ್ಯ ಜೀವಿಯು.

ಪುಣ್ಯಕಾರ್ಯಗಳನ್ನು ಮಾಡಿಸುವವನು ಶ್ರೀಹರಿ. ಪಾಪಕರ್ಮಗಳಿಗೆ ಮಾತ್ರ ನಾ ಪಾತ್ರನು—ಎಂಬ ಮನೋಭಾವವನ್ನುಳ್ಳ ನರನು ಮಧ್ಯಮನು. ರಜೋಗುಣ ಪ್ರಾಚುರ್ಯವುಳ್ಳ ನಿತ್ಯಸಂಸಾರಿ ಜೀವರುಗಳಿವರು, ಛಿದ್ರ ಭಕ್ತಿ, ಮಿಶ್ರ ಜ್ಞಾನವುಳ್ಳ ರಾಜಸರು,

ಪಾಪಪುಣ್ಯಕರ್ಮಗಳು, ಲಾಭಾಲಾಭಗಳು, ಸುಖದುಃಖಾದಿಗಳು ಇತ್ಯಾದಿ ದ್ವಂದ್ವಕರ್ಮಗಳನ್ನು ಶ್ರೀನಿವಾಸನೇ ಮಾಡಿ ಮಾಡಿಸುತ್ತಿರುವನೆಂಬ ಜ್ಞಾನಾನುಸಂಧಾನವುಳ್ಳವನು ಉತ್ತಮನು. ಮುಕ್ತಿಯೋಗ್ಯರಾದ ಸಾತ್ವಿಕ ಜೀವರು ದ್ವಂದ್ವಗಳಿಗೆ ಶ್ರೀನಿವಾಸನೇ ಕರ್ತೃ ಎಂದು ತಿಳಿದು, ಸರ್ವಕರ್ಮಗಳನ್ನೂ, ಆ ಸರ್ವೇಶನ ಚರಣಾರವಿಂದಗಳಿಗೆ ಅರ್ಪಿಸುವರು.

ಕರ್ಮಪ್ರೇರಕನಾದ ಕಂಜದಳಾಯತಾಕ್ಷನು, ಸತ್ವಗುಣ ಪ್ರೇರಕನಾದಾಗ ಪುಣ್ಯಕರ್ಮಗಳ ಅಭಿವ್ಯಕ್ತಿ, ರಜೋಗುಣಪ್ರಾಚುರ್ಯದಿಂದ ಪುಣ್ಯಪಾಪರೂಪವಾದ ಮಿಶ್ರಕರ್ಮಗಳ ಫಲಾನುಭವ. ತಮೋಗುಣ ಪ್ರಾಚುರ್ಯದ ಕಾರ್ಯವು ಪಾಪಗಳೆಂಬ ದುಷ್ಕರ್ಮಗಳ ಫಲರೂಪದಲ್ಲಿ ಪರ್ಯವಸಾನವಾಗುವುದು. ಈ ತ್ರಿವಿಧ ಕರ್ಮಾಭಿವ್ಯಕ್ತಿಗೆ ಸರ್ವಪ್ರೇರಕವಾದ ಬಿಂಬಕ್ರಿಯೆಯೇ ಮುಖ್ಯಕಾರಣವು ॥ ೮ ॥

XXXX

## ಪದ್ಯ ೯

**ಮೂಲ**

ಈ ಉಪಾಸನೆಗೈವರಿಳೆಯೊಳು ।
ದೇವತೆಗಳಲ್ಲದಲೆ ನರರ ।
ಲ್ಲಾವಬಗೆಯಿಂದಾದರಿವರರ್ಚನೆಯು ಹರಿ ಪೂಜೆ ॥
ಕೇವಲ ಪ್ರತಿಮೆಗಳೆನಿಪರು ರ ।
ಮಾವಿನೋದಗೆ ಇವರನುಗ್ರಹ ।
ವೇ ವರಾನುಗ್ರಹವೆನಿಸುವುದು ಮುಕುತಿ ಯೋಗ್ಯರಿಗೆ ॥ ೯ ॥

**ಅವತರಣಿಕೆ**

ಪೂರ್ವೋಕ್ತ ಉಪಾಸನಾಕ್ರಮದಿಂದ ನಿರಂತರ ಭಗವಧ್ಯಾನದಲ್ಲಿರುವ ಮಹಾಮಹಿಮರು ದೇವತೆಗಳು. ಯಾವ ಪ್ರಕಾರದಿಂದ ನೋಡಿದರೂ ಅವರು

ನರರಲ್ಲ. ಇವರ ಸೇವೆಯೇ ಶ್ರೀಹರಿಯ ಪೂಜೆ. ರಮಾವಿಲಾಸನ ಪ್ರತಿಮೆಗಳ ವರು. ಮುಕ್ತಿಯೋಗ್ಯರಾದ ಸುಚೇತನರಿಗೆ ಅವರ ಅನುಗ್ರಹವೇ ಭಗವದ ನುಗ್ರಹವೆನಿಸುವುದೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಈ ಉಪಾಸನೆ**=ಪೂರ್ವೋಕ್ತ ಪದ್ಯಗಳಲ್ಲಿರುವಂತೆ ದ್ವಂದ್ವಕರ್ಮ ಸಮರ್ಪಣಾಭಾವದಿಂದ ಉಪಾಸನೆಯನ್ನು, **ಗೈವರು**=ಮಾಡತಕ್ಕವರು, **ಇಳೆಯೊಳು**=ಈ ಭೂಮಿಯಲ್ಲಿ, **ದೇವತೆಗಳಲ್ಲದಲೆ**=ದೇವಾಂಶಸಂಭೂತರೇ ವಿನಾ, ಅನ್ಯರಲ್ಲ. **ನರರಲ್ಲ**=ಸಾಮಾನ್ಯ ಮಾನವರಲ್ಲವೇ ಅಲ್ಲ. **ಅವಾವಬಗೆಯಿಂದ**=ಯಾವ ಪ್ರಕಾರದಿಂದಲಾದರೂ, **ಅವರ ಅರ್ಚನೆಯು**=ಅವರ ಅಂತರ್ಗತ ಶ್ರೀಹರಿಯನ್ನು ಸ್ಮರಿಸುತ್ತಾ, ಅವರಿಗೆ ಮಾಡುವ ಅರ್ಚನಾರೂಪವಾದ ಸೇವೆಯು, **ಹರಿಪೂಜೆ**=ಸಾಕ್ಷಾತ್ ಭಗವಂತನ ಪೂಜೆಯೆಂದೆನಿಸುವುದು. **ರಮಾವಿನೋದಗೆ**=ರಮಾವಿಲಾಸಾಸ್ಪದನಾದ ಶ್ರೀರಮಣನಿಗೆ, **ಕೇವಲ ಪ್ರತಿಮೆಗಳೆನಿಪರು**=ಅಂತಹ ಭಕ್ತರು ಅಧಿಷ್ಠಾನ ಭೂತರಾದ ಪ್ರತೀಕಗಳೆಂದು ಕರೆಸುವವರಾಗುತ್ತಾರೆ. (ಅವರೇ ಶ್ರೀಹರಿಯ ನಿಜವಾದ ಚಲಪ್ರತೀಕರು) **ಇವರ ಅನುಗ್ರಹವೇ**=ಅಂತಹ ಭಗವದುಪಾಸಕರ ಅನುಗ್ರಹವೇ, **ಮುಕುತಿಯೋಗ್ಯರಿಗೆ**=ಮುಕ್ತಿಯೋಗ್ಯರಾದ ಸುಜೀವರಿಗೆ, **ವರಾನುಗ್ರಹವೆನಿಸುವುದು**=ಶ್ರೇಷ್ಠವಾದ ಅನುಗ್ರಹವೆಂದೆನಿಸುವುದು ॥ ೬ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ದ್ವಂದ್ವಕರ್ಮಕ್ಕೆ ಕರ್ತೃಗಳೆನತಕ್ಕ ಅಧಿಕಾರಿಗಳ ವಿಚಾರ ಹೇಳತಾರೆ.

ದ್ವಂದ್ವಕರ್ಮಗಳ ಮಾಡತಕ್ಕ ಅಧಿಕಾರಿಯಾದವ, ಶ್ರೀಪರಮಾತ್ಮ ಸರ್ವಕರ್ತನೆಂದು ಈ ರೀತ್ಯಾ ಉಪಾಸನ ಮಾಡತಕ್ಕವರು ಈ ಭೂಮಿಯಲ್ಲಿ ದೇವಾಂಶರೇ ಹೊರತು ಅನ್ಯರಾದ ನಿತ್ಯಸಂಸಾರಿ, ತಮೋಯೋಗ್ಯರಲ್ಲ. ದೇವ

ಶಬ್ದದಿಂದ ಬ್ರಹ್ಮಾದಿ ದೇವತೆಗಳೆಂದು ತಾತ್ಪರ್ಯವಲ್ಲ. ಭೂದೇವತೆಗಳೆಂತಲೂ, ಬ್ರಹ್ಮಜ್ಞಾನಿಗಳೆಂತಲೂ ತಾತ್ಪರ್ಯ. ಸರ್ವಪ್ರಕಾರದಿಂದಲೂ ಇವರ ಅಂತರ್ಗತ ಪರಮಾತ್ಮನ ತಿಳಿದು ಆ ದೇವರಿಗೆ ಪೂಜಾ ಎಂದು ಅನುಸಂಧಾನದಿಂದ ಇಂಥಾ ಭಗವದ್ಭಕ್ತರ ಪೂಜಾನೇ ಪರಮಾತ್ಮನ ಪೂಜಾ ಎಂತ ಕರಸೋದಾಗತದೆ. ರಮಾ ದೇವಿಯರಿಗ್ನೆ ಸಂತೋಷ್ಯಕೊಡತಕ್ಕ ಪರಮಾತ್ಮಗೆ ಅತ್ಯಂತ ಶ್ರೇಷ್ಠವಾದ ಪೂಜಾ ರ್ಹರಾದ ಅಧಿಷ್ಠಾನ ಭೂತರಾದವರೆಂತ ಕರಸೋವರಾಗತಾರೆ. ತದನ್ಯರು ಇಂಥಾ ಪೂಜಾಕ್ಕೆ ಅರ್ಹರಲ್ಲ. ಅಧಿಕಾರಿಯಾದವ ತನಗೆ ನೀಚಾಧಿಷ್ಠಾನದಲ್ಲಿ ಬಾಹ್ಯ ಪೂಜಾದಿಗಳು ಮಾಡಕೂಡದು. ಉತ್ತಮರಲ್ಲಿ ವಿಭೂತಿರೂಪ ಚಿಂತನೆಯಿಂದ ಪೂಜಾ ವಿಶೇಷವೇ ಹೊರತು, ಅನ್ಯವಾದದ್ದು ಅಲ್ಲ. ನೀಚಾಧಿಷ್ಠಾನದಲ್ಲಿ ಮನಸಾ ಪರಮಾತ್ಮನ ವ್ಯಾಪ್ತಿ ತಿಳಿದು ಪೂಜಾ ಮಾಡಬೇಕು. ಬಾಹ್ಯಪೂಜಾ ದಿಂದ ವಿಷಮಫಲ ಪ್ರಾಪ್ತಿ. ಆದಕಡಿಯಿಂದ ಇಂಥಾ ಚಲಪ್ರತಿಮೆಗಳು ಎಂತ ಕರಸತಕ್ಕ ಮುಕ್ತಿಯೋಗ್ಯರಾದ ಭಗವದ್ಭಕ್ತರಿಗೆ, ಇಂಥಾವರ ಅನುಗ್ರಹವೇ ಉತ್ತ ಮವಾದ ಅನುಗ್ರಹ ಎಂತ ಎನಿಸೋದಾಗತದೆ. ಸರ್ವಪ್ರಯತ್ನದಿಂದ ಭಗವ ದ್ಭಕ್ತರ ಅನುಗ್ರಹ ಸಂಪಾದನ ಮಾಡಬೇಕೆಂತ ತಾತ್ಪರ್ಯ ॥ ೯ ॥

## ೨. ಭಾವಪ್ರಕಾಶಿಕೆ

ಸರ್ವಕರ್ತ ಪರಮಾತ್ಮನೆಂದು ಉಪಾಸನೆ ಮಾಡುವವರನ್ನು ಈ ಭೂಮಿ ಯಲ್ಲಿ ದೇವತೆಗಳೆಂದು ತಿಳಿದು ಸರ್ವ ಪ್ರಕಾರದಿಂದಲೂ ಅವರ ಪೂಜೆಯನ್ನು ಮಾಡಿದರೆ ಸಾಕ್ಷಾತ್ತಾಗಿ ಪರಮಾತ್ಮನ ಪೂಜೆ ಮಾಡಿದಂತೆ ಆಗುವುದು ಇವರನ್ನು ಕೇವಲ ಪರಮಾತ್ಮನ ಪ್ರತಿಮೆಗಳೆಂದು ಭಾವಿಸಬೇಕು, ಮುಕ್ತಿಯೋಗ್ಯರು ಇವರ ಅನುಗ್ರಹವನ್ನು ಪಡೆದು ಅದೇ ಪರಮಾತ್ಮನ ಅನುಗ್ರಹವೆಂದು ಭಾವಿಸ ಬೇಕು. ॥ ೯ ॥

## ೩. ಭಾವದರ್ಪಣ

ಈ ಉಪಾಸನೆ ॥ ೯ ॥

೪. ಶ್ರೀವ್ಯಾಸದಾಸಸಿದ್ಧಾಂತಕೌಮುದಿ.

ಈ ಉಪಾಸನೆಯ ಇತಿ ॥ ವಕ್ಷ್ಯತೇ ಚ ಏತತ್ ಸ್ವಾತಂತ್ರ್ಯ ಸಂಧ್ಯಾ ॥ ಕೇವಲ—ಜಡಾದಪಿ ಉತ್ತಮ ॥ ೯ ॥

ಕನ್ನಡಾರ್ಥ

ಈ ಉಪಾಸನೆಯನ್ನು—ಕ್ರಿಯಾದ್ವೈತವನ್ನು ಅನುಷ್ಠಾನ ಮಾಡುವವರು ದೇವತೆಗಳು ಈ ಮುಂತಾದ ವಿಷಯಗಳನ್ನು ಸ್ವಾತಂತ್ರ್ಯಸಂಧಿಯಲ್ಲಿ ಮುಂದೆ ಹೇಳಲಾಗುತ್ತದೆ. ಕೇವಲ ಪ್ರತಿಮೆ ಎಂದರೆ ಜಡ ಹಾಗೂ ಅಜ್ಞರುಗಳಿಗಿಂತಲೂ ಉತ್ತಮರೂ ಮುಖ್ಯರೂ ಆದ ಪ್ರತಿಮೆಗಳು ಎಂದು ಅರ್ಥ ಮಾಡಬೇಕು ॥೯॥

೫. ಶ್ರೀಗುರುಹೃದಯಪ್ರಕಾಶಿಕೆ

ಮುಖ್ಯ ಸಾತ್ತ್ವಿಕರು ದೇವತೆಗಳೆಂದು ತಿಳಿಸುತ್ತಾರೆ, ಈ ಉಪಾಸನೆ ಎಂದು.

ಮೇಲೆ ಹೇಳಿದ ಸರ್ವಸಮರ್ಪಣೆ ಮಾಡುವರು ಮುಖ್ಯದೇವತೆಗಳೇ ಹೊರ್ತು ಮನುಷ್ಯರಲ್ಲ. ಆದ್ದರಿಂದ ಅವರ ಪೂಜೆ ಯಾವ ಬಗೆಯಿಂದಾದರೂ ಅಂದರೆ ಮನೋವಾಕ್ಕಾಯವೆಂಬ ಯಾವ ವಿಧದಿಂದಲಾದರೂ ಅವರಿಗೆ ಸಂತೋಷ ಪಡಿಸುವುದೇ ಶ್ರೀಹರಿ ಅರ್ಚನೆ. ಈ ದೇವತೆಗಳು ರಮಾವಿನೋದಿಯಾದ ದೇವರಿಗೆ ಕೇವಲ ಪ್ರತಿಮೆ ಎಂದರೆ, ಮುಖ್ಯಾಧಿಷ್ಠಾನವಾದ್ದರಿಂದ ಪ್ರತಿಮಾರ್ಚನೆ ದೇವತಾರ್ಚನೆಯಾದಂತೆ, ಅಧಿಷ್ಠಾನಪೂಜೆ ಅಧಿಷ್ಠೇಯ ದೇವರಿಗೆ ಸೇರುವುದೆಂದು ಅರ್ಥ, ಹೀಗೆ ದೇವತೆಗಳ ಅನುಗ್ರಹವು ಮುಕ್ತಿಯೋಗ್ಯರಾದವರಿಗೆ ದೇವರನು ಗ್ರಹವೆಂದೆನಿಸುವುದು ಇದರಿಂದ,

**ಯಸ್ತಾನ್ ದ್ವೇಷ್ಟಿ ಸಮಾಂದ್ವೇಷ್ಟಿಯಸ್ತಾನನು ಸಮಾಮನು**

ಎಂಬ ಭಾರತಾರ್ಥವು ವಿವರಿಸಲ್ಪಟ್ಟಿತು ॥ ೯ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸಾಧನ ಶರೀರವೆಂದೆನಿಪ ಈ ಸ್ಥೂಲಶರೀರಗತ ಸಕಲ ಅವಯವಗಳ ದ್ವಾರಾ ನಡೆಯುತ್ತಿರುವ ಮಾನಸಿಕ, ಬೌದ್ಧಿಕ, ದೈಶಿಕ, ಕಾಲಿಕವಾದ ಸಮಸ್ತ ವ್ಯಾಪಾರವಿಶೇಷಗಳಿಗೂ ಮುಖ್ಯವಾಗಿ ಶ್ರೀಹರಿಯೇ ಕರ್ತನು. ಜೀವನು ಅಸ್ವತಂತ್ರನು. ಅವನ ಕರ್ತೃತ್ವ ಶಕ್ತಿಯು ಭಗವದಧೀನವಾದದ್ದು, ಎಂಬ ಉತ್ತಮ ಅನುಸಂಧಾನಭಾವದಿಂದ ಭಗವದುಪಾಸನೆ ಮಾಡುತ್ತಿರುವವರು ಈ ಭೂಮಿಯಲ್ಲಿ ದೇವತೆಗಳೇ ಹೊರತು ಅನ್ಯರಲ್ಲ.

ದೇವತೆಗಳೇ ಎಂದರೆ ದೇವತೆಗಳೆಂದೂ, ಉಪಲಕ್ಷಣಯಾ ಸರ್ವ ಮುಕ್ತಿಯೋಗ್ಯಜೀವರೆಂದೂ ಗ್ರಹಿಸಬೇಕು, ನಿತ್ಯಸಂಸಾರಿಗಳ ಹಾಗೂ ಅಹಂಕರ್ತತ್ವಾಭಿಮಾನವುಳ್ಳ ತಮೋಯೋಗ್ಯರ ವರ್ಗಕ್ಕೆ ಸೇರಿದವರಲ್ಲ.

ಅಂತಹ ಭಗವದುಪಾಸಕರ ದರ್ಶನ ಭಾಗ್ಯ, ಸಂಸರ್ಗ, ಸಮಾಗಮ ಸೇವಾರೂಪವಾದ ಪ್ರತಿಕ್ರಿಯೆಗಳೆಲ್ಲವೂ ಹರಿಪೂಜೆ ಎನಿಸುವವು, ಅವರೇ ಭೂಮಿಯಲ್ಲಿ ಸಂಚರಿಸುತ್ತಿರುವ ಶ್ರೀಹರಿಯ ಚಲಪ್ರತೀಕಗಳು.

"ಚಲಪ್ರತೀಕಗಳನರ್ಚಿಸದೆ ಮಲ ತಿನ್ನುವಿಯಲ್ಲೋ ಪ್ರಾಣಿ"

ಎಂದು ಶ್ರೀಜಗನ್ನಾಥದಾಸರ ಶಿಷ್ಯರಾದ ಶ್ರೀಪ್ರಾಣೇಶದಾಸವರ್ಯರು ಹೇಳಿದ್ದಾರೆ. ॥ ೯ ॥

## ಪದ್ಯ ೧೦

**ಮೂಲ**

**ತನುವೆ ನಾನೆಂಬುವನು ಸತಿಸುತ ।**
**ಮನ ಧನಾದಿಗಳೆನ್ನದೆಂಬುವ ।**
**ದ್ಯುನದಿ ಮೊದಲಾದುದಕಗಳೆ ಸತ್ತೀರ್ಥವೆಂಬುವನು ॥**
**ಅನಲ ಲೋಹಾದಿ ಪ್ರತೀಕಾ ।**
**ರ್ಚನವೆ ದೇವರಪೂಜೆ ಸುಜನರೆ ।**
**ಮನುಜರಹುದೆಂಬುವನು ಗೋಖರನೆನಿಪ ಬುಧರಿಂದ ॥ ೧೦ ॥**

**ಅವತರಣಿಕೆ**

ಬ್ರಹ್ಮಜ್ಞಾನಿಗಳಾದ ಸಚ್ಚೇತನರನ್ನು ಕೇವಲ ನರರೆಂದು ಬಗೆಯುವ ಮಾನವನು ಗೋವು, ಕತ್ತೆ ಇತ್ಯಾದಿ ಪಶುಸಮಾನನೆಂದು ಜ್ಞಾನಿಗಳಿಂದ ಕರೆಸಿ ಕೊಳ್ಳುತ್ತಾನೆಂದು ತಿಳಿಸುತ್ತಾರೆ. ॥ ೧೦ ॥

**ಪ್ರತಿಪದಾರ್ಥ**

**ತನುವೆ** = ಪಂಚಭೂತಗಳಿಂದ ನಿರ್ಮಿತವಾದ, ನಶ್ವರವಾದ ಈ ಸ್ಥೂಲ ಶರೀರವೇ, **ನಾನೆಂಬುವನು** = ಜೀವಾಖ್ಯನಾದ ಚೇತನನು ಎಂದು ಹೇಳುವ (ಜಡಜೀವ ಭೇಧವನ್ನು ಮರೆತು), **ಸತಿ** = ಕೈಹಿಡಿದ ಪತ್ನಿ, **ಸುತ** = ತನ್ನಿಂದ ಜನಿಸಿದ ಮಕ್ಕಳು, **ಮನೆ** = ಸ್ವಯಾರ್ಜಿತ ಅಥವಾ ಪಿತ್ರಾರ್ಜಿತವಾದ ಗೃಹ, **ಧನಾದಿಗಳು** = ಆಸ್ತಿ ರೂಪವಾದ ಹಣ ಅಥವಾ ಸಂಪಾದಿತ ದ್ರವ್ಯಾದಿಗಳು, **ಎನ್ನದೆಂಬುವ** = ಅಹಂ ಕರ್ತೃತ್ವಾಭಿಮಾನದಿಂದ ನನ್ನದೇ ಎಂದು ತಿಳಿದಿರುವ, **ದ್ಯುನದಿ** = ದೇವನದಿಯಾದ ಗಂಗಾ, **ಮೊದಲಾದ ಉದಕಗಳೆ** = ಇವೇ ಮೊದಲಾದ ನದೀರೂಪದಲ್ಲಿರುವ ಜಡವಾದ ನೀರು, **ಸತ್ತೀರ್ಥನೆಂಬುವನು** = ಸಮೀಚೀನವಾದ ಪವಿತ್ರತೀರ್ಥಗಳೆಂದು ಹೇಳುವ, **ಅನಲ** = ಅಗ್ನಿ ಸಂಬಂಧವಾದ (ಯೋಗಾಗ್ನಿ ಇತ್ಯಾದಿ) **ಲೋಹಾದಿ** = ಬಂಗಾರ, ಬೆಳ್ಳಿ, ತಾಮ್ರ, ಪಂಚಲೋಹಾದಿಗಳಿಂದ ನಿರ್ಮಿತವಾದ, **ಪ್ರತೀಕಾರ್ಚನವೆ** = ಪ್ರತಿಮೆಗಳ ಪೂಜೆಯೇ **ದೇವರ ಪೂಜೆ** = ಸಾಕ್ಷಾತ್‌ಪರಮಾತ್ಮನ ಪೂಜೆ ಎಂದರಿತಿರುವ, **ಸುಜನರೆ** = ಭಗವದುಪಾಸಕರಾದ, ಬ್ರಹ್ಮಜ್ಞಾನಿಗಳು, **ಮನುಜರಹುದೆಂಬುವನು** = ಕೇವಲ ಸಾಧಾರಣನಾದ ಮಾನವರು ಎಂಬುವನು, **ಬುಧರಿಂದ** = ಜ್ಞಾನಿಗಳಿಂದ, **ಗೋಖರನೆನಿಪ** = ಗೋವು, ಕತ್ತೆ ಇತ್ಯಾದಿ ಪಶುಸಮಾನನು ಎಂದೆನಿಸಿಕೊಳ್ಳುವನು. ॥ ೧೦ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅಂತರ್ಗತ ಪರಮಾತ್ಮನ ತಿಳಿಯದೆ, ಬಾಹ್ಯ ಅಧಿಷ್ಠಾನಗಳನ್ನು ಶ್ಲಾಘನ ಮಾಡತಕ್ಕವ ಎಂಥಾವನೆಂದರೆ, ಅವನ ವಿಚಾರ ಹೇಳತಾರೆ.

ಈ ಪಾಂಚಭೌತಿಕಶರೀರವನ್ನ ಕಂಡು, ನನ್ನ ಶರೀರವೇ ನಾನು ಎಂತ ಅನತಕ್ಕದ್ದು ಜೀವನ ಚಿದ್ದೇಹಕ್ಕೆ ಕೂಡತದೆ, ಸ್ಥೂಲದೇಹಕ್ಕೆ ಕೂಡೋದಿಲ್ಲ. ಅಚೇತನ ಸ್ಥೂಲದೇಹವನ್ನು ಕಂಡು, ಅಹಂಜ್ಞಾನವಿಶಿಷ್ಟನಾಗಿ ಸ್ವತಂತ್ರಾರೋಪಿತ ಬುದ್ಧಿಯಿಂದ, ಹೆಂಡತಿ ಪುತ್ರರು ಮನೆ ದ್ರವ್ಯಾದಿಗಳು ನನ್ನದೆಂದು ಅನತಕ್ಕವ, ಭಾಗೀರಥೀ ಮೊದಲಾದ ನದ್ಯಸ್ಥ ಜಡೋದಕಗಳೇ ಸಮೀಚಿನವಾಗಿ ಪವಿತ್ರ ಮಾಡತಕ್ಕ ತೀರ್ಥಗಳು ಎಂಬುವನು ಎಂದರೆ, ಜಲರೂಪವಾದ ತೀರ್ಥಾಭಿಮಾನಿದೇವತೆಗಳು, ಅವರ ಅಂತರ್ಗತನಾಗಿ ಪರಮಾತ್ಮ ಇದ್ದು ಪವಿತ್ರ ಮಾಡತಾನೆ ಎಂತ ತಿಳಿಯದೆ, ಜಡೋದಕಗಳೇ ಪವಿತ್ರ ಮಾಡತಕ್ಕ ತೀರ್ಥಗಳು ಎಂತ ಅನತಕ್ಕವನು, ಮತ್ತು ಪರಿದೃಶ್ಯಮಾನ ಅಗ್ನಿ ತಥಾ ಯೋಗಾಗ್ನಿ, ಸ್ವರ್ಣ ತಾಮ್ರ ಶಿಲಾದಿಗಳಿಂದ ನಿರ್ಮಿತವಾದ, ವಿಷ್ಣು ವಾಯು ಲಿಂಗಾಕಾರದಿಂದ ಸಹಿತವಾದ ಪ್ರತಿಮೆಗಳ ಪೂಜೆಯು ಅಂದರೆ, ಅಂತರ್ಗತ ಪರಮಾತ್ಮನ್ನ ಪ್ರತೀಕದಲ್ಲಿ ತಿಳಿಯದೆ, ಪರಿದೃಶ್ಯಮಾನ ಪ್ರತಿಮೆಗಳೇ ಸಾಕ್ಷಾತ್ ಪರಮಾತ್ಮನೆಂದು ಪೂಜೆ ಮಾಡೋಣವೂ, ಇಂಥಾ ಪೂಜೆಯು, ಭಗವತ್ ಭಕ್ತರಾಗಿರುವ ಜ್ಞಾನಿಗಳನ್ನು ಸಾಧಾರಣವಾಗಿ ಅವರೂನೂ ತನ್ನಂತೆ ಅವರೂನೂ ಮನಷ್ಯರೆಂಬುವನು ಇಂಥಾವನನ್ನು ಜ್ಞಾನಿಗಳು ಏನಂತಾರೆಂದರೆ, ಭೂಮಿಯಲ್ಲಿ ಕತ್ತೆ ಜನಿಸಿದೋಪಾದಿಯಲ್ಲಿ ಹುಟ್ಟಿ, ಜ್ಞಾನಶೂನ್ಯನಾಗಿ ದ್ವಿಪಾದಯುಕ್ತ ಪಶು ಎಂತ ಕರಸಿಕೊಂಬೋವನಾಗತಾನೆ. ಮುಖ್ಯವಾಗಿ ನೀಚನೆಂದು ತಾತ್ಪರ್ಯ.

**ತಾತ್ಪರ್ಯ—ಪ್ರಮಾಣ**

**ಯಸ್ಯಾತ್ಮ ಬುದ್ಧಿಃ ಕುಣಪೇ ತ್ರಿಧಾತುಕೇ ಸ್ವಧೀಃ ಕಳತ್ರಾದಿಷು ಭೌಮ ಇಜ್ಯಧೀಃ ।**
**ಯತ್ತೀರ್ಥಬುದ್ಧಿಶ್ಚ ಜಲೇ ನ ಕರ್ಹಿ ಚಿಜ್ಜನೇಷ್ವಭಿಜ್ಞೇಷು ಸ ಏವ ಗೋಖರಃ ॥**

ಎಂತ **ಭಾಗವತೋಕ್ತಿ ಪ್ರಮಾಣ** ಇರುವುದರಿಂದ ಅಂತರ್ಗತ ಪರಮಾತ್ಮನ ಉಪಾಸನ ಮಾಡಬೇಕೆಂತ ತಾತ್ಪರ್ಯ ॥ ೧೦ ॥

## ೨. ಭಾವಪ್ರಕಾಶಿಕೆ

ದೇಹವು ಅನಿತ್ಯವಾದುದು, ಜಡವು. ಜೀವನು ನಿತ್ಯನು, ಚೇತನನು, ಹುಟ್ಟುವುದು, ಬೆಳೆಯುವುದು, ವಿಕಾರ ಹೊಂದುವುದು, ಸಾಯುವುದು, ಸ್ಥೂಲವಾಗಿರುವುದು, ಕೃಶವಾಗಿರುವುದು, ಇವೇ ಮೊದಲಾದ ವಿಕಾರಗಳೆಲ್ಲವೂ 'ದೇಹಸ್ಯೈವ ನ ಚಾತ್ಮನಃ' ಎಂದು ಹೇಳುವುದೆಲ್ಲಾ ದೇಹಕ್ಕೆ ಸೇರಿದುದೇ ಹೊರತು ಜೀವನಿಗಲ್ಲ. ದೇಹವನ್ನೇ ತಾನು ಎಂದು ಅಭಿಮಾನವನ್ನಿಟ್ಟುಕೊಂಡು ಇರವುದರಿಂದಲೂ ಅಂತಹ ದೇಹ ಸಂಬಂಧ ಜೀವನಿಗೆ ಇರುವುದರಿಂದಲೂ ದೇಹದ ಛೇದ ಭೇದಾದಿಗಳಿಂದಲೂ ಜನನ ಮರಣಾದಿಗಳಿಂದಲೂ, ಉಂಟಾಗುವ ದುಃಖಾದಿಗಳು ಮಾತ್ರ ಸಂಬಂಧ ಆಗುವವು. ಜೀವನು ಹುಟ್ಟುವವನೂ ಅಲ್ಲ, ಬೆಳೆಯುವವನೂ ಅಲ್ಲ. ಸಾಯುವವನೂ ಅಲ್ಲ. ಜಡವಾದ ದೇಹ ಸಂಬಂಧದಿಂದಾಗುವ ಸುಖದುಃಖಗಳಿಗೆ ಮಾತ್ರವೇ ಬಾಧ್ಯನಾಗಿರುವನು. ಘಟವು ಚೆನ್ನಾಗಿರುವವರೆಗೂ ಅದರೊಳಗೆ ಆಕಾಶವು ತದಾಕಾರವಾಗಿ ಅಲ್ಲಿ ಕಾಣುವುದು. 'ಘಟೇ ಭಿನ್ನೇ ಯಥಾಕಾಶ ಆಕಾಶಾದ್ಯಥಾ ಪುರಾ' ಎಂಬ ಭಾಗವತ ದ್ವಾದಶ ಸ್ಕಂಧದ ವಾಕ್ಯದಂತೆ ಘಟಭಿನ್ನವಾದರೆ ಆಕಾಶವು ಪೂರ್ವದಂತೆ ಆಕಾಶವಾಗಿಯೇ ಇರುವುದು. ಅಂದರೆ ಘಟನಾಶವಾಗುವುದೇ ಹೊರತು ಆಕಾಶವು ನಾಶಹೊಂದುವುದಿಲ್ಲ. ಹಾಗೆಯೇ ದೇಹವು ನಷ್ಟವಾದರೂ ಜೀವನು ಇದ್ದೇ ಇರುವನು. ಹೀಗಿರಲು ಜೀವನಿಗೂ ದೇಹಕ್ಕೂ ಇರುವ ಭೇದವನ್ನರಿಯದೆ ತಾನೇ ದೇಹ ಅಂದರೆ ದೇಹವೇ ಆತ್ಮ (ಜೀವ) ಅನ್ನುವುದು ಭ್ರಾಂತಿಯೇ ಹೊರತು ಮತ್ತೇನೂ ಅಲ್ಲ. ಭಾಗವತ ಏಕಾದಶಸ್ಕಂಧ ೨೨ನೆಯ ಅಧ್ಯಾಯ ಶ್ಲೋಕ ೪೫ 'ಆದ್ಯಃ ಸ್ವಕರ್ಮ ಬೀಜೇನ ಜಾಯತೇ ಸೋಽವ್ಯಯ್ಯಃ ಪುಮಾನ್ ॥ ಮ್ರಿಯತೇ ಚಾಮರೋಭ್ರಾಂತ್ಯಾ ಯಥಾಗ್ನಿರ್ದಾರು ಸಂಯುತಃ' ವಿಜಯಧ್ವಜೀಯ ವ್ಯಾಖ್ಯಾನ 'ನನುದೇಹಸ್ಯೈವ ವಿಕಾರಶ್ಚೇದಹಂ ಜಾತೋಽಹಂ ಮೃತ ಇತಿ ಪ್ರತೀತಿಃ ಕಥಮತ್ರಾಹ ॥ ವಿಕಾರಗಳು ದೇಹಕ್ಕೇ ಹೊರತು ಜೀವನಿಗಲ್ಲ ಎಂದಮೇಲೆ ನಾನು ಹುಟ್ಟಿದೆನು, ನಾನು ಮೃತನಾಗುವೆನು ಎಂಬ ಪ್ರತೀತಿಯು ಹೇಗೆ ಎಂದರೆ ಹೇಳುತ್ತಾರೆ. ಆದ್ಯಪೆಂದ–ಆದ್ಯಃ, ಉತ್ಪತ್ತಿ ರಹಿತಃ = ಜೀವನು ಆದ್ಯನು (ಮೊದಲಿಂದಲೂ ಇರುವವನು) ಉತ್ಪತ್ತಿ ಇಲ್ಲದವನು. ಅಮರಃ 'ಮರಣ ರಹಿತಃ' ಆದ್ಯಂತ ಶೂನ್ಯ ಇತ್ಯರ್ಥಃ ಮರಣ

ರಹಿತನು. ಮೊದಲು ಕೊನೆ ಇಲ್ಲದವನೆಂದರ್ಥ. ಅವ್ಯಯಃ ಶರೀರ ಬರುವುದ ರಿಂದಲೂ ಹೋಗುವುದರಿಂದಲೂ ಸಹ ವೃದ್ಧಿ-ಕ್ಷಯಾದಿಗಳು ಇಲ್ಲದೆ ಇರುವವನು ಜೀವನು. ತಾನು ಮಾಡಿದ ಕರ್ಮಬೀಜದಿಂದ ಹುಟ್ಟಿದನು ಸತ್ತನು ಎಂಬ ವ್ಯಾವಹಾರವು ಭ್ರಾಂತಿಯಿಂದ, ಅಂದರೆ ವಿವೇಕಜ್ಞಾನವಿಲ್ಲದೆ ಬಂದಿರುವುದು. ಹೇಗೆ ಅಗ್ನಿಗೆ ಉತ್ಪತ್ತಿ ನಾಶವಿಲ್ಲದಿದ್ದರೂ ಕಾಷ್ಠವನ್ನು ಮಥನಮಾಡಲು ಅಗ್ನಿ ಹುಟ್ಟಿತೆಂತಲೂ, ಕಟ್ಟಿಗೆಯು ಇಲ್ಲದಿದ್ದರೆ ಅಗ್ನಿ ನಾಶವಾಯಿತೆಂತಲೂ ಹೇಳುವರೋ ಹಾಗೆ ಜನನ ಮರಣಶೂನ್ಯನಾದ ಜೀವನಿಗೆ ಅವಿವೇಕದಿಂದ ಜನನ ಮರಣಗಳನ್ನು ಕಲ್ಪಿಸುವರು.

'ಸಚಾಯಮಿತಿ ತು ಜ್ಞಾನಂ ನಮ್ಯಾಷಾಯು ಸ ಏವ ತು॥ ಇತಿ ಜ್ಞಾನಂ ಮೃಷೈವಸ್ಮಾತ್ ಭೇದಾ ಭೇದೌ ಯತಸ್ತನೋಃ ॥ ಅಭೇದ ಏವ ಜೀವಸ್ಯ ನಿತ್ಯಂ ಪ್ರತ್ಯೇಕಶಃ ಪೃಥಕ್ ॥ ದೇಹ ದೀಪ ನದೀವಾರಿ ಫಲಾದೀನಾಂ ಪೃಥಕ್ತ್ವತಃ ॥ ಭೇದಾಭೇದೌ ಪರಿಜ್ಞೇಯೌ ಕಾರ್ಯ ಕಾರಣಯೋರಪಿ ॥ ಗುಣಸ್ಯ ಗುಣನಶ್ಚೈವ ಜಾತಿ ವ್ಯಕ್ತ್ಯೋಸ್ತಥೈವ ಚ' ಕಾಲಸಂಬಂಧದಿಂದ ಬಾಲ್ಯ ಕೌಮಾರ ಯೌವನಾದಿಗಳಿಂದ ಶರೀರಕ್ಕೆ ವಿಕಾರ ಬಂದರೂ ಶಿಶುವಾಗಿ ಹುಟ್ಟುವಾಗ ಯಾವ ಶರೀರವಿದ್ದಿತೋ ಅದೇ ಶರೀರವು ಇದು ಎಂದು ಹೇಳುವುದು ಸುಳ್ಳಲ್ಲ. ಸತ್ಯವೇ ಸರಿ. ಮಗುವಾಗಿದ್ದ ಶರೀರವೇ ಬೆಳೆಯುತ್ತಾ ಬಂದು ವಿಕಾರ ಹೊಂದಿದುದರಿಂದ ಆ ಶರೀರದಲ್ಲಿ ಅಭೇದವನ್ನು ಹೇಳುವುದು ನ್ಯಾಯವು ಅಯಮೇವ ಸಃ ಆ ದೇಹವೇ ಇವನು ಅಂದರೆ ಈ ಜೀವನು ಎಂದು ಹೇಳುವುದು ಸುಳ್ಳು.

ಜೀವನಿಗೂ ದೇಹಕ್ಕೂ ಭೇದವಿರುವುದರಿಂದ ಅಲ್ಲಿ ಅಭೇದವನ್ನು ಹೇಳಲು ಆಗುವುದಿಲ್ಲ. ಮೊದಲು ಮನುಷ್ಯ ದೇಹದಲ್ಲಿ ಹುಟ್ಟಿದ್ದ ಜೀವನೇ ಆ ಜನ್ಮವನ್ನು ಬಿಟ್ಟು ನಾಯಿಯಾಗಿ ಹುಟ್ಟಿರಬಹುದು. ದೇಹವು ಮಾತ್ರ ಬಾಲ್ಯ ಯೌವನಾದಿ ಅವಸ್ಥೆಗಳಲ್ಲಿ ವಿಕಾರ ಹೊಂದಿದರೂ ಶರೀರವು ಬೇರೆ ಆಗಲಿಲ್ಲ. ಆ ಶರೀರವನ್ನು ಬಿಟ್ಟು ಜೀವನಿಗೆ ಬೇರೆ ಶರೀರ ಬಂದರೆ ದೇಹಗಳಲ್ಲಿ ಒಂದೊಂದಕ್ಕೆ ಭೇದ ಉಂಟು ಜೀವನು ಅವನೆ. ಈ ವಿಷಯದಲ್ಲಿ ಕೆಲವು ದೃಷ್ಟಾಂತವನ್ನು ಹೇಳುತ್ತಾರೆ.

ಹೀಗೆ ಭೇದಾಭೇದಗಳಿಂದ ಕೂಡಿರುವುದು ದೇಹ ಒಂದೇ ಅಲ್ಲ. ದೇಹ, ದೀಪ, ನದೀಉದಕ, ಫಲಾದಿಗಳು ಇವೆಲ್ಲವೂ ಭೇದಾಭೇದಗಳಿಂದ ಕೂಡಿರುವುವು. ಒಬ್ಬ ಮನುಷ್ಯನೋ ಮೃಗವೋ ಯಾವ ದೇಹವನ್ನು ನೋಡಿದರೂ ಇವನು ಮನುಷ್ಯನು ಇದು ಮೃಗವು ಎಂದು ಹೇಳವರು. ಆದರೆ ಆ ಮನುಷ್ಯನೇ ಇವನಲ್ಲ. ಇವನು ಬೇರೆ ಅವನು ಬೇರೆ ಎಂದು ರೂಪಾದಿಗಳಿಂದಲೂ, ಗುಣಗಳಿಂದಲೂ, ಭೇದಗಳನ್ನು ಕಾಣುವರು. ಇವನೂ ಮನುಷ್ಯ ಅವನೂ ಮನುಷ್ಯ ಸಾಬುವ ವಿಷಯದಲ್ಲಿ ಭೇದವಿಲ್ಲ. ಆದರೂ ರೂಪಗುಣಾದಿಗಳಿಂದ ದೇಹ ದೇಹಕ್ಕೂ ಪರಸ್ಪರ ಭೇದವುಂಟು. ಇದರಂತೆ ದೀಪದಲ್ಲಿ ಇದೂ ದೀಪ, ಅದೂ ದೀಪವೆ, ಆದರೆ ಇಷ್ಟು ಹೊತ್ತೂ ಉರಿಯುತ್ತಿದ್ದ ದೀಪವು ಇದಲ್ಲ. ಇದು ಬೇರೆ ಎಂದು ಹೇಳುವರು. ಗಂಗಾ ಮೊದಲಾದ ನದಿಯ ನೀರು ಹೊಸ ಪ್ರವಾಹ ಬಂದಾಗ ಗಂಗಾಜಲವೆಂಬ ಹೆಸರಿದ್ದರೂ, ಇಷ್ಟುದಿವಸದ ನೀರು ಇದಲ್ಲ ಇದು ಹೊಸನೀರು ಎನ್ನುವರು. ಹಣ್ಣುಗಳಲ್ಲಿ ಇದೂ ಮಾವಿನ ಹಣ್ಣೆ. ಆದರೆ ನಾನು ತಿಂದ ಹಣ್ಣು ಇದಲ್ಲ. ಹೀಗೆ ಇವುಗಳಿಗೆ ಭೇದಾಭೇದ ವ್ಯವಹಾರಜ್ಞಾನವು ಏರ್ಪಡುವುದು ಇದರಂತೆ ಈ ಕಾರ್ಯ ಕಾರಣ ವಸ್ತುಗಳಿಗೂ, ಗುಣಗುಣಿಗಳಿಗೂ ಭೇದಾಭೇದಗಳನ್ನು ಒಪ್ಪಿಕೊಳ್ಳಲೇ ಬೇಕು.

ಈ ಘಟವು ಮಣ್ಣಿನಿಂದಲೆ ಮಾಡಲ್ಪಟ್ಟು ಮಣ್ಣೇ ಘಟವಾಗಿದ್ದರೂ ಇದು ಮಣ್ಣಲ್ಲ. ಇದು ಘಟ ಎನ್ನುವರು ಇದರಂತೆ ತಂದೆಯಿಂದಲೇ ಮಗನು ಹುಟ್ಟಿದರೂ ಅವನೇ ಇವನಲ್ಲ ಎಂದು ಸಿದ್ಧವಾಗುವುದು. ಗುಣವೆಂದರೇನು ? ಗುಣಿಯೆಂದರೇನು? ಜನನ ಮರಣಾದಿಗಳೇ ಗುಣಗಳು. ಅವುಗಳಿಂದ ಯುಕ್ತವಾದುದು ಗುಣಿ, ಅಂದರೆ ದೇಹವು. ಅಂದರೆ ಜನನ ಮರಣಾದಿಗಳೇ ದೇಹವಲ್ಲ. ಜನನ ಮರಣಾದಿಗಳಿಂದ ಕೂಡಿದುದು ದೇಹವೆಂದರ್ಥ. ಇವುಗಳಿಗೆ ಪರಸ್ಪರ ಭೇದಗಳುಂಟು ಆದ್ದರಿಂದ ಜೀವನೇ ದೇಹವೆಂದು ಹೇಳಲು ಆಗುವುದಿಲ್ಲ. ಭಾಗವತ ಮೂಲ ಶ್ಲೋಕ ೪೬ 'ನಿಷೇಕ ಗರ್ಭ ಜನ್ಮಾನಿ ಬಾಲ್ಯ ಕೌಮಾರ ಯೌವನಂ ॥ ವಯೋಮಧ್ಯಂ ಜರಾಮೃತ್ಯುರಿತ್ಯವಸ್ಥಾ ತನೋರ್ನವ' ಸ್ತ್ರೀ ಉದರ ಪ್ರವೇಶ, ಗರ್ಭದಲ್ಲಿ ವೃದ್ಧಿ ಹೊಂದುವಿಕೆ, ಹುಟ್ಟುವಿಕೆ, ಮಗುವಾಗಿರುವಿಕೆ, ಬಾಲ್ಯ ಯೌವನ, ಮಧ್ಯವಯಸ್ಸು, ಮುದುಕನಾಗುವಿಕೆ, ಸಾಯುವಿಕೆ ಎಂಬ ಒಂಬತ್ತು ಅವಸ್ಥೆಗಳು

ಶರೀರಕ್ಕೇ ಹೊರತು ಜೀವನಿಗಲ್ಲ. ಇತ್ಯಾದಿ ಪ್ರಮಾಣ ಬಲದಿಂದ ಜೀವನಿಗೂ ದೇಹಕ್ಕೂ ಭೇದ ಇದ್ದರೂ ಜೀವನೇ ದೇಹವೆಂದು ತಿಳಿದವನು ಕರ್ತೃಯೇ ಸರಿ. ಮತ್ತು ಹೆಂಡತಿ ಮಕ್ಕಳು ನನ್ನವರು ಎಂಬುವರನ್ನು ಕರ್ತೃಯೆಂದೇ ಹೇಳಬೇಕು. ಹೇಗೆಂದರೆ–ಜೀವನಿಗೆ ಹೆಂಡತಿಯಾಗಲೀ ಮಕ್ಕಳಾಗಲೀ ತಂದೆತಾಯಿ ಮೊದಲಾದ ಯಾವ ಸಂಬಂಧವೂ ಇಲ್ಲ. ದೇಹ ಸಂಬಂಧದಿಂದ ತಾಯಿ ತಂದೆ ಗಂಡ ಹೆಂಡತಿ ಮಕ್ಕಳು ಮೊದಲಾದವು ಯಾವ ಸಂಬಂಧವೂ ಇಲ್ಲ. ದೇಹ ಸಂಬಂಧದಿಂದ ತಾಯಿ ತಂದೆ ಗಂಡ, ಹೆಂಡತಿ, ಮಕ್ಕಳು ಮೊದಲಾದವು ಪ್ರತಿ ದೇಹದಲ್ಲಿಯೂ ಬರುತ್ತಿರುವರು. ಒಂದು ದೇಹವನ್ನು ಬಿಟ್ಟಕೂಡಲೇ ಆ ಸಂಬಂಧವೆಲ್ಲ ಅಲ್ಲೇ ತಪ್ಪಿಹೋಗುವುದು. ಮತ್ತೊಂದು ಜನ್ಮವನ್ನು (ದೇಹಾಂತರವನ್ನು) ಹೊಂದಿದರೆ ಅಲ್ಲಿ ಬೇರೆ ತಂದೆ ತಾಯಿ ಹೆಂಡರು ಮಕ್ಕಳಾಗುವರು.

ದೇಹವು ಹೇಗೆ ಸ್ಥಿರವಲ್ಲವೋ ಹಾಗೆ ಹೆಂಡರು ಮಕ್ಕಳು ಸ್ಥಿರವಲ್ಲ. ಜೀವಕ್ಕೆ ಜೀವ ಸಂಬಂಧವಿಲ್ಲ. ದೇಹವೋ, ಇವರದೂ ಸ್ಥಿರವಲ್ಲ, ಅವರದೂ ಸ್ಥಿರವಲ್ಲ. ಇಂತಹ ಹೆಂಡತಿ, ಮಕ್ಕಳು, ಮನೆ ಧನಾದಿಗಳಲ್ಲಿ, ನನ್ನ ಹೆಂಡತಿ ನನ್ನ ಮಕ್ಕಳು ಎಂದು ಬರೀ ಅಭಿಮಾನ ಮಾಡುವರು. ದೇಹವನ್ನು ಬಿಟ್ಟು, ಜೀವನು ಆಕಾಶದಂತೆ ನಿಲ್ಲುವಾಗ, 'ಕ್ವತದೀಯರತಿರ್ಭಾರ್ಯಾ ಕ್ವೇದಂ ತುಚ್ಛಂ ಕಳೇವರಂ' ಇವನ ಸುಖ ಎಲ್ಲಿ ಯಾವದೂ ತನಗೆ ಅನುಕೂಲಿಸುವಂತಿಲ್ಲ. ಆದ್ದರಿಂದ ದೇಹಸಂಬಂಧವಾದ ವಸ್ತುಗಳನ್ನು ತನ್ನವು ಎಂಬುವದೊಂದು ಭ್ರಾಂತಿಯೇ ಹೊರತು ಬೇರಿಲ್ಲ. ಮತ್ತು ಗಂಗಾದಿ ನದಿಗಳೇ ತೀರ್ಥಗಳೆಂದು ಅವುಗಳ ಮಹಾತ್ಮ್ಯಜ್ಞಾನವಿಲ್ಲದೆ, ಭಗವತ್ಸನ್ನಿಧಾನದಿಂದಲೇ ಗಂಗಾದಿಗಳಿಗೆ ಮಹಿಮೆ ಎಂಬ ಜ್ಞಾನವಿಲ್ಲದೇ ಅವುಗಳಲ್ಲಿ ಮುಳುಗಿದರೂ ಫಲವಿಲ್ಲ.

'ಯದೀಚ್ಛಸಿ ಮಹಾರಾಜ ಸರ್ವತೀರ್ಥಾವಗಾಹನಂ ॥ ವಿಪ್ರಪಾದ ವಿನಿರ್ಮುಕ್ತಂ ತೋಯಂ ಶಿರಸಿ ಧಾರಯ ॥' ಎಂಬ ಮೋಕ್ಷ ಧರ್ಮದ ವಾಕ್ಯದಂತೆ, ಎಲೈ ಧರ್ಮರಾಜನೇ ! ನಿನಗೆ ಸರ್ವತೀರ್ಥಗಳಲ್ಲಿಯೂ ಸ್ನಾನ ಮಾಡಬೇಕೆಂಬ ಅಪೇಕ್ಷೆಯಿದ್ದರೆ, ಬ್ರಾಹ್ಮಣರ ಪಾದಪ್ರಕ್ಷಾಳನೆ ಮಾಡಿ, ಆ ಉದಕವನ್ನು ತಲೆಯ ಮೇಲೆ ಪ್ರೋಕ್ಷಿಸಿಕೊ, ಎಂದು ಭೀಷ್ಮಾಚಾರ್ಯರು ಹೇಳಿರುವರು. ಅದರಂತೆ,

ಸರ್ವತ್ರ ಪರಮಾತ್ಮನನ್ನು ಚಿಂತಿಸಿ, ಸರ್ವಕರ್ತ ಪರಮಾತ್ಮನೆಂದು ತಿಳಿದು ಸ್ವಕರ್ತೃತ್ವವನ್ನು ಲೇಶಮಾತ್ರವೂ ಇಟ್ಟುಕೊಳ್ಳದೆ ಇರುವ ಮಹನೀಯರ ಪಾದೋದಕಕ್ಕಿಂತಲೂ ಗಂಗಾದಿ ಜಲಗಳು ಶುದ್ಧಿಮಾಡುವುವೇ? ಇಲ್ಲ. ಇಂತಹ ಉತ್ತಮರನ್ನು ಸಾಮಾನ್ಯ ಮನುಷ್ಯರೆಂದು ಭಾವಿಸಿ ತಿರಸ್ಕರಿಸಿ ಬೆಳ್ಳಿ ಬಂಗಾರದ ಪ್ರತಿಮೆಗಳನ್ನು ಇಟ್ಟುಕೊಂಡು ಆಡಂಬರಪೂಜೆಗಳನ್ನು ಮಾಡಿದರೆ ಪರಮಾತ್ಮನು ಮೆಚ್ಚುವನೇ ? ಭಾಗವತ ತೃತೀಯಸ್ಕಂಧ ೩೦ನೇ ಅಧ್ಯಾಯದಲ್ಲಿ ೨೨-೨೩ನೆ ಶ್ಲೋಕಗಳು— 'ಯೋಮಾಂ ಸರ್ವೇಷು ಭೂತೇಷು ಸಂತಮಾತ್ಮಾನಮೀಶ್ವರಂ ॥ ಹಿತ್ವಾರ್ಚಾಂ ಭಜತೇ ಮೌಢ್ಯಾದ್ಭಸ್ಮನ್ಯೇವ ಜುಹೋತಿ ಸಃ ॥ ದ್ವಿಷತಃ ಪರಕಾಯೇ ಮಾಂ ಮಾನಿನೋ ಭಿನ್ನದರ್ಶನಃ॥ ಭೂತೇಷು ಬದ್ಧವೈರಸ್ಯ ನ ಮನಃಶಾಂತಿ ಮೃಚ್ಛತಿ ॥' 'ಯಾವ ಮನುಷ್ಯನು ಸರ್ವಪ್ರಾಣಿಗಳಲ್ಲಿಯೂ ವಾಸಮಾಡುತ್ತಿರುವ ಈಶ್ವರನಾದ ನನ್ನನ್ನು ಬಿಟ್ಟು ಮೂಢತನದಿಂದ ಪ್ರತಿಮೆಯಲ್ಲೇ ಪರಮಾತ್ಮನಿರುವನೆಂದು ಭಾವಿಸಿ ಪ್ರತಿಮೆಗಳನ್ನು ಪೂಜಿಸುವನೋ ಅವನು ಬೂದಿಯಲ್ಲಿ ಹೋಮ ಮಾಡಿದವನೆಂದು ತಿಳಿಯಬೇಕು.' ಬೂದಿಯಲ್ಲಿ, ಹೋಮ ಮಾಡಿದರೆ ಮಂತ್ರೋಚ್ಚಾರಣೆದಿಂದಲಾದರೂ ಯತ್ಕಿಂಚತ್ಫಲವೇನೋ ಬರುವುದು, ಸಂಪೂರ್ಣಫಲವು ಬಾರದು. ಅದರಂತೆ ಪ್ರತಿಮೆಯಲ್ಲಿ ಮಾತ್ರ ಪರಮಾತ್ಮನನ್ನು ಪೂಜೆ ಮಾಡುವವರಿಗೆ ಸಂಪೂರ್ಣ ಫಲವು ಬಾರದು. 'ಭಗವದ್ಭಕ್ತರಲ್ಲಿ ವಿಶೇಷ ಸನ್ನಿಧಾನದಿಂದ ಇರುವ ನನ್ನನ್ನು ತಿಳಿಯದೇ, ಪ್ರತಿಮೆಗಳಲ್ಲಿಯೂ ಭಕ್ತರಲ್ಲೂ ಇರತಕ್ಕ ನನ್ನ ರೂಪದಲ್ಲಿ ಪರಸ್ಪರ ಭೇದವನ್ನು ಚಿಂತಿಸಿ ವಿಷ್ಣುಭಕ್ತರಲ್ಲಿ ದ್ವೇಷವನ್ನು ಬೆಳಸುತ್ತಾ ನನ್ನನ್ನು ಪ್ರತಿಮಾದಿಗಳಲ್ಲಿ ಮಾತ್ರ ಪೂಜಿಸಿದರೆ ಅಂತಹವನ ಮನಸ್ಸು ಎಂದಿಗೂ ನನ್ನಲ್ಲಿ ಸ್ಥಿರವಾಗಿ ನಿಲ್ಲಲಾರದು. ಅಂದರೆ ಅವನು ನನಗೆ ಪ್ರಿಯನಾಗುವುದಿಲ್ಲವೆಂದು ಭಾವ.' ಮೇಲಿನ ಶ್ಲೋಕದಲ್ಲಿರುವ 'ಭೂತೇಷು' ಎಂಬ ಪದಕ್ಕೆ 'ವೈಷ್ಣವೇಷು' ಎಂತಲೂ 'ಶಾಂತಿ' ಎಂಬ ಪದಕ್ಕೆ 'ಮನ್ನಿಷ್ಟತಾ' ಎಂತಲೂ ಅರ್ಥ ಮಾಡಿರುವರು. ಈ ವ್ಯಾಖ್ಯಾನವನ್ನನುಸರಿಸಿಯೇ ಅರ್ಥವನ್ನು ಬರೆದಿದೆ. ಆದ್ದರಿಂದ ದಾಸರಾಯರು ಅಗ್ನಿ, ಪಂಚಲೋಹದ ಪ್ರತಿಮೆಗಳನ್ನೇ ದೇವರೆಂಬುವನು, ಭಗವದ್ಭಕ್ತರನ್ನು ಸಾಮಾನ್ಯ ಮನುಷ್ಯರೆಂದು ಭಾವಿಸುವವನು ಭೂಮಿಯಲ್ಲಿ ಕತ್ತೆ ಎನಿಸುವನು ಎಂದು ಹೇಳಿರುವರು ॥ ೧೦ ॥

### ೩. ಭಾವದರ್ಪಣ

ಯಸ್ಯಾತ್ಮ ಬುದ್ಧಿಃ ಕೃಣಪೇ ತ್ರಿಧಾತಕೇ ಸ್ವಧೀಃ ಕಲತ್ರಾದಿಷು ಭೌಮ ಈಜ್ಯಧೀಃ । ಯತ್ತೀರ್ಥಬುದ್ಧಿಶ್ಚ ಜಲೇನ ಕರ್ಹಿ ಚಿಜ್ಜನೇಷ್ವಭಿಜ್ಞೇಷು ಸ ಏವ ಗೋಖರಃ ॥ ಹೀಗೆ ಆಚರಿಸತಕ್ಕವನೇ ಭೂಮಿಯಲ್ಲಿ ಕತ್ತೆ ಎಂದು ಭಾಗವತೋಕ್ತಿಯು ॥ ತನುವು ನಾನೆಂಬ । ಗೋಖರ ಎಂದರೆ ಕತ್ತೆಯನ್ನು ಭಕ್ಷಣ ಮಾಡತಕ್ಕ (ಕತ್ತೆಗಿರವುಯಂತಲು ಅರ್ಥವಾಗುತ್ತದೆ. ಮುಖ್ಯವಾಗಿ ಪರಮ ನೀಚ ಎಂದು ಫಲಿತಾರ್ಥ) ॥ ೧೦ ॥

### ೪. ಶ್ರೀವ್ಯಾಸದಾಸಸಿದ್ಧಾಂತಕೌಮುದಿ

ಯಸ್ಯ ಆತ್ಮ ಬುದ್ಧಿಃ ಇತಿ ॥ ಪದ್ಯಾರ್ಥಮಾಹ–ತನು ಇತಿ ॥ ಅಜ್ಞಾನಿತ್ವೇ ಗೌಃ । ಏತದನಿಶ್ಚಾ(ಚಾ)ಯ್ಯ ವ್ಯಕ್ತತ್ವೇ ಖರಃ ಇತ್ಯುಕ್ತಂ ಪ್ರಕಾಶಿಕಾಯಾಂ ॥ ೧೦ ॥

### ಕನ್ನಡಾರ್ಥ

"ಯಸ್ಯಾತ್ಮ ಬುದ್ಧಿಃ" ಎಂಬ ಭಾಗವತ ಶ್ಲೋಕದ ಅರ್ಥವನ್ನು ತಿಳಿಪಡಿಸುತ್ತಾರೆ. "ತನು" ಎಂಬ ಪದ್ಯದಿಂದ ದೇಹವೇ ನಾನು ಜೀವ. ದೈಹಿಕ ವಿಷಯಗಳೇ, ಧರ್ಮಗಳೇ, ಜೀವಧರ್ಮಗಳು. ನದಿಗಳ ನೀರೇ ತೀರ್ಥ. ಕಲ್ಲುಮಣ್ಣಿನ ಗೊಂಬೆಗಳೇ ದೇವರು. ಈ ಗೊಂಬೆಗಳ ಪೂಜೆಯೇ ದೇವರಪೂಜೆ. ಹೀಗೆ ಭಾವಿಸಿ ದೇಹಾತಿರಿಕ್ತ ಜೀವ ಅವನ ಧರ್ಮಗಳನ್ನು ನದಿ ಪ್ರತಿಮೆ ಮುಂತಾದುವುಗಳಲ್ಲಿರುವ ಭಗವಂತನ ಸನ್ನಿಧಾನ ವಿಶೇಷವನ್ನೂ ತಿಳಿಯದವನು, 'ಗೌ' ಎಂದೂ, ಇದನ್ನು ಸರಿಯಾಗಿ ತಿಳಿಯದೇ ದುಷ್ಟಶಾಸ್ತ್ರಗಳನ್ನು ಬೋಧಿಸುವನು 'ಖರ'– ಕತ್ತೆಯೆಂದೂ ಹೇಳಿಸಿಕೊಳ್ಳುತ್ತಾನೆ ಎಂದು ಪ್ರಕಾಶಿಕೆಯಲ್ಲಿ ಹೇಳಲಾಗಿರುತ್ತದೆ. ॥ ೧೦ ॥

### ೫. ಶ್ರೀಗುರುಹೃದಯಪ್ರಕಾಶಿಕೆ

ತ್ಯಾಗಾರ್ಥವಾಗಿ ವಿಪರೀತಜ್ಞಾನಿಸ್ವರೂಪ ತಿಳಿಸುತ್ತಾರೆ, ತನುವೆಂದು. ತನುವೆಂಬ ದೇಹವೇ ತಾನು, ಎಂದರೆ ದೇಹವೇ ಜೀವವೆಂದು ಅಭೇದ ಎಣಿಸು

ವನೂ, ಹೆಂಡತಿ ಮಕ್ಕಳು ಮನೆ ದ್ರವ್ಯಾದಿಗಳು ತನ್ನ ಸ್ವಂತವಾದದ್ದೆಂದು ಸ್ವತಂತ್ರ ತಿಳಿದವನೂ, ದ್ಯುನದಿ ಎಂಬ ಗಂಗೆಯೇ ಮೊದಲಾದ ನದಿಗಳ ನೀರೇ ತೀರ್ಥ ವೆಂದು ತಿಳಿದು, ಅಲ್ಲಿ ಅಭಿಮಾನಿದೇವತೆಗಳನ್ನು ತಿಳಿಯದವನೂ, ಅನಲ ಎಂಬ ಅಗ್ನಿಯೂ, ಲೋಹಾದಿ ಪ್ರತೀಕ ಎಂದರೆ ಪಂಚಲೋಹಾದಿಗಳಿಂದ ಮಾಡಲ್ಪಟ್ಟ ಪ್ರತಿಮೆಯ ಪೂಜೆಯೇ ದೇವರಪೂಜೆ ಎಂದು ಭಾವಿಸಿ, ಅಲ್ಲಿ ದೇವರ ಆವಾಹನೆ ಸ್ಥಾನಗಳನ್ನು ತಿಳಿಯದವನೂ, ಸಜ್ಜನರನ್ನು ಮನುಷ್ಯಮಾತ್ರರೆಂದು ತಿಳಿದು ಅವರು ಪರಮಾತ್ಮನಿಗೆ ಮುಖ್ಯಾಧಿಷ್ಠಾನರೆಂದು ತಿಳಿಯದವನೂ ಸಹ ಭೂಮಿ ಯಲ್ಲಿ ಚರಿಸುವ ಕತ್ತೆಯೆನಿಸಿಕೊಳ್ಳುವನು. ಇದರಿಂದ

**ಯಸ್ಯಾತ್ಮಬುದ್ಧಿಃ ಕುಣಪೇ ತ್ರಿಧಾತುಕೇ ಸ್ವಧೀಃ ಕಳತ್ರಾದಿಷು ಭೌಮ ಇಜ್ಯಧೀಃ ।**
**ಯತ್ತೀರ್ಥ ಬುದ್ಧಿಶ್ಚ ಜಲೇ ನ ಕರ್ಹಿ ಚಿಜ್ಜನೇಷ್ವಭಿಜ್ಞೇಷು ಸ ಏವ ಗೋಖರಃ ॥**

ಎಂಬ **ಭಾಗವತಾರ್ಥ** ಹೇಳಲ್ಪಟ್ಟಿತು. ॥ ೧೦ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಮಾನವನ ಸ್ಥೂಲಶರೀರವು ಪಂಚಭೂತಗಳಿಂದ ನಿರ್ಮಿತವಾಗಿದೆ. ಈ ಸ್ಥೂಲದೇಹಕ್ಕೆ ಮರಣದಿಂದ ನಾಶವುಂಟು. ಕೌಮಾರ್ಯ, ಯೌವ್ವನ, ವಾರ್ಧಿಕ್ಯ ಇತ್ಯಾದಿ ವಿಕಾರವಿಶೇಷಗಳು ಈ ಶರೀರದ ಧರ್ಮಗಳು. ಆದರೆ ಜೀವನು ಚೇತ ನನು, ಅನಾದಿ ನಿತ್ಯನು. ಚಿದಾನಂದಾತ್ಮಕನಾದ ಜೀವನಿಗೆ ನಾಶವಿಲ್ಲ. ಅದರೆ ಜೀವನು ತನ್ನ ಸ್ಥೂಲ ಶರೀರಗತ ಅವಯವ ಹಾಗೂ ಸಕಲೇಂದ್ರಿಯಗಳಲ್ಲಿ ಪ್ರಕಾ ಶತೋವ್ಯಾಪ್ತನಾಗಿದ್ದಾನೆ. ಇದರಿಂದ ಬಾಹ್ಯಶರೀರಕ್ಕೆ ಉಂಟಾಗುವ ಭೇದ ಭೇದಗಳಿಂದ ದುಃಖಾದಿಗಳು ದೇಹಾದ್ಯಂತ ಪ್ರಕಾಶತೋವ್ಯಾಪ್ತನಾದ ಜೀವನ ಅನುಭವಕ್ಕೆ ಉಂಟಾಗುವುವು. ಹೀಗೆ ದೇಹದ ದ್ವಾರಾ ಕ್ಲೇಶಾನಂದಗಳು ಜೀವನ

ಅನುಭವಕ್ಕೆ ಬರಬೇಕಾದರೆ, ಆ ಜೀವನಿಗೆ ಇರುವ ದೇಹಾಭಿಮಾನವೇ ಮುಖ್ಯ ಕಾರಣವು, ಆದರೆ ಜಡ–ಚೇತನರಿಗಿರುವ ವೈಲಕ್ಷಣ್ಯದಿಂದ, ಜಡವಾದ ದೇಹವೇ ಬೇರೆ, ಚೇತನಸ್ವರೂಪಿಯಾದ ಜೀವನೇ ಬೇರೆ. ದೇಹಾಭಿಮಾನದಿಂದ ಈ ತನುವೇ ನಾನು ಎಂಬುವನು ಮಾಡುವ ಸಕಲ ಕರ್ಮಗಳು ನಿಷ್ಫಲವಾಗುವುವು. ಸ್ಥೂಲದೇಹಗತ ಇಂದ್ರಿಯಗಳ ದ್ವಾರಾ ಇಂದ್ರಿಯಾಭಿಮಾನಿ ದೇವತೆಗಳ ಮೂಲಕ ಬಿಂಬನಾದ ಶ್ರೀಹರಿಯು ಜೀವನ ಅನಾದಿಕರ್ಮಗತ ಸಾತ್ವಿಕಗುಣ ವನ್ನು ಉಪಾದಾನಕಾರಣ ಮಾಡಿಕೊಂಡು, ಮಾಡಿ ಮಾಡಿಸುವ ಸತ್ಕರ್ಮಗಳ ಫಲರೂಪವಾದ ಸುಖ, ಅಂತೆಯೇ ದೈತ್ಯರ ದ್ವಾರಾ, ಕರ್ಮಗತ ತಮೋಗುಣದ ಪ್ರಾಚುರ್ಯದಿಂದ ಉಂಟಾಗುವ ದುಷ್ಕರ್ಮಗಳ ಫಲರೂಪವಾದ ದುಃಖಗಳೂ ಬಿಂಬರೂಪೀ ಶ್ರೀಹರಿಯು ಪ್ರೇರಣಾನುಸಾರ ಸ್ಥೂಲಶರೀರದಲ್ಲಿ ಪ್ರಕಾಶತೋ ವ್ಯಾಪ್ತನಾದ ಚೇತನನಿಗೆ ಉಂಟಾಗುತ್ತಿರುವುವು–ಎಂಬ ಅನುಸಂಧಾನವುಳ್ಳ ಜೀವನಕರ್ಮಗಳೆಲ್ಲವೂ ಶ್ರೀವಿಷ್ಣುಪ್ರೀತಿಗೆ ಕಾರಣವಾಗುವುವು.

ವಿಧ್ಯುಕ್ತವಾಗಿ ವಿವಾಹವಾದ ಪತ್ನಿ, ತನ್ನ ಮಕ್ಕಳು, ವಾಸಿಸುವ ಮನೆ, ಸ್ವಯಾರ್ಜಿತ ಅಥವಾ ಪಿತ್ರಾರ್ಜಿತ ಧನಾದಿ ಆಸ್ತಿಗಳು, ಇವುಗಳಲ್ಲಿ ಮಮತೆ ಇಟ್ಟು, ಅವೆಲ್ಲವೂ ತನ್ನದೆಂದೇ ತಿಳಿದು, ಅಹಂ ಮಮಕಾರಗ್ರಸ್ತನಾದ ನರನು ಮಾಡುವ ಕರ್ಮಗಳೆಲ್ಲವೂ ನಿಷ್ಪ್ರಯೋಜಕ. ಸತಿ, ಸುತ, ಮನೆ, ಧನಾದಿಗಳು ಶ್ರೀಹರಿಯಿಂದ ತನಗೆ ಸಾಧನಸಾಮಗ್ರಿಗಳ ರೂಪದಲ್ಲಿ ಕೊಡಲ್ಪಟ್ಟವು. ಪರಿವಾರಭೂತರಾದ ಸತಿಸುತರು, ಅವನ ಸೇವೆಗಾಗಿ ಇರುವ ವರು. ಹಾಗೆಯೇ ಗೃಹ, ಧನ, ಧಾನ್ಯಾದಿ ವಸ್ತುಗಳೆಲ್ಲವೂ ಶ್ರೀಹರಿಯು ಪ್ರೀತ್ಯ ರ್ಥವಾಗಿ ಎಸಗುವ ಕಾರ್ಯಗಳಿಗೆ ಸಾಧನಪರಿಕರಗಳೆಂದು ತಿಳಿಯುವವನೇ ನಿಜ ವಾದ ಜ್ಞಾನಿಯು.

ಗಂಗಾದಿ ಪವಿತ್ರತೀರ್ಥಗಳಲ್ಲಿ ಸ್ನಾನಮಾಡುವಾಗ, ಉತ್ತಮ ಜ್ಞಾನಾನು ಸಂಧಾನವಿರಬೇಕು. ಅದು ಕೇವಲ ಜಡೋದಕವೆಂದು ತಿಳಿದು, ಮಜ್ಜನಗೈದರೆ, ಸ್ನಾನದ ಫಲ ವ್ಯರ್ಥ. ಗಂಗಾದಿ ನದಿಗಳಲ್ಲಿರುವ ನದ್ಯಭಿಮಾನಿದೇವತೆಗಳ ಸ್ಮರಣೆ, ತೀರ್ಥಗತ ತೀರ್ಥಾಭಿಮಾನಿದೇವತಾಧ್ಯಾನಪೂರ್ವಕ, ಆ ದೇವತಾಂತರ್ಗತ ಭಗವ

ದ್ರೂಪಗಳಿಗೂ, ಈ ಸ್ಥೂಲದೇಹದಲ್ಲಿ ಆವಾಸವಾಗಿರುವ ಬಿಂಬರೂಪೀ ಶ್ರೀಹರಿಯು ಭಗವದ್ರೂಪಕ್ಕೂ ಐಕ್ಯ ಚಿಂತನಾಪೂರ್ವಕ ಸ್ನಾನಮಾಡುವುದೇ ನಿಜ ವಾದ ಸ್ನಾನವೆನಿಸುವುದು.

ಅಗ್ನಿಯು ಜಡ. ಅದಕ್ಕೆ ಅಭಿಮಾನಿ ಅಗ್ನಿದೇವರು. ಅಗ್ನ್ಯಂತರ್ಗತ ಹರಿ ಣೀಪತಿ ಶ್ರೀಪರಶುರಾಮನನ್ನು ಧ್ಯಾನಮಾಡುತ್ತಾ, ಅಗ್ನಿಯನ್ನು ಅರ್ಚಿಸಿದರೆ ಅದರಿಂದ ಫಲಪ್ರಾಪ್ತಿ. ಯಜ್ಞಶಾಲೆಯಲ್ಲಿ ಉರಿಯುತ್ತಿರುವ ಅಗ್ನಿ, ದೇಹಗತ ಯೋಗಾಗ್ನಿ, ಜಠರಾಗ್ನಿ, ಇತ್ಯಾದಿ ಅಧಿಷ್ಠಾನಗಳಲ್ಲಿ ತದಂತರ್ಗತ ಭಗವದ್ರೂಪೋಪಾಸನೆಯಿಂದ ಸಿದ್ಧಿಯಾಗುವುದು. ವಿಷ್ಣುಪ್ರೀತ್ಯರ್ಥವಲ್ಲದ ಯಾವ ಯಜ್ಞ ಯಾಗಾದಿಗಳೂ, ಅರ್ಚನೆಯೂ ನಿಷ್ಫಲವೆನಿಸುವುವು.

ಬಂಗಾರ, ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು, ಪಂಚ ಲೋಹಾದಿಗಳಿಂದಾದ ಪ್ರತಿಮೆಗಳು ಕೇವಲ ಜಡಪ್ರತೀಕಗಳೇ ವಿನಾ ಅವೇ ಶ್ರೀಹರಿಯಲ್ಲ. ಆ ಪ್ರತಿಮಾಂತರ್ಗತ ಭಗವದ್ರೂಪಗಳನ್ನು ತತ್ತ್ವನ್ಯಾಸ, ಮಾತೃಕಾನ್ಯಾಸ ಪದ್ಧತಿಯಿಂದ ಪೂಜಿಸುವುದೇ ನಿಜವಾದ ಪೂಜೆಯೆನಿಸುವುದು. ಪ್ರತಿಮಾದಿಗಳಲ್ಲಿ ಬಿಂಬಾವಾಹನೆಗೈದು, ಅರ್ಚಿಸಬೇಕು. ಪ್ರತಿಮಾಂತರ್ಗತ ಭಗವದ್ರೂಪಕ್ಕೂ, ಸ್ವಬಿಂಬ ರೂಪಕ್ಕೂ ಐಕ್ಯಚಿಂತನೆ ಗೈಯ್ಯುವುದೇ ದೇವತಾರ್ಚನೆಯು.

ಮುಕ್ತಿಯೋಗ್ಯರಾದ ಬ್ರಹ್ಮಜ್ಞಾನಿಗಳೇ ಶ್ರೀಹರಿಯ ಚಲಪ್ರತೀಕಗಳೆಂಬ ಭಾವನೆಯಿಂದ ಅವರನ್ನು ಸೇವಿಸುವುದೇ ಶ್ರೀಹರಿಯ ಪೂಜೆಯು. ಜಗತ್ತಿನಲ್ಲಿ ಸಂಚರಿಸುತ್ತಿರುವ ಆ ಸುಜನರು ಭಗವತ್ಸನ್ನಿಧಾನವುಳ್ಳ ಚಲಪ್ರತಿಮೆಗಳು. ಅವರನ್ನು ಕೇವಲ ಮಾನವರೆಂದು ತಿಳಿಯುವವನು ನರಕಭಾಜನನಾಗುವನು

ಪೂರ್ವೋಕ್ತರೀತ್ಯ ಅಧಿಷ್ಠಾನಾಂತರ್ಗತ ಭಗವದ್ರೂಪಗಳನ್ನು ಧ್ಯಾನಿಸದೇ ಕೇವಲ ಡಾಂಭಿಕವಾದ ಜಡರೂಪವಾದ ಪೂಜೆಯನ್ನು ಮಾಡುವವನು ಬ್ರಹ್ಮಜ್ಞಾನಿಗಳಿಂದ ಚತುಷ್ಪಾದಿಯಾದ ಕತ್ತೆ ಎಂದೆನಿಸಿಕೊಳ್ಳುವನು. ॥ ೧೦ ॥

## ಪದ್ಯ ೧೧.

**ಮೂಲ**

ಅನಲ ಸೋಮಾರ್ಕೇಂದು ತಾರಾ ।
ವನಿ ಸುರಾಪಗ ಮುಖ್ಯತೀರ್ಥಗ ।
ಅನಿಲ ಗಗನ ಮನಾದಿ ಇಂದ್ರಿಯಗಳಿಗೆ ಅಭಿಮಾನಿ ॥
ಎನಿಪ ಸುರರ ವಿಪಕ್ಷಿತರ ಸ ।
ನ್ಮನದಿ ಭಜಿಸದಲಿಪ್ಪವರ ಪಾ ।
ವನವ ಮಾಡರು ತಮ್ಮ ಪೂಜೆಯ ಮಾಡಿದರು ಸರಿಯೆ ॥೧೧॥

**ಅವತರಣಿಕೆ**

ಆಯಾಯಾ ದೇವತಾಂತರ್ಗತ ಬಿಂಬರೂಪೀ ಶ್ರೀಪರಮಾತ್ಮನ ಸ್ಮರಣೆ ಬಿಟ್ಟು, ಪೂಜಾದಿಗಳನ್ನು ಮಾಡಿದರೆ ಆ ದೇವತೆಗಳು ಅವರಿಗೆ ಒಲಿಯುವುದಿಲ್ಲ ವೆಂದು ತಿಳಿಸುತ್ತಾರೆ ॥ ೧೧ ॥

**ಪ್ರತಿಪದಾರ್ಥ**

**ಅನಲ**=ಅಗ್ನಿ, **ಸೋಮ**=ಉಮಾಸಹಿತನಾದ ರುದ್ರದೇವರು [ಸ+ಉಮ=ಸೋಮ], **ಅರ್ಕ**=ಸೂರ್ಯ, **ಇಂದು**=ಚಂದ್ರ, **ತಾರಾ**=ಅಶ್ವಿನ್ಯಾದಿನಕ್ಷತ್ರಾಭಿಮಾನಿ ದೇವತೆಗಳು, **ಅವನಿ**=ಭೂ ಅಭಿಮಾನಿಯಾದ ಭೂ ದೇವತಾ, **ಸುರಾಪಗ**=ದೇವನದಿ ಎನಿಸುವ ಗಂಗಾನದ್ಯಸ್ಥ ಅಭಿಮಾನಿ ದೇವತಾ, **ಮುಖ್ಯತೀರ್ಥಗಳು**=ಶ್ರೇಷ್ಠ ತೀರ್ಥಾಭಿಮಾನಿದೇವತೆಗಳು, **ಅನಿಲ**=ಭೂತವಾಯು ತತ್ತ್ವಾಭಿಮಾನಿ, **ಗಗನ**=ಅಕಾಶಾಭಿಮಾನಿ ದೇವತಾ (ಅಂತೆಯೇ ಉಳಿದ ಭೂತ ಪಂಚಕಗಳ ಅಭಿಮಾನಿ ದೇವತೆಗಳು) **ಮನಾದಿ**=ಮನಸ್ಸೇ ಮೊದಲಾದ, **ಇಂದ್ರಿಯಗಳಿಗೆ**=ಏಕಾದಶೇಂದ್ರಿಯಗಳಿಗೆ, **ಅಭಿಮಾನಿ ಎನಿಪ**=ಅಭಿಮಾನಿಗಳೆಂದು ಕರೆಯಿಸುವ, **ಸುರರ**=ದೇವತೆಗಳ,

**ವಿಪಶ್ಚಿತರ**=ಜ್ಞಾನಿಗಳಾದ ಭಗವದ್ಭಕ್ತರ, **ಸನ್ಮನದಿ**=ಶುದ್ಧವಾದ ಮನಸ್ಸಿನಿಂದ, **ಭಜಿಸದಲಿಪ್ಪವರ**=ಆ ದೇವತೆಗಳ ಅಂತರ್ಯಾಮಿಯಾದ ಪರಮಾತ್ಮನನ್ನ ತಿಳಿದು ಕೊಂಡಾಡದೇ ಇರುವವರ, **ಪಾವನವ ಮಾಡರು**=ಪವಿತ್ರರನ್ನಾಗಿ ಮಾಡುವುದಿಲ್ಲ. **ತಮ್ಮ**=ಆ ದೇವತೆಗಳನ್ನೇ ಪ್ರತ್ಯೇಕವಾಗಿ (ಅಂತರ್ಯಾಮಿ ವಿರಹಿತ) **ಪೂಜೆಯ ಮಾಡಿದರು ಸರಿಯೆ**=ಪೂಜೆ ಮಾಡಿದಾಗ್ಯೂ ಸಹ, ಆ ದೇವತೆಗಳು ಅವರ ಪೂಜೆಗೆ ಮೆಚ್ಚಿ ಅನುಗ್ರಹಿಸುವುದಿಲ್ಲ. ॥ ೧೧ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮನ ಪೂಜಾ ಸಹಿತ ಭಗವದ್ಭಕ್ತರ ಪೂಜಾ ಮಾಡಬೇಕೆಂದು ಹೇಳುತಾರೆ,

ಅಗ್ನಿ, ಸೋಮ='ಉಮಯಾ ಸಹ ವರ್ತತೇ ಇತಿ ಸೋಮಃ' ಅಂದರೆ, ರುದ್ರದೇವರು, ಸೂರ್ಯನು ಚಂದ್ರನು, ಅಶ್ವಿನ್ಯಾದಿ ನಕ್ಷತ್ರಗಳು, ಅಂಗಾರಾದಿ ಗ್ರಹಗಳು, ಭೂಅಭಿಮಾನಿ ಭೂದೇವತಾ, ದೇವತಾ ಉದಕವಾದ ಭಾಗೀರಥೀ ನದ್ಯಸ್ಥ ಅಭಿಮಾನಿ ದೇವತಾ, ಸಮೀಚೀನಗಳಾದ ಶ್ರೇಷ್ಠಗಳಾದ ಅನೇಕ ತೀರ್ಥಗಳು, ವಾಯು, ಆಕಾಶಾ ಉಪಲಕ್ಷಣಯಾ ಪಂಚಭೂತಗಳು ಪಂಚತನ್ಮಾತ್ರಗಳು, ಮನೋಇಂದ್ರಿಯವೇ ಮೊದಲಾಗಿ ಉಳ್ಳ ಏಕಾದಶೇಂದ್ರಿಯಗಳಿಗೆ ಅಭಿಮಾನಿಗಳಾದ ದೇವತೆಗಳು ಇನ್ನೂ ಅನೇಕ ಭಗವದ್ಭಕ್ತರ, ಶಮದಮಾದಿ ಸಂಪತ್ತಿನಿಂದ ಸಹಿತವಾದ ಮನಸ್ಸಿನಿಂದ ಅಂತರ್ಗತ ಪರಮಾತ್ಮನನ್ನು ತಿಳಿದು, ತಾರತಮ್ಯಗಳ ತಿಳದು ದೇವತೆಗಳ ಭಜನೆ ಮಾಡದೆ ಇರತಕ್ಕ ಅಧಿಕಾರಿಗಳನ್ನ ಪವಿತ್ರರನ್ನಾಗಿ ಮಾಡೋದಿಲ್ಲ, ಯಾಕೆಂದರೆ ದೇವತೆಗಳು ಭಗವದ್ಭಕ್ತರು, ಇವರು ಪರಮಾತ್ಮಗೆ ಮುಖ್ಯ ಅಧಿಷ್ಠಾನಭೂತರಾದವರು. ಇನ್ನು ಇಂದ್ರಿಯಾಭಿಮಾನಿಗಳೂ ಆಗಿರುವುದರಿಂದ, ಅವರನ್ನು ದುರ್ವಿಷಯಾದಿಗಳಲ್ಲಿ ಪ್ರವೃತ್ತಿಬುದ್ಧಿ ಇಲ್ಲದಂತೆ ಪ್ರಾರ್ಥನ ಮಾಡಿ ಪೂಜಿಸಬೇಕಾದ್ದರಿಂದ

ಅಧಿಷ್ಠಾನಭೂತರಾದರು. ಈ ರೀತ್ಯ ದೇವತಾಪೂಜೆ ಅವಶ್ಯವಾದದ್ದು. ಅಂತರ್ಗತನ್ನ ತಿಳದು ಪೂಜಾದಿಗಳು ಮಾಡಬೇಕು. ಅನ್ಯದೇವತಾ ಪೂಜಾವಿಧಿ ಇದು. ತದ್ವ್ಯತಿರಿಕ್ತ ನಿಷಿದ್ಧವು ರುದ್ರಾದಿ ದೇವತೆಗಳು ಅನ್ಯದೇವತೆಗಳೆಂದು ವಚನಗಳಿಗೆ ವಿಪರೀತಾರ್ಥವನ್ನು ಮಾಡಿ, ದೇವತೆಗಳ ಬಿಟ್ಟು ಪ್ರತ್ಯೇಕವಾಗಿ ಪರಮಾತ್ಮನ್ನ ನೂತನ ನೂತನವಾಗಿ ಪೂಜಾಮಾಡಿದರೂ ಸರಿಯೆ, ಅಂತರ್ಗತನ್ನ ತಿಳಿಯದೆ ದೇವತೆಗಳನ್ನು ಮಾತ್ರ ಪೂಜಾದಿಗಳು ಮಾಡಿದರೂ ಸರಿಯೇ, ಪರಮಾತ್ಮನೂನೂ, ದೇವತೆಗಳೂನೂ ಅಧಿಕಾರಿಗೆ ಒಂದು ಪುರುಷಾರ್ಥವನ್ನೂ ಕೊಡಲಾರರು ಎಂತ ತಾತ್ಪರ್ಯ. ॥ ೧೧ ॥

## ೨. ಭಾವಪ್ರಕಾಶಿಕೆ

ಲೋಕದಲ್ಲಿ ಅಗ್ನಿ, ಪಾರ್ವತೀಪರಮೇಶ್ವರರು, ಸೂರ್ಯ, ಚಂದ್ರ, ನಕ್ಷತ್ರ ಸಮೂಹಗಳು, ನವಗ್ರಹಗಳು,ಭೂಮಿ, ಗಂಗಾ ಮೊದಲಾದ ತೀರ್ಥಗಳು, ಮತ್ತು ವಾಯು, ಆಕಾಶ ಮೊದಲಾದ ಪಂಚಭೂತಗಳು, ತನ್ಮಾತ್ರಾ ಗುಣಗಳು, ಜ್ಞಾನೇಂದ್ರಿಯ ಕರ್ಮೇಂದ್ರಿಯ ಮನಸ್ಸು ಮೊದಲಾದ ಇಂದ್ರಿಯಗಳು ಇವುಗಳಿಗೆ ಅಭಿಮಾನಿದೇವತೆಗಳು, ಭಗವದ್ಭಕ್ತರಾದ ಜ್ಞಾನಿಗಳು ಇವರೆಲ್ಲರೂ ಪರಮಾತ್ಮನ ಅಧಿಷ್ಠಾನ ಭೂತರೆಂದು ತಿಳಿದು ಆಯಾ ಅಧಿಷ್ಠಾನದಲ್ಲಿ ಪೂಜಿಸಿದರೆ, ಅವರ ಅಂತರ್ಯಾಮಿ ಪರಮಾತ್ಮನು ಪ್ರಸನ್ನನಾಗಿ ದೇವತೆ ಮೊದಲಾದವರು ಇವನನ್ನು ಪವಿತ್ರನನ್ನಾಗಿ ಮಾಡುವರು. ಅವರುಗಳಲ್ಲಿ ಅಧಿಷ್ಠಾನವನ್ನು ತಿಳಿಯದೆ, ಅವರನ್ನು ಪೂಜಿಸುವುದು, ಅವರಂತರ್ಯಾಮಿಯಾದ ಪರಮಾತ್ಮನ ಪೂಜೆಯೆಂದು ಭಾವಿಸದೆ, ಬರೇ ದೇವತಾಪೂಜೆ ಎಂದು ಭಾವಿಸಿದರೆ ಮೇಲೆ ಹೇಳಿದ ಯಾವ ದೇವತೆಗಳೂ ಇವನನ್ನು ಪಾವನನನ್ನಾಗಿ ಮಾಡುವುದಿಲ್ಲ. ॥೧೧॥

## ೩. ಭಾವದರ್ಪಣ

ಅನಲೇತಿ. ಅನಳ ಅಗ್ನಿ. ಸೋಮ ಉಮಯಾ ಸಹಿತಃ ಸೋಮಃ (ಉಮಾದೇವಿಯಿಂದ ಯುಕ್ತನಾದ ರುದ್ರ) ಅರ್ಕ ಸೂರ್ಯ, ಇಂದು ಚಂದ್ರ, ತಾರಾ ನಕ್ಷತ್ರ, ಅವನಿ ಭೂಮಿ, ಸುರಾಪಗಾ ಭಾಗೀರಥಿ ಮೊದಲಾದ ದೇವತೆಗಳು

ಶ್ರೀಹರಿಯನ್ನು ದಾರ್ಢ್ಯಾರ್ಥದಿಂದ ಪೂಜೆ ಮಾಡದೇ ಇದ್ದ ಪುರುಷರನ್ನ ತಮ್ಮ ಪೂಜೆ ಮಾಡಿದಾಗ್ಯೂ ಪವಿತ್ರರನ್ನು ಮಾಡರೆಂಬ ಭಾವ ॥ ೧೧ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ನಾಗ್ನಿರ್ನಸೂರ್ಯಃ ಇತಿ ಶ್ಲೋಕಮರ್ಥತಃ ಗೃಹ್ಣಾತಿ—ಅನಲ ಇತಿ ॥ ಭೇದಕೃತೋ ಹರಂತ್ಯಘ ಮಿತ್ಯುಕ್ತೇಃ ॥ ೧೧ ॥

## ಕನ್ನಡಾರ್ಥ

ಭೂತಾಗ್ನಿ, ಸೂರ್ಯ ಗೋಲಕಗಳು ಮುಖ್ಯವಾಗಿ ಅಗ್ನಿಸೂರ್ಯರೆಂಬುದಾಗಿ ಜ್ಞಾನಿಗಳಿಂದ ಕರೆಯಲ್ಪಡುವುದಿಲ್ಲ ಎಂದು ಹೇಳುವ ಶ್ಲೋಕಾರ್ಥವನ್ನು ಆರ್ಥಿಕವಾಗಿ ಸಂಗ್ರಹಿಸುತ್ತಾರೆ—"ಅನಲ" ಎಂಬ ಪದ್ಯದಿಂದ.

ಅಗ್ನಿಸೂರ್ಯಾದಿಗಳಲ್ಲಿ ನಿಯಾಮಕನಾಗಿರುವ ಶ್ರೀಹರಿಯನ್ನು ಬೇರೆ ಎಂದು ಭಾವಿಸಿ ಆ ಹರಿಯನ್ನು ಅಗ್ನಿಸೂರ್ಯರ್ಕರುಗಳಲ್ಲಿ ಪೂಜಿಸಬೇಕು. ತೀರ್ಥಗಳಲ್ಲಿ ಸನ್ನಿಧಾನ ವಿಶೇಷವನ್ನಿಟ್ಟಿರುವ ಶ್ರೀಹರಿಯನ್ನು ವಿವೇಕಿಸಿ ಧ್ಯಾನಿಸುವವರ ಪಾಪಗಳನ್ನು ತೀರ್ಥಾಭಿಮಾನಿ ದೇವತೆಗಳು ಕಳೆಯುತ್ತಾರೆ ಎಂದು ಹೇಳಲಾಗಿರುತ್ತದೆ. ॥ ೧೧ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಈ ಅರ್ಥ ವಿವರಿಸುತ್ತಾರೆ, ಅನಲ ಎಂದು. ಅವಲನೆಂಬ ಅಗ್ನಿಯೂ, ಸೋಮಾರ್ಕೇಂದುತಾರಾವನಿ—ರುದ್ರ ಸೂರ್ಯ ಚಂದ್ರ ನಕ್ಷತ್ರ ಭೂದೇವಿ, ಸುರಾಪಗಾ ಎಂದರೆ ದೇವಗಂಗೆಯೇ ಮೊದಲಾದ ತೀರ್ಥಾಭಿಮಾನಿಗಳೂ, ಗಾಳಿ ಆಕಾಶ ಮನಾದಿ ಇಂದ್ರಿಯಾಭಿಮಾನಿಗಳೂ ಆದ ದೇವತೆಗಳು ತಮ್ಮನ್ನು ತಿಳಿದು ಪೂಜಿಸಿದಾಗ್ಯೂ, ಜ್ಞಾನಿಗಳಾದ ಭಗವದ್ಭಕ್ತರನ್ನು ಸದ್ಭಕ್ತಿಯಿಂದ ಪೂಜಿಸದವರನ್ನು ಪವಿತ್ರರನ್ನಾಗಿ ಮಾಡುವುದಿಲ್ಲ. ಜ್ಞಾನಿಗಳ ಮೂಲಕವಾಗಿಯೇ ಜ್ಞಾನೋಪದೇಶ ಮಾಡಿಸಿ ಪಾವನ್ನರನ್ನಾಗಿ ಮಾಡುವರೆಂದರ್ಥ.

ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ ।
ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ ॥

ಎಂಬ ಭಾಗವತಾರ್ಥವು ಹೇಳಲ್ಪಟ್ಟಿತು ॥ ೧೧ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ದೇವತಾಂತರ್ಗತ ಶ್ರೀಪರಮಾತ್ಮನನ್ನು ತಿಳಿಯದೇ, ಕೇವಲ ದೇವತೆಗಳನ್ನು ನೇರವಾಗಿ ಪೂಜಿಸುವುದರಿಂದ, ಆ ದೇವತೆಗಳು ಒಂದೂ ಅನುಗ್ರಹಿಸುವುದಿಲ್ಲವೆಂದು ತಿಳಿಸುತ್ತಾರೆ.

ಅಗ್ನಿಯು ಜಡಗೋಳಕವು. ಅಗ್ನಿ ತತ್ತ್ವಕ್ಕೆ ಅಭಿಮಾನಿ ಅಗ್ನಿದೇವನು. ಹೋಮಾಗ್ನಿ, ಉರಿಯುತ್ತಿರುವ ಜ್ವಾಲೆ, ದೇಹಗತ ಯೋಗಾಗ್ನಿ ಇತ್ಯಾದಿ ಅಧಿಷ್ಠಾನಗಳಲ್ಲಿ ಅಗ್ನಿದೇವತೆಯು ಇದ್ದಾನೆ. ಅಗ್ನಿಯನ್ನು ಪೂಜಿಸುವುದು ಎಂದರೆ ಅಗ್ನ್ಯಂತರ್ಗತಭಾರತೀರಮಣಮುಖ್ಯಪ್ರಾಣಾಂತರ್ಗತ ಹರಿಣೀಪತಿ ಪರಶುರಾಮದೇವರ ಪೂಜೆ ಎಂದರ್ಥ. ಅಗ್ನಿಯನ್ನೇ ಸಾಕ್ಷಾತ್ತಾಗಿ ದೇವರೆಂದು ಭಾವಿಸಿ, ಪೂಜಿಸುವ ಆಗ್ನ್ಯೋಪಾಸಕರ ಪೂಜೆಯನ್ನು ಅಗ್ನಿಯು ಸ್ವೀಕರಿಸದೇ ಅನರ್ಥರೂಪವಾದ ಫಲವನ್ನು ಕೊಡುತ್ತಾನೆ.

ಸೋಮ ಎಂದರೆ ಮಹರುದ್ರದೇವರು. ಉಮಯಾ ಸಹ ವರ್ತತೇ ಇತಿ ಸೋಮಃ ಎಂಬ ಶಬ್ದನಿರ್ವಚನಾನುಸಾರ, ಉಮಾದೇವಿ ಸಹಿತನಾದ ಈಶ್ವರನೆಂದರ್ಥ. (ಸ + ಉಮ = ಸೋಮ) ರುದ್ರನೇ ಸರ್ವೋತ್ತಮನೆಂದು ಪೂಜಿಸುವ ರುದ್ರೋಪಾಸಕರ ಉಪಾಸನೆಯನ್ನು ಶ್ರೀರುದ್ರದೇವರು ಸ್ವೀಕರಿಸುವುದಿಲ್ಲ. ರುದ್ರಾಂತರ್ಗತ ವಾಯ್ವಂತರ್ಗತ ನರಸಿಂಹಾಭಿನ್ನ ಸಂಕರ್ಷಣ ಎಂಬ ಭಾವನೆಯಿಂದ ಮಾಡಿದ ಪೂಜೆಯು ಪರಮ ತಾರಕವು.

ಸೂರ್ಯನು ತೇಜೋರೂಪಿಯು. ಸೂರ್ಯನ ತೇಜಸ್ಸಿಗೆ ತೇಜೋಪ್ರದನು ಘೃಣೀನಾಮಕ ಆದಿತ್ಯವಾಚ್ಯ ಶ್ರೀಪರಮಾತ್ಮನು. ಸೂರ್ಯಾರ್ಚನೆ ಎಂದರೆ. ಸೂರ್ಯಾಂತರ್ಗತ ಭಾರತೀಪತ್ಯಂತರ್ಗತ ಘೃಣೀನಾಮಕ ಶ್ರೀಮನ್ನಾರಾಯಣನ ಪೂಜೆ ಎಂದರ್ಥ,

ಚಂದ್ರನ ತಂಪಾದ ಅಮೃತಮಯ ಕಿರಣಗಳ ಪ್ರಕಾಶಕ್ಕೆ ಮುಖ್ಯಕಾರಣವು ಚಂದ್ರಾಂತರ್ಗತ ಭಗವದ್ರೂಪವು. ಚಂದ್ರನೇ ಸರ್ವೇಶ್ವರನೆಂದು ಪೂಜಿಸುವರ ಉಪಾಸನೆಯನ್ನು ಜ್ಞಾನಿಯಾದ ಚಂದ್ರನು ಸ್ವೀಕರಿಸುವುದಿಲ್ಲ.

ಅಶ್ವಿನ್ಯಾದಿ ನಕ್ಷತ್ರಗಳು ಇಪ್ಪತ್ತೇಳು. ಘೃಣೀನಾಮಕ ಪರಮಾತ್ಮನೇ ನಕ್ಷತ್ರಾಭಿಮಾನಿ ದೇವತಾಂತರ್ಗತನಾಗಿ, ದ್ಯುತಿಪ್ರದನಾಗಿದ್ದಾನೆ. ಅಂತೆಯೇ ಅಂಗಾರಕಾದಿ ನವಗ್ರಹಗಳೂ ಗ್ರಾಹ್ಯ. ಸಕಲಗ್ರಹಬಲನಾದ ಸರಸಿಜಾಕ್ಷನು ಗ್ರಹಗಳ ಚಲನೆ, ಗ್ರಹಾಭಿಮಾನಿದೇವತೆಗಳ ದ್ವಾರಾ ಫಲಪ್ರದತ್ವ, ಇವುಗಳಿಗೆ ಮುಖ್ಯ ಕಾರಣನಾಗಿದ್ದಾನೆ.

ಭೂಮಿಯ ಅಭಿಮಾನಿದೇವತೆ ಭೂದೇವಿ ಹಾಗೂ ಶನೈಶ್ಚರ. ಭೂತತ್ತ್ವದಲ್ಲಿ ತತ್ತ್ವಾಭಿಮಾನಿದೇವತಾಂತರ್ಗತನಾದ ಕೃಷ್ಣನಾಮಕ ಶ್ರೀಭೂವರಾಹಾ ಭಗವದ್ರೂಪೋಪಾಸನೆ ಮಾಡಬೇಕು.

ಗಂಗಾನದಿಯ ಜಲ ಕೇವಲ ಜಡೋದಕ ನದ್ಯಭಿಮಾನಿದೇವತಾ ಸಾಕ್ಷಾತ್ ಗಂಗಾದೇವಿ. ಗಂಗಾಂತರ್ಗತ ಭಗವದ್ರೂಪೋಪಾಸನೆಯೇ ಪರಮತಾರಕವು.

ಭೂಲೋಕದಲ್ಲಿರುವ ಪವಿತ್ರಕ್ಷೇತ್ರಗತ ತೀರ್ಥಗಳು ಆಯಾಯಾ ತೀರ್ಥಾಭಿಮಾನಿಗಳ ಸ್ಮರಣೆ ಅವರ ಅಂತರ್ಗತ ತೀರ್ಥನಾಮಕ ಕ್ಷೇತ್ರಾಭಿಮಾನಿ ಭಗವದುಪಾಸನೆ ಪರಮಮುಖ್ಯ.

ಭೂತವಾಯುವಿಗೆ ಪ್ರವಹವಾಯು ತತ್ತ್ವಾಭಿಮಾನಿಯು. ವಾಯ್ವೋಪಾಸಕರು ಭೂತವಾಯು ಗೋಳಕಗತ ವಾಯ್ವಂತರ್ಗತ ಭಗವದ್ರೂಪವನ್ನು ಉಪಾಸಿಸಬೇಕು.

ಆಕಾಶಕ್ಕೆ ಅಭಿಮಾನಿ ಗಣಪತಿ ಶಬ್ದಗುಣಗ್ರಾಹಕನು ಗಣಪತಿಯನ್ನೇ ಸರ್ವೇಶ್ವರನೆಂದು ಉಪಾಸಿಸುವವರು ಗಣಾಪತ್ಯರು. ಆ ಪೂಜೆ ವ್ಯರ್ಥ. ಗಣಪತ್ಯಂತರ್ಗತ ಪವನಾಂತರ್ಗತ ಶ್ರೀವಿಶ್ವಂಭರನಾಮಕ ಭಗವಂತನ ಉಪಾಸನೆಯನ್ನು ಮಾತ್ರ ಗಣಪತಿಯು ಸ್ವೀಕರಿಸುವನು. ಇಂತೆಯೇ ಭೂತಪಂಚಕಗಳ

ಧರ್ಮಗಳಾದ ಶಬ್ದಾದಿ ಪಂಚತನ್ಮಾತ್ರಗಳು ಗ್ರಾಹ್ಯ. ತನ್ಮಾತ್ರಾಭಿಮಾನಿದೇವತ್ತಾ ಅವರಂತರ್ಗತ ಭಗವದ್ರೂಪೋಪಾಸನೆ ಮಾತ್ರ ತಾರಕವು.

ಪೂರ್ವೋಕ್ತ ಅನಲಾದಿ ದೇವತೆಗಳು ಉತ್ತಮಾಧಿಕಾರಿಗಳಾದ ಭಗವದ್ಭಕ್ತರು. ಅವರ ಅಂತರ್ಗತ ಭಗವದ್ರೂಪಗಳನ್ನು ಉಪಾಸನೆಮಾಡದೆ ನೇರವಾಗಿ ಅವರನ್ನೇ ದೇವರೆಂದು ಪೂಜಿಸಿದರೆ ಅನುಗ್ರಹ ಮಾಡುವುದಿಲ್ಲ ॥ ೧೧ ॥

## ಪದ್ಯ ೧೨

**ಮೂಲ**

**ಕೆಂಡ ಕಾಣದೆ ಮುಟ್ಟಿದರು ಸರಿ ।**
**ಕಂಡು ಮುಟ್ಟಲು ದಹಿಸದಿಪ್ಪುದೆ ।**
**ಪುಂಡರೀಕ ದಳಾಯತಾಕ್ಷನ ವಿಮಲಪದಪದ್ಮ ॥**
**ಬಂಡುಣಿಗಳೆಂದೆನಿಪ ಭಕ್ತರ ।**
**ಹಿಂಡು ನೋಡಿದ ಮಾತ್ರದಲಿ ತನು ।**
**ದಿಂಡು ಗೆಡಹಿದ ನರನ ಪಾವನಮಾಳ್ಪರಾಕ್ಷಣದಿ ॥ ೧೨ ॥**

**ಅವತರಣಿಕೆ:-**

ಭಗವದ್ವಿಭೂತಿ ಸಂಪನ್ನರಾದ ಶ್ರೀಹರಿಯ ಭಕ್ತರ ದರ್ಶನ ಭಾಗ್ಯ, ಸಮಾಗಮದಿಂದ ಅವರ ಅಡಿದಾವರೆಗಳಿಗೆ ಎರಗಿದ ನರರ ಸರ್ವ ಪಾಪ ಸ್ತೋಮಗಳು ಪರಿಹಾರವಾಗುವುವು ಎಂದು ಸುಂದರ ದೃಷ್ಟಾಂತ ಸಹಿತ ತಿಳಿಸುತ್ತಾರೆ. ॥ ೧೨ ॥

## ಪ್ರತಿಪದಾರ್ಥ

**ಕೆಂಡ**=ಅಗ್ನಿಯನ್ನು (ಅಗ್ನಿ ಸಂಸರ್ಗದಿಂದ ಕೆಂಪಾದ ಇದ್ದಿಲು) **ಕಾಣದೆ** =ನೋಡದೆ, **ಮುಟ್ಟಿದರು ಸರಿ**=ಹಸ್ತದಿಂದ ಸ್ಪರ್ಶಮಾಡಿದರೂ ಸರಿ, ಅಥವಾ ಕೆಂಡದಮೇಲೆ ಕಾಲನ್ನು ಇಟ್ಟರೂ ಸರಿ, **ಕಂಡು ಮುಟ್ಟಲು**=ಅಗ್ನಿ ಎಂತ ತಿಳಿದು ಮುಟ್ಟಿದರೂ ಸರಿ, **ದಹಿಸದಿಪ್ಪುದೆ**=ಸುಡದೇ ಇರುವುದೇ ? **ಪುಂಡರೀಕದಳಾಯತಾಕ್ಷನ**=ಕಮಲದಳಗಳಂತೆ ವಿಶಾಲವಾದ ನೇತ್ರಗಳುಳ್ಳ ಶ್ರೀಪರಮಾತ್ಮನ (ಪುಂಡರೀಕ=ಕಮಲದಪುಷ್ಪ ಆಯತ=ವಿಸ್ತಾರವಾದ. ಅಕ್ಷನ-ಕಣ್ಣುಳ್ಳವನ) **ವಿಮಲ**=ನಿರ್ದೋಷಗಳಾದ **ಪದಪದ್ಮ**=ಚರಣಕಮಲಗಳಿಗೆ, **ಬಂಡುಣಿಗಳೆಂದೆನಿಪ**=ಭ್ರಮರಗಳೆನಿಸುವ (ಬಂಡು=ಪುಷ್ಪಗತಮಕರಂದ ಉಣಿ=ಮಕರಂದ ಪಾನಮಾಡವ ಭ್ರಮರ), **ಭಕ್ತರ**=ಭಗವದ್ಭಕ್ತರ, **ಹಿಂಡು** =ಸಮೂಹವು, **ನೋಡಿದ ಮಾತ್ರದಲಿ**=ದರ್ಶನಮಾಡಿದ ಮಾತ್ರಕ್ಕೆ, **ತನು ದಿಂಡುಗೆಡಹಿದ**=ತನ್ನ ದೇಹವನ್ನೂ ಅವರ ಪಾದಪದ್ಮಗಳಿಗೆ ನಮಸ್ಕರಿಸಿದ, **ನರನ**=ಮಾನವನ, **ಆ ಕ್ಷಣದಿ**=ತತ್ಕ್ಷಣದಲ್ಲಿಯೇ, **ಪಾವನ ಮಾಳ್ಪರು**= ಪಾಪಪರಿಹಾರ ದ್ವಾರಾ ಪವಿತ್ರನನ್ನಾಗಿ ಮಾಡುವರು. ಅಂದರೆ, ಭಗವದ್ಭಕ್ತರ ಕೃಪಾಕಟಾಕ್ಷವೀಕ್ಷಣದಿಂದ ಸಕಲ ದುರಿತಕ್ಷಾಳನೆ. ॥ ೧೨ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅಧಿಕಾರಿಯ ಉದ್ಧಾರ ಮಾಡಬೇಕಾದರೆ ಭಗವದ್ಭಕ್ತರು ಹೊರತು ಅನ್ಯರು ದಾರೂ ಪವಿತ್ರ ಮಾಡಿ ಉದ್ಧಾರ ಮಾಡಲಾರರು ಎಂದು ಹೇಳತಾರೆ.

ಅಗ್ನಿಯನ್ನು ಮನುಷ್ಯರಾದವರು ತಥಾ ಪ್ರಾಣಿಗಳಾದವರು, ಬೆಂಕಿ ಎಂತ ಮನಸ್ಸಿನಿಂದ ತಿಳಿಯದೆ ಹಸ್ತದಿಂದ ಸ್ಪರ್ಶ ಮಾಡಿದರೂ ಸರಿಯೆ ಸುಡೋದಾಗ ತದೆ. ಅಗ್ನಿ ಎಂತ ತಿಳದು ಮುಟ್ಟಿದಾಗ್ಯೂ ಸರಿಯೆ ಸುಡದೇ ಇರೋದೆ ಎಂದರೆ ಸ್ಪರ್ಶಮಾತ್ರದಿಂದ ಸುಡತದೆ ಹ್ಯಾಂಗೊ ತದ್ವತ್

ಹರಿರ್ಹರತಿ ಪಾಪಾನಿ ದುಷ್ಟಚಿತ್ತೈರಪಿ ಸ್ಮೃತಃ ।
ಅನಿಚ್ಛಯಾಪಿ ಸಂಸ್ಪೃಷ್ಟೋ ದಹತ್ಯೇವ ಪಾವಕಃ ॥

ಎಂಬ ವಚನಾನುಸಾರ, ಕಮಲದಳಗಳೋಪಾದಿಯಲ್ಲಿ ವಿಶಾಲವಾದ ನೇತ್ರಗಳುಳ್ಳ ಪರಮಾತ್ಮನ ನಿರ್ದೋಷಗಳಾದ ಪಾದಗಳೆಂಬೋ ಪದ್ಮಗಳಲ್ಲಿ, ಕಮಲಗತ ಮಕರಂದ ಪಾನಮಾಡತಕ್ಕ ಭ್ರಮರದೋಪಾದಿಯಲ್ಲಿ, ಪರಮಾತ್ಮನ ಪಾದಕಮಲಗತ ಮಹಾತ್ಮ್ಯ ಎಂಬ ಮಕರಂದ ಪಾನಮಾಡತಕ್ಕ, ಭ್ರಮರಸಾಂಕೇತದಿಂದ ಕರಸತಕ್ಕ ಭಗದ್ಭಕ್ತರ ಮಹಾತ್ಮ್ಯಾದಿಗಳ ತಿಳಿಯದೆ, ಸಾಧಾರಣವಾಗಿ ಲೋಕರೀತ್ಯಾ ಅವರ ಸಂಗ ಮಾಡಿದರೆ, ಅಗ್ನಿ ಎಂತ ತಿಳಿಯದೇನೇ ಮುಟ್ಟಿದ ಅಗ್ನಿ ಹ್ಯಾಂಗೆ ಸುಡತದೋ ತದ್ವತ್, ಸಂಗದಿಂದ ಐಹಿಕ ವಿಷಯಗಳು ನಶ್ವರ ಎಂತ ತಿಳಿಸಿ, ಭಗವತ್ತತ್ತ್ವವಾಕ್ಯ ಉಚ್ಚಾರಣದಿಂದ ಅಧಿಕಾರಿಯ ಮನಸ್ಸನ್ನ ತತ್ತ್ವಯುಕ್ತವನ್ನಾಗಿ ಮಾಡಿ, ಭಗವದನುಗ್ರಹ ಸಂಪಾದಿಸಿ ಕೊಟ್ಟು ಉದ್ಧಾರ ಮಾಡುವಂಥ ಭಕ್ತರ, ಇನ್ನು ಅಗ್ನಿ ಎಂತ ತಿಳಿದುಮುಟ್ಟಿದವಗೆಹ್ಯಾಂಗೆ ಸುಡತದೋ ತದ್ವತ್, ಭಕ್ತರಲ್ಲಿ ಇರತಕ್ಕ ಮಹಾಮಹಾತ್ಮ್ಯ ತಿಳದು ಭಕ್ತರ ಆಶ್ರಯ ಮಾಡಿ, ಅಗ್ನಿಯನ್ನ ಕರಸ್ಪರ್ಶ ಮಾಡಿದಂತೆ, ಭಕ್ತರೆಂಬ ಅಗ್ನಿಯನ್ನ ಮನಸ್ಸಾಂಕೇತವಾದ ಸ್ಪರ್ಶ ಮಾಡಿ, ಇಂಥಾ ಭಕ್ತರ ಸಮೂಹ ನೋಡಿದ ಮಾತ್ರಕ್ಕೆ ಭಕ್ತರ ಶರಣಾಗತನಾಗಿ ದೇಹಾಖ್ಯದಂಡವನ್ನ ಸಾಷ್ಟಾಂಗ ನಮಸ್ಕಾರದಿಂದ ಅವರ ಪಾದದ ಮ್ಯಾಲೆ ಕೆಡಹಿದ ಆ ಮನುಷ್ಯನ್ನ ಸ್ವೀಕರಿಸಿ, ಪವಿತ್ರನನ್ನಾಗಿ ಅದೇ ಕ್ಷಣದಲ್ಲಿ ಮಾಡತಾರೆ.

ವಿಶೇಷಾರ್ಥ—

ನಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ ।
ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ ॥

ಎಂಬ ಭಾಗವತ ದಶಮಸ್ಕಂಧೋಕ್ತಿ ರೀತ್ಯಾ ಭಕ್ತರಸಂಗ ಅವಶ್ಯ ಮಾಡಬೇಕಂತ ತಾತ್ಪರ್ಯ. ॥ ೧೨ ॥

೨. ಭಾವಪ್ರಕಾಶಿಕೆ

ಬೆಂಕಿಯು ಕೆಂಡವೆಂದು ನಾವು ತಿಳಿದೂ ಮುಟ್ಟಿದರೂ, ತಿಳಿಯದೇ ಮುಟ್ಟಿ

ದರೂ ಸಹ ಅದು ಹೇಗೆ ಸುಟ್ಟೇಸುಡುವುದೋ, ಹಾಗೆ ಪರಮಾತ್ಮನ ಪಾದಕಮಲದಲ್ಲಿ ಭ್ರಮರದಂತೆ ಅಂದರೆ ಭ್ರಮರವು ಅವಿಚ್ಛಿನ್ನವಾಗಿ ಕಮಲದ ಮಕರಂದವನ್ನು ಸ್ವೀಕರಿಸುವಂತೆ ಯಾರು ಸರ್ವದಾ ಪರಮಾತ್ಮನ ಪಾದಧ್ಯಾನ ನಿರತರಾಗಿರುವರೋ, ಅಂತಹ ಭಕ್ತರ ಗುಂಪುಗಳ ದರ್ಶನಮಾತ್ರದಿಂದ ಇವನ ಪಾಪಗಳೆಲ್ಲವೂ ಪರಿಹಾರವಾಗುವುವು. ನೋಡುವವನಿಗೆ ಆ ಬ್ರಾಹ್ಮಣರ ಮಹಾತ್ಮ್ಯಜ್ಞಾನವಿದ್ದರೂ ಇಲ್ಲದಿದ್ದರೂ ಸಹ ಭಕ್ತರಿಗೆ ಸಾಷ್ಟಾಂಗ ನಮಸ್ಕಾರ ಮಾಡುವುದರಿಂದ ಅವರು ತಕ್ಷಣದಲ್ಲೇ ಇವನನ್ನು ಪವಿತ್ರನನ್ನಾಗಿ ಮಾಡಿ ಇವನನ್ನು ಕೃತಾರ್ಥನನ್ನಾಗಿ ಮಾಡುವರು. ಇದೇ ವಿಷಯ ಮೋಕ್ಷಧರ್ಮದಲ್ಲಿ 'ವಿಪ್ರೌಘ ದರ್ಶನಾತ್ಕ್ಷಿಪ್ರಂ ಕ್ಷೀಯಂತೇ ಪಾಪರಾಶಯಃ ॥ ವಂದನಾನ್ಮಂಗಳಾವಾಪ್ತಿರರ್ಚನಾದಚ್ಯುತಂ ಪದಂ ॥' ಬ್ರಾಹ್ಮಣರ ಗುಂಪನ್ನು ನೋಡೋಣ ಮಾತ್ರದಿಂದ ಇವನ ಪಾಪರಾಶಿಗಳೆಲ್ಲವು ಕ್ಷಯವಾಗುವುವು. ನಮಸ್ಕಾರ ಮಾಡಲು ಮಂಗಳ ಪ್ರಾಪ್ತಿಯಾಗುವುದು. ಪೂಜಿಸಿದರೆ ಪರಮಾತ್ಮನು ಪ್ರೀತನಾಗಿ ತನ್ನ ಪದವಿಯನ್ನು ಕೊಡುವನು ಎಂದು ಹೇಳಿರುವರು. ಬೆಂಕಿಯನ್ನು ಮುಟ್ಟಿದವನು, ಇಲ್ಲಿ ಬೆಂಕಿ ಇದೆ ಎಂದು ತಿಳಿಯದಿದ್ದರೂ ಆ ಬೆಂಕಿಯು ತನ್ನ ಶಕ್ತಿಯನ್ನು ತೋರಿಸೇ ತೋರಿಸುವುದು. ಅದರಂತೆ ಇವರು ಬ್ರಾಹ್ಮಣೋತ್ತಮರೆಂದು ತಿಳಿದುಕೊಳ್ಳದೇ, ಅವರನ್ನು ಕಂಡರೂ ಅವರು ಇವನಿಗೆ ಒಳ್ಳೆಯ ಉಪದೇಶವನ್ನು ಕೊಟ್ಟು ಉದ್ಧರಿಸುವರು. ದಶಮಸ್ಕಂಧ ೮೭ನೆಯ ಅಧ್ಯಾಯದಲ್ಲಿ, 'ನಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ ॥ ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ' ಗಂಗಾ ಮೊದಲಾದ ತೀರ್ಥಗಳು ಸ್ನಾನಾದಿಗಳಿಂದ ಪವಿತ್ರರನ್ನಾಗಿ ಮಾಡುವದಿಲ್ಲವೆಂತಿಲ್ಲ, ಮಣ್ಣಿನಿಂದಲೂ, ಶಿಲೆಯಿಂದಲೂ ಮಾಡಲ್ಪಟ್ಟ ಪ್ರತಿಮೆಗಳು ತಮ್ಮ ದರ್ಶನ ಪೂಜಾದಿಗಳಿಂದ ಪವಿತ್ರರನ್ನಾಗಿ ಮಾಡುವುದಿಲ್ಲವೆಂತಿಲ್ಲ, ಮಾಡುವವು. ಸಾಧುಗಳು ಹಾಗಲ್ಲ, ಅವರನ್ನು ನೋಡುತ್ತಲೇ ಜ್ಞಾನೋಪದೇಶವನ್ನು ಮಾಡಿ ಪವಿತ್ರರನ್ನಾಗಿ ಮಾಡುವರು ಎಂದು ಹೇಳಿರುವರು. ಬ್ರಾಹ್ಮಣರಿಗೆ ಇಷ್ಟು ಮಹಿಮೆಯನ್ನು ಹೇಳುವುದರಿಂದ ದೇವತೆಗಳಿಗಿಂತಲೂ ಬ್ರಾಹ್ಮಣರು ಉತ್ತಮರೇ ? ಎಂಬ ಶಂಕೆಯು ಬರಬಹುದು. ಈ ವಿಷಯದಲ್ಲಿ ಏಕಾದಶಸ್ಕಂಧ ೨ನೆಯ ಅಧ್ಯಾಯದಲ್ಲಿ, ನಾರದರನ್ನು ಕುರಿತು ವಸುದೇವನು

ಹೇಳುವ ಮಾತು, 'ಭೂತಾನಾಂ ದೇವಚರಿತಂ ದುಃಖಾಯ ಚ ಸುಖಾಯ ಚ ॥ ಸುಖಾಯೈವ ಹಿ ಸಾಧೂನಾಂ ತಾದೃಶಾಮಚ್ಯುತಾತ್ಮನಾಂ ॥ ಭಜಂತಿ ಯೇ ಯಥಾ ದೇವಾನ್ ದೇವಾ ಅಪಿ ತಥೈವತಾನ್ ॥ ಛಾಯೇವ ಕರ್ಮ ಸಚಿವಾಃ ಸಾಧವೋ ದೀನವತ್ಸಲಾಃ' ಪ್ರಾಣಿಗಳಿಗೆ ದೇವತೆಗಳು ಸುಖಕ್ಕೂ ದುಃಖಕ್ಕೂ ಸಹ ಕಾರಣರಾಗುವರು. ಪರಮಾತ್ಮನಲ್ಲಿ ಮನಸ್ಸನ್ನು ಸರ್ವದಾ ನಿಲ್ಲಿಸಿದ ನಿಮ್ಮಂಥಾ ಸಾಧುಗಳು ಸುಖಕ್ಕೆ ಮಾತ್ರವೇ ಕಾರಣರಾಗುವಿರಿ ಅದು ಹೇಗೆಂದರೆ ದೇವತೆಗಳನ್ನು ಯಾರು ಯಾರು ಹೇಗೆ ಹೇಗೆ ಭಜಿಸುವರೋ ಆ ಭಜನೆಯನ್ನನುಸರಿಸಿ ಅವರಿಗೆ ಸುಖವನ್ನೋ ದುಃಖವನ್ನೋ ಕೊಡುವರು. ಅವರು ಮುಖ್ಯವಾಗಿ ಕರ್ಮಕ್ಕೆ ಮಂತ್ರಿಯಂತೆ ಇದ್ದು ಮಾಡಿದ ಕರ್ಮಕ್ಕೆ ತಕ್ಕ ಫಲವನ್ನು ಕೊಡುವರು. ಇದರ ತಾತ್ಪರ್ಯವೇನೆಂದರೆ, ದೇವತೆಗಳು ಸಾತ್ವಿಕಾದಿ ತ್ರಿವಿಧ ಜೀವರ ಯೋಗ್ಯತೆಯನ್ನು ತಿಳಿದು, ಸಾತ್ವಿಕರಿಗೆ ತಮ್ಮಲ್ಲಿ ಭಕ್ತಿಯನ್ನು ಹುಟ್ಟಿಸಿ, ತಮ್ಮ ಪೂಜೆಯನ್ನು ತಾರತಮ್ಯಪ್ರಕಾರ ತೆಗೆದುಕೊಂಡು ಪರಮಾತ್ಮನಲ್ಲಿ ಮನಸ್ಸನ್ನು ನಿಲ್ಲಿಸುವಂತೆ ಮಾಡಿ ಮುಕ್ತಿಸಾಧನವನ್ನು ಮಾಡಿಸುವರು. ರಾಜಸರಲ್ಲಿ ಮಿಶ್ರಬುದ್ಧಿಯನ್ನು ಹುಟ್ಟಿಸಿ ಮಿಶ್ರಫಲವನ್ನು ಕೊಡುವರು. ತಾಮಸರಿಗೆ ತಮ್ಮಲ್ಲಿ ದ್ವೇಷವನ್ನು ಹುಟ್ಟಿಸಿ, ಪರಮಾತ್ಮನಲ್ಲೂ ದ್ವೇಷವನ್ನು ಮಾಡಿಸಿ, ತಮಸ್ಸಾಧನವನ್ನು ಮಾಡಿಸುವರು ಎಂಬ ತಾತ್ಪರ್ಯ (ಈ ಅರ್ಥವು ವಿಜಯಧ್ವಜೀಯ ವ್ಯಾಖ್ಯಾನವನ್ನನುಸರಿಸಿ ಬರೆಯಲ್ಪಟ್ಟಿದೆ.) ಸಾಧುಗಳು ಹಾಗಲ್ಲ ಕರುಣಾಳುಗಳು. ತಮ್ಮನ್ನು ಯಾವನು ನೋಡುತ್ತಾನೆಯೋ, ಅವನು ಎಂತಹವನೇ ಆಗಲಿ ಅವನಿಗೆ ಸದುಪದೇಶವನ್ನು ಮಾಡುವರು ಎಂದು ಹೇಳಿರುವರು. ಈ ಮಾತಿನಿಂದ ದೇವತೆಗಳಿಗಿಂತಲೂ ಋಷಿಗಳು (ಬ್ರಾಹ್ಮಣರು) ಉತ್ತಮರೆಂದು ತಿಳಿಯಬಾರದು. ದೇವತೆಗಳು ಭಗವದಾಜ್ಞಾನುಪ್ರಕಾರ ಯೋಗ್ಯತಾನುಸಾರವಾಗಿ ಫಲ ಕೊಡುವವರಾದುದರಿಂದ ಅವರು ಶ್ರೇಷ್ಠರೇ. ಋಷಿಗಳು, ಮಕ್ಕಳು ಅಯೋಗ್ಯರಾಗಿರಲಿ ಯೋಗ್ಯರಾಗಿರಲಿ, ಅವರಲ್ಲಿ ತಂದೆಗಳು ಹೇಗೆ ವಾತ್ಸಲ್ಯ ಉಳ್ಳವರಾಗಿರುವರೋ ಹಾಗೆ ಜನರು ಕಷ್ಟಪಡುವುದನ್ನು ನೋಡಲಾರದೆ ಅವರಿಗೆ ಒಳ್ಳೆಯ ದಾರಿಯನ್ನೇ ತೋರಿಸುವರು. ಆದರೂ ದೇವತೆಗಳಿಗಿಂತಲೂ ಋಷಿಗಳು ತಾರತಮ್ಯದಲ್ಲಿ ಕಮ್ಮಿಯೆ. ಇಷ್ಟಾದರೂ ಇವರ ಉಪದೇಶವು

ತಮೋಯೋಗ್ಯರಿಗೆ ರುಚಿಸುವುದೇನು ? ಇಲ್ಲ. ಇವರ ಕೃತ್ಯವೆಷ್ಟೋ ಅಷ್ಟು ಇವರು ಮಾಡುತ್ತಾರೆ. ಅವರು ಯೋಗ್ಯರಾದರೆ ಮಾತ್ರವೇ ಗ್ರಹಿಸುತ್ತಾರೆ. ಅಯೋಗ್ಯರಾದರೆ ಇವರನ್ನು ತಿರಸ್ಕರಿಸಿ ಶಾಪಾದಿಗಳನ್ನು ಪಡೆಯುತ್ತಾರೆ. ಅದಂ ತಿರಲಿ, ಪ್ರಕೃತ, ಸಾಧುಗಳ ಸಂದರ್ಶನದಿಂದಲೇ ಯೋಗ್ಯರಿಗೆ ಜ್ಞಾನೋದಯ ವಾಗಿ ಪರಮಾತ್ಮನನ್ನು ಭಜಿಸುವ ಬುದ್ಧಿಯು ಹುಟ್ಟುವುದು. ಆದ್ದರಿಂದ ಭಕ್ತರಿಗೆ ನಮಸ್ಕಾರ ಮಾಡಿದರೂ, ಕಡೆಗೆ ಅವರ ಗುಂಪನ್ನು ಕಂಡರೂ ಸಹ ಪಾಪ ಪರಿ ಹಾರವಾಗುವದೆಂದು ಹೇಳಿರುವರು. ॥ ೧೨ ॥

**೩. ಭಾವದರ್ಪಣ**

ಹರಿರ್ಹರತಿ ಪಾಪಾನಿ ದುಷ್ಟಚಿತ್ತೈರಪಿಸ್ಮೃತಃ । ಅವಶಾದೇವ ಸಂಸ್ಪೃಷ್ಟೋ ದಹತ್ಯೇವ ಹಿ ಪಾವಕಃ । ಎಂಬೋ ವಚನದ ಭಾವವನ್ನು ಮನಸಿ ನಲ್ಲಿಟ್ಟು ಪರಮಾತ್ಮನ ಪಾದಭಜನಿ ಮಾಡತಕ್ಕ ಭಕ್ತರನ್ನು ನಮಸ್ಕಾರ ಮಾಡಿದ ಮಾತ್ರ ಉದ್ಧಾರ ಮಾಡುತ್ತಾರೆಂದು ಹೇಳುತ್ತಾರೆ, ಕೆಂಡ ಬಂಡುಣಿ = ಭ್ರಮರ. ಹಿಂಡು ಸಮೂಹ. ದಿಂಡುಗೆಡಹಿ ಕಟಗಿಕಟ್ಟಿನ ಹಾಗೆ ಭೂಮಿಯಲ್ಲಿ ದೇಹ ಹಾಕಿ ಎಂಬರ್ಥ ॥ ೧೨ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ದರ್ಶನಾದೇವ ಮುಹೂರ್ತ ಸೇವಯಾ ಇತಿ ವಿರುದ್ಧ ವಾಙ್ನಿರ್ಣಯೇ ಗಂಗಾದಿಷು ಭಜಮಾನಾಃ ಅಪಿ ಪವಿತ್ರಾನ್ ಅವಿಧಾಯ, ಅತ್ಯಂತ ವಿಪಶ್ಚಿದ್ಗತಾ ಏವ ಕಿಂಚಿತ್ಕಾಲ ಏವ ಉಪದೇಶಾತ್ ಪುನಂತಿ ಇತಿ ತಾತ್ಪರ್ಯ ಟೀಕಾರ್ಥಂ ವಿಧಾಯ ಅರ್ಥವಾದ ಮಾಹ—"ಕೆಂಡ" ಇತಿ॥ "ಅನಿಚ್ಛಯಾಽಪಿ ಸಂಸ್ಪೃಷ್ಟೋ ದಹತ್ಯೇವ ಹಿ ಪಾವಕಃ" ಇತ್ಯುಕ್ತೇಃಯಮ್ ॥" "ದಿಂಡುಗೆಡಹಿದ"—ಸಾಷ್ಟಾಂಗ ಮಾಡಿದ ॥ ೧೨ ॥

**ಕನ್ನಡಾರ್ಥ**

ದರ್ಶನದಿಂದಲೇ ಶಾಸ್ತ್ರವನ್ನು ಉಪದೇಶಿಸಿ ಅದರ ಮುಖಾಂತರವಾಗಿ

ಸಜ್ಜನರು, ಸಾಧುಗಳು ಪವಿತ್ರೀಕರಿಸುತ್ತಾರೆ. (ಕೇವಲ ತೀರ್ಥಗಳು_ಸಜ್ಜನರ ಸಹವಾಸದ ನಂತರ ಇವರ ಮುಖಾಂತರ ಪವಿತ್ರಿಸುತ್ತವೆ.) ಮುಹೂರ್ತ ಸೇವಾ ಮಾತ್ರದಿಂದ ಪವಿತ್ರ ಗೊಳಿಸುತ್ತದೆ ಎಂಬ ವಿರುದ್ಧಾರ್ಥಗಳ ವಾಕ್ಯಗಳ ಅರ್ಥವನ್ನು ನಿರ್ಣಯಿಸುವಾಗ ಜ್ಞಾನಿಗಳಾದ ಸಾಧುಗಳು ಗಂಗಾ ಮುಂತಾದುವು ಗಳಲ್ಲಿ ಭಜಿಸುವವರನ್ನು ಸಹ ಪುನೀತರನ್ನು ಮಾಡದೇ ಶ್ರೇಷ್ಠ ಜ್ಞಾನಿಗಳ ಸಹ ವಾಸದಲ್ಲಿರುವವರನ್ನು ಸ್ವಲ್ಪೇ ಅವಧಿಯಲ್ಲಿ ಶಾಸ್ತ್ರೋಪದೇಶದಿಂದ ಪವಿತ್ರೀಕರಿ ಸುತ್ತಾರೆ ಎಂದು ಅರ್ಥವನ್ನು ಹೇಳಿ ಅರ್ಥವಾದವನ್ನು ಹೇಳುತ್ತಾರೆ. ಕಂಡ ಎಂಬ ಪದ್ಯದಿಂದ. ಅಂದರೆ ಶಾಸ್ತ್ರೋಪದೇಶದಿಂದಲೇ ಸಾಧುಗಳು ಪವಿತ್ರಿಸು ತ್ತಾರೆ. ಕಂಡಮಾತ್ರದಿಂದಲೇ ಪವಿತ್ರ ಗೊಳಿಸುವರೆಂಬುದು ಅರ್ಥವಾದವೆಂದು ಭಾವ. ಇಚ್ಛೆಯಿಲ್ಲದೆ ಮುಟ್ಟಿದರೂ ಸಹ ಅಗ್ನಿಯು ಸುಡುತ್ತದೆ ಎಂಬ ಭಾವದ ಶ್ಲೋಕಾನುವಾದವಿದು. ದಿಂಡುಗೆಡಹಿದ ಸಾಷ್ಟಾಂಗ ಪ್ರಣಾಮ ಮಾಡಿದ ॥೧೨॥

## ೫. ಶ್ರೀಗುರುಹೃದಯಪ್ರಕಾಶಿಕೆ

ಇದನ್ನೇ ವಿವರಿಸುತ್ತಾರೆ, ಕಂಡ ಎಂದು. ಕಂಡವನ್ನು ಕಾಣದೆ ಸ್ವಲ್ಪಮುಟ್ಟಿ ದರೆ ಸ್ವಲ್ಪ ಸುಟ್ಟು, ಕಂಡು ಗಟ್ಟಿಯಾಗಿ ಮುಟ್ಟಿದರೆ ಚೆನ್ನಾಗಿ ಸುಡುವಂತೆ, ಪುಂಡರೀಕವೆಂಬ ಬಿಳೀಕಮಲದಳದಂತೆ ವಿಶಾಲನೇತ್ರನಾದ ದೇವರ ನಿರ್ಮಲವಾದ ಪದ್ಮವನ್ನು, ಬಂಡುಣಿ ಎಂದರೆ ಪುಷ್ಪರಸವನ್ನು ಪಾನಮಾಡುವ ಭ್ರಮರದಂತೆ, ಮಾಹಾತ್ಮ್ಯ ಶ್ರವಣ ಮನನಾದಿಗಳಿಂದ ದೇವರನ್ನು ಸೇವಿಸುವ ಶ್ರೀಹರಿಭಕ್ತರ ಗುಂ ಪನ್ನು ನೋಡಿದ ಮಾತ್ರದಿಂದ ಅವರು ಅವರನ್ನು ಪಾವನ ಮಾಡುವರು. ಶರೀರ ವನ್ನು ದಿಂಡುಗೆಡಹಿದ ಎಂದರೆ ಉದ್ದಕ್ಕೆ ಕೆಡವಿ ನಮಸ್ಕರಿಸಿದವರನ್ನು ಭಕ್ತರು ಆ ಕ್ಷಣ ಜ್ಞಾನಕೊಟ್ಟು ಪಾವನ ಮಾಡುವರು ॥ ೧೨ ॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಅಗ್ನಿಯ ಲಕ್ಷಣ ಸುಡುವಿಕೆ. ಕಂಡವನ್ನು ಕಾಣದೆ ಮುಟ್ಟಿದರೂ ಸುಡು ವುದು. ಕಂಡದ ಇರವನ್ನು ತಿಳಿದು ಮುಟ್ಟಿದರೂ ಕೈಯನ್ನು ಸುಡುವುದು. ಇದು

ಕೆಂಡದ ಲಕ್ಷಣವು. ಅಂತೆಯೇ ಕಮಲಪುಷ್ಪದ ದಳಗಳಂತೆ ವಿಸ್ತಾರವಾದ ಕಣ್ಣುಗಳುಳ್ಳ ಪುಂಡರೀಕದಳಾಯತಾಕ್ಷನ ಪಾದಪದ್ಮಗಳಿಗೆ ಅನವರತ ಭ್ರಮರದೋಪಾದಿಯಲ್ಲಿರುವ ಭಗವದ್ಭಕ್ತರ ದರ್ಶನಲಾಭ ಪರಮಮಂಗಳಪ್ರದವು–ಪರಮಾತ್ಮನ ಭಕ್ತರ ಸಮೂಹ–ದರ್ಶನಮಾತ್ರದಿಂದಲೇ ಪತಿತರ ಪಾಪಗಳು ಸುಟ್ಟು ಭಸ್ಮವಾಗುವುವು. ॥ ೧೨ ॥

✻✻✻✻

## ಪದ್ಯ ೧೩

**ಮೂಲ:-**

**ಈ ನಿಮಿತ್ತ ಪುನಃ ಪುನಃ ಸು ।**
**ಜ್ಞಾನಿಗಳ ಸಹವಾಸ ಮಾಡು ಕು ।**
**ಮಾನವರ ಕೂಡಾಡಿದರು ಲೌಕಿಕಕೆ ಮರುಳಾಗಿ ॥**
**ವೈನತೇಯಾಂಸಗನ ಸರ್ವ ।**
**ಸ್ಥಾನದಲಿ ತನ್ನಾಮರೂಪವ ।**
**ಧೇನಿಸುತ ಸಂಚರಿಸು ಇತರಾಲೋಚನೆಯ ಬಿಟ್ಟು ॥ ೧೩ ॥**

**ಅವತರಣಿಕೆ**

ದುಷ್ಟಜನರ ಸಂಗ ಪರಿತ್ಯಾಗಮಾಡಿ, ಗರುಡಗಮನನಾದ ಶ್ರೀಪರಮಾತ್ಮನ ರೂಪಗಳನ್ನು ಸರ್ವಾಧಿಷ್ಠಾನಗಳಲ್ಲಿ ಸದಾ ಧೇನಿಸುತ ಸಂಚರಿಸುತ್ತಿರೆಂದು ತಿಳಿಸುತ್ತಾರೆ. ॥ ೧೩ ॥

## ಪ್ರತಿಪದಾರ್ಥ

**ಈ ನಿಮಿತ್ತ** = ಈ ಕಾರಣದಿಂದ, **ಪುನಃ ಪುನಃ** = ಮೇಲಿಂದ ಮೇಲೆ, **ಸುಜ್ಞಾನಿಗಳ** = ಭಗವತ್ತತ್ತ್ವಗಳನ್ನು ಚೆನ್ನಾಗಿ ತಿಳಿದಿರುವ ಜ್ಞಾನವಂತರ, **ಸಹವಾಸ ಮಾಡು** = ಸಂಗಮಾಡು ಅಂದರೆ, ಸತ್ಸಹವಾಸವೇ ಶ್ರೇಷ್ಠವೆಂದರ್ಥ. **ಲೌಕಿಕಕೆ ಮರುಳಾಗಿ** = ಪ್ರಾಪಂಚಿಕ ವಿಷಯಾದಿ ಭೋಗಗಳಿಗೆ ಮನಸೋತು, **ಕುಮಾನವರ** = ಭಗವದ್ದ್ವೇಷಿಗಳಾದ, ವಿಷಯಾಸಕ್ತರಾದ ದುರ್ಜನರ, **ಕೂಡದಿರು** = ಸಂಗವನ್ನು ಮಾಡಬೇಡ. ಅಂದರೆ ದುರ್ಜನರ ಸಹವಾಸ ಸರ್ವಪ್ರಕಾರದಿಂದಲೂ ತ್ಯಾಜ್ಯ. **ವೈನತೇಯಾಂಸಗನ** = ಗರುಡದೇವರ ಭುಜದಮೇಲೆ ವಿದ್ಯಮಾನನಾದ ಶ್ರೀಹರಿಯನ್ನು (ವೈನತೇಯ = ವಿನುತಾದೇವಿಯ ಪುತ್ರನಾದ ಗರುಡನು. ಅಂಸ = ಆ ಗರುಡನ ಹೆಗಲು, ಅಂಸಗನ = ಗರುಡನ ಹೆಗಲ ಮೇಲೆ ಕೂತು ಸಂಚರಿಸುವ ಗರುಡಧ್ವಜನಾದ ಶ್ರೀಹರಿ) **ಸರ್ವಸ್ಥಾನದಲಿ** = ಚರಾಚರ ಸಮಸ್ತ ಪ್ರದೇಶಗಳಲ್ಲಿ, **ತನ್ನಾಮರೂಪವ** = ಆಯಾಯಾ ಅಧಿಷ್ಠಾನಗಳಲ್ಲಿ ಆಯಾಯಾ ಹೆಸರಿನಿಂದ ವಿದ್ಯಮಾನನಾಗಿರುವ ತದ್ರೂಪಾತ್ಮಕನಾದ ಶ್ರೀಹರಿಯ ನಾಮರೂಪಗಳನ್ನು **ಧೇನಿಸುತ** = ಸರ್ವತ್ರಗತ ಸರ್ವೇಶ್ವರನ ಚಿಂತನೆ ಮಾಡುತ್ತ, **ಇತರಾಲೋಚನೆಯ ಬಿಟ್ಟು** = ಭಗವದ್ವಿಷಯಗಳಲ್ಲದೆ ಅನ್ಯ ವಿಷಯಗಳಲ್ಲಿ ಮನಸ್ಸನ್ನು ಇಡದೆ. **ಸಂಚರಿಸುತಿರು** = ನಿರ್ಲಿಪ್ತನಾಗಿ ಸಂಚಾರ ಮಾಡುತ್ತಿರು. ॥ ೧೩ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ದುರ್ಜನರ ಸಹವಾಸ ಮಾಡಕೂಡದೆಂತಲೂ, ಸಜ್ಜನರ ಸಹವಾಸ ಮಾಡಿ ಪರಮಾತ್ಮನ ಸದಾ ಭಜನೆ ಮಾಡಿ ನಿರ್ಲಿಪ್ತನಾಗಿರು ಎಂತಲೂ ಹೇಳುತಾರೆ.

ಗುರೂಪದೇಶಾನಂತರ ಭಗವತ್ತತ್ತ್ವಗಳನ್ನು ಅತಿಶಯವಾಗಿ ತಿಳಿದು, ವಿಸ್ಮೃತಿಬಾರದೆ ಇರುವಂಥ ನಿಮಿತ್ತದಿಂದ ಮತ್ತೂ ಮತ್ತೂ ಗುರುಗಳ ಸಂಗವೇನು, ಭಗವದ್ಭಕ್ತರ ಸಹವಾಸವೇನು, ಭಗವತ್ತತ್ತ್ವಗಳನ್ನು ಚಂದಾಗಿ ತಿಳಿದಂಥಾ

ಜ್ಞಾನಿಗಳ ಸಂಗ ಮಾಡು ಎಂದರೆ,

**ಅಥೋ ಸದಾಂಘ್ರಿಸ್ತವಕೀರ್ತಿತೀರ್ಥಯೋರಂತರ್ಬಹಿಃ ಸ್ನಾನ ವಿಧೂತ ಪಾಪ್ಮನಾಂ ।**
**ಭೂತೇಷ್ವನುಕ್ರೋಶಸುತತ್ತ್ವಶಾಲಿನಾಂ ಸ್ಯಾತ್ಸಂಗನೋಽನುಗ್ರಹ ಏಷ ನಸ್ತವ ॥**

ಎಂತ ಭಾಗವತೋಕ್ತಿ ಇರುವದ್ದರಿಂದ ಸತ್ಸಹವಾಸವೇ ಶ್ರೇಷ್ಠ ಎಂತ ತಿಳದು, ಲೋಕಸಂಬಂಧವಾದ ವಿಷಯಗಳಲ್ಲಿ ಮಮತಾರಹಿತನಾಗಿ ಭಗವತ್ತತ್ತ್ವ ವಿಚಾರಕ್ಕ ವಿರುದ್ಧರಾದ ಭಗವದ್ವೇಷಿಗಳಾದ ವಿಷಯಾಸಕ್ತರಾದ ದುರ್ಜನರ ಸಹವಾಸ ಎಂದಿಗಾದರೂ ಮಾಡಬ್ಯಾಡ ಎಂತ ತಾತ್ಪರ್ಯ.

**ಮಹತ್ಸೇವಾಂ ದ್ವಾರಮಾಹುರ್ವಿಮುಕ್ತೇಸ್ತಮೋದ್ವಾರಂ ಯೋಷಿತಾಂ ಸಂಗಿಸಂಗಂ ।**
**ಮಹಾಂತಸ್ತೇ ಸಮಚಿತ್ತಾಃ ಪ್ರಶಾಂತಾಃ ವಿಮನ್ಯವಃ ಸುಹೃದಃ ಸಾಧವೋ ಯೇ ॥**

ಎಂತ ಭಾಗವತೋಕ್ತಿ ಇರುವದ್ದರಿಂದ, ದುರ್ಜನರ ಸಹವಾಸ ಮಾಡಬ್ಯಾಡ ಎಂತಲೂ, ಸತ್ಸಹವಾಸ ಮಾಡಬೇಕೆಂತಲೂ, ಇನ್ನೂ ಹ್ಯಾಂಗೆ ಇರಬೇಕೆಂದರೆ, ಗರುಡದೇವರ ಭುಜದಲ್ಲಿ ವಿದ್ಯಮಾನನಾದ ಶ್ರೀ ಪರಮಾತ್ಮನ್ನ ಚರಾಚರ ಸರ್ವ ಸ್ಥಳಗಳಲ್ಲಿ ಆ ಆ ಪದಾರ್ಥಗಳಲ್ಲಿ ಆ ಆ ನಾಮದಿಂದ,

**ನಾಮಾನಿ ಸರ್ವಾಣಿ ಯಮಾವಿಶಂತಿ ತಂ ವೈ ವಿಷ್ಣುಂ ಪರಮಮು ದಾಹರಂತಿ ।**

ಇತಿ ಭಾಲ್ಲವೇಯಶ್ರುತಿ ಇರುವದ್ದರಿಂದ ಸರ್ವನಾಮವೂ ಪರಮಾತ್ಮನ ನಾಮ ಎಂತಲೂ, ಸರ್ವಾಧಿಷ್ಠಾನದಲ್ಲೂ ಪರಮಾತ್ಮ ವ್ಯಾಪ್ತನೆಂತಲೂ ತಿಳದು, ಭಗವತ್ತತ್ತ್ವವಿಚಾರರೂಪವಾದ ಆಲೋಚನೆ ವ್ಯತಿರಿಕ್ತ, ತದನ್ಯವಾದ ವಿಷಯಾದಿ ಆಲೋಚನೆಯನ್ನ ಬಿಟ್ಟವನಾಗಿ, ಸರ್ವತ್ರ ಪರಮಾತ್ಮನ ಚಿಂತನಮಾಡತತ ನಿರ್ಲಿಪ್ತನಾಗಿ ಸಂಚಾರ ಮಾಡತಾ ಇರು ಎಂತ ತಾತ್ಪರ್ಯ.

**ವಿಶೇಷಾರ್ಥ**

**ಸಂಗವಾಗಲಿ ಸಾಧು ಸಂಗವಾಗಲಿ || ಪ ||**
**ಸಂಗದಿಂದ ಲಿಂಗದೇಹ ಭಂಗವಾಗಲೀ || ಅ || ಪ ||** ಎಂಬ ಪದದ ಅರ್ಥ
|| ೧೩ ||

**೨. ಭಾವಪ್ರಕಾಶಿಕೆ**

ಮೇಲೆ ಹೇಳಿದ ಕಾರಣಗಳಿಂದ ಜ್ಞಾನಿಗಳ ಸಹವಾಸ ಮಾಡಿದರೆ ಜ್ಞಾನೋದಯುವಾಗುವುದು, ಅಯೋಗ್ಯರ ಸಹವಾಸದಿಂದ ಕೇಡಾಗುವುದು. ಆದ್ದರಿಂದ ಭಗವದ್ಭಕ್ತರ ಸಹವಾಸವನ್ನು ಮಾಡು, ಐಶ್ವರ್ಯಾದಿಗಳಿಗೆ ಮರುಳಾಗಿ ಅಯೋಗ್ಯರಿಂದ ದ್ರವ್ಯಾಪೇಕ್ಷೆಗೋಸ್ಕರವೋ, ಅಥವಾ ಬೇರೆ ಯಾವ ಕಾರಣದಿಂದಲೋ ಅವರ ಸಹವಾಸವನ್ನು ಮಾಡಬೇಡ. ಪರಮಾತ್ಮನು ಎಲ್ಲಾ ಸ್ಥಳಗಳಲ್ಲಿಯೂ ಇರುವನೆಂದು ತಿಳಿದು ಆಯಾ ಸ್ಥಳಗಳಲ್ಲಿ ಆಯಾ ನಾಮರೂಪಗಳನ್ನು ಧೇನಿಸುತ್ತ, ಇತರವಾದ ಗೃಹಕೃತ್ಯದಾಲೋಚನೆಯನ್ನು ಬಿಟ್ಟು ಸಂಚರಿಸು. ಸರ್ವದಾ ಗೃಹಕೃತ್ಯದ ಯೋಚನೆಯನ್ನೇ ಬಿಟ್ಟುಬಿಟ್ಟರೆ ಹೆಂಡತಿಮಕ್ಕಳ ಗತಿಯೇನೆಂದು ಚಿಂತಿಸಬೇಕಾದುದಿಲ್ಲ. "ಅನನ್ಯಾಶ್ಚಿಂತಯಂತೋಮಾಂ ಯೇ ಜನಾಃ ಪರ್ಯುಪಾಸತೆ | ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ" ನನಗಿಂತಲೂ ರಕ್ಷಕನು ಮತ್ತೊಬ್ಬನಿಲ್ಲವೆಂದು ತಿಳಿದು ಯಾವ ಜನರು ನನ್ನನ್ನು ಉಪಾಸನೆಯನ್ನು ಮಾಡುತ್ತಿರುವರೋ ಅವರ ಯೋಗಕ್ಷೇಮವನ್ನು ನಾನು ವಹಿಸಿರುವೆನು. ಎಂದು ಗೀತೆಯಲ್ಲಿ ಶ್ರೀಕೃಷ್ಣನ ವಾಕ್ಯವಿರುವುದು. ಹೀಗಿರುವುದರಿಂದ ಸುಮ್ಮನೆ ಆಲೋಚನೆ ಮಾಡುತ್ತಿದ್ದರೂ ಏನೂ ಆಗುವಂತಿಲ್ಲ. ಪರಮಾತ್ಮನೇ ಗತಿಯೆಂದು ನಂಬಿ ಬಿಟ್ಟರೆ ನಮ್ಮ ಗೃಹಕೃತ್ಯವನ್ನು ಶ್ರೀಪರಮಾತ್ಮನೇ ವಹಿಸುವನೆಂದರ್ಥ. ||೧೩||

**೩. ಭಾವದರ್ಪಣ**

ಈ ನಿಮಿತ್ತ | ಸಜ್ಜನ ಸಹವಾಸ ಮಾಡೆಂದು ಹೇಳುತ್ತಾರೆ ಈ ನಿಮಿತ್ತ || ೧೩ ||

## ೯. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಏವಂ ಗುಣೋಪದೇಶೇನ ಮಹೋಪಕಾರಕತ್ವಾತ್ "ಸತಾಂ ಪ್ರಸಂಗಾತ್ ಮಮವೀರ್ಯ ಸಂಪದಃ ಭವಂತಿ ಸತ್ಕರ್ಣ ರಸಾಯನಾಃ ಕಥಾಃ ॥ ತಜ್ಜೋಷ ಣಾತ್ ಅಶ್ವಪವರ್ಗವರ್ತ್ಮನಿ ಶ್ರದ್ಧಾವತೀ ಭಕ್ತಿಃ ಅನುಕ್ರಮಿಷ್ಯತಿ ॥ ಸಂಸಾರ ಚಕ್ರೇ ಭ್ರಮತಾಂ ನರಾಣಾಂ ಇಹಾಪ್ಯಮುತ್ರಾಪಿ ಮಹಾಫಲ ಪ್ರದಃ ॥ ಸತ್ಸಂಗ ಏಕೋಽಸ್ತಿ ನಹೀತರಃ ಸ್ಯಾತ್ ಯತ್ರಾಚ್ಯುತೋದಾರ ಕಥಾ ಪ್ರಸಂಗಃ॥ ಯದ್ಯೈವ ಸ್ಯಾತ್ ಸತಾಂ ಸಂಗಃ ತದೈವಾತ್ಮಾ ಪ್ರಸೀದತಿ ॥ ಸ ಏವ ದೇಶೋಽತಿ— ಪವಿತ್ರ ಈರಿತಃ ಯಃ ಕೀಕಟಾಖ್ಯೋಽತಿ ವಿಗರ್ಹಿತೋಽಪಿ ॥ ಸ ಏವ ಕಾಲೋಽತಿ ಪವಿತ್ರ ಉಚ್ಯತೇ ಯತ್ರೈವ ಸದ್ಭಿಃ ಸಹ ಸಂಗತಿಃ ಸ್ಯಾತ್ ॥ ಇತಿ ನವಮ ಕಾಪಿಲೇಯ ವಿಷ್ಣುರಹಸ್ಯೋಕ್ತ ಪರಮಸಾಧನಮಾಹ ಈ ನಿಮಿತ್ತ ಇತಿ ॥ ೧೩ ॥

### ಕನ್ನಡಾರ್ಥ

ಹಿಂದಿನ ಪದ್ಯದಲ್ಲಿ ಹೇಳಿದಂತೆ ಸತ್ಸಂಗವು ಇಂಥ ಉಪದೇಶಗಳಿಂದ ಮಹೋಪಕಾರಕವಾಗಿರುವದು. ಸಜ್ಜನರ ಸಂಗವಾಗಲು ಅವರಲ್ಲಿ ನಡೆಯುತ್ತಿರುವ ಪ್ರವಚನ ಮುಂತಾದುವುಗಳಿಂದ ಸಜ್ಜನರ ಕರ್ಣಗಳಿಗೆ ರಸಾಯನ–ತೃಪ್ತಿ ಕೊಡುವ ಅಮೃತ ಸದೃಶ ರಸಭರಿತವಾದ ಪರಮಾತ್ಮನ ಮಹಿಮೆಗಳ ವೀರ್ಯೌದಾರ್ಯಾದ್ಭುತ ಶಕ್ತಿಗಳ ವರ್ಣನಾತ್ಮಕವಾದ ಕಥೆಯು ಸಿಗುತ್ತದೆ. ಅದನ್ನು ಸೇವಿಸುವದರಿಂದ ಮೋಕ್ಷಮಾರ್ಗದಲ್ಲಿ ಪರಮಾತ್ಮನ ವಿಷಯದಲ್ಲಿ ಶ್ರದ್ಧಾಭರಿತವಾದ ಭಕ್ತಿಯು ಕ್ರಮದಿಂದ ಬೆಳೆಯುಗೊಡುತ್ತದೆ. ಸಂಸಾರ ಚಕ್ರದಲ್ಲಿ ತಿರುಗುತ್ತಿರುವ ಜನರಿಗೆ ಸತ್ಸಂಗ ಒಂದೇ ಐಹಿಕಾಮುಷ್ಮಿಕ ಉಭಯ ಫಲದಾಯಕವಾಗಿರುತ್ತದೆ, ಬೇರೆ ಮತ್ಯಾವದೂ ಇರುವುದಿಲ್ಲ. ಸಜ್ಜನರಲ್ಲಿಯೇ ಅಚ್ಯುತನ ಮಹಾಮಹಿಮೋಪೇತವಾದ ಕಥಾವ್ಯಾಪಾರಗಳು ನಡೆಯುವವು. ಸಜ್ಜನರ ಸಂಗವು ಆದಾಗ ಪರಮಾತ್ಮನು ಪ್ರಸನ್ನನಾಗುತ್ತಾನೆ. ಅತಿನಿಂದಿತವಾದ ಕೀಕಟ ಮುಂತಾದ ದೇಶಗಳೂ ಸಹ ಸತ್ಸಂಗದಿಯಾಗುತ್ತಿದ್ದರೆ ಅವು ಅತ್ಯಂತ ಪವಿತ್ರಗಳೆನಿಸುವವು. ಯಾವಾಗ ಸಜ್ಜನರ ಸಹವಾಸವಾಗುವದೋ ಅದೇ ಕಾಲವೇ ಪವಿತ್ರ.

ತಮವೆನಿಸುತ್ತದೆ." ಎಂದು ನವಮಸ್ಕಂಧ ಕಪಿಲಗೀತಾ ವಿಷ್ಣುರಹಸ್ಯಗಳಲ್ಲಿ ಹೇಳಲಾಗಿರುವ ಸತ್ಸಂಗರೂಪ ಪರಮಸಾಧನವನ್ನು ಹೇಳುತ್ತಾರೆ. ಈ ನಿಮಿತ್ತ ಎಂಬ ಪದ್ಯದಿಂದ ॥ ೧೩ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಫಲಿತಾರ್ಥ ತಿಳಿಸುತ್ತಾರೆ, ಈ ನಿಮಿತ್ತ ಎಂದು. ಈ ಕಾರಣದಿಂದ ಸಜ್ಜನರ ದರ್ಶನ ನಮನಾದಿಗಳಿಂದ ಜ್ಞಾನ ದೊರಕಿಕಿ ಶುದ್ಧರಾಗುವುದರಿಂದ, ಒಂದು ವೇಳೆ ವಿಘ್ನ ಬಂದರೂ ಬಿಡದೆ ಮತ್ತೂ ಮತ್ತೂ ಸುಜ್ಞಾನಿಗಳ ಕೂಡ ಇರುವುದು. ಲೌಕಿಕವೆಂಬ ದುರ್ಭೋಗ ಸುಖಕ್ಕೆ ಮೋಹಪಟ್ಟು ಕುಬ್ಜತರ ಕೂಡ ಇರಬಾರದು. ವೈನತೇಯಾಂಸಗನೆಂಬ ಗರುಡಾರೂಢನಾದ ದೇವರನ್ನು ಸರ್ವಸ್ಥಳಗಳಲ್ಲೂ ಆಯಾಯ ನಾಮರೂಪವುಳ್ಳವನೆಂದು ಸ್ಮರಿಸುತ್ತಾ ಇತರ ಚಿಂತೆ ಹಚ್ಚಿಕೊಳ್ಳದೆ ಇರಬೇಕೆಂದು ತಾತ್ಪರ್ಯ. ॥ ೧೩ ॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಸತ್ಸಹವಾಸದ ಮಹಿಮೆಯನ್ನು ತಿಳಿಸುತ್ತಾರೆ. ಭಗವದ್ವಿಷಯಗಳನ್ನೇ ಸದಾ ಮನಸ್ಸಿನಲ್ಲಿ ಚಿಂತಿಸುತ್ತಾ, ನಿರಂತರದಲ್ಲಿಯೂ ಭಗವದುಪಾಸನೆಯಲ್ಲಿ ಆಸಕ್ತ ಚಿತ್ತರಾದ ಮಹಾಜ್ಞಾನಿಗಳ ವಿಷಯವನ್ನು ತಿಳಿಸುತ್ತಾರೆ.

ನಿರಂತರ ಭಗವದುಪಾಸನಾಸಕ್ತರಾದ ಮಹಾಪುರುಷರು ಸುಜ್ಞಾನಿಗಳು. ಅಂತಹ ಸುಜ್ಞಾನಿಗಳ ಸಹವಾಸವನ್ನು ಮೇಲಿಂದ ಮೇಲೆ, ಸದವಕಾಶ ದೊರೆತಾಗಲೆಲ್ಲಾ ಎಡಬಿಡದೆ ಮಾಡುತ್ತಿರಬೇಕೆಂದು ಎಚ್ಚರಿಕೆಯ ಮಾತುಗಳಾಡಿದ್ದಾರೆ.

ದುರ್ಜನರಸಂಗ ಕೇಡನ್ನುಂಟುಮಾಡುವುದು. ಅಂತಹ ದುಷ್ಟಸ್ವಭಾವವುಳ್ಳ ಕುಮಾನವರನ್ನು ಎಂದೆಂದಿಗೂ ಕೂಡಾಡದಿರೆಂದು ಎಚ್ಚರಿಸುತ್ತಾರೆ. ನಮ್ಮ ಇಂದ್ರಿಯಗಳು ಯಾವಾಗಲೂ ವಿಷಯೋಪಭೋಗಗಳ ಕಡೆಗೇ ಹರಿಯುವುವು. ಲೌಕಿಕ ಸುಖಗಳು ನಶ್ವರ ಹಾಗೂ ಕ್ಲೇಶದಾಯಕ. ತಕ್ಷಣದಲ್ಲಿ ಸುಖಪ್ರದವಾದರೂ,

ಮರುಕ್ಷಣದಲ್ಲಿಯೇ ದುಃಖಕ್ಕೆ ಕಾರಣವಾಗುವುದು. ಈ ಕಾರಣದಿಂದ ಲೌಕಿಕ್ಕೆ ಮರುಳಾಗದೆ ಕುಮಾನವರ ಸಂಗವನ್ನು ತ್ಯಜಿಸಬೇಕೆಂದು ತಿಳಿಸುತ್ತಾರೆ.

ಶ್ರೀಹರಿಯು ಗರುಡಗಮನನು. ವಿನುತೆಯ ಸುತನೇ ವೈನತೇಯನೆಂಬ ಹೆಸರಿನ ಗರುಡನು. ಗರುಡನ ಹೆಗಲಿನಮೇಲೆ ಕುಳಿತು ಗರುಡಾರೂಢನಾಗಿ ಗಮನ ಮಾಡುವವನು ಶ್ರೀಹರಿಯು.

ಸರ್ವತ್ರಗತ, ಸರ್ವವ್ಯಾಪಕನಾದ ವಿಶ್ವರೂಪೀ ಶ್ರೀಹರಿಯ ತನ್ನಾಮ ರೂಪಗಳನ್ನು ಆಯಾಯಾ ಅಧಿಷ್ಠಾನಗಳಲ್ಲಿ ಚಿಂತಿಸುತ್ತಾ, ಚಕ್ರಪಾಣಿಯ ಚರಣಾರವಿಂದದ ಮಧುಕರನಾಗಿ, ನಶ್ವರವಾದ ಪ್ರಾಪಂಚಿಕ ವಿಷಯಗಳನ್ನು ತೊರೆದು ನಿರ್ಭಯದಿಂದ ಈ ಜಗತ್ತಿನಲ್ಲಿ ಶ್ರೀಹರಿಯ ದಾಸನೆಂದು ಸಂಚರಿಸುತ್ತಿರೆಂದು ತಿಳಿಸುತ್ತಾರೆ. ॥ ೧೩ ॥

❖❖❖❖

## ಪದ್ಯ ೧೪

ಮೂಲ

ಈ ನಳಿನಜಾಂಡದೊಳು ಸರ್ವ ।
ಪ್ರಾಣಿಗಳೊಳಿದ್ದನವರತ ವಿ ।
ಜ್ಞಾನಮಯ ವ್ಯಾಪಾರಗಳ ಮಾಡುವನು ತಿಳಿಸದಲೆ ॥
ಏನು ಕಾಣದೆ ಸಕಲ ಕರ್ಮಗ ।
ಳಾನೆ ಮಾಡುವನೆಂಬ ನರನು ಕು ।
ಯೋನಿ ಐದುವ ಕರ್ತೃ ಹರಿ ಎಂದವನೆ ಮುಕ್ತನಹ ॥ ೧೪ ॥

**ಅವತರಣಿಕೆ**

ಸರ್ವಕರ್ತನು ಶ್ರೀಹರಿಯೇ ಎಂಬುವನು ಮುಕ್ತಿಯೋಗ್ಯಚೇತನನೆಂದು ತಿಳಿಸುತ್ತಾರೆ. ॥ ೧೪ ॥

**ಪ್ರತಿಪದಾರ್ಥ**

**ಈ ನಳಿನಜಾಂಡದೊಳು** = ವಿದ್ಯಮಾನವಾಗಿರುವ ಈ ಬ್ರಹ್ಮಾಂಡದಲ್ಲಿ (ನಳಿನ–ನಾಭೀಕಮಲ. ನಳಿನಜ–ಕಮಲೋದ್ಭವರಾದ ಬ್ರಹ್ಮದೇವರು. ನಳಿನಜಾಂಡ-ಬ್ರಹ್ಮಾಂಡ) **ಸರ್ವಪ್ರಾಣಿಗಳೊಳು** = ಬ್ರಹ್ಮಾದಿ ತೃಣಾಂತ ಸಮಸ್ತ ತ್ರಿವಿಧ ಜೀವಕೋಟಿಗಳಲ್ಲಿ, **ಇದ್ದು** = ತಾನೇ ವಿದ್ಯಮಾನನಾಗಿ ನೆಲೆಸಿದ್ದು, **ಅನವರತ** = ನಿರಂತರದಲ್ಲಿ ಜೀವರ ಅವಿಯೋಗನಾಗಿ, ಬಿಂಬರೂಪದಿಂದ ಇದ್ದು, **ವಿಜ್ಞಾನಮಯ** = ವಿಶೇಷವಾಗಿ ಜ್ಞಾನಪ್ರಚುರನಾದ ಶ್ರೀಪರಮಾತ್ಮನು, **ತಿಳಿಸದಲೆ** = ಆ ಜೀವರಿಗೆ ತಿಳಿಸದಂತೆ, **ವ್ಯಾಪಾರಗಳ** = ಸ್ಥೂಲದೇಹ ದ್ವಾರಾ, ಅವರ ಸ್ವರೂಪಯೋಗ್ಯತಾನುಸಾರ, ಅನಾದಿಕರ್ಮಕ್ಕನುಗುಣವಾಗಿ ಸಕಲ ಕ್ರಿಯಾವಿಶೇಷಗಳನ್ನು, **ಮಾಡುವನು** = ಬಿಂಬಕ್ರಿಯಾದ್ವಾರಾ, ತಾನೇ ಮಾಡಿ ಮಾಡಿಸುತ್ತಿರುವನು, **ಏನುಕಾಣದೆ** = ಶ್ರೀಪರಮಾತ್ಮನ ಬಿಂಬಕ್ರಿಯಾರೂಪವಾದ ಈ ಕರ್ಮನಿರ್ವಹಣೆಯ ವಿಷಯ ತಿಳಿಯದೇ, **ಸಕಲಕರ್ಮಗಳ** = ದೇಹೇಂದ್ರಿಯಗಳ ದ್ವಾರಾ ನಡೆಯುತ್ತಿರುವ ಸಮಸ್ತ ವ್ಯಾಪಾರಗಳನ್ನೂ, **ಆನೆ ಮಾಡುವನೆಂಬ** = ಅಹಂಕರ್ತೃತ್ವಭಾವದಿಂದ ನಾನೇ ಮಾಡುತ್ತಿರುವೆನೆಂದು ತಿಳಿದಿರುವ, **ನರನು** = ಮಾನವನು, **ಕುಯೋನಿ** = ನೀಚವಾದ ಜನ್ಮಗಳಲ್ಲಿ **ಐದುವ** = ಜನಿಸಿ ದುಃಖ ಪೀಡಿತನಾಗುವನು. **ಕರ್ತೃ ಹರಿ ಎಂದವನೆ** = ಸಕಲ ಕರ್ಮಗಳಿಗೂ ಶ್ರೀಹರಿಯೇ ಮುಖ್ಯ ಕರ್ತನು ಎಂದರಿತವನು, **ಮುಕ್ತನಹ** = ಮುಕ್ತಲೋಕಗಳನ್ನು ಐದಿ ನಿತ್ಯಾನಂದರೂಪವಾದ ಮೋಕ್ಷಸುಖವನ್ನು ಪಡೆಯುವನು. ॥ ೧೪ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ದುರ್ಯೋನಿಗಳಲ್ಲಿ ಬರತಕ್ಕವನ ವಿಚಾರವೂ, ಮುಕ್ತನಾಗತಕ್ಕವನ ವಿಚಾರವೂ ಹೇಳತಾರೆ.

ಈ ವಿದ್ಯಮಾನವಾದ ಬ್ರಹ್ಮಾಂಡದಲ್ಲಿ, ಬ್ರಹ್ಮಾದಿ ತೃಣಾಂತ ತ್ರಿವಿಧ ಜೀವರಲ್ಲಿ, ವಿಶೇಷಾಕಾರನಾಗಿ ಜ್ಞಾನಪ್ರಚುರನಾದ ಪರಮಾತ್ಮ ನಿರಂತರ ಅವಿಯೋಗನಾಗಿ ಬಿಂಬನಾಗಿದ್ದು, ಸ್ಥೂಲದೇಹ ದ್ವಾರಾ ಅವರವರ ಸ್ವರೂಪಯೋಗ್ಯತಾ ಅನುಸರಿಸಿನ್ನೂ, ಅನಾದಿಕರ್ಮ ಅನುಸರಿಸಿನ್ನೂ, ಕರ್ಮರೂಪವಾದ ವ್ಯಾಪಾರಗಳ ಜೀವರಿಗೆ ತಿಳಿಸಧಾಂಗೆ, ಬಿಂಬನಾದ ಪರಮಾತ್ಮ ಪ್ರಥಮತಃ ತಾನು ಸಂಕಲ್ಪ ಮಾಡುವನು. ಆಗ್ಗೆ ಪರಮಾತ್ಮ ಒಬ್ಬನೆ ಬಲ್ಲನೇ ಹೊರ್ತು, ರಮಾಬ್ರಹ್ಮಾದಿಗಳಿಗೂ ಇದು ತಿಳಿಯದು. ನಂತರ ತನ್ನ ಸಂಕಲ್ಪ, ಅನ್ಯರಾದ ರಮಾಬ್ರಹ್ಮಾದಿಗಳಿಗೆ ದಾವಾಗ ತಿಳಿಸುತ್ತಾನೆ ಆಗ್ಗೆ ಅವರಿಗೆ ತಿಳಿಯತದೆ. ಈ ರೀತ್ಯಾ ಪರಮಾತ್ಮನ ಮಹಾತ್ಮೆ ಎಂದು ತಿಳಿಯದೆ, ಇನ್ನೂ ಬಿಂಬಕ್ರಿಯಾ ದ್ವಾರಾ ಪ್ರತಿಬಿಂಬಕ್ರಿಯಾ ಎಂತ ತಿಳಿಯದೆ, ಜೀವರು ಅಸ್ವತಂತ್ರರು ಎಂತ ಪ್ರತ್ಯಕ್ಷಾನುಮಾನಗಳಿಂದ ತಿಳಿಯದೆ, ದೇಹೇಂದ್ರಿಯಾದಿಗಳಿಂದ ಮಾಡಿದ ಸರ್ವವ್ಯಾಪಾರಗಳ ನಾನೇ ಸ್ವಾತಂತ್ರ್ಯದಿಂದ ಮಾಡಿದೆ ಎಂತ ಅನತಕ್ಕ ಮನುಷ್ಯ ನೀಚವಾದ ಜನ್ಮಗಳೆ ಧರಿಸಿ ದುಃಖಬಡುವನು. ಶ್ರೀಪರಮಾತ್ಮ ಸೃಷ್ಟ್ಯಾದ್ಯಷ್ಟಕರ್ತೃತ್ವ ಉಳ್ಳವನೆಂದು ತಿಳದು ಬಿಂಬಕ್ರಿಯಾ ದ್ವಾರ ಪ್ರತಿಬಿಂಬಕ್ರಿಯಾ ಎಂತ ನಿಶ್ಚಯವಾಗಿ ತಿಳಿದವನೇ ನ ಚ ಪುನರಾವರ್ತತೇ ಲೋಕವನ್ನು ಐದಿ ಸುಖಬಡತಾನೆ ಎಂತ ತಾತ್ಪರ್ಯ. ॥೧೪॥

## ೨. ಭಾವಪ್ರಕಾಶಿಕೆ

ಈ ಬ್ರಹ್ಮಾಂಡದೊಳಗೆ ಸಕಲ ಪ್ರಾಣಿಗಳಲ್ಲಿಯೂ ಇದ್ದು ಶ್ರೀಪರಮಾತ್ಮನೇ ಸಕಲ ಕಾರ್ಯಗಳನ್ನು ಮಾಡುವನು. ಅಸ್ವತಂತ್ರನಾದ ಜೀವನು ಅವನು ಮಾಡಿಸಿದಂತೆ ಮಾಡುವನು. ಆದರೆ ತನ್ನೊಳಗಿದ್ದ ಪರಮಾತ್ಮನೇ ಮಾಡಿದನೆಂಬು

ವದು ಮಾತ್ರ ಯಾರಿಗೂ ಗೊತ್ತಾಗುವಂತಿಲ್ಲ. ಈ ರೀತಿಯಾಗಿ ಮನುಷ್ಯನು ಸ್ವತಂತ್ರದಿಂದ ತಾನೇ ಮಾಡಿದೆನೆಂಬ ಭ್ರಾಂತಿಯಿಂದ ಪಾಪಗಳಿಗೆ ಒಳಗಾಗಿ ನಾಯಿ ನರಿ ಮೊದಲಾದ ಕುಚ್ಛಿತ ಜನ್ಮಗಳನ್ನು ಎತ್ತುವನು. ಸಕಲಕ್ಕೂ ಪರಮಾತ್ಮನೇ ಕರ್ತಾ ಎಂದರಿತು ಮಾಡಿದ ಪುಣ್ಯಪಾಪಗಳನ್ನೆಲ್ಲಾ ಪರಮಾತ್ಮನಿಗೆ ಸಮರ್ಪಣ ಮಾಡಿದವನು ಜೀವನ್ಮುಕ್ತನೇ ಸರಿ. ॥ ೧೪ ॥

**೩. ಭಾವದರ್ಪಣ**

ಈ ನಳಿನಜಾಂಡೇತಿ ॥ ೧೪ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದಿ**

ಈ ನಳಿನ ಇತಿ॥ ಓಂ* ನೋ ಗಿರಃ ಆತ್ವಾ ವಿಶಂತ್ವಿಂದವಃ (ಯಃ) ಸಮುದ್ರಮಿವ ಸಿಂಧವಃ ॥ ನತ್ವಾಮಿಂದ್ರಾತಿರಿಚ್ಯತೇ ವಿವ್ಯಕ್ಥ ಮಹಿನಾ ವೃಷನ್ ಭಕ್ಷಮ್ ॥*ಓಂ॥ ಸ್ವತಂತ್ರತ್ವಾತ್ ಕರ್ತಾ । ನಳಿನಜ (ಜ) ಬ್ರಹ್ಮಾ॥ ದುರ್ಬುದ್ಧಿಃ ಇದಂ ಮಯಾ ನ ಕ್ರಿಯತೇ ಇದಂ ಮಯಾ ವಿಪರೀತಂ ಕ್ರಿಯತೇ ಇತಿ ಬುದ್ಧಿ ಭೇದಃ ॥ ಸತ್ವರಜಸ್ತಮೋಗುಣ ನಿಮಿತ್ತೋ ಭ್ರಮಃ ಇತ್ಯೇಕಾದಶ ತಾತ್ಪರ್ಯೇ ॥ ೧೪ ॥

**ಕನ್ನಡಾರ್ಥ**

ಕರ್ತೃ, ಇದು ಶ್ರೀವಿಷ್ಣು ಸಹಸ್ರನಾಮಾಂತರ್ಗತವಾಗಿದೆ. ಬೃಹತೀಮಂತ್ರವು ಇದನ್ನು ವಿವರಿಸಿರುತ್ತದೆ. ಯಾವನು ಸ್ವತಂತ್ರನೋ ಅವನಿಗೆ ಕರ್ತೃ ಎಂದು ಕರೆಯುವರು. ನಳಿನಜಾ ಬ್ರಹ್ಮ. ತಾನೆ ಮಾಡುವನೆಂಬ ನರನು ದುರ್ಬುದ್ಧಿಯು. ಅಂದರೆ ನಾನು ಇದನ್ನು ಮಾಡುವದಿಲ್ಲ. ನಾನು ಇದನ್ನು ಕೆಡಿಸುವೆನು–ವಿಪರೀತವಾಗಿ ಮಾಡುವೆನು ಎಂಬುದಾಗಿ ಬುದ್ಧಿ ಭೇದವುಳ್ಳವನು. ಹೀಗೆ ತನ್ನಲ್ಲಿರದ ಸ್ವಾತಂತ್ರ್ಯವನ್ನು ತನ್ನಲ್ಲಿ ಇರುತ್ತದೆ ಎಂದು ಅನುಸಂಧಾನಿಸುವುದು ಭ್ರಮವೆನಿಸುತ್ತದೆ. ಸತ್ವರಜತಮೋಗುಣ ನಿಮಿತ್ತವಾಗಿ ಭ್ರಮೆಗಳು ಹುಟ್ಟುವವು ಎಂದು ಭಾಗವತದ ೧೧ನಯ ಸ್ಕಂಧದ ತಾತ್ಪರ್ಯದಲ್ಲಿ ಹೇಳಲಾಗಿದೆ. ॥ ೧೪ ॥

ಶ್ರೀಗುರುಹೃದಯಪ್ರಕಾಶಿಕೆ

ಈ ನಳಿನಜಾಂಡವೆಂಬ ಬ್ರಹ್ಮಾಂಡದಲ್ಲಿ ಸರ್ವಪ್ರಾಣಿಗಳಲ್ಲೂ ವಿಜ್ಞಾನಮಯನೆಂಬ, ಪ್ರತ್ಯೇಕ ಪ್ರತ್ಯೇಕ ಸರ್ವರ ಯೋಗ್ಯತಾ ಅನಾದಿಕರ್ಮಗಳ ತಿಳಿದ ದೇವರು, ಸರ್ವರ ಕ್ರಿಯಾ ಜ್ಞಾನಾದಿಗಳನ್ನು ವ್ಯಕ್ತ ಮಾಡುತ್ತಾ ಇತರರಿಗೆ ತಿಳಿಸದೆ ಇರುವನು. ಈ ವಿಚಾರವನ್ನು ಶಾಸ್ತ್ರ ಮೂಲಕ ತಿಳಿಯದೆ ಸರ್ವಕ್ರಿಯವನ್ನೂ ನಾನೇ ಮಾಡುವೆನೆಂದು ತಿಳಿದ ಜೀವನು, ಕುಯೋನಿ ಎಂಬ ಪಶುಜನ್ಮಾದಿ ನರಕ ಹೊಂದುವನು. ತಿಳಿದು ಶ್ರೀಹರಿಯೇ ಸ್ವತಂತ್ರಕರ್ತನೆಂದು ಭಾವಿಸಿದವನು ಮುಕ್ತನಾಗುವನು. ॥ ೧೪ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಚತುರ್ದಶಭುವನಾತ್ಮಕವಾದ ಈ ನಳಿನಜಾಂಡದಲ್ಲಿ ಸೃಷ್ಟಿಗೆ ತರಲ್ಪಟ್ಟ ಜೀವರಾಶಿಗಳು ಅಸಂಖ್ಯ. ಅಂತಹ ಜೀವರಾಶಿಗಳಲ್ಲಿ ತ್ರಿವಿಧಜೀವರಿದ್ದಾರೆ.

ಅಂತಹ ಸರ್ವಪ್ರಾಣಿಗಳಲ್ಲಿ ಜೀವರನ್ನು ಎಡಬಿಡದೆ ಬಿಂಬರೂಪದಿಂದ ಶ್ರೀಪರಮಾತ್ಮನು ವಿರಾಜಮಾನನಾಗಿದ್ದಾನೆ.

ಶ್ರೀಹರಿಯು ವಿಶೇಷವಾದ ಜ್ಞಾನಪ್ರಚುರವಾದ ಶರೀರವುಳ್ಳ ಸ್ವಯಂ ಜ್ಯೋತಿಯಾಗಿದ್ದಾನೆ. ಆ ವಿಜ್ಞಾನಮಯನೇ ಜೀವನಿಗೆ ಜ್ಞಾನಪ್ರದನು ಹಾಗೂ ಜೀವರಿಂದ ಜ್ಞಾನಾಗಮ್ಯನೂ ಆಗಿದ್ದಾನೆ.

ಸರ್ವಕರ್ಮಪ್ರೇರಕನಾದ ಆ ಸರ್ವಜ್ಞನು ತನ್ನ ಸರ್ವಸ್ವಾತಂತ್ರ್ಯರೂಪವಾದ ಕರ್ತೃತ್ವವನ್ನು ಜೀವರಿಗೆ ತಿಳಿಸದೆ, ಅಗೋಚರನಾಗಿದ್ದಾನೆ. ಇದರಿಂದ ಸರ್ವಕರ್ಮಗಳೂ ಶ್ರೀಪರಮಾತ್ಮನಿಂದಲೇ ಪ್ರೇರಿತವಾಗಿ ನಡೆಯುತ್ತಿದ್ದರೂ, ಅಜ್ಞಾನದ ದೆಶೆಯಿಂದ, ಜೀವನು ತಾನೇ ಸರ್ವಕರ್ಮಗಳಿಗೂ ಕರ್ತನೆಂದು ತಿಳಿಯುತ್ತಾನೆ. ಆದ್ದರಿಂದ ಜೀವನು ತಾನೇ ಸ್ವತಂತ್ರನೆಂದರಿತು, ಸಕಲಕರ್ಮಗ

ಳನ್ನೂ ತಾನೇ ಮಾಡುತ್ತಿರುವೆನೆಂಬ ಭಾವನೆಯಿಂದ ಪಶ್ವಾದಿ ಕುಯೋನಿಗಳನ್ನು ಐದುವನು.

ಭವದನುಗ್ರಹವುಳ್ಳ ಸಚ್ಚೇತನರು ನಾಹಂ ಕರ್ತಾ ಹರಿಃ ಕರ್ತಾ ಎಂಬ ಉತ್ತಮಾನುಸಂಧಾನದಿಂದ, ಶ್ರೀಹರಿಯ ಪರಮಾನುಗ್ರಹಕ್ಕೆ ಪಾತ್ರರಾಗಿ ತದ್ದ್ವಾರಾ ಸಕಲಕರ್ಮಗಳನ್ನೂ ಆ ಸರಸಿಜಾಕ್ಷನ ಚರಣಾರವಿಂದಗಳಿಗೆ ಅರ್ಪಿಸಿ, ತಾವು ಕರ್ಮಗಳಿಂದ ನಿರ್ಲಿಪ್ತರಾಗಿರುವರು. ಸಕಲ ಕರ್ಮಗಳೂ ಅವರ ಅಧಿಷ್ಠಾನದಲ್ಲಿ ಶ್ರೀಹರಿಯ ಪ್ರೇರಣಾನುಸಾರ ನಡೆಯುತ್ತಿದ್ದರೂ, ಅಹಂಕರ್ತೃತ್ವಾಭಿಮಾನ ರಹಿತರಾದ ಜೀವರಿಗೆ ಆ ಕರ್ಮಗಳ ಲೇಪವಿಲ್ಲ. ಅಂತಹ ಉತ್ತಮಾಧಿಕಾರಿಗಳು, ನ ಚ ಪುನರಾವರ್ತತೇ ಎಂಬ ಮುಕ್ತಸ್ಥಾನಗಳನ್ನು ಹೊಂದಿ, ನಿತ್ಯಾನಂದ ರೂಪವಾದ ಮೋಕ್ಷಸುಖವನ್ನು ಪಡೆಯುವರು. ॥ ೧೪ ॥

❋❋❋❋

## ಪದ್ಯ ೧೫

ಮೂಲ

ಕಲಿಮಲಾಪಹಳೆನಿಸುತಿಹ ಜಾಂ ।
ಬೂನದಿಯೊಳಗೆ ಸಂಚರಿಸಿ ಬದುಕುವ ।
ಜಲಚರ ಪ್ರಾಣಿಗಳು ಬಲ್ಲವೆ ತೀರ್ಥಮಹಿಮೆಯನು ॥
ಹಲವು ಬಗೆಯಲಿ ಹರಿಯ ಕರುಣಾ ।
ಬಲವಿ ಬಲ್ಲಿದರಾದ ಬ್ರಹ್ಮಾ ।
ನಿಲವಿಪೇಶಾದ್ಯಮರರರಿಯರನಂತನಮಲಗುಣ ॥ ೧೫ ॥

**ಅವತರಣಿಕೆ**

ಬ್ರಹ್ಮ, ವಾಯು, ಗರುಡ, ಶೇಷ, ರುದ್ರಾದಿ ದೇವತೆಗಳೂ ಶ್ರೀಹರಿಯ ಗುಣ ಕಥನವೆಂಬ ಮಹಾ ಪುಣ್ಯತೀರ್ಥದಲ್ಲಿ ಆಸಕ್ತ ಮನಸ್ಸುಳ್ಳವರಾದರೂ, ಆ ಅನಂತನ ಅಪರಿಮಿತ ಅಮಲಗುಣಗಣಗಳನ್ನು ಸಾಕಲ್ಯೇನ ತಿಳಿಯಲಾರರು ಎಂದು ಶ್ರೀಪರಮಾತ್ಮನ ಪಾರಮ್ಯವನ್ನು ತಿಳಿಸುತ್ತಾರೆ. ॥೧೫॥

**ಪ್ರತಿಪದಾರ್ಥ**

**ಕಲಿಮಲ** = ಕಲ್ಯಾದಿ ದೈತ್ಯರ ಸಂಸರ್ಗದಿಂದ ಉಂಟಾಗುವ ಪಾಪಗಳನ್ನು **ಅಪಹಳು** = ತನ್ನ ಯೋಗ್ಯತಾನುಸಾರ ಶ್ರೀಹರಿಯ ಕೃಪಾಬಲದಿಂದ ಪರಿಹರಿಸುವಳು, **ಎನಿಸುತಿಹ** = ಹೀಗೆಂದು ಪ್ರಸಿದ್ಧಳಾದ, **ಬಾಂಬೊಳೆಯೊಳಗೆ** = ಶ್ರೀತ್ರಿವಿಕ್ರಮದೇವರ ಪಾದಾಂಗುಷ್ಠದಿಂದ ಉದ್ಭವಿಸಿದ, ದೇವನದಿಯಾದ ಗಂಗಾ ಜಲದಲ್ಲಿ (ಬಾನಿನಹೊಳೆ = ಬಾಂಬೊಳೆ), **ಸಂಚರಿಸಿ** = ಓಡಾಡುತ್ತಾ, **ಬದುಕುವ** = ಜೀವಿಸುತ್ತಿರುವ, **ಜಲಚರಪ್ರಾಣಿಗಳು** = ಮತ್ಸ್ಯಾದಿ ಜಲಜಂತುಗಳು **ತೀರ್ಥಮಹಿಮೆಯನು** = ಪವಿತ್ರವಾದ ಗಂಗಾನದಿಯ ತೀರ್ಥದ ಮಹಾತ್ಮೆಯನ್ನು, **ಬಲ್ಲವೆ** = ತಿಳಿಯಲು ಸಾಧ್ಯವಾದೀತೇ ? ಅಂದರೆ, ಮೀನು, ಮೊಸಳೆ ಇತ್ಯಾದಿ ಜಲಜಂತುಗಳು ಗಂಗಾನದಿಯಲ್ಲಿಯೇ ಹುಟ್ಟಿ, ಅಲ್ಲಿಯೇ ಬೆಳೆದು, ನಾಶಹೊಂದುವುವು. ಆ ತೀರ್ಥದ ನಿತ್ಯಸಂಪರ್ಕದಲ್ಲಿದ್ದರೂ, ಗಂಗಾನದಿಯ ಮಹಿಮೆಯನ್ನು ತಿಳಿಯಲಾರವು. **ಹಲವು ಬಗೆಯಲಿ** = ನಾನಾ ಪ್ರಕಾರವಾಗಿ, **ಹರಿಯ** = ಗುಣಪರಿಪೂರ್ಣನಾದ ಶ್ರೀಪರಮಾತ್ಮನ, **ಕರುಣಾಬಲದಿ** = ಕೃಪೆಯೆಂಬ ಅನುಗ್ರಹಕ್ಕೆ ಪಾತ್ರರಾದ, **ಬಲ್ಲಿದರಾದ** = ತಮ್ಮ ತಮ್ಮ ಯೋಗ್ಯತಾನುಸಾರ ಜ್ಞಾನಿಗಳಾದ, **ಬ್ರಹ್ಮ** = ಚತುರ್ಮುಖಬ್ರಹ್ಮದೇವರು, **ಅನಿಲ** = ವಾಯುದೇವರು, **ವಿಪೇಶ** = ಪಕ್ಷಿಶ್ರೇಷ್ಠರಾದ ಗರುಡದೇವರು **ಈಶ** = ರುದ್ರದೇವರು, **ಆದಿ** = ಆದಿ ಶಬ್ದದಿಂದ ಇಂದ್ರಾದಿ, **ಅಮ**

**ರರು**＝ದೇವತಾ ಸಮೂಹವು, **ಅನಂತನ**＝ಆದಿಮಧ್ಯಾಂತ ರಹಿತನಾದ ಶ್ರೀಪರಮಾತ್ಮನ, **ಅಮಲ**＝ದೋಷರಹಿತವಾದ (ಲವಲೇಶವೂ ದೋಷಸ್ಪರ್ಶ ವಿಲ್ಲದಿರುವ) **ಗುಣ**＝ಅಪರಿಮಿತ, ನಿರವಧಿಕವಾದ ಅನಂತಕಲ್ಯಾಣಗುಣ ಸಮೂಹಗಳನ್ನು, **ಅರಿಯರು**＝ಸಾಕಲ್ಯೇನ ತಿಳಿಯಲಾರರು. ಬ್ರಹ್ಮಾದಿ ದೇವತೆಗಳು ತಮ್ಮ ಯೋಗ್ಯತಾನುಸಾರ ಅರಿತ್ತಿದ್ದಾರೆಯೇ ಹೊರತು, ಯಾರೂ ಸಂಪೂರ್ಣವಾಗಿ ತಿಳಿಯಲು ಶಕ್ತರಲ್ಲ ಎಂಬುದೇ ಪದ್ಯಾಭಿಪ್ರಾಯವು ॥ ೧೫ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ ಸಾಕಲ್ಯೇನ ದಾರೂ ಅರಿಯರೆಂದು ಹೇಳತಾರೆ.

ಪಾಪಗಳನ್ನ ತನ್ನ ಯೋಗ್ಯತಾನುಸಾರ ಪರಿಹಾರಕಳೆನಿಪ ದೇವನದಿಯಾದ ಭಾಗೀರಥಿಯಲ್ಲಿ ಪರಮಾತ್ಮನ ವಿಭೂತಿರೂಪ ಅಧಿಕವೆಂದು ತಿಳದು, ಅಂತರ್ಗತನಾದ ಪರಮಾತ್ಮನ ಪ್ರಾರ್ಥನಾರೂಪ, ಇನ್ನೂ ಅನೇಕ ಪ್ರಕಾರವಾದ ಅನುಸಂಧಾನದಿಂದ ಸ್ನಾನ ಮಾಡಿದರೆ ಮಹಾಸ್ನಾನಫಲ ಬರತದೆ. ಇಂಥಾ ಜ್ಞಾನಾನುಸಂಧಾನದಿಂದ ಸ್ನಾನ ಮಾಡಿದವಗೆ ಮಾತ್ರ ಮಹಾಫಲಪ್ರದಳು ಎಂತ ಅನಿಸಕತಕ್ಕ ಗಂಗಾನದಿ ಒಳಗೆ ಜನಿಸಿ, ಸರ್ವದಾ ಅದೇ ಉದಕದಲ್ಲಿ ಆಮರಣಾಂತ ವಾಸವಾಗಿ ಇದ್ದು ಸಂಚಾರ ಮಾಡತ ಜೀವಿಸಿರುವ ಮಚ್ಛ ಮೊದಲಾದ ಅನೇಕ ಜೀವಿಗಳು —ಪೂರ್ವೋಕ್ತ ಜೀವಿಗಳು ಗಂಗಾಸ್ನಾನ ಸರ್ವದಾ ಮಾಡತಲೇ ಇರುತ್ತವೆ. ಆದರೂ —ಸ್ನಾನದಿಂದ ಹೊಂದತಕ್ಕ ಪಾಪಪರಿಹಾರರೂಪ ಫಲವೇನೂ ಹೊಂದಲಿಲ್ಲ. ಯಾತರಿಂದ ಹೊಂದಲಿಲ್ಲ ಎಂದರೆ ಭಾಗೀರಥೀ ಮಹಿಮಾ, ಸ್ನಾನ ಮಾಡತಕ್ಕ ಅನುಸಂಧಾನ ಅರಿಯೋವೇ ಎಂದರೆ ಶುದ್ಧವಾಗಿ ತಿಳಿಯುವು ಎಂತ ತಾತ್ಪರ್ಯ. ತದ್ವತ್ ಅಜ್ಞಾನಿಗೂ ಭಾಗೀರಥೀ ಸ್ನಾನದಿಂದ ಬರುವ ಫಲವೂ ಇಷ್ಟೇ ಎಂತ ತಿಳಿಯಬೇಕು. ಇದೇಪ್ರಕಾರ ಅನುಸಂಧಾನರಹಿತನಾಗಿ ಸತ್ಕರ್ಮಾನುಷ್ಠಾನ ಮಾಡಿದಾಗ್ಯೂ ಫಲವಿಲ್ಲದೆ ಹೋಗಿ, ಅಂತ್ಯದಲ್ಲಿ ಈ ಸತ್ಕರ್ಮಗಳು ಪಾಪಕರ್ಮಗಳಾಗಿ ದುಃಖಫಲ ಕೊಡತವೆ ಎಂತ ಭಾವವು. ಗುಣಪೂರ್ಣನಾದ ಪರಮಾತ್ಮನ

ಅಂತಃಕರಣವೆಂಬ ಬಲದಿಂದ, ನಾನಾ ಪ್ರಕಾರವಾಗಿ ತಮ್ಮ ತಮ್ಮ ಯೋಗ್ಯತಾನುಸಾರ ತಿಳಿದಂಥ ಬ್ರಹ್ಮ ವಾಯು ಗರುಡ ರುದ್ರ ಮೊದಲಾದ ದೇವತೆಗಳು, ಪೂರ್ವೋಕ್ತ ಆದಿಮಧ್ಯಾಂತರಹಿತನಾದ ಪರಮಾತ್ಮನ ನಿರ್ದೋಷಗಳಾದ ಗುಣಗಳನ್ನು ಸಾಕಲ್ಯೇನ ಅವರವರ ಯೋಗ್ಯತಾನುಸಾರ ತಿಳಿದವರೇ ಹೊರತು, ದೇವರ ಅನಂತಗುಣಗಳ ತಿಳಿದವರಲ್ಲ.

**ನಾಂತಂ ವಿದಾಮ್ಯಹಮಮೀ ಮುನಯಃ ಪ್ರಜೇಶಾಃ ಮಾಯಾಬಲಸ್ಯ ಪುರುಷಸ್ಯ ಕುತಃ ಪರೇ ಯೇ ।**
**ಗಾಯನ್ ಗುಣಾನ್ ದಶಶತಾನನ ಆದಿದೇವಃ ಶೇಷೋಽಧುನಾಪಿ ವಯಸ್ಯತಿ ನಾಸ್ಯ ಪಾರಂ ॥**

ಎಂತ ಉಕ್ತಿ ಇರುವದ್ದರಿಂದ ಪರಮಾತ್ಮನ ಗುಣಗಳು ಸಾಕಲ್ಯೇನ ತಿಳಿಯರು ಎಂತ ಭಾವ ॥ ೧೫ ॥

**೩. ಭಾವದರ್ಪಣ**

ಕಲಿಯುಗದಲ್ಲಿರುವ ಪಾಪಿಗಳ ಪಾಪಗಳನ್ನು ಪರಿಹರಿಸುವ ಶಕ್ತಿಯುಳ್ಳ ಗಂಗೆಯೊಳಗೆ ಅನೇಕ ಮೀನು ಮೊಸಳೆ ಮೊದಲಾದ ಜಲಚರ ಪ್ರಾಣಿಗಳಿರುವವು. ಅವುಗಳಿಗೆ ಆ ಗಂಗೆಯ ಮಹಿಮೆಯು ಇಂತಹುದೆಂದು ಗೊತ್ತಾಗುವುದೆ ? ಅದರಂತೆ ಅಪಾರ ಮಹಿಮೆಯುಳ್ಳ ಗುಣಸಮುದ್ರನಾದ ಪರಮಾತ್ಮನಲ್ಲಿ, ಸಮುದ್ರದಲ್ಲಿ ಉದಕ ಬಿಂದುಗಳು ಇರುವಂತೆ ಗುಣರಾಶಿಗಳು ಇರುವವು. ಅದರಲ್ಲಿನ ಒಂದು ಗುಣವನ್ನಾದರೂ ಜಲಚರ ಪ್ರಾಣಿಗಳಂತೆ ಇರುವ ಸಾಮಾನ್ಯ ಜನರು ತಿಳಿಯುವರೆ ? ಇಲ್ಲ. ಭಗವದನುಗ್ರಹ ಬಲದಿಂದ ಸರ್ವಜ್ಞರೆಂದೆನಿಸಿದ ಬ್ರಹ್ಮವಾಯುಗಳೇ ಸಾಕಲ್ಯೇನ ಭಗವನ್ಮಹಿಮೆಯನ್ನು ಅರಿಯರು—ತಮ್ಮ ಯೋಗ್ಯತಾನುಸಾರವಾಗಿ ಬಲ್ಲರೆಂಬ ತಾತ್ಪರ್ಯ. ಅವರೆಷ್ಟು ಬಲ್ಲರೋ ಅಷ್ಟು ಗರುಡ ರುದ್ರಾದಿಗಳು ತಿಳಿಯರು. ಹೀಗಿರಲು ಇನ್ನು ಸಾಕಲ್ಯೇನ ಬಲ್ಲವರಾರು? ಭಾಗವತ ದ್ವಿತೀಯಸ್ಕಂಧದಲ್ಲಿ (೭ನೆಯ ಅಧ್ಯಾಯ ೪೦–೪೧–೪೨ ಶ್ಲೋಕಗಳು) 'ವಿಷ್ಣೋರ್ನು ವೀರ್ಯ ಗಣನಾಂ ಕತಮೋರ್ಹತೀಹಯಃ ಪಾರ್ಥಿವಾನ್ಯಪಿ ಕವಿರ್ವಿಮಮೇರಜಾಂಸಿ॥ ಚಸ್ಕಂಭಯಃ ಸ್ವರಭಸಾ ಸ್ಖಲಿತಂತ್ರಿ ಪೃಷ್ಠಂ ಯಸ್ಮಾಂ

ನಿಶಾಮ್ಯ ಸದನಾದುರುಕಂಪಮಾನಂ ॥೪೦॥' ಬ್ರಹ್ಮದೇವರು ನಾರದರಿಗೆ ಉಪದೇಶ ಮಾಡಿದುದು.) ಶ್ರೀಪರಮಾತ್ಮನು ವಾಮನಾವತಾರಮಾಡಿ ಬಲಿಚಕ್ರವರ್ತಿಯನ್ನು ಮೂರು ಹೆಜ್ಜೆ ಭೂಮಿಯನ್ನು ಬೇಡಿ, ತ್ರಿವಿಕ್ರಮ ರೂಪದಿಂದ ಭೂಮಿಯನ್ನು ಅಳೆಯುವಾಗ ಪರಮಾತ್ಮನ ಎಡದ ಪಾದವು ಸತ್ಯಲೋಕಕ್ಕೆ ತಗಲಿದ ಕಾಲದಲ್ಲಿ ಸತ್ಯಲೋಕವು ಸ್ಥಾನಭ್ರಷ್ಟವಾಗಿ ಬಿದ್ದು ಹೋಗುವಂತಾಯಿತು. ಆಗ ಬ್ರಹ್ಮದೇವರೂ ಸಹ ಅಜ್ಞಾನವಿಲ್ಲದಿದ್ದರೂ ಭಗವನ್ಮಹಿಮೆಯನ್ನು ತೋರಿಸುವುದಕ್ಕಾಗಿ ತಮಗೆ ನಾಶ ಸಂಭವಿಸುವದೋ ಎಂಬ ಭಯದಿಂದ ನಡುಗುತ್ತಿದ್ದವರಂತೆ ಕಂಡು ಬಂದರು. ಇದನ್ನು ತಿಳಿದು ಯಾವ ಪರಮಾತ್ಮನು 'ಉರುಕಂಪಮಾನಂ, ಮಾಂ, ತ್ರಿಪೃಷ್ಟಂಚ ಚಸ್ಕಂಭ', ಭಯದಿಂದ ನಡುಗುತ್ತಿದ್ದ ನನ್ನನ್ನು, ಕೆಳಗೆ ಬೀಳುತ್ತಿದ್ದ ಸತ್ಯಲೋಕವನ್ನು ಸಹ ಸ್ತಂಭಿಸಿ ನಿಲ್ಲಿಸಿದನೋ, ಅಂತಹ ವಿಷ್ಣುವಿನ ವೀರ್ಯಗಳನ್ನು ಗಣನೆ ಮಾಡಲು ಯಾರಿಗೆ ಸಾಧ್ಯ. ಯಾರಿಗೂ ಸಾಧ್ಯವಲ್ಲ. ಒಂದು ಕಾಲದಲ್ಲಿ ಆದಿ ಕವಿಯಾದ ಬ್ರಹ್ಮದೇವರು 'ಪಾರ್ಥಿವಾನಿ ರಜಾಂಸ್ಯಪಿ' ಭೂಮಿಯಲ್ಲಿರುವ ಧೂಳಿಗಳ ಪರಮಾಣುಗಳು ಇಷ್ಟೆಂದು ಗಣನೆ ಮಾಡಿದ್ದರು. ಅಂತಹಾ ಬ್ರಹ್ಮದೇವರಿಂದಲೇ ಭಗವದ್ಗುಣಗಳನ್ನು ವರ್ಣಿಸಲು ಆಗಲಿಲ್ಲವೆಂದಮೇಲೆ ಮಿಕ್ಕ ಯಾವ ಜ್ಞಾನಿಯಿಂದ ತಾನೆ ಸಾಧ್ಯವಾಗುವುದು ? ಯಾರಿಂದಲೂ ಸಾಧ್ಯವಿಲ್ಲ ॥ ೪೦ ॥ ಅದನ್ನೇ ವಿಸ್ತರಿಸುತ್ತಾರೆ–'ನಾಂತಂವಿದಾಮ್ಯಹಮೀ ಮುನಯಃ ಪ್ರಜೇಶಾ ಮಾಯಾ ಬಲಸ್ಯ ಪುರುಷಸ್ಯ ಕುತೋಪರೇಯೇ ॥ ಗಾಯನ್ಗುಣಾನ್ದಶ ಶತಾನನ ಆದಿದೇವಃ ಶೇಷೋsಧುನಾಪಿ ಸಮವಸ್ಯತಿ ನಾಸ್ಯಪಾರಂ ॥ ೪೧ ॥ (ಬ್ರಹ್ಮ ವಾಕ್ಯ) ಎಲೈ ನಾರದನೆ ! ಇಚ್ಛಾಶಕ್ತಿಯುಳ್ಳ ಮಹಾಪುರುಷನಾದ ಶ್ರೀಪರಮಾತ್ಮನ ಮಹಿಮೆಯನ್ನು, ನಾನೇ ಸಾಕಲ್ಯೇನ ಕಾಣೆನು ಇಲ್ಲಿರುವ ಮರೀಚ್ಯಾದಿ ಋಷಿಗಳಾಗಲೀ, ಪರಮಾತ್ಮನ ಮಹಿಮೆಯನ್ನು ಕಾಣರು. ಹಾಗಿರಲು ಮಿಕ್ಕವರು ಕಾಣುವರೇ? ಇರಲಿ. ಶೇಷ ದೇವರಿಗೆ ಸಹಸ್ರ ಮುಖಗಳಿರುವವು. ಆದ್ದರಿಂದ ಬ್ರಹ್ಮದೇವರಿಗಿಂತಲೂ ಅವರು ಹೆಚ್ಚಾಗಿ ಬಲ್ಲರೇ ಹೇಗೆ ಎಂಬ ಮಂದವಾದ ಶಂಕೆಯನ್ನು ಪರಿಹರಿಸುತ್ತಾರೆ? ಹೇಳುತ್ತಾರೆ–ಸಹಸ್ರ ಮುಖವುಳ್ಳ ಶೇಷದೇವರು ತನ್ನ ಸಹಸ್ರ ಮುಖಗಳಿಂದ ಪರಮಾತ್ಮನನ್ನು ಸ್ತುತಿಸುತ್ತಿದ್ದರೂ ಈಗಲೂ ಭಗವನ್ಮಹಿಮೆಯ

ಪಾರವನ್ನು ಕಾಣಲಿಲ್ಲ. ಮುಂದೆ ಕಾಣುವುದೂ ಇಲ್ಲ. ॥ ೪೧ ॥ ಪರಮಾತ್ಮನ ಮಹಿಮೆಯನ್ನು ಯಾರೂ ಕಾಣದಮೇಲೆ ಅವನ ಮಹಿಮೆ ತಿಳಿದರೇನೇ ಪುರುಷಾರ್ಥಪ್ರಾಪ್ತಿಯು, ಮಹಿಮೆಯನ್ನು ಕಾಣದಮೇಲೆ ಯಾರಿಗೂ ಪುರುಷಾರ್ಥ ಸಿದ್ಧಿಯು ಇಲ್ಲವೊ ಎಂಬ ಶಂಕೆಯನ್ನು ಪರಿಹರಿಸುತ್ತಾ, ಭಗವಂತನ ಅನುಗ್ರಹವುಳ್ಳವರಿಗೆ ಎಲ್ಲವೂ ಸುಲಭವೆಂದು ಹೇಳುತ್ತಾರೆ.

'ಏಷಾಂ ಸ ಏವೇ ಭಗವಾನ್ ದಯಯೇದನಂತಃ ಸರ್ವಾತ್ಮನಾಶ್ರಿತಪದೋ ಯದಿ ನಿರ್ವ್ಯಲೀಕಂ ॥ ತೇವೈ ವಿದಂತ ತಿ ತರಂತಿ ಚ ದೇವಮಾಯಾಂ ನೈಷಾಂ ಮಮಾಹ ಏತಿಧೀಃ ಶ್ವಸೃಗಾಳಭಕ್ಷ್ಯೇ ॥ ೨೨ ॥' ಶ್ರೀಪರಮಾತ್ಮನು ತಾನಾಗಿ ಯಾರಲ್ಲಿ ದಯೆಯನ್ನು ಮಾಡುವನೋ ಅವರು ಪರಮಾತ್ಮನ ಮಾಯೆಯನ್ನು ದಾಟಿ ತಮ್ಮ ಯೋಗ್ಯತಾನುಸಾರವಾಗಿ ಪರಮಾತ್ಮನನ್ನು ತಿಳಿಯುವರು. ಹಾಗಾದರೆ ಪರಮಾತ್ಮನು ಕೆಲವರಲ್ಲಿ ದಯೆಯನ್ನು ತೋರಿಸುವನು, ಕೆಲವರಲ್ಲಿ ಇಲ್ಲವೆಂದಾಯಿತು. ಇದರಿಂದ ಪರಮಾತ್ಮನಿಗೆ ವೈಷಮ್ಯವಿದ್ದಂತಾಯಿತು. ಅಂದರೆ ಹೇಳುತ್ತಾರೆ. 'ಸರ್ವಾತ್ಮನಾಶ್ರಿತಪದೋ ಯದಿ ನಿರ್ವ್ಯಲೀಕಂ' ಕಪಟವಿಲ್ಲದೆ ಸರ್ವಪ್ರಕಾರದಿಂದಲೂ ತನ್ನ ಪಾದಾರವಿಂದವನ್ನೇ ನಂಬಿರುವವರು ಯಾರೊ ಅವರಲ್ಲಿ ದಯೆಯನ್ನು ಮಾಡುವನು. ಹೀಗೆ ಹೇಳಿದುದರಿಂದ ಅವರವರ ಯೋಗ್ಯತಾನುಸಾರ ದ್ವೇಷಿಗಳಿಗೆ ದ್ವೇಷಫಲ, ಭಕ್ತರಿಗೆ ಭಕ್ತಿಫಲವನ್ನು ಕೊಡುವವನಾದುದರಿಂದ, ಪರಮಾತ್ಮನಿಗೆ ವೈಷಮ್ಯವಿಲ್ಲವೆಂದು ತಾತ್ಪರ್ಯ. ತನ್ನನ್ನು ಸರ್ವಪ್ರಕಾರ ನಂಬಿದವರಲ್ಲಿ ದಯೆ ಮಾಡುವನೆಂದರು. ಯಾರಲ್ಲಿ ದಯೆ ಮಾಡುವುದಿಲ್ಲವೆಂದರೆ, ನಾಯಿನರಿಗಳಿಗೆ ಆಹಾರಭೂತವಾದ ಈ ದೇಹದಲ್ಲಿ ನಾನು, ನನ್ನದು ಎಂಬ ಬುದ್ಧಿಯು ಯಾರಿಗೆ ಸ್ಥಿರವಾಗಿರುವುದೋ ಅವರಲ್ಲಿ ಮಾತ್ರ ಪರಮಾತ್ಮನು ದಯೆಮಾಡನು ಎಂದು ಹೇಳಿರುವರು. ಈ ಮೂರು ಶ್ಲೋಕಗಳ ಅಭಿಪ್ರಾಯವನ್ನೇ ದಾಸರಾಯರು ಇಲ್ಲಿ ವಿವರಿಸಿರುವರೆಂದು ತಿಳಿಯಬೇಕು. ॥೧೨॥

**೩. ಭಾವದರ್ಪಣ**

ಕಲಿಮಲಾಪೇತಿ ॥ ೧೫ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದಿ

"ಕಲಿ" ಇತಿ ॥ "ವಿಪಃ" ಗರುಡಃ ॥ ೧೫ ॥

### ಕನ್ನಡಾರ್ಥ

ಭಾಗೀರಥಿ ಮುಂತಾದ ತೀರ್ಥಗಳ ಮಹಿಮೆಯನ್ನು ಮೀನು ಮುಂತಾದ ಜಲಚರ ಪ್ರಾಣಿಗಳು ತಿಳಿಯದಿರುವಂತೆ ಬ್ರಹ್ಮಾದಿ ಸುರರು ಹರಿಯನ್ನು ಪೂರ್ಣ ತಿಳಿಯುವುದಿಲ್ಲವೆಂದ ಮೇಲೆ ಸಾಮಾನ್ಯ ನರರ ಪಾಡೇನು ? ಎಂದು ತಿಳಿಸುತ್ತಾರೆ. ವಿಪ ಅಂದರೆ ಪಕ್ಷಿಶ್ರೇಷ್ಠನಾದ ಗರುಡ ॥ ೧೫ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ದೇವರನ್ನು ಕೊನೆಕಂಡು ತಿಳಿಯವುದು ಮುಕ್ತಾಮುಕ್ತ ಸರ್ವಜೀವರಿಂದಲೂ ಆಗದೆಂದು ಸದೃಷ್ಟಾಂತ ತಿಳಿಸುತ್ತಾರೆ, ಕಲಿ ಎಂದು. ಕಲಿಕಲ್ಮಷ ಪರಿಹರಿಸುವಳೆನಿಸಿಕೊಳ್ಳುವ, ಬಾಂಬೊಳೆ ಎನಿಸುವ ಅಂತರಿಕ್ಷ ನದಿಯಾದ ಗಂಗೆಯಲ್ಲಿ ಸಂಚರಿಸುತ್ತಾ ಜೀವಿಸುವ ಜಲಚರಪ್ರಾಣಿಗಳೆಂಬ ಮೀನು ಮೊದಲಾದ ಜಂತುಗಳು ತೀರ್ಥಮಹಾತ್ಮ್ಯೆಯನ್ನು ಹೇಗೆ ಅರಿಯವೋ ಹಾಗೆ, ಶ್ರೀಹರಿಯಕರುಣಾ ಬಲದಿಂದ, ಹಲವು(ಬಗೆಯಲಿ)ಎಂದರೆ, ಕ್ರಮವಾಗಿ ಜ್ಞಾನ ಬಲ ವಿಶೇಷವುಳ್ಳ ಬ್ರಹ್ಮ ವಾಯು ಗರುಡ ಶಿವ ಮುಂತಾದವರು ಅನಂತನಾದ ದೇವರಗುಣ ಕೊನೆಗಾಣರು ॥ ೧೫ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಹರಿಯ ಪಾದೋದ್ಭವೆಯಾದ ಗಂಗಾನದಿಗೆ ಬಾಂಬೊಳೆ ಎಂದುಹೆಸರು. ಸುರನದಿಯಾದ ಗಂಗಾನದಿಯೇ ಬಾಂಬೊಳೆಯು. ಅಮರತರಂಗಿಣಿಯಾದ ಗಂಗಾನದಿಯು ಶ್ರೀಹರಿಯ ಪಾದೋದ್ಭವೆಯಾದ್ದರಿಂದ ಜೀವರ ಸರ್ವಪಾಪಗಳನ್ನು ಪರಿಹರಿಸುವಳೆಂದರ್ಥ.

ಅಂತಹ ಗಂಗಾನದಿಯಲ್ಲಿಯೇ ಜನಿಸಿ ಬದುಕಿ, ಅಲ್ಲಿಯೇ ನಾಶಹೊಂದುವ ಮೀನು, ಮೊಸಳೆ, ತಿಮಿಂಗಿಲ ಇತ್ಯಾದಿ ಅನೇಕ ಜಲಚರ ಜಂತುಗಳಿವೆ. ಈ ಪ್ರಾಣಿಗಳು ಗಂಗಾನದಿಯ ಮಹಿಮೆಯನ್ನು ತಿಳಿಯಲಾರವು. ಇದೇ ರೀತಿಯಲ್ಲಿ ಜಲಚರ ಜಂತು ಸದೃಶರಾದ ಪಾಮರ ಮನುಜರು ಶ್ರೀಪರಮಾತ್ಮನ ಅಪಾರ ಗುಣಗಳ ಮಹಿಮೆಯನ್ನು ಅರಿಯಲಾರರು.

ಜೀವಕೋಟಿಪ್ರವಿಷ್ಟರಾದ ಚತುರ್ಮುಖಬ್ರಹ್ಮದೇವರು, ಸರ್ವಜ್ಞರಾದ ಶ್ರೀವಾಯುದೇವರು, ಪಕ್ಷಿರಾಜರಾದ ಗರುಡದೇವರು, ರುದ್ರದೇವರು ಇತ್ಯಾದಿ ಸಮಸ್ತ ದೇವತಾಗಣವು, ತಮ್ಮ ತಮ್ಮ ಯೋಗ್ಯತಾನುಸಾರ ಶ್ರೀಹರಿಯ ಮಹಿಮೆಯನ್ನು ಬಲ್ಲರೆ ಹೊರತು ಅಪರಿಮಿತವಾದ ಸಮುದ್ರದ ಉದಕ ಬಿಂದುಗಳನ್ನು ಎಣಿಸಲು ಹೇಗೆ ಅಸಾಧ್ಯವೋ, ಅದರಂತೆ ಶ್ರೀಹರಿಯ ದೋಷರಹಿತವಾದ, ಶುಭಗುಣಗಣರಾಶಿಯನ್ನು ಸಾಕಲ್ಯೇನ ತಿಳಿಯಲಾರರು. ನಿತ್ಯಾವಿಯೊಗಿಸಿಯಾದ ಶ್ರೀರಮಾದೇವಿಯೇ ಸಾಕಲ್ಯೇನ ಅರಿಯಳು ಎಂದಮೇಲೆ ಇತರರ ಪಾಡೇನು ? ॥ ೧೫ ॥

❋❋ ❋❋ ❋❋

## ಪದ್ಯ ೧೬

**ಮೂಲ**

**ಶ್ರೀಲಕುಮೀವಲ್ಲಭನು ಹೃತ್ಕೀ ।**
**ಲಾಲಜದೊಳಿದ್ದಖಿಳ ಚೇತನ ।**
**ಜಾಲವನು ಮೋಹಿಸುವ ತ್ರಿಗುಣದಿ ಬದ್ಧರನು ಮಾಡಿ ॥**
**ಸ್ಥೂಲಕರ್ಮದಿ ರತರ ಮಾಡಿ ಸು ।**
**ಲೀಲೆಗಳ ತಿಳಿಸದಲೆ ಭವದಿ ಕು ।**
**ಲಾಲಚಕ್ರದ ತೆರದಿ ತಿರುಗಿಸುತಿಹನು ತಿಳಿಸದಲೆ ॥ ೧೬ ॥**

**ಅವತರಣಿಕೆ**

ಶ್ರೀಹರಿಯು ಕೇವಲ ಸ್ಥೂಲರೂಪವಾದ ಕರ್ಮಗಳಲ್ಲಿ ಜೀವರನ್ನು ಆಸಕ್ತರನ್ನಾಗಿ ಮಾಡಿಸಿ, ಈ ಸಂಸಾರದಲ್ಲಿ ಕುಂಬಾರನ ಚಕ್ರದಂತೆ ತಿರುಗಿಸುತ್ತಿಹನೆಂದು ತಿಳಿಸುತ್ತಾರೆ. ॥ ೧೬ ॥

**ಪ್ರತಿಪದಾರ್ಥ**

**ಶ್ರೀಲಕುಮೀವಲ್ಲಭನು** = ರಮಾರಮಣನಾದ ಶ್ರೀಪರಮಾತ್ಮನು, **ಹೃತ್ಕೀಲಾಲಜದೊಳಿದ್ದು** = ಜೀವರ ಹೃತ್ಕಮಲದಲ್ಲಿ ವಿದ್ಯಮಾನನಾಗಿದ್ದು (ಹೃತ್–ಹೃದಯ, ಕೀಲಾಲಜ–ಕಮಲ, ಕೀಲಾಲ ಎಂದರೆ ನೀರು. ಅದರಲ್ಲಿ ಜ ಎಂದರೆ ಉತ್ಪತ್ತಿಯಾದ ಕಮಲ), **ಅಖಿಳಚೇತನಜಾಲವನು** = ಸಮಸ್ತರಾದ ತ್ರಿವಿಧಜೀವರ ರಾಶಿಯನ್ನು, **ತ್ರಿಗುಣದಿ** = ಅನಾದಿಯಿಂದ ತ್ರಿಗುಣಾತ್ಮಕವಾದ ಲಿಂಗದೇಹದಿಂದ, **ಬದ್ಧರನು ಮಾಡಿ** = ಜೀವರ ಸ್ವರೂಪದೇಹಕ್ಕೆ ಸಾವಕಾಶದಿಂದ ಆವರ್ಕವಾಗಿರುವ ಲಿಂಗಶರೀರವನ್ನು ಸೃಷ್ಟಿ ಪ್ರಾರಂಭದಲ್ಲಿ ನಿರವಕಾಶದಿಂದ ಸಂಬಂಧವನ್ನುಂಟುಮಾಡಿ, **ಮೋಹಿಸುವ** = ಮೋಹಯುಕ್ತರನ್ನಾಗಿ ಮಾಡಿಸುವನು. **ಸ್ಥೂಲಕರ್ಮದಿ** = ಕೇವಲ ಸ್ಥೂಲರೂಪವಾದ ಜಡಕರ್ಮಗಳಲ್ಲಿ, **ರತರಮಾಡಿ** = ಆಸಕ್ತರನ್ನಾಗಿ ಮಾಡಿಸಿ, **ಸುಲೀಲೆಗಳ** = ಸಮೀಚೀನವಾದ ತನ್ನ ಕ್ರೀಡಾರೂಪವಾದ ಲೀಲಾವಿಲಾಸಗಳನ್ನು, **ತಿಳಿಸದಲೆ** = ಜೀವರಿಗೆ ವ್ಯಕ್ತಮಾಡದೆ, **ಭವದಿ** = ಜನನ ಮರಣಾಖ್ಯವಾದ ಸಂಸಾರದಲ್ಲಿ ಕರ್ಮಾನುಸಾರ ಜನ್ಮಗಳನ್ನು ಕೊಟ್ಟು, **ಕುಲಾಲಚಕ್ರದ ತೆರದಿ** = ಕುಂಬಾರನ ಚಕ್ರದೋಪಾದಿಯಲ್ಲಿ, **ತಿಳಿಸದಲೆ** = ತನ್ನ ಮಹಿಮಾವಿಶೇಷವನ್ನು ತಿಳಿಸದೆ ಅಗೋಚರನಾಗಿದ್ದು, **ತಿರುಗಿಸುತಿಹನು** = ಮನಸ್ಸನ್ನೂ ವಿಷಯಾದಿಗಳಲ್ಲಿ ಸಂಚಾರ ಮಾಡಿಸುತ್ತಾ ಭವಚಕ್ರದಾಟದಲ್ಲಿ ತಿರುಗಿಸುತ್ತಿರುವನು. ॥ ೧೬ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಸ್ಥೂಲದೇಹಗತ ಬಿಂಬ ಮಾಡುವ ವ್ಯಾಪಾರಗಳ ಹೇಳುತಾರೆ.

ಕಾಂತಿಸಂಪನ್ನನಾದ ಸ್ವಾಖ್ಯಐಶ್ವರ್ಯದಿಂದ ಸ್ವರಮಣನಾದ, ಲಕ್ಷ್ಮೀದೇವಿಯರಿಂದ ಸಹಿತನಾದ ಶ್ರೀಪರಮಾತ್ಮನು, ಉದಕದಲ್ಲಿ ಉತ್ಪನ್ನವಾದ, ಜೀವನ ಸ್ವರೂಪಗತ ಹೃದಯಕಮಲದಲ್ಲಿ ರಮಾ ಸಹಿತನಾಗಿದ್ದು, ಸಮಸ್ತವಾದ ತ್ರಿವಿಧರಾದ ಜೀವರ ಸಮೂಹವನ್ನು ಅನಾದಿಯಾದ ತ್ರಿಗುಣಾತ್ಮಕವಾದ ಲಿಂಗದೇಹದಿಂದ, ಒಣಗಿದ ಗಜ್ಜುಗದೋಪಾದಿಯಲ್ಲಿ ಇರುವ ಬೀಜದೋಪಾದಿಯಲ್ಲಿ ಸಾವಕಾಶದಿಂದ ಇರತಕ್ಕ ಲಿಂಗದೇಹವನ್ನ, ಸೃಷ್ಟಿ ಪ್ರಾರಂಭದಲ್ಲಿ ನಿರವಕಾಶದಿಂದ ಸಂಬಂಧರೂಪವಾದ ಬದ್ಧರನ್ನಾಗಿ ಮಾಡಿ, ಸ್ವರೂಪಜ್ಞಾನಕ್ಕೆ ಅನ್ಯಥಾವಾದ ಮೋಹಯುಕ್ತವಾದ ಜ್ಞಾನಯುಕ್ತರನ್ನಾಗಿ ಮಾಡುವ. ಜೀವರೇನು, ಜೀವರ ಜ್ಞಾನವೇನು, ಸ್ಫಟಿಕದೋಪಾದಿಯಲ್ಲಿ ಶುಭ್ರವಾದರೂ, ಸ್ಫಟಿಕವನ್ನ ರಕ್ತವರ್ಣ ವಿಶಿಷ್ಟವಾದ ಜಪಾಕುಸುಮ ಮಧ್ಯದಲ್ಲಿ ಇಟ್ಟರೆ, ರಕ್ತವರ್ಣದಿಂದ ವಿಕಾರ ಐದತದೆ. ಆ ಪುಷ್ಪ ಸ್ಫಟಿಕದ ನೈಜವಾದ ಶುಭ್ರವನ್ನು ಹೋಗಲಾಡಿಸಲಾರದು. ತದ್ವತ್ ಲಿಂಗದೇಹ ಸ್ವಾಚ್ಛ್ಯವಾದ ಜ್ಞಾನವನ್ನೂ ಅವನ ಸ್ವರೂಪವನ್ನೂ ವಿಕಾರ ಐದಿಸಿತದೇ ಹೊರತು, ಜೀವನ ಅನಾದಿ ಸ್ವರೂಪವನ್ನು ಕೆಡಿಸಲಾರದು. ಈ ರೀತ್ಯಾ ಉಪಾಧಿವಶಾತ್ ಪರಮಾತ್ಮ, ಜೀವನ ಸ್ವರೂಪಜ್ಞಾನಕ್ಕೆ ಅನ್ಯಥಾವಾಗಿ ಮೋಹಯುಕ್ತನನ್ನಾಗಿ ಮಾಡುವ, ಇದು ಲಿಂಗಭಂಗದವರಿಗೂ, ನಂತರ ಅವರವರ ಸ್ವರೂಪಕ್ಕೆ ಯೋಗ್ಯವಾದ ಗತಿಯನ್ನು ಕೊಡತಾನೆ. ಈ ಪ್ರಕಾರ ಲಿಂಗ ದೇಹ ಸಂಬಂಧ ಮಾಡಿ ಈ ನಿಮಿತ್ತ ಕಾರಣದಿಂದ

**ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।**
**ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥**

ಎಂತ ಗೀತಾ. ಅನ್ಯವಾದ ಮೂಲಜಡಪ್ರಕೃತಿಯಿಂದ ಸ್ಥೂಲದೇಹ ನಿರ್ಮಾಣ ಮಾಡಿ, ಲಿಂಗಗತ ಅನಾದಿಕರ್ಮವನ್ನ ಸ್ಥೂಲದೇಹದಿಂದ ಭೋಗ ಮಾಡೋ ವಿಷಯದಲ್ಲಿ, ಅನಾದಿ ಕರ್ಮಾನುಸಾರ ಆಸಕ್ತರನ್ನಾಗಿ ಮಾಡಿ, ಸಮೀಚೀನವಾದ ತನ್ನ ಕ್ರೀಯಾರೂಪವಾದ ಆಟಗಳಿಂದ ಕರ್ಮಗಳ ಮಾಡಿಸುತ್ತಾ ತಾನು ಮಾಡತಕ್ಕ ಲೀಲೆಗಳ ಜೀವರಿಗೆ ತಿಳಿಸದಲೆ, ದಾವಕರ್ಮ ಭೋಗಕ್ಕೆ ತರಬೇಕೋ ಅಂಥಾ ಜ್ಞಾನವೇ ವ್ಯಕ್ತಮಾಡಿಕೊಡತಾ ಇರ್ತಾನೆ. ಸಂಸಾರದಲ್ಲಿ ಕರ್ಮಾನುಸಾರ ಜನ್ಮಗಳ ಕೊಟ್ಟು, ಆಯಾ ಜನ್ಮದಲ್ಲಿ ಸಂಸಾರ ಸಾಂಕೇತವಾದ ಪ್ರಾಕೃತ ವನಿತಾದಿ

ವಿಷಯಗಳಲ್ಲಿ, ಕುಂಬಾರನ ಚಕ್ರ ವೇಗದಿಂದ ತಿರುಗುವ ಪ್ರಕಾರ ಕರ್ಮಸ್ವಭಾವಾನುಸರಿಸಿ ಹೇಯಾಹೇಯ, ಯುಕ್ತಾಯುಕ್ತ ಜ್ಞಾನ ತಿಳಿಸದಲೆ ಮನಸ್ಸನ್ನು ಸಂಚಾರ ಮಾಡಿಸತಾ ದೇಹದಲ್ಲಿ ಇದ್ದಾನೆ. ಲೋಕದಲ್ಲಿ ಪ್ರಾಣಿಗಳು ಜ್ಞಾನಾಜ್ಞಾನ, ಪಾಪಪುಣ್ಯದಲ್ಲಿ ನಾನಾ ಪ್ರಕಾರವಾಗಿ ಇರೋದಕ್ಕೆ ಇದು ಕಾರಣ. ಇದರ್ನ ಶ್ರೀಪರಮಾತ್ಮ ಅನುತಾಪಯುಕ್ತನಾಗಿ ಉದ್ಧಾರ ಮಾಡತಾನಾದಕಡಿಯಿಂದ ದೇವರನ್ನ ಪ್ರಾರ್ಥನಾ ಮಾಡಬೇಕು. ಮಿಥ್ಯಾ ಜ್ಞಾನಿಗಳಾದ ಭಗವದ್ದ್ವೇಷಿಗಳ ವ್ಯತಿರಿಕ್ತ ಎಂತ ತಾತ್ಪರ್ಯ.

**ವಿಶೇಷಾರ್ಥ**—ನಿತ್ಯಸಂಸಾರಿಗಳು ಇರತಕ್ಕ ಲೋಕ ಸಾಂತಾನಿಕ ಲೋಕ. ಈ ಲೋಕಕ್ಕೆ ಸಾಂತಾನಿಕ ಎಂತಲೂ, ಸಾಂಕೇತಿಕ ಎಂತಲೂ ನಾಮ. ಈ ಲೋಕ ಲೋಕಾಲೋಕ ಪರ್ವತಕ್ಕೆ ಆಚೇಲಿ ಇರತಕ್ಕ ತಮಸ್ಸಿಗೆ ಮೇಲ್ಭಾಗದಲ್ಲಿ, ಸ್ವರ್ಗ ಲೋಕಕ್ಕೆ ಅಧೋಭಾಗದಲ್ಲಿ, ಈ ಮಧ್ಯದಲ್ಲಿ ನಿತ್ಯಸಂಸಾರಿಲೋಕ ಅದೆ. ಈ ವಿಚಾರ ಸತ್ಯತೀರ್ಥೀಯ ಎಂಬ ಗ್ರಂಥದಲ್ಲಿ ವಿವರ ಮಾಡಲ್ಪಟ್ಟಿದೆ. ಇವರಲ್ಲಿ ಸ್ವರ್ಗ ಪ್ರಚುರರು, ಭೂಪ್ರಚುರರು ನಿರಯಪ್ರಚುರರು ಎಂತ ತ್ರಿವಿಧ ಪ್ರಕಾರ ಭೇದ ಉಳ್ಳವರು. ಲಿಂಗಭಂಗಾನಂತರ ಆಯಾ ಪ್ರದೇಶದಲ್ಲೇ ಅವರವರ ಆವಾಸ ಎಂತ ವಿವರವದೆ. ॥ ೧೬ ॥

## ೨. ಭಾವಪ್ರಕಾಶಿಕೆ

ಶ್ರೀಲಕ್ಷ್ಮೀಪತಿಯು, ಸಕಲ ಜನರ ಹೃದಯಕಮಲದಲ್ಲಿ ವಾಸವಾಗಿದ್ದು ಸಕಲ ಜೀವಸಮೂಹವನ್ನು ತ್ರಿಗುಣಬದ್ಧರನ್ನಾಗಿ ಮಾಡಿ ಮೋಹಿಸುವನೆಂದು ಹೇಳಿರುವರು. ಇದನ್ನು ನೋಡಿದರೆ ಪರಮಾತ್ಮನೇ ಜೀವರನ್ನು ಮೂರು ಗುಣಗಳಿಂದ ಬದ್ಧರನ್ನಾಗಿ ಮಾಡಿದನೆಂದು ಅರ್ಥವಾಗುವದು. ಹಾಗೆ ಹೇಳಲಿಕ್ಕಿಲ್ಲ. ಏಕೆಂದರೆ ಮಹಾಭಾರತತಾತ್ಪರ್ಯನಿರ್ಣಯ ಮೊದಲನೆಯ ಅಧ್ಯಾಯದಲ್ಲಿ 'ದೃಷ್ಟ್ವಾ ಸ ಚೇತನ ಗಣಾನ್ ಜಠರೇ ಶಯಾನಾ ನಾನಂದ ಮಾತ್ರ ವಪುಷಃ ಸ್ಮೃತಿ ವಿಪ್ರ ಮುಕ್ತಾನ್ ॥ ಧ್ಯಾನಂಗತಾ ಸ್ಸ್ಮೃತಿಗತಾಂಶ್ಚ ಸುಷುಪ್ತಿ ಸಂಸ್ಥಾನ್ ಬ್ರಹ್ಮಾದಿಕಾನ್ ಕಲಿ ಪರಾನ್ ಮನುಜಾಂ ಸ್ತಥೈಕ್ಷತಾ' ಎಂಬೀಶ್ಲೋಕದಿಂದ, ಕೇವಲ ಆನಂದಸ್ವರೂಪರಾದ ಮುಕ್ತರನ್ನು, ಸೃಷ್ಟಿಯೋಗ್ಯರಾದವರಲ್ಲಿ ಧ್ಯಾನಾಸಕ್ತರು, ನಿತ್ಯಸಂಸಾರಿಗಳು

ಸುಷುಪ್ತಿಯಲ್ಲಿರುವವರನ್ನು ಅಂದರೆ ಬ್ರಹ್ಮದೇವರು ಮೊದಲು ಸಾತ್ವಿಕರು, ಕಲಿ ಮೊದಲಾದ ತಾಮಸರು, ಮನುಷ್ಯರಾದ ರಾಜಸರು, ಹೀಗೆ ಅನಾದಿಕಾಲ ದಿಂದಲೂ ಮೂರು ಗುಣಗಳಿಂದ ಬದ್ಧರಾದ ಜೀವರನ್ನು ತನ್ನ ಉದರದಲ್ಲಿ ನೋಡಿದನೆಂದು ಸಿದ್ಧವಾಗುವುದು. ಇದೇ ವಿಷಯವನ್ನು ವಿಷ್ಣುರಹಸ್ಯದಲ್ಲಿ ಸ್ಪಷ್ಟಮಾಡಿರುವರು, ಹೇಗೆಂದರೆ:–ವಿಷ್ಣು ರಹಸ್ಯ ೨ನೇ ಅಧ್ಯಾಯದಲ್ಲಿ 'ಕಲ್ಪ ಯಿತ್ವಾಖಿಲಾನ್ಪಶ್ಯಾಜ್ಜೀವರಾಶೀನ್ ವ್ಯಲೋಕಯಂ ॥ ೩೪ ॥ ಕತಿಚಿತ್ಪುರುಷಾ ಕಾರಃ ಕತಿಚಿದ್ಧಯರೂಪಿಣಃ ॥ ಸಿಂಹ ವ್ಯಾಘ್ರ ಮೃಗಾದೀನಾಂ ಗಜ ಗೋಜಾ ವಿಪಕ್ಷಿಣಾಂ ॥ ೩೫ ॥ವೃಕ್ಷಗುಲ್ಮಲತಾದೀನಾಂ ಮಕಾರಂ ಬಿಭ್ರತೋಪರೆ ॥ ಅಪರೇ ಸದೃಶಾಕಾರಾ ಝುಷಮೀನಾದಿ ಯಾದಸಾಂ ॥೩೬॥ ಸ್ವರೂಪೇಣೈವ ಯೇ ಜೀವಾ ಸ್ತಾದೃಶಾನಂತ ಸಂಜ್ಞಕಾಃ ॥ ಗುಣೈರನೇಕ ಸಂಖ್ಯಾಕೈಃ ಪ್ರತ್ಯೇಕಮಪಿಚಾನ್ವಿತಾಃ ॥ ೩೭ ॥ ಸಾತ್ವಿಕಾ ಶ್ವೇತರೂಪಾಸ್ತು ಶ್ಯಾಮಾಸ್ತತ್ರೇಪ್ಯ ತಾಮಸಾಃ ॥ ತತ್ರಾಪಿ ತಾರತಮ್ಯೇನ ಶ್ವೇತ ಶ್ವೇತ ತರಾದಿಕಂ ॥ ೩೮ ॥ ಯಥಾಯೋಗ್ಯತಯಾ ಸರ್ವೇ ರಾಜಸಾ ಶಬಲಾಸ್ತಥಾ ॥ ತತ್ತದಾಕಾರ್ಯಸದೃಶೈರ್ಲಿಂಗ ದೇಹೈರನಾದಿಭಿಃ ॥೩೯॥ ಕಂಚುಕೈರಿವ ಸಂಭನ್ನಾಸ್ತತ್ತದ್ವರ್ಣೈಃ ಪೃಥಕ್ ಪೃಥಕ್' ಬ್ರಹ್ಮದೇವರಿಗೆ ಪರಮಾ ತ್ಮನು ಹೇಳುವುದು. ಮಹತ್ತತ್ವಾದಿಗಳನ್ನು ಸೃಷ್ಟಿ ಮಾಡಿದ ಮೇಲೆ ಜೀವರಾಶಿ ಗಳನ್ನು ನೋಡಿದೆನು. ಅದರಲ್ಲಿ ಸ್ವರೂಪದಿಂದಲೇ ಕೆಲವರು ಪುರುಷಾಕಾರರಾ ಗಿಯೂ, ಕೆಲವು ಜೀವರು ಕುದುರೆಯ ರೂಪ, ಮತ್ತೆ ಕೆಲವರು ಸಿಂಹ, ಹುಲಿ, ಜಿಂಕೆ ಮೊದಲಾದ ಮೃಗರೂಪಗಳಾಗಿಯೂ, ಮತ್ತೆ ಕೆಲವರು ಆನೆಗಳು, ಗೋವುಗಳು, ಮೇಕೆಗಳು, ಕುರಿಗಳು, ಪಕ್ಷಿಗಳ ರೂಪರಾಗಿಯೂ, ಮತ್ತೆ ಕೆಲ ವರು ವೃಕ್ಷಗಳು, ಹೊದರುಗಳು, ಬಳ್ಳಿಗಳ ರೂಪವುಳ್ಳವರಾಗಿಯೂ, ಮತ್ತೆ ಕೆಲವರು ಮೀನ, ಕೂರ್ಮ ಮೊದಲಾದ ಜಲಜಂತುಗಳ ಆಕಾರ ಉಳ್ಳವರಾ ಗಿಯೂ ಇದ್ದರು. ಇವರೆಲ್ಲರೂ ಸ್ವರೂಪದಿಂದಲೆ ಹೀಗೆ ಇರುತ್ತಿದ್ದರು. ಇಂತಹ ಜೀವರು ಅಪರಿಮಿತರಾಗಿದ್ದರು. ಒಬ್ಬೊಬ್ಬ ಜೀವರ ಗಣವು ಪ್ರತ್ಯೇಕ ಪ್ರತ್ಯೇಕವಾಗಿ ಅನೇಕ ಸಂಖ್ಯಾಕವಾದ ಗುಣಗಳಿಂದ ಕೂಡಿದ್ದರು. ಈ ಜೀವರು ಸ್ವಭಾವಿಕವಾಗಿ ಮೂರು ಗುಣಗಳಿಂದ ಬದ್ಧರಾಗಿದ್ದರು. ಸತ್ವಗುಣ, ರಜೋ ಗುಣ, ತಮೋಗುಣಗಳಿಂದ ಬದ್ಧರಾಗಿ ಸಾತ್ವಿಕರು, ರಾಜಸರು, ತಾಮಸರೆಂದು

ಎಲ್ಲ ಜೀವರಾಶಿಗಳಲ್ಲಿಯೂ ಈ ಮೂರು ಭೇದಗಳಿದ್ದುವು. ಈ ಮೂರು ಗುಣಗಳನ್ನು ಅವರ ವರ್ಣಗಳೇ ತೋರಿಸುತ್ತಿದ್ದವು. ಸಾತ್ವಿಕರು ಶುಕ್ಲವರ್ಣರಾಗಿದ್ದರು ತಾಮಸರೆಲ್ಲರೂ ಕಪ್ಪು ಬಣ್ಣ ಉಳ್ಳವರಾಗಿದ್ದರು. ರಾಜಸರು ಕೆಂಪು. ಈ ಸಾತ್ವಿಕರಲ್ಲಿ ಕೆಲವರು ಸಾತ್ವಿಕ ಸಾತ್ವಿಕರು, ಕೆಲವರು ಸಾತ್ವಿಕ ರಾಜಸರು, ಇನ್ನು ಕೆಲವರು ಸಾತ್ವಿಕತಾಮಸರು. ರಾಜಸರಲ್ಲಿ ರಾಜಸಸಾತ್ವಿಕರು, ರಾಜಸ ರಾಜಸರು, ರಾಜಸತಾಮಸರು. ಇದರಂತೆ ತಾಮಸರಲ್ಲಿಯೂ ತಾಮಸಸಾತ್ವಿಕರು, ತಾಮಸ ರಾಜಸರು, ತಾಮಸತಾಮಸರು. ಇವುಗಳಲ್ಲಿ ಒಂದೊಂದಕ್ಕೆ ಪ್ರಭೇದಗಳುಂಟು. ಇವುಗಳು ಮಿಶ್ರಬಣ್ಣಗಳಿಂದ ತೋರುತ್ತಿದ್ದುವು. ಶುದ್ಧಬಿಳುಪು, ಬಿಳುಪು ಕೆಂಪು ಮಿಶ್ರ. ಬಿಳುಪು ಕಪ್ಪು ಮಿಶ್ರ. ಮತ್ತು ಶುದ್ಧ ಕೆಂಪು, ಕೆಂಪು ಬಿಳುಪು, ಕೆಂಪು ಕಪ್ಪು ಮಿಶ್ರವಾದುದು. ಕಪ್ಪಿನಲ್ಲೂ ಶುದ್ಧಕಪ್ಪು, ಕಪ್ಪು ಬಿಳುಪು, ಕಪ್ಪು ಕೆಂಪು ಮಿಶ್ರವಾದುದು. ಹೀಗಾಗಿ ಆ ಜೀವರ ಸ್ವರೂಪಗಳು ಅವರು ತಾಮಸ, ರಾಜಸ, ಸಾತ್ವಿಕರೆಂಬುದು ವ್ಯಕ್ತಿಮಾಡುತ್ತಿದ್ದವು.

ಆ ಜೀವರು ಸ್ವರೂಪದೇಹದ ಮೇಲೆ ಕವಚಗಳು ಹಾಕಿದಂತೆ ಅವೇ ಬಣ್ಣಗಳಿಂದಲೂ ಅವೇ ಆಕಾರಗಳಿಂದ ಕೂಡಿದ ಲಿಂಗ ಶರೀರಗಳ ಆವರಣದಿಂದ ಮುಚ್ಚಲ್ಪಟ್ಟಿದ್ದರು ಎಂದು ಬ್ರಹ್ಮದೇವರಿಗೆ ಪರಮಾತ್ಮನು ಹೇಳಿರುವನು. ಇತ್ಯಾದಿ ಪ್ರಮಾಣಗಳಿಂದ ಅನಾದಿ ಕಾಲದಿಂದಲೂ ಜೀವರು ತ್ರಿಗುಣಬದ್ಧರೆಂದು ಸಿದ್ಧವಾಗುವುದು. ಹೀಗಿರಲು ದಾಸರಾಯರು "ತ್ರಿಗುಣದಿ ಬದ್ಧರನು ಮಾಡಿ" ಎಂಬ ವಾಕ್ಯದಿಂದ ಪರಮಾತ್ಮನು ಜೀವರನ್ನು ತನ್ನ ಇಚ್ಛೆಯಿಂದಲೇ ಕೆಲವರನ್ನು ಸಾತ್ವಿಕರನ್ನಾಗಿಯೂ, ಕೆಲವರನ್ನು ರಾಜಸರನ್ನಾಗಿಯೂ, ಕೆಲವರನ್ನು ತಾಮಸರನ್ನಾಗಿಯೂ ಮಾಡಿದನೆಂದು ಅರ್ಥವು ತೋರುವುದು. ಈ ಅರ್ಥವು ಸಿದ್ಧಾಂತ ವಿರುದ್ಧವಾಗುವುದರಿಂದ ಇದರರ್ಥ ಹಾಗಲ್ಲ. ಅನಾದಿ ಕಾಲದಿಂದಲೂ ಜೀವರು ತ್ರಿಗುಣಬದ್ಧರಾದರೂ, ಜೀವಾಚ್ಛಾದಿಕ ಪರಮಾಚ್ಛಾದಿಕ ಎಂಬ ದುಷ್ಟ ಪ್ರಕೃತಿಯ ಆವರಣದಿಂದ ಮುಚ್ಚಲ್ಪಟ್ಟು, ಸಾತ್ವಿಕರೆಂತಲೂ, ರಾಜಸರೆಂತಲೂ, ತಾಮಸರೆಂತಲೂ ಕರಿಸಿಕೊಂಡು, ಜೀವನ ಸ್ವರೂಪವು ಜೀವರಿಗೆ ಕಾಣುವುದಿಲ್ಲ. ಅಂತಹಾ ಜೀವರಿಗೆ ಅವರವರ ಯೋಗ್ಯತಾನುಸಾರವಾದ ಕರ್ಮಗಳನ್ನು ಮಾಡಿಸಿ

ಫಲವನ್ನು ಕೊಡುವುದಕ್ಕಾಗಿ ಸಾತ್ವಿಕರಿಗೆ ಪರಮಾತ್ಮನಲ್ಲಿ ಭಕ್ತಿ ಮೊದಲಾದುವು ಗಳನ್ನು ವೃದ್ಧಿಮಾಡಿಸುವುದಕ್ಕಾಗಿ ಸಾತ್ವಿಕದೇಹವಾದ ದೇವತಾಶರೀರವನ್ನು, ರಾಜಸರಿಗೆ ಮನುಷ್ಯಶರೀರವನ್ನು, ತಾಮಸರಿಗೆ ದೈತ್ಯಶರೀರವನ್ನು ಕೊಡಿಸಿ ಅವರವರ ಯೋಗ್ಯತಾನುಸಾರ ಕರ್ಮಗಳನ್ನು ಮಾಡಿಸುವನು ಎಂದು ಅರ್ಥವೇ ಹೊರತು, ಜೀವರನ್ನೇ ಸಾತ್ವಿಕಾದಿ ಗುಣಯುಕ್ತರನ್ನಾಗಿ ಮಾಡಿಸಿದನೆಂದರ್ಥವಲ್ಲ. ಪರಮಾತ್ಮನು ಮಾಡಿಸುವ ಕರ್ಮಗಳನ್ನು ಜೀವನು ಭಗವನ್ಮಾಯೆಯಿಂದ ಮೋಹಿತನಾಗಿ ತಾನು ಮಾಡಿದನೆಂದು ತಿಳಿದುಕೊಳ್ಳುವನು. ಎಲ್ಲರಲ್ಲಿಯೂ ಪರಮಾತ್ಮನಿದ್ದು ಕರ್ಮವನ್ನು ಮಾಡಿಸುವುದಾದರೆ ಇದನ್ನು ಯಾರಾದರೂ ತಿಳಿಯದೇ ಇರುವರೆ ? ಜ್ಞಾನಿಗಳು ಜ್ಞಾನಸಮಾಧಿಗಳಿಂದ ಭಗವತ್ಸ್ವರೂಪವನ್ನು ತಿಳಿಯುವರು. ಅಜ್ಞಾನಿಗಳು ಅರಿಯುವುದಿಲ್ಲ. ಇದ್ದದ್ದೇ ನಿಜವಾದರೆ ಕೆಲವರು ನೋಡುವದೇನು ! ಕೆಲವರು ಕಾಣದೇ ಇರುವುದೇನು ! ಜೀವಭಿನ್ನ ಪರಮಾತ್ಮನಿದ್ದ ಮೇಲೆ ಸ್ಪಷ್ಟವಾಗಿ ಏಕೆ ಕಾಣುವುದಿಲ್ಲ. ಅಂದರೆ ಭಾಗವತ ಸಪ್ತಮಸ್ಕಂಧ ಮೊದಲನೆಯ ಅಧ್ಯಾಯ ೬ನೆಯ ಶ್ಲೋಕದಲ್ಲಿ "ನಿರ್ಗುಣೋಽಪಿಹ್ಯಜೋವ್ಯಕ್ತಃ" ಎಂದು ಇರುವುದು. ಇದರಲ್ಲಿರುವ ಅವ್ಯಕ್ತ ಶಬ್ದಕ್ಕೆ ವ್ಯಾಖ್ಯಾನದಲ್ಲಿ "ತರ್ಹಿ ಕುತೋ ವಿಶಿಷ್ಯ ನ ಜ್ಞಾಯತೇ ಇತ್ಯತೋ ವ್ಯಕ್ತ ಇತಿ" ಇದರರ್ಥ ಹಾಗಾದರೆ (ಜೀವಭಿನ್ನ ಪರಮಾತ್ಮನೇ ಸರ್ವರಲ್ಲೂ ಇದ್ದು ಕರ್ಮಗಳನ್ನು ಮಾಡಿಸುತ್ತಾ ಬಾಧ್ಯನೂ ಬಾಧಕನೂ ತಾನೇ ಆದರೆ ಎಂದು ಪೂರ್ವಶ್ಲೋಕದ ಮೇಲೆ ಆಕ್ಷೇಪ) ಜೀವಭಿನ್ನನಾಗಿ ಪರಮಾತ್ಮನೇಕೆ ಕಾಣುವುದಿಲ್ಲ ? ಅಂದರೆ ಅದಕ್ಕೆ ಸಮಾಧಾನ ಅವ್ಯಯು ಎಂದು ಹೇಳಿದರು. ಇದರಿಂದ ಏನು ಹೇಳಿದಂತಾಯಿತು ಅಂದರೆ "ದಧಿಸ್ಥ ಘೃತವತ್ಕಾಷ್ಠೆ ವಹ್ನಿವಚ್ಚ ಜನಾರ್ದನಃ । ದೇಹೇಂದ್ರಿಯಾಸು ಜೀವೇಭ್ಯೋ ವಿವಿಚ್ಯ ಜ್ಞಾಯತೇ ನ ತು," ಮೊಸರಿನ ಒಳಗೆ ತುಪ್ಪವಿದೆ ಎಂದು ನಾವು ತಿಳಿದಿರುವೆವು. ಮೊಸರನ್ನು ನೋಡಿದ ಮಾತ್ರದಿಂದ ತುಪ್ಪವು ಕಾಣುವುದೇ ? ಅದನ್ನು ಕಡೆದು ಬೆಣ್ಣೆ ತೆಗೆದು ಅದನ್ನು ಕಾಯಿಸಿದರೆ ಮಾತ್ರವೇ ತುಪ್ಪವು ಕಾಣುವುದು. ಅದರಂತೆ ಕಾಷ್ಠದಲ್ಲಿ ಬೆಂಕಿ ಇರುವುದು. ಕಾಷ್ಠವನ್ನು ನೋಡಿದರೆ ಬೆಂಕಿ ಕಾಣುವುದೇ ಇಲ್ಲ. ಕಾಷ್ಠದಿಂದ ಕಾಷ್ಠವನ್ನು ಮಥನಮಾಡಿದರೆ ಕಾಷ್ಠದಲ್ಲಿ ಅಗ್ನಿಯು ಕಾಣುವುದು. ಹಾಗೆ ಪರಮಾತ್ಮನು ಜೀವರೊಳಗಿ

ದ್ದರೂ ಎಲ್ಲರಿಗೂ ಕಾಣುವುದಿಲ್ಲ. ಮೊಸರು ಕಡೆದು ಬೆಣ್ಣೆ ತೆಗೆದು ಕಾಯಿಸುದಂತೆ ಯೋಗಾರೂಢರಾಗಿ ಜ್ಞಾನವೆಂಬ ಮೊಸರನ್ನು ಕಡೆದು ಪರಮಾತ್ಮನ ಮಹಿಮೆ ಎಂಬ ಬೆಣ್ಣೆಯನ್ನು ತೆಗೆಯಬೇಕು. ಹರಿಸರ್ವೋತ್ತಮ ಇತ್ಯಾದಿ ಗುರೂಪದೇಶ ಜ್ಞಾನವು ಮೊಸರಿನಹಾಗೆ ಇರುವುದು. ಅದರಲ್ಲಿ ಭಗವನ್ಮಹಿಮೆಯು ಸೇರಿಕೊಂಡಿರುವುದು. ಅದನ್ನು ಮಥನಮಾಡಿ ತಿಳಿಯಬೇಕು. ಅಂದರೆ ಸಮಾಧಿಯಿಂದ ಭಗವದ್ಧ್ಯಾನ ಮಾಡಿ ಭಗವದನುಗ್ರಹದಿಂದ ಜೀವಭಿನ್ನನಾದ ಪರಮಾತ್ಮನನ್ನು ಕಾಣಬೇಕು. ಇದನ್ನು ಜ್ಞಾನಿಗಳು ಕಾಣುವರು. ಅಜ್ಞಾನಿಗಳು ಕಾಣುವುದಿಲ್ಲವೆಂಬ ತಾತ್ಪರ್ಯ. ಕುಂಬಾರಚಕ್ರದಂತೆ ಸಂಸಾರದಲ್ಲಿ ತಿರುಗಿಸುವನು ಎಂದು ಹೇಳಿರುವರು. ಕುಂಬಾರಚಕ್ರದಂತೆ ಎಂಬ ಉಪಮಾನವು, ಚಕ್ರದ ಮೇಲೆ ಒಂದು ಬಿಳಿಯ ಚುಕ್ಕೆಯನ್ನು ಇಟ್ಟು, ಚಕ್ರವನ್ನು ತಿರುಗಿಸಿದರೆ ಬಿಳಿಯ ಚುಕ್ಕೆಯಾದ ಮೇಲೆ ಕರಿಯ ಚುಕ್ಕೆ, ಮತ್ತು ಮತ್ತು ಬಿಳುಪು, ಕಪ್ಪು ಹೇಗೆ ಬರುತ್ತಲೇ ಇರುವವೋ ಹಾಗೇ ಹುಟ್ಟುವಿಕೆ, ಬೆಳೆಯುವಿಕೆ, ಸಾಯುವಿಕೆ, ಮಧ್ಯದಲ್ಲಿ ಸುಖವಾದ ಮೇಲೆ ದುಃಖ, ದುಃಖವಾದ ಮೇಲೆ ಮತ್ತು ಸುಖ "ಸುಖಸ್ಯಾನಂತರಂ ದುಃಖಂ । ದುಃಖಸ್ಯಾನಂತರಂ ಸುಖಂ ॥ ಚಕ್ರವತ್ ಪರಿವರ್ತಂತೇ" ಎಂಬ ಪ್ರಮಾಣದಂತೆ ಚಕ್ರದಂತೆ ತಿರುಗುತ್ತಲೇ ಇರುವುದೆಂಬ ಭಾವ ಈ ವಿಷಯದಲ್ಲಿಯೇ ಕುಂಬಾರಚಕ್ರದ ಉಪಮಾನವೆಂದು ತಿಳಿಯಬೇಕು. ॥೧೬॥

**೩. ಭಾವದರ್ಪಣ**

ಶ್ರೀಲಕುಮೀತಿ। ಹೃತ್ಕೀಲಾಲಜ ಹೃದಯಾಬ್ಜ, ಕುಲಾಲಚಕ್ರ ಕುಂಬಾರನ ಚಕ್ರ, ತೆರದಿ ಅದರೋಪಾದೇಲಿ ॥ ೧೬ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಶ್ರೀ ಇತಿ ॥ ಕೀಲಾಲ—ಉದಕಮ್ ॥ ಚಕ್ರದತೆರದಿ—ಚಕ್ರಂ ನ ವೃತ್ತಮ್ ಇತಿ ಶ್ರುತೇಃ ॥ ೧೬ ॥

**ಕನ್ನಡಾರ್ಥ**

ಶ್ರೀ ಹರಿಯು ಜೀವರನ್ನು ಸಂಸಾರಚಕ್ರದಲ್ಲಿ ತಿರುಗಿಸುವನೆಂದು ಹೇಳು ತ್ತಾರೆ–ಶ್ರೀಲಕುಮಿ ಎಂಬ ಪದ್ಯದಿಂದ. ಕೀಲಾಲ–ನೀರು. ಅಲ್ಲಿ ಹುಟ್ಟಿದ ಕಮ ಲವು ಕೀಲಾಲಜ. ಹೃತ್ಕೀಲಾಲಜ–ಹೃದಯಕಮಲ, "ಕುಲಾಲ ಚಕ್ರದ ತೆರದಿ" ಎಂಬುದುಷ್ಟಚತುಭಿಃ ಸಾಕಂ ನವತಿಂ ಚ ನಾಮಭಿಃ ಚಕ್ರಂ ನವೃತ್ತಂ ವ್ಯತೀರವೀ ವಿಪತ್ ಎಂಬ ಶ್ರುತ್ಯರ್ಥಾನುವಾದರೂಪವಾದುದು. ತನ್ನ ಸ್ವರೂಪಭೇಧ ರಹಿತ ವಾದ ನಾಲ್ಕುರೂಪಗಳಿಂದ (ವಾಸುದೇವ ಮುಂತಾದುವುಗಳಿಂದ) ಆ ಪೂರ್ಣ ನಾದ ಹರಿಯು ಅಧಿಕರಾದ ದೇವತೆಗಳನ್ನು ೧೧ ಆದಿತ್ಯರು, ೧೧ ರುದ್ರರು, ೮ ವಸುಗಳು, ೧೦ ಪ್ರಜಾಪತಿಗಳು, ೫೦ ಮರುದ್ಗಣಗಳು ಈ ೯೦ ದೇವತೆಗ ಳನ್ನು ಚಕ್ರದಂತೆ ತಿರುಗಿಸುವ ಎಂದು ಅರ್ಥ ॥ ೧೬ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ದೇವರು ಜೀವರನ್ನು ಪ್ರಕೃತಿಬದ್ಧರನ್ನಾಗಿ ಮಾಡಿರುವ ಬಗೆ ತಿಳಿಸು ತ್ತಾರೆ, ಶ್ರೀಲಕುಮಿ ಎಂದು. ಶ್ರೀಲಕ್ಷ್ಮೀಪತಿಯಾದ ದೇವರು ಸರ್ವರ ಹೃತ್ಕೀ ಲಾಲಜವೆಂಬ ಹೃದಯಕಮದಲ್ಲಿದ್ದು, ಸತ್ವರಜಸ್ತಮವೆಂಬ ಮೂರು ಗುಣ ದಿಂದ ಬದ್ಧರನ್ನು ಎಂದರೆ, ದೇಹ ಕರ್ಮ ಮೊದಲಾದವು ತಮ್ಮದು, ತಾವೇ ಸ್ವತಂತ್ರರೆಂಬ ಅಭಿಮಾನ ಕೊಟ್ಟು, ಸ್ಥೂಲಕರ್ಮದಿ ಎಂದರೆ, ಅಂತಃಪ್ರೇರಕ ಎಂಬ ಸೂಕ್ಷ್ಮವ್ಯಾಪಾರವಾದ ತನ್ನ ಚರಿತ್ರೆ ತಿಳಿಸದೆ, ದೇಹದಲ್ಲಿ ನಡೆಯುವ ಕ್ರಿಯಾ ಜೀವರದೆಂಬ ಮಮತೆ ಕೊಟ್ಟು, ದೇವರು ಒಳಗಿದ್ದಾನೆಂಬುದನ್ನು ಸಹಾ ತಿಳಿಸದೆ ಕುಂಬಾರಚಕ್ರ ತಿರಿಗಿಸುವಂತೆ, ಜನನಮರಣಾದಿರೂಪ ಸಂಸೃತಿಯಲ್ಲಿ ಸರ್ವ ಚೇತನರನ್ನ ತಿರುಗಿಸುತ್ತಿರುವನು.

**ಈಶ್ವರಸ್ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ ।**
**ಭ್ರಾಮಯನ್ ಸರ್ವ ಭೂತಾನಿ ಯಂತ್ರಾರೂಢಾನಿ ಮಾಯಯಾ ॥**

ಎಂಬ ಗೀತಾರ್ಥ ವಿವರಿಸಿತು. ॥ ೧೬ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸಕಲ ಶುಭಪ್ರದಳಾದ ವಿಘ್ನಪರಿಹಾರಪೂರ್ವಕ ಮಂಗಳವನ್ನುಂಟುಮಾಡುವ ಸತ್ತ್ವಗುಣಾಭಿಮಾನಿಯಾದ ಶ್ರೀನಾಮಕಳಾದ ಲಕುಮಿಯು ಅತ್ಯಂತ ಸೂಕ್ಷ್ಮರೂಪದಲ್ಲಿರುವ ಮೂಲ ಪ್ರಕೃತಿಗೆ ಅಭಿಮಾನಿಯು. ಮೂಲಪ್ರಕೃತಿಯ ಸಹಜ ಧರ್ಮಗಳಾದ ಸತ್ತ್ವರಜಸ್ತಮೋಗುಣಗಳಿಗೆ ಕ್ರಮವಾಗಿ ಶ್ರೀಭೂದುರ್ಗಾ ರೂಪಗಳಿಂದ ಅಭಿಮಾನಿಯಾಗಿದ್ದಾಳೆ.

ಸಾತ್ವಿಕ, ರಾಜಸ ಮತ್ತು ತಾಮಸರೆಂದು ಜೀವರಾಶಿಗಳಲ್ಲಿ ಮೂರು ಪ್ರಕಾರ. ಜೀವರ ಸ್ವರೂಪವು ನಿತ್ಯ ಮತ್ತು ಅನಾದಿ, ಶ್ರೀಪರಮಾತ್ಮನು ಹೇಗೆ ಅನಾದಿಯೋ, ನಿತ್ಯನೋ, ಅಂತೆಯೇ ಸಮಸ್ತ ತ್ರಿವಿಧಜೀವರ ಸ್ವರೂಪವೂ ನಿತ್ಯ ಹಾಗೂ ಅನಾದಿ. ಆದರೆ ಸರ್ವ ಜೀವರೂ ಅಸ್ವತಂತ್ರರು. ಈ ಕಾರಣದಿಂದ ಅನಾದ್ಯನಂತಕಾಲದಿಂದಲೂ ಸಕಲ ಜೀವರೂ ಭಗವದಧೀನರು. ಬಿಂಬರೂಪಿಯಾದ ಶ್ರೀಪರಮಾತ್ಮನ ಪ್ರೇರಣೆಯಿಂದಲೇ ಸಮಸ್ತ ಜೀವರ ಸ್ವರೂಪಧರ್ಮಗಳ ಅಭಿವ್ಯಕ್ತಿ.

ಸಕಲ ತ್ರಿವಿಧಜೀವರ ಸ್ಥೂಲದೇಹದಲ್ಲಿ ಹೃತ್ಪದ್ಮವಿದೆ. ಶ್ರೀಪರಮಾತ್ಮನು ಸರ್ವಕ್ರಿಯಾ ಪ್ರೇರಕನಾಗಿ, ಪ್ರವರ್ತಕನಾಗಿ, ಜೀವರ ಹೃದಯಕಮಲದಲ್ಲಿ ಬಿಂಬನೆನಿಸಿದ್ದಾನೆ.

ಜೀವರು ಸ್ವರೂಪತಃ ಅನಾದಿನಿತ್ಯರು ಎಂಬ ತತ್ತ್ವವನ್ನು ಮಹಾಭಾರತ ತಾತ್ಪರ್ಯನಿರ್ಣಯ ಹಾಗೂ ವಿಷ್ಣುರಹಸ್ಯದ ೨ನೆಯ ಅಧ್ಯಾಯದಲ್ಲಿ ಸಪ್ರಮಾಣವಾಗಿ ಹೇಳಿದೆ. (ಪ್ರಮಾಣ ವಾಕ್ಯಗಳಿಗೆ ಭಾವಪ್ರಕಾಶಿಕಯ ವ್ಯಾಖ್ಯಾನವನ್ನು ನೋಡುವುದು).

ಇಂತು, ಶ್ರೀಲಕುಮೀವಲ್ಲಭನು ಅಖಿಳ ಚೇತನದ ಹೃತ್ಕೀಲಾಲಜದೊಳು, ಅನವರತ ವಿದ್ಯಮಾನನಾಗಿದ್ದು, ಜೀವರನ್ನು, ಸಂಸಾರವೆಂಬ ಬಂಧನದಿಂದ ಮೋಹಯುಕ್ತರನ್ನಾಗಿ ಮಾಡುವನು. ಈ ಕಾರ್ಯವು ಯುಕ್ತವೇ? ಸಾಧುವೇ?

ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುವುದು. ಇದಕ್ಕೆ ಸಮಾಧಾನವಿದು—ಸಮಸ್ತ ತ್ರಿವಿಧಜೀವರೂ ಲಿಂಗದೇಹದಿಂದ ಸಹಿತರಾಗಿದ್ದಾರೆ. ಲಿಂಗ ಶರೀರವು ಅನಾದಿ. ಇದು ಈಶ್ವರ ನಿರ್ಮಿತವಲ್ಲ. ಗಜ್ಜುಗದೊಳಗಿನ ಬೀಜಕ್ಕೆ, ಗಜ್ಜುಗದ ಹೊರ ಸಿಪ್ಪೆಯು ಹೇಗೆ ಆವರಣರೂಪದಲ್ಲಿರುವುದೋ ತದ್ವತ್, ಅನಾದಿನಿತ್ಯರಾದ ಜೀವರ ಸ್ವರೂಪಕ್ಕೆ ಲಿಂಗಶರೀರವು ಆವರ್ಕವಾಗಿದೆ. "ಅನಾದಿ ಲಿಂಗಶರೀರ ಸಹಿತರಾದ ಜೀವರನ್ನು ನನ್ನ ಶರೀರದಲ್ಲಿ ನೋಡಿದೆ" ಎಂದು ಶ್ರೀಪರಮಾತ್ಮನು ಶ್ರೀಬ್ರಹ್ಮದೇವರಿಗೆ ಹೇಳಿದ ವಿಷಯವು, ಶ್ರೀವಿಷ್ಣುರಹಸ್ಯದಲ್ಲಿ ಸಮರ್ಥಿತ ವಾಗಿದೆ. ಲಿಂಗಶರೀರವು ತ್ರಿಗುಣಾತ್ಮಕವಾದದ್ದು. ಷೋಡಶಕಲೆಗಳಿಂದ ಕೂಡಿದೆ. ಇದೇ ಅನಾದಿ ಕರ್ಮಬೀಜಗಳ ಆಗರ. ಇದರಿಂದ ಲಿಂಗದೇಹವು ಕರ್ಮಶರೀರವೆನಿಸಿದೆ. ಶುದ್ಧವಾದ ಬಂಗಾರಕ್ಕೆ ಕಶ್ಮಲವು ಹೇಗೆ ಆಚ್ಛಾದಿಸಿ ದೆಯೋ, ಹಾಗೆ ಲಿಂಗಶರೀರಗತ ಅನಾದಿಕರ್ಮದಿಂದ ಜೀವರ ಸ್ವರೂಪವು— ಆಚ್ಛಾದಿತವಾಗಿದೆ. ಚಿನ್ನವನ್ನು ಅಗ್ನಿಯಲ್ಲಿ ಹಾಕಿ ಕಾಯಿಸಿದಾಗ, ಅದು ಕಶ್ಮಲ ದಿಂದ ಬೇರ್ಪಟ್ಟು, ಶುದ್ಧರೂಪವನ್ನು ಪಡೆಯುವುದು. ಇದಕ್ಕೆ ಚಿನ್ನಕ್ಕೆ ಆವರ್ಕವಾಗಿರುವ ಕಶ್ಮಲಪರಿಹಾರಕ್ರಮವೇ ಮಾರ್ಗ. ಅದಕ್ಕೆ ಅಗ್ನಿಸಂಪರ್ಕ ಬೇಕು. ಅದರಂತೆಯೋ, ಅನಾದಿಕರ್ಮದಿಂದ ಜೀವರನ್ನು ಬಿಡುಗಡೆಮಾಡಲು, ಜೀವರಿಗೆ ಕರ್ಮಸಂಪರ್ಕವಾಗಿ, ತನ್ಮೂಲಕ ನಾನಾ ಜನ್ಮಗಳಲ್ಲಿ ಜೀವರನ್ನು ಜನಿಸುವಂತೆ ಮಾಡಿ, ಕರ್ಮಪ್ರವಾಹವನ್ನು ಹಂತ ಹಂತವಾಗಿ ಕ್ಷೀಣಿಸುತ್ತಾ, ಕೊನೆಯಲ್ಲಿ ವಿರಜಾನದಿಯ ಸ್ನಾನದ ದ್ವಾರಾ ಸಕಲಕರ್ಮ ವಿಮೋಚನಗೈದು, ಸಾತ್ತ್ವಿಕರನ್ನು ಶುದ್ಧರನ್ನಾಗಿ ಮಾಡಿ, ಅವರಿಗೆ ಅವರ ಸ್ವರೂಪಗತವಾದ ನಿತ್ಯಾ ನಂದರೂಪವಾದ ಮೋಕ್ಷಸುಖವನ್ನು ಈಯುವನು. ಕರ್ಮಾಚರಣೆಯಿಂದಲೇ ಕರ್ಮವಿಮೋಚನೆ. ಈ ಅದ್ಭುತವಾದ ವ್ಯಾಪಾರವನ್ನು ಶ್ರೀಪರಮಾತ್ಮನು ತನ್ನ ಇಚ್ಛಾಮಾತ್ರದಿಂದ ನಡೆಯಿಸುವನು. ತ್ರಿವಿಧಜೀವರಿಗೆ ಅವರವರ ಯೋಗ್ಯತಾ ನುಸಾರ ಗತಿಯನೀಡಲೋಸುಗ, ಶ್ರೀಪರಮಾತ್ಮನ ಲೀಲಾವಿಲಾಸರೂಪವಾದ ಸೃಷ್ಟಿಯೆಂಬ ಕ್ರೀಡೆ. ಸಕಲ ಜೀವರು ತ್ರಿಗುಣಾತ್ಮಕವಾದ ಅನಾದಿ ಲಿಂಗದೇಹ ದಿಂದ ಬದ್ಧರು, ಎಂದ ಮೇಲೆ, ಬದ್ಧರನು ಮಾಡಿ ಎಂಬುದರ ಅರ್ಥವೇನು ? ಗಜ್ಜುಗದೊಳಗೆ ಬೀಜಕ್ಕೂ ಮತ್ತು ಹೊರಗಿನ ಗಜ್ಜುಗದ ಸಿಪ್ಪೆಗೂ ಮಧ್ಯೆ

ಸ್ಥಳವಿದೆ. ಇದರಿಂದ ಬೀಜವು ಅದರಲ್ಲಿ ಅಲುಗಾಡುವುದು. ಇದರಂತೆ, ಸಕಲ ಜೀವರ ಸ್ವರೂಪದೇಹಕ್ಕೂ, ಅನಾದಿಲಿಂಗಶರೀರಕ್ಕೂ ಪರಸ್ಪರ ಸಂಪರ್ಕವಿರುವುದಿಲ್ಲ. ಆದರೆ ಸೃಷ್ಟಿಯ ಪ್ರಾರಂಭದಲ್ಲಿ ಶ್ರೀಹರಿಯು ತನ್ನ ಇಚ್ಛಾರೂಪವಾದ ಶಕ್ತಿಯಿಂದ ಸಂಪರ್ಕವನ್ನುಂಟು ಮಾಡುವನು. ಆದರಿಂದ ಕೇವಲ ಸುಷುಪ್ತ್ಯವಸ್ಥೆಯಲ್ಲಿದ್ದ ಅನಾದಿ ಜೀವನಿಗೆ. "ನಾನು–ನನ್ನದು" ಎಂಬ ಅಹಂಕಾರ ಮಮಕಾರಗಳು ಹುಟ್ಟಿ, ಸಂಸಾರವೆಂಬ ಪರಿಭ್ರಮಣದಲ್ಲಿ ಶ್ರೀಹರಿಯ ಇಚ್ಛೆಯಿಂದ ಸಿಲುಕುವನು. ಜೀವರ ಕರ್ಮವಿಮೋಚನೆಗೆ ಸಾಂಸಾರಿಕಕ್ಲೇಶಾನುಭವ ರೂಪವಾದ ಪ್ರಕ್ರಿಯೆಯೇ ಏಕೈಕ ಮಾರ್ಗ. ನದಿಯನ್ನು ದಾಟಲು, ನದಿಯ ನೀರಿನಲ್ಲೇ ಬಿದ್ದು ಈಜಬೇಕಷ್ಟೇ ? ಸಂಸಾರಸಾಗರದಲ್ಲಿ ಈಜಲು ಜೀವನಿಗೆ ಶಕ್ತಿಯಿಲ್ಲ. ಅವನು ಅಸ್ವತಂತ್ರ. ನಿತ್ಯ ಪರಾಧೀನನು. ಇದರಿಂದ ಶ್ರೀಹರಿಯ ಕರುಣಾಬಲದಿಂದಲೇ ಸಂಸಾರಶರಧಿಯನ್ನು ತ್ತರಿಸಿ, ಕ್ಲೇಶಗಳನ್ನು ಕಳೆದು, ಮುಕ್ತಿ ಸುಖವನ್ನೈದುವನು.

ಜೀವರಿಗೆ ಕರ್ಮಬಂಧನವನ್ನುಂಟುಮಾಡಿ, ಕುಲಾಲನ ಚಕ್ರದಂತೆ, ಜನನಮರಣಾಖ್ಯವಾದ ಸಂಸಾರದಲ್ಲಿ ಸಿಲುಕಿಸಿ, ತನ್ನ ಇರುವಿಕೆಯನ್ನು ಮತ್ತು ಬಿಂಬಕ್ರಿಯಾರೂಪವಾದ ವ್ಯಾಪಾರವಿಶೇಷಗಳನ್ನು ಜೀವರಿಗೆ ತಿಳಿಸದೇ, ಅವ್ಯಕ್ತನಾಗಿದ್ದುಕೊಂಡು, ಸರ್ವೇಶ್ವರನು ಸಕಲ ಜೀವರಿಗೂ ಅವರವರ ಗತಿಯನ್ನು ಹೊಂದಿಸುವನು. ॥ ೧೬ ॥

ಪ್ರಮಾಣ:—ಈಶ್ವರಃ ಸರ್ವ ಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥
—ಇತಿ ಗೀತಾ ।

xxxx

## ಪದ್ಯ ೧೭

**ಮೂಲ**

**ವೇದ ಶಾಸ್ತ್ರ ವಿಚಾರಗೈದು ನಿ ।**
**ಷೇಧ ಕರ್ಮವ ತೊರೆದು ನಿತ್ಯದಿ ।**
**ಸಾಧುಕರ್ಮವ ಮಾಳ್ಪರಿಗೆ ಸ್ವರ್ಗಾದಿಸುಖವೀವ ॥**
**ಐದಿಸುವ ಪಾಪಿಗಳ ನಿರಯವ ।**
**ಖೇದನೋದ ಮನುಷ್ಯರಿಗೆ ದು ।**
**ರ್ವಾದಿಗಳಿಗಂಧಂತಮದಿ ಮಹದುಃಖಗಳನುಣಿಪ ॥ ೧೭ ॥**

**ಅವತರಣಿಕೆ**

ಅನುಸಂಧಾನರಹಿತರಾಗಿ ಕರ್ಮಮಾಡತಕ್ಕ ತ್ರಿವಿಧಜೀವರ ವಿಚಾರವನ್ನು ತಿಳಿಸುತ್ತಾರೆ. ॥ ೧೭ ॥

**ಪ್ರತಿಪದಾರ್ಥ**

**ವೇದಶಾಸ್ತ್ರ** = ಅಪೌರುಷೇಯವಾದ ವೇದಗಳು, ಸ್ಮೃತಿರೂಪವಾದ ಪುರಾಣ, ಇತಿಹಾಸ, ಸೂತ್ರ ಇತ್ಯಾದಿ ಸಚ್ಛಾಸ್ತ್ರಗಳಲ್ಲಿ, **ವಿಚಾರಗೈದು** = ಹೇಳಿರುವ ತತ್ತ್ವಗಳನ್ನು ಅಧ್ಯಯನ ಪೂರ್ವಕ ಜಿಜ್ಞಾಸೆಮಾಡಿ, **ನಿಷೇಧ ಕರ್ಮವ ತೊರೆದು** = ಶಾಸ್ತ್ರಗಳಲ್ಲಿ ಉಕ್ತವಾಗಿರುವ ನಿಷಿದ್ಧವಾದ ಕರ್ಮಗಳನ್ನು ತ್ಯಜಿಸಿ, **ನಿತ್ಯದಿ** = ಪ್ರತಿದಿನದಲ್ಲಿಯೂ, **ಸಾಧುಕರ್ಮವ** = ಸಕಾಮರಾಗಿ ಸತ್ಕರ್ಮಗಳನ್ನು, **ಮಾಳ್ಪರಿಗೆ** = ಮಾಡುವ ಸಾತ್ವಿಕಜೀವರಿಗೆ, **ಸ್ವರ್ಗಾದಿಸುಖವೀವ** = ಸ್ವರ್ಗಲೋಕಗಳಲ್ಲಿಟ್ಟು ಆನಂದ ಪಡಿಸುವನು. ಈ ಸುಖ ಕ್ಷಣಿಕ. ಪುಣ್ಯ ಕ್ಷೀಣವಾಗುತ್ತಿರಲು ಪುನಃ ಭೂಲೋಕಕ್ಕೇ ಹಿಂದಿರುಗುವರು. **ಪಾಪಿಗಳ** = ನಿಷಿದ್ಧರೂಪವಾದ ಕರ್ಮಗಳನ್ನು ಆಚರಿಸುತ್ತಾ, ಪಾಪಕಾರ್ಯಗಳಲ್ಲಿ ಆಸಕ್ತರಾದವರಿಗೆ, **ನಿರಯುವ** = ನರಕಾದ್ಯನರ್ಥಗಳನ್ನು, **ಐದಿಸುವ** = ಪ್ರಾಪ್ತಿಯಾಗುವಂತೆ

ಮಾಡುತ್ತಾನೆ. **ಮನುಷ್ಯರಿಗೆ** = ನಿತ್ಯಸಂಸಾರಿಗಳಾದ ರಾಜಸರಿಗೆ, **ಖೇದಮೋದ** = ಸುಖದುಃಖಮಿಶ್ರವಾದ ಫಲಭೋಗವನ್ನು ಕೊಡುವನು, **ದುರ್ವಾದಿಗಳಿಗೆ** = ಜೀವೇಶರ ಐಕ್ಯವನ್ನು ಸಾಧಿಸುವ ತಮೋಯೋಗ್ಯ ಜೀವರಿಗೆ, **ಅಂಧಂತಮದಿ** = ಅಂಧಂತಮಸ್ಸಿನಲ್ಲಿ, **ಮಹದುಃಖಗಳನು** = ಅಪಾರವಾದ ನಿತ್ಯದುಃಖವನ್ನು, **ಉಣಿಪ** = ಫಲವನ್ನು ಕೊಡುತ್ತಾನೆ. ॥ ೧೭ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅನುಸಂಧಾನ ರಹಿತರಾಗಿ ಸತ್ಕರ್ಮಾನುಷ್ಠಾನ ಮಾಡತಕ್ಕ ತ್ರಿವಿಧಜೀವರ ವಿಚಾರ ಹೇಳತಾರೆ.

ಮುಕ್ತಿಯೋಗ್ಯರಾದ ಜೀವರು ವೇದಶಾಸ್ತ್ರ ವಿಚಾರ ಮಾಡಿ, ತ್ಯಾಗರೂಪವಾದ ಕರ್ಮ ಎಂತ ಹೇಳಿದ್ದರನ್ನ ಬಿಡೋವರಾಗಿ, ಪ್ರತಿದಿನದಲ್ಲೂ ಅಹಂಮಮತಾದಿಂದ ಸಹಿತರಾಗಿ ಸಕಾಮರಾಗಿ ಸತ್ಕರ್ಮಗಳ ಮಾಡತಕ್ಕ ಮುಕ್ತಿಯೋಗ್ಯರಿಗೆ ಸ್ವರ್ಗಲೋಕ ಮೊದಲಾದ ಭೂಲೋಕ ಪರ್ಯಂತ ಲೋಕಗಳಲ್ಲಿ ಇಟ್ಟು ಸಂತೋಷರೂಪವಾದ ಸುಖವನ್ನ ಕೊಡತಾನೆ ಸ್ವರ್ಗಕ್ಕೆ ಮ್ಯಾಲೆ ಹೋಗೋದಿಲ್ಲ. ವೇದಶಾಸ್ತ್ರಗಳಿಂದನ್ನಿಷೇಧ ಮಾಡಿದ ಪಾಪಕರ್ಮ ಆಚರಿಸಿದ ಪಾಪಯುಕ್ತರಾದ ಮುಕ್ತಿಯೋಗ್ಯರನ್ನ ನರಕಾದಿ ಲೋಕಗಳಲ್ಲಿ ಇಟ್ಟು, ಅಹಂಮಮತಾದಿಂದಲೂ, ಸಕಾಮದಿಂದಲೂ ಮಾಡಿದ ಪಾಪರೂಪವಾದ ದುಃಖಗಳ ಅನುಭವಾನಂತರ ಸ್ವರೂಪಸುಖವನ್ನು ಕೊಡತಾನೆ. ಇವರ ಸ್ವರೂಪ ಅಂಥಾದ್ದೇ ಆದ್ದರಿಂದ, ಇಂಥಾದ್ದೇ ಮುಕ್ತಿ. ಇದಕ್ಕೆ ಉದಾಹರಣೆ ಮುಂದಿನ ಶ್ಲೋಕದಲ್ಲಿ ವಿವರಣೆ ಮಾಡಲ್ಪಡತದೆ. ನಿತ್ಯಸಂಸಾರಿ ಜೀವರಿಗೆ ಲಿಂಗಭಂಗಾನಂತರ ಸುಖದುಃಖಮಿಶ್ರವಾದ ಮುಕ್ತಿಯನ್ನ ಕೊಡೋವನಾಗುತಾನೆ. ಅಹಂಬ್ರಹ್ಮ, ಪರಮಾತ್ಮ ನಿರ್ಗುಣ ನಿರಾಕಾರ ಶೂನ್ಯ ಎಂತ ಅನ್ನತಕ್ಕ ತಮೋಯೋಗ್ಯರಿಗೆ ಲಿಂಗಭಂಗಾನಂತರ ಅಂಧಂತಮಸ್ಸಿನಲ್ಲಿ ಸದಾ ಅಪಾರವಾದ ದುಃಖಪಡಸತಾ ಇರತಾನೆ. ಅವರವರ ಸ್ವರೂಪಯೋಗ್ಯತಾ ಅನುಸರಿಸಿ ಎಂತ ತಾತ್ಪರ್ಯ. ॥ ೧೭ ॥

೨. ಭಾವಪ್ರಕಾಶಿಕೆ

ಈ ಪದ್ಯದಿಂದ ರಾಜಸರು ತಾಮಸರು ಇವರಿಗಾಗುವ ಗತಿಯನ್ನು ಹೇಳುತ್ತಾರೆ—ರಾಜಸ ಸಾತ್ವಿಕರು ವೇದಶಾಸ್ತ್ರಗಳನ್ನೋದಿ ತತ್ವಾರ್ಥಗಳನ್ನು ತಿಳಿದು ವಿಧಿಯನ್ನು ಮಾಡಬೇಕು, ನಿಷೇಧವನ್ನು ಬಿಡಬೇಕೆಂದು ತಿಳಿದುಕೊಂಡು ಅದರಂತೆ ದುಷ್ಕರ್ಮಗಳನ್ನು ಬಿಟ್ಟು, ಸತ್ಕರ್ಮಾನುಷ್ಠಾನ ಮಾಡುತ್ತಿದ್ದರೂ, ಸಕಲಕರ್ತಾ ಪರಮಾತ್ಮನು ಎಂದು ಸರ್ವಸಮರ್ಪಣೆಯನ್ನು ಪರಮಾತ್ಮನಿಗೇ ಮಾಡಬೇಕು ಎಂಬ ಜ್ಞಾನವಿಲ್ಲದೆ ಸತ್ಕರ್ಮಾನುಷ್ಠಾನಮಾತ್ರ ಮಾಡುತ್ತಿರುವರು. ಇವರಿಗೆ ನಶ್ವರವಾದ ಸ್ವರ್ಗಫಲವೇ ಪ್ರಾಪ್ತಿಯು. ರಾಜಸ ತಾಮಸರು ಪಾಪಗಳನ್ನಾಚರಿಸುವರು. ಇಂತಹ ಸಾಮಾನ್ಯ ಪಾಪಿಗಳಿಗೆ ನಶ್ವರವಾದ ನರಕದುಃಖವು ಪ್ರಾಪ್ತವಾಗುವುದು. ರಾಜಸ ರಾಜಸರು ಮನುಷ್ಯರು. ಇವರು ಸುಖದುಃಖ ಮಿಶ್ರವಾದ ಫಲವನ್ನೇ ಹೊಂದುವರು. ಅಂತು ಪ್ರಾಯಶಃ ತ್ರಿವಿಧರಾದ ರಾಜಸರಿಗೂ ಸುಖದುಃಖವಾದ ಫಲವೇ ಹೊರತು ಶಾಶ್ವತವಾದ ಸುಖವೇ ಆಗಲಿ, ಶಾಶ್ವತವಾದ ದುಃಖವೇ ಆಗಲಿ ಇಲ್ಲವೆಂಬ ತಾತ್ಪರ್ಯ. ಮಿಥ್ಯಾವಾದಿಗಳು, ಅನ್ಯಥಾಜ್ಞಾನಿಗಳು ಇವರೆಲ್ಲರೂ ತಾಮಸ ಜೀವರೆಂದು ತಿಳಿಯಬೇಕು. ಇವರಿಗೆ ಶಾಶ್ವತ ದುಃಖಕರವಾದ ಅಂಧಂತಮಸ್ಸೇ ಪ್ರಾಪ್ತವಾಗುವುದು. ॥ ೧೭ ॥

೩. ಭಾವದರ್ಪಣ

ಅನುಸಂಧಾನರಹಿತರಾದವರು ಸಂಪೂರ್ಣವೇದಶಾಸ್ತ್ರ ವಿಚಾರಮಾಡಿ ನಿಷೇಧಕರ್ಮ ಬಿಟ್ಟು ಸಾಧುಕರ್ಮ ನಡಿಸಿದ್ದಾಗ್ಯೂ ಸ್ವರ್ಗ ನರಕ ಭೂಮಿ ಇವುಗಳಲ್ಲಿ ಸಂಚಾರವೇ ಹೊರ್ತು ಮೇಲಿನ ಲೋಕ ಪ್ರಾಪ್ತಿ ಇಲ್ಲವೆಂದು ಹೇಳುತ್ತಾರೆ ವೇದಶಾಸ್ತ್ರೇತಿ ॥ ೧೭ ॥

೪. ಶ್ರೀವ್ಯಾಸದಾಸಸಿದ್ಧಾಂತಕೌಮುದಿ.

ವೇದ ಇತಿ ॥

**ಕನ್ನಡಾರ್ಥ**

ತ್ರಿವಿಧ ಜೀವರಿಗೆ ತ್ರಿವಿಧ ಗತಿ ಫಲಗಳನ್ನೀಯುವವೆಂದು ಶ್ರೀಹರಿಯ ಮಹಿಮೆಯನ್ನು ನಿರೂಪಿಸಿರುವರು ವೇದ ಎಂಬ ಪದ್ಯದಿಂದ ॥ ೧೭ ॥

**ಶ್ರೀಗುರುಹೃದಯಪ್ರಕಾಶಿಕೆ**

ತ್ರಿವಿಧ ಜೀವರಿಗೂ ಗತಿಪ್ರದ ದೇವರ ಮಹಿಮೆ ತಿಳಿಸುತ್ತಾರೆ, ವೇದವೆಂದು, ಎರಡು ಪದದಿಂದ. ವೇದಶಾಸ್ತ್ರಾರ್ಥಗಳನ್ನು ವಿಚಾರಿಸಿ ತಿಳಿದು, ಕರ್ತೃತ್ವಾಭಿಮಾನ ಸಹಿತರಾಗಿ ನಿತ್ಯದಲ್ಲೂ ಪಾಪಕರ್ಮ ಬಿಟ್ಟು, ಪುಣ್ಯಕರ್ಮವನ್ನು ವಿಶೇಷವಾಗಿ ಮಾಡುವವರಿಗೆ ಸ್ವರ್ಗದಲ್ಲಿ ಸುಖವನ್ನು ಕೊಡುವನು. ಪಾಪವನ್ನೇ ಆಚರಿಸುವರಿಗೆ ನರಕವನ್ನು ಕೊಡುವನು. ಪುಣ್ಯಪಾಪಗಳನ್ನು ಸಮವಾಗಿ ಆಚರಿಸುವ ಮಿಶ್ರಜೀವರೆಂಬ ಮನುಷ್ಯರಿಗೆ ಸುಖದುಃಖ ಸಹಾ ವ್ಯಕ್ತಿಮಾಡಿ ಕೊಡುವನು. ದುರ್ವಾದಿಗಳೆಂದರೆ ಶಾಸ್ತ್ರವಿರುದ್ಧ ಜೀವಬ್ರಹ್ಮೈಕ್ಯ ಮೊದಲಾದ್ದನ್ನು ತಿಳಿದು ಸಾಧಿಸುವರಿಗೆ ಅಂಧಂತಮವೆಂಬ ನಿತ್ಯನರಕದಲ್ಲಿ ಮಹದುಃಖವೆಂಬ ತತ್ತತ್ಸ್ವರೂಪದುಃಖಗಳನ್ನು ವ್ಯಕ್ತಿ ಮಾಡುವನು. ॥ ೧೭ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಪರಮಾತ್ಮನ ಅಪಾರವಾದ ಗುಣಗಳನ್ನು ನಿತ್ಯವೂ ವರ್ಣಿಸುತ್ತಿರುವ ಜ್ಞಾನಭಂಡಾರವೇ ವೇದಗಳು. ವೇದಗಳು ಅಪೌರುಷೇಯ. ಅನಂತಸಂಖ್ಯಾಕವಾದ ವೇದಗಳಿಂದ ಶ್ರೀಹರಿಯು ಪ್ರತಿಪಾದ್ಯನು.

ಪುರಾಣ, ಇತಿಹಾಸ, ಪಂಚರಾತ್ರಾಗಮ, ವೇದಾರ್ಥ ನಿರ್ಣಾಯಕವಾದ ಬ್ರಹ್ಮಸೂತ್ರಗಳು ಇತ್ಯಾದಿ ಗ್ರಂಥರಾಶಿಗೆ ಸಚ್ಛಾಸ್ತ್ರಗಳೆಂದು ಹೆಸರು.

ಸಚ್ಛಾಸ್ತ್ರಗಳನ್ನು ಗುರೂಪದೇಶದ್ವಾರಾ ಅರಿತು, ಅಧ್ಯಯನ ಸಂಪನ್ನರಾಗಿ ಶಾಸ್ತ್ರಗತ ಪ್ರಮೇಯಗಳನ್ನು ವಿಚಾರಪೂರ್ವಕವಾಗಿ ಮಥನಗೈಯುವವರುಸಾತ್ವಿಕ ಜೀವರು. ಸಾತ್ತ್ವಿಕ ಜೀವರು ವೇದೋಕ್ತವಾದ ನಿಷೇಧಕರ್ಮಗಳನ್ನು ತೊರೆದು,

ಪ್ರತಿನಿತ್ಯದಲ್ಲಿ ಸತ್ಕರ್ಮಗಳನ್ನು ಆಚರಿಸುತ್ತಿದ್ದರೂ, ಸಕಾಮರಾಗಿ, ಅಹಂಮಮಕಾರ ರಹಿತರಾಗದೇ ಸತ್ಕರ್ಮಾನುಷ್ಠಾನ ನಿರತರಾದ ಸಾತ್ವಿಕರಿಗೆ ಕೇವಲ ಸ್ವರ್ಗಾದಿ ಭೋಗಗಳನ್ನು ನೀಡುವನು. ಅನುಸಂಧಾನಕ್ಕೆ ತಕ್ಕಂತೆ ಫಲ, "ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ" ಎಂಬ ಗೀತಾವಚನದಂತೆ, ಆ ಪುಣ್ಯದ ಅವಧಿಯು ಮುಗಿದ ತಕ್ಷಣ, ಪುನಃ ಭೂಲೋಕದಲ್ಲಿ ಜನಿಸುವರು. ಸ್ವರ್ಗಾದಿ ಭೋಗಗಳು ಕೇವಲ ನಶ್ವರ.

ನಿಷಿದ್ಧ ಕರ್ಮಗಳನ್ನು ತೊರೆಯದೇ, ಪಾಪಕರ್ಮಗಳನ್ನು ಮಾಡುವ ಜೀವರಿಗೆ ನರಕಾದ್ಯನರ್ಥಗಳನ್ನು ಕೊಡುವನು.

ನಿತ್ಯಸಂಸಾರಿಗಳಾದ ಮಾನವರು ರಾಜಸಜೀವರು. ಇವರು ತಮ್ಮ ಯೋಗ್ಯತಾನುಸಾರ ಪುಣ್ಯಪಾಪರೂಪವಾದ ಮಿಶ್ರಕರ್ಮಗಳನ್ನು ಮಾಡುವರು. ಅವರಿಗೆ ಸುಖದುಃಖ ಮಿಶ್ರವಾದ ಫಲಭೋಗಗಳನ್ನು ಈಯುವನು. ಪುಣ್ಯದಿಂದ ಸ್ವರ್ಗಲೋಕ ಪ್ರಾಪ್ತಿ. ಪುಣ್ಯಕ್ಷೀಣವಾಗುತ್ತಿರಲು ಭೂಲೋಕದಲ್ಲಿ ಜನನ. ಪಾಪದಿಂದ ನರಲೋಕ ಪ್ರಾಪ್ತಿ. ಹೀಗೆ ಸ್ವರ್ಗ–ಭೂ–ನಿರಯಗಳಲ್ಲಿ ಸಂಚರಿಸುತ್ತಿರುವರು.

ಜೀವ ಮತ್ತು ಈಶನಿಗೆ ಐಕ್ಯವನ್ನು ಹೇಳುವ, ಅಹಂಬ್ರಹ್ಮಾಸ್ಮಿ ಎಂಬ ಭಾವನೆಯುಳ್ಳ, ಜಗತ್ತು ಮಿಥ್ಯೆ ಎಂದು ಸಾಧಿಸುತ್ತ, ಪಂಚಭೇದ ತಾರತಮ್ಯ ಜ್ಞಾನವನ್ನು ನಿರಾಕರಿಸುವ ದುರ್ವಾದಿಗಳು ತಮೋಯೋಗ್ಯರು. ಸಾಧನಾನಂತರ ಅಂತಹ ತಮೋಯೋಗ್ಯಜೀವರಿಗೆ ಅಂಧಂತಮಸ್ಸಿನಲ್ಲಿ ಸ್ಥಾನವನ್ನು ಕಲ್ಪಿಸಿ, ಅವರಿಗೆ ನಿತ್ಯದುಃಖರೂಪವಾದ ಅನುಭವವನ್ನು ಉಣಿಸುವನು. ಇಂತು ಸಾತ್ವಿಕ, ರಾಜಸ, ತಾಮಸರೆಂಬ ತ್ರಿವಿಧ ಜೀವರಿಗೆ ಉಂಟಾಗುವ ತ್ರಿವಿಧರೂಪವಾದ ಗತಿಪ್ರಾಪ್ತಿ ಕ್ರಮ. ॥ ೧೭ ॥

## ಪದ್ಯ ೧೮

### ಮೂಲ

ನಿರ್ಗುಣೋಪಾಸಕಗೆ ಗುಣ ಸಂ ।
ಸರ್ಗ ದೋಷಗಳೀಯದಲೆ ಅಪ ।
ವರ್ಗದಲಿ ಸುಖವಿತ್ತು ಪಾಲಿಸುವನು ಕೃಪಾಸಾಂದ್ರ ॥
ದುರ್ಗಮನು ಎಂದೆನಿಪ ತ್ರೈವಿ ।
ಧ್ಯರ್ಗೆ ತ್ರಿಗುಣಾತೀತ ಸಂತತ ।
ಸ್ವರ್ಗ ಭೂ ನರಕದಲಿ ಸಂಚಾರವನೆ ಮಾಡಿಸುವ ॥ ೧೮ ॥

### ಅವತರಣಿಕೆ

ಪ್ರಾಕೃತ ಸತ್ತ್ವ ರಜಸ್ತಮೋಗುಣರಹಿತನಾದ ಶ್ರೀಪರಮಾತ್ಮನನ್ನು ತಮ್ಮ ನಿಷ್ಕಾಮವಾದ ಮನಸ್ಸಿನಿಂದ ಉಪಾಸನೆ ಮಾಡತಕ್ಕ ಏಕಾಂತ ಭಕ್ತರಿಗೆ ನಿತ್ಯಾನಂದರೂಪವಾದ ಸುಖವನ್ನು ಕೊಡುವನೆಂದು ಹೇಳುತ್ತಾರೆ.

### ಪ್ರತಿಪದಾರ್ಥ

**ನಿರ್ಗುಣೋಪಾಸಕಗೆ**=ಸತ್ವ, ರಜ ತಮ ಎಂಬ ಪ್ರಾಕೃತ ಗುಣತ್ರಯಗಳಿಂದ ರಹಿತನಾದ ಶ್ರೀಪರಮಾತ್ಮನಿಗೆ, ನಿರ್ಗುಣನೆಂದು ಹೆಸರು. ಅಪ್ರಾಕೃತ ಆನಂದಾದಿ ಗುಣಗಳಿಂದ ವಿಶಿಷ್ಟನಾದ ನಿರುಪಮ ಜ್ಞಾನಾನಂದಾತ್ಮಕನಾದ ನಿರ್ಗುಣನಾಮಕನಾದ ನಿರಂಜನನನ್ನು ಲವಲೇಶವೂ ಯಾವ ಕಾಮನೆಯೂ ಇಲ್ಲದೆ, ಸಹಜವಾಗಿ ಉಪಾಸಿಸುವ ಪಕ್ವದಶೆಯಲ್ಲಿರುವ ಜೀವನ್ಮುಕ್ತ ಸ್ಥಿತಿಯಲ್ಲಿರುವ ಭಗವದ್ಭಕ್ತರಿಗೆ, **ಗುಣಸಂಸರ್ಗ**=ಪ್ರಾಕೃತವಾದ ಸತ್ವಾದಿ ಗುಣತ್ರಯಗಳಿಂದ ಉಂಟಾಗುವ ಅಹಂಕಾರ ಮತ್ತು ಮಮಕಾರಗಳ ಸಂಬಂಧವಾದ, **ದೋಷಗಳನು**=ದೋಷಗಳನ್ನು, **ಈಯದಲೆ**=ಕೊಡದೆ, **ಅಪವರ್ಗದಲಿ**=ಸಾಧನ ಪೂರ್ತಿ ಮಾಡಿಸಿ, ತನ್ನ ಅಪರೋಕ್ಷ ಭಾಗ್ಯವನ್ನು ನೀಡಿ, ಲಿಂಗಭಂಗಾನಂತರ, ಮುಕ್ತಿ

ಸ್ಥಾನದಲ್ಲಿ, **ಸುಖವಿತ್ತು** = ಜೀವರ ಸ್ವರೂಪಗತ ಅಪ್ರಾಕೃತಾನಂದವನ್ನು ಅಭಿವ್ಯಕ್ತಿಮಾಡಿಕೊಟ್ಟು, **ಕೃಪಾಸಾಂದ್ರ** = ಘನದಯಾನಿಧಿಯಾದ ಶ್ರೀಪರಮಾತ್ಮನು, **ಪಾಲಿಸುವನು** = ಸಂರಕ್ಷಿಸುತ್ತಾನೆ. **ದುರ್ಗಮನು** = ತದನ್ಯರಾದ ಭಗವದ್ದ್ವೇಷಿಗಳಾದ ತಮೋಯೋಗ್ಯರಿಗೂ, ಉದಾಸೀನ ಭಾವವುಳ್ಳ ನಿತ್ಯಸಂಸಾರಿಗಳಿಗೂ ದುರ್ಲಭನು, **ಎಂದೆನಿಪ** = ಎನಿಸಿಕೊಳ್ಳುವ, **ತ್ರೈವಿಧ್ಯರ್ಗೆ** = ತ್ರಿವಿಧರಾದ ಜೀವರಿಗೆ, **ತ್ರಿಗುಣಾತೀತ** = ಪ್ರಾಕೃತಗುಣಗಳಿಂದ ರಹಿತನಾದ **ಸಂತತ** = ಅನಾದ್ಯಂತಕಾಲದಲ್ಲಿ, **ಸ್ವರ್ಗ** = ಸ್ವರ್ಗಲೋಕ, **ಭೂ** = ಭೂಲೋಕ, **ನರಕದಲಿ** = ನರಕಲೋಕದಲ್ಲಿ, **ಸಂಚಾರವನೆಮಾಡಿಸುವ** = ತಿರುಗಿಸುತ್ತಾ ಇರುತ್ತಾನೆ. ॥ ೧೮ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತ ವಿಚಾರವೇ ಹೇಳುತಾರೆ.

ಪೂರ್ವೋಕ್ತ ಪ್ರಕಾರ ಅಹಂಮಮತಾಗುಣ ವಿಶಿಷ್ಟನಾಗಿ ಸಕಾಮನಾಗಿಯೂ, ಪುಣ್ಯಪಾಪಕರ್ಮಗಳ ಮಾಡಿದ ಮುಕ್ತಿಯೋಗ್ಯ ಪಕ್ವಕಾಲಕ್ಕೆ, ಪ್ರಾಕೃತ ಸತ್ತ್ವ ರಜಸ್ತಮೋಗುಣ ಶೂನ್ಯನಾದ ಶ್ರೀಪರಮಾತ್ಮನ ಉಪಾಸನಾ ಮಾಡುವಂಥ ಮುಕ್ತಿಯೋಗ್ಯನಾದವನಿಗೆ, ಸತ್ತ್ವಾದಿ ಗುಣಗಳಿಂದ ಚಂದಾಗಿ ಉತ್ಪನ್ನಗಳಾಗತಕ್ಕ ಅಹಂಮಮತಾ ಎನತಕ್ಕ, ಸಕಾಮ ಎನತಕ್ಕ ದೋಷಗಳ ಉತ್ಪತ್ತಿ ಮಾಡಿಕೊಡಧಾಂಗೆ ಸಾಧನ ಪೂರ್ತಿ ಮಾಡಿಸಿ, ತನ್ನ ಅಪರೋಕ್ಷ ಕೊಟ್ಟು, ಲಿಂಗಭಂಗ ಐದಸಿ, ಮೋಕ್ಷದಲ್ಲಿ ಸ್ವರೂಪಸುಖ ಅಭಿವ್ಯಕ್ತಿ ಮಾಡಿ ಕೊಟ್ಟು ಸಂರಕ್ಷಣೆ ಮಾಡತಾನೆ. ತನ್ನ ಭಕ್ತರಲ್ಲಿ ವಾಂಛಲ್ಯವುಳ್ಳ ಪರಮಾತ್ಮ ತದನ್ಯರಾದ ದೋಷಿಗಳಾದ ತಮೋಯೋಗ್ಯರಿಗೆ ಉದಾಸೀನಜ್ಞಾನಿಗಳಾದ ನಿತ್ಯಸಂಸಾರಿಗಳಿಗೆ ಅಸಾಧ್ಯ ಎಂದರೆ, ಇವರಿವರ ಸಾಧನ ಪೂರ್ತಿಮಾಡಿಸಿ, ದರ್ಪಣಗತ ಪ್ರತಿಬಿಂಬವತ್ ಅಪರೋಕ್ಷ ನಿತ್ಯ ಸಂಸಾರಿಗಳಿಗೂ, ಅಂಧಕಾರದಲ್ಲಿ ಅಂಧಕಾರವತ್ ಅಪರೋಕ್ಷ ತಮೋಯೋಗ್ಯರಿಗೂ ಕೊಟ್ಟು, ಅವರವರ ಲೋಕಗಳಲ್ಲಿ

ದುಃಖಪಡಿಸೋವನಾಗಥಾನೆಎಂತಅನಿಸಿಕೋತಕ್ಕ ಪರಮಾತ್ಮ ತ್ರಿವಿಧಪ್ರಕಾರರಾದ ಮುಕ್ತಿಯೋಗ್ಯ, ತಮೋಯೋಗ್ಯ, ನಿತ್ಯಸಂಸಾರಿಗಳಿಗೆ, ಪ್ರಾಕೃತಗುಣತ್ರಯಗಳಿಂದ ಶೂನ್ಯನಾದ, ಅನಾದ್ಯನಂತಕಾಲಕ್ಕೂ ಬಿಂಬನಾಗಿ ಇರತಕ್ಕ ಪರಮಾತ್ಮ ತ್ರಿವಿಧಜೀವರೂನೂ ಅಪಕ್ವದಶಾದಲ್ಲಿ ಅನಾದಿಕರ್ಮವನುಸರಿಸಿನ್ನೂ, ತ್ರಿಗುಣ ಕರ್ಮವನನುಸರಿಸಿನ್ನೂ ದ್ವಂದ್ವಕರ್ಮಗಳ ಮಾಡತಾರೆ. ತತ್ಫಲಭೋಗವನ್ನು ಸ್ವರ್ಗಲೋಕದಲ್ಲೇನು, ಭೂಲೋಕದಲ್ಲೇನು, ನರಕಲೋಕದಲ್ಲೇನು ಈ ಸ್ಥಾನತ್ರಯಗಳಲ್ಲಿ ಭೋಗಮಾಡೋದಕ್ಕೋಸ್ಕರ ತಿರಗಸತಾ ಇರಥಾನೆ. ಇದು ಸ್ಥಿತಿಕಾಲದಲ್ಲಿ ಎಂತ ತಾತ್ಪರ್ಯ. ತ್ರಿವಿಧ ಜೀವರು ತ್ರಿಗುಣ ಸಂಬಂಧದಿಂದ ಅನಾದಿಕರ್ಮಾನುಸಾರ ಪಾಪಪುಣ್ಯಗಳು ಮಾಡತಾ ಇರತಾರೆ. ಈ ಕರ್ಮಗಳಿಗೆ ಭೋಗಸ್ಥಾನ, ತ್ರಿದಿವನಿರಯಭೂ ಎಂತ ಪ್ರದೇಶಗಳು. ಪರ್ಯವಸ್ನಾಕ್ಕೆ ತ್ರಿವಿಧರ ಯೋಗ್ಯತಾನುಸಾರ ಸ್ಥಾನಭೇದಗಳು ಬ್ಯಾರೆ ಬ್ಯಾರೆ ಎಂತ ತಾತ್ಪರ್ಯ. ॥೧೮॥

## ೨. ಭಾವಪ್ರಕಾಶಿಕೆ

ಈ ತ್ರೈವಿಧ್ಯರುಗಳಲ್ಲಿ ಕೆಲವರು ಸತ್ವಭಾಗ ಅಧಿಕವಾಗುಳ್ಳವರು. ಕೆಲವರು ರಜೋಭಾಗ ಅಧಿಕವಾಗುಳ್ಳವರು. ಮತ್ತು ಕೆಲವರು ತಮೋಭಾಗ ಅಧಿಕವಾಗುಳ್ಳವರು. ಹೀಗೆ ಅಧಿಕಾಂಶವಾದ ಸತ್ವಾದಿ ಗುಣಗಳನ್ನು ಅನುಸರಿಸಿ ವಿವಿಧ ದೇವತೆಗಳನ್ನು ಪೂಜಿಸುವ ಕಾರಣ ಸ್ವರ್ಗ ಭೂಮಿ ನರಕಗಳಲ್ಲಿ ಫಲಾನುಭವ ಬರುವುದು. ಸಾತ್ವಿಕ ಮೊದಲಾದ ಮೂವರು ಹೊರತು ತ್ರಿಗುಣಾತೀತರು (ನಿರ್ಗುಣರು) ಎಂದು ಬೇರೆ ಇರುವರು. ಸಾತ್ವಿಕರು ಮುಕ್ತಿಯೋಗ್ಯರು. ಆದರೆ ಅವರಿಗೆ ಇಷ್ಟು ಕಲ್ಪ ಸಾಧನವೆಂತಲೂ, ಕೆಲವರಿಗೆ ಇಷ್ಟು ಜನ್ಮಗಳು ಸಾಧನವಾಗಬೇಕೆಂತಲೂ, ತ್ರಿವಿಧರಿಗೂ ನಿಯಮ ಉಂಟು. ಆದರಲ್ಲಿ ಸಾತ್ವಿಕರು ತಮ್ಮ ಸಾಧನವಾಗುವವರೆಗೂ ಸತ್ವಗುಣಸಂಬಂಧದಲ್ಲಿರುವರು. ಸಾಧನ ಪೂರ್ತಿಯಾದಕೂಡಲೇ ಅವರೇ ನಿರ್ಗುಣರು (ಗುಣಾತೀತರು) ಆಗುವರು. ಸತ್ವಗುಣ ಸಂಬಂಧವಿರುವವರೆಗೂ ಸ್ವರ್ಗಸುಖವನ್ನೋ, ರಾಜ್ಯವನ್ನೋ, ಭೋಗವನ್ನೋ ಅಪೇಕ್ಷಿಸುವರು. ನಿರ್ಗುಣರಾದ ಮೇಲೆ "ಸಾಲೋಕ್ಯ ಸಾರ್ಷ್ಟಿ ಸಾಮೀಪ್ಯ ಸಾರೂಪ್ಯೈಕತ್ವಮಿತ್ಯುತದೀಯ ಮಾನಂ ನ ಗೃಹ್ಣಂತಿ ವಿನಾಮತ್ಸೇವನಂ

ಜನಾಃ" ॥ ಸಾಲೋಕ್ಯಾದಿ ೫ ವಿಧ ಮುಕ್ತಿಯನ್ನೂ ಸಹ ಬೇಡರು ಎಂದು ಪರಮಾತ್ಮನೇ ಹೇಳಿರುವನು. ಈ ಜ್ಞಾನವು ಗುಣಾತೀತರಿಗೆ ಮಾತ್ರ ಹುಟ್ಟು ವುದು. ಇದೇ ಅರ್ಥವನ್ನೇ ದಾಸರಾಯರು ಈ ಪದ್ಯದಿಂದ ಹೇಳಿರುತ್ತಾರೆ. ಮೇಲೆ ಹೇಳಿದಂತೆ ತ್ರಿಗುಣಾತೀತರಾದ ಸಾಧನ ಪೂರ್ತಿಯಾದ ಸಾತ್ವಿಕರಿಗೆ ಗುಣ ಸಂಬಂಧದೋಷಗಳೆಂದರೆ ಸ್ವರ್ಗಕ್ಕೆ ಹೋಗಿ ಕೆಲವು ಕಾಲ ಸುಖಾನುಭವ ಮಾಡಿ ಮತ್ತೂ ಭೂಮಿಯಲ್ಲಿ ಹುಟ್ಟುವುದು. ಅಲ್ಲಿಯೂ ಅನಿತ್ಯಸುಖವನ್ನನುಭವಿಸು ವುದು, ಇವೇ ಮೊದಲಾದ ದೋಷಗಳನ್ನುಂಟು ಮಾಡಿಸದೆ ಮುಕ್ತಿಯನ್ನು ಕೊಟ್ಟು ಉದ್ಧರಿಸುವನು. ಇದಲ್ಲದೆ ಇನ್ನು ಸಾಧನಪೂರ್ತಿಯಾಗದಿರುವ ಸಾತ್ವಿ ಕರು ಕೆಲವು ಕಾಲ ಸಾಧನೆ ಪೂರ್ತಿಮಾಡಿಕೊಳ್ಳಲು ಅವರ ಸುಖಗಳೆಲ್ಲವನ್ನೂ ಸ್ವರ್ಗದಲ್ಲಿಯೇ ಅನುಭವಿಸುವರು. ಮಧ್ಯಮ ಭಕ್ತರಾದ ಮನುಷ್ಯೋತ್ತಮರು "ವಿಷ್ಣೋಸ್ತು ಮಧ್ಯಮೋ ಭಕ್ತೋ ನಿರಯಂ ನೈವ ಗಚ್ಛತಿ" ಎಂಬ ಏಕಾದಶಸ್ಕಂ ಧದ ತಾತ್ಪರ್ಯಾನುಸಾರವಾಗಿ ಎಂದಿಗೂ ನರಕಕ್ಕೆ ಹೋಗುವುದಿಲ್ಲ. ಭೂಮಿ ಯಲ್ಲೇ ಸುಖವನ್ನು ಅನುಭವಿಸುವರು. ಕಾಲಾಂತರದಲ್ಲಿ ಇವರಿಗೂ ಮುಕ್ತಿಯಾಗು ವುದು. ರಾಜಸರು ಭೂಮಿಯಲ್ಲಿ ದುಃಖಮಿಶ್ರವಾದ ಸುಖವನ್ನೇ ಅನುಭವಿ ಸುತ್ತಿರುವರು. ತಾಮಸರು ಪ್ರಾಯಶಃ ನರಕವಾಸಿಗಳು ಕೆಲವು ಕಾಲ ಭೂಮಿ ಯಲ್ಲಿ ದುಃಖ, ಕೆಲವು ಕಾಲ ಸುಖ ಹೀಗೆ ಅನುಭವಿಸುತ್ತಾ ಇರುವರು. ಸಾತ್ವಿಕ ರಲ್ಲಿ ನಿರ್ಗುಣರು ಹೇಗೆ ಉತ್ತಮರೋ ಹಾಗೆ ತಾಮಸರಲ್ಲಿ ನಿರ್ಗುಣೋಪಾಸನೆ ಎಂದರೆ ಪರಮಾತ್ಮನು ನಿರ್ಗುಣನು, ನಿರಾಕಾರನು ಎಂದು ಉಪಾಸನೆಯನ್ನು ಮಾಡುವವರೆಂದರ್ಥ. ಈ ಉಪಾಸನೆಯನ್ನು ಮಾಡಬಾರದೆಂದು ಶ್ರೀಮದಾ ಚಾರ್ಯರು ಖಂಡಿಸಿರುವರು. ಇದರಲ್ಲಿಯೂ ಅನ್ಯಥೋಪಾಸಕರಿಗೆ ಅಂಧಂತಮಸ್ಸೇ ಪ್ರಾಪ್ತಿ ಎಂದು ಹೇಳಿರುವರು. ಅನ್ಯಥೋಪಾಸಕರೆಂದರೆ ನಾನೇ ಬ್ರಹ್ಮನೆಂದು ಉಪಾಸನೆ ಮಾಡುವವರೆಂದರ್ಥ. ಇದೇ ತಮಸ್ಸಿಗೆ ಸಾಧನವು. ॥೧೮॥

**೩. ಭಾವದರ್ಪಣ**

ಹಾಗಾದರೆ ಮುಕ್ತಿ ಯಾರಿಗೆ ದೊರಕೀತು ಎಂದು ಆಕ್ಷೇಪಿಸಿಕೊಂಡು ನಿರ್ಧಾರವಾದ ಉತ್ತರ ಹೇಳುತ್ತಾರೆ. ನಿರ್ಗುಣೋಪಾಸಕೇತಿ. ನಿರ್ಗುಣೋಪಾಸನೆ

ಎಂದರೆ ಸುಖದುಃಖಾದಿ ದ್ವಂದ್ವ ಸಹನಮಾಡಿ ಸತ್ವರಜಸ್ತಮೋಗುಣ ಶೂನ್ಯನಾದ ಶ್ರೀಪರಮಾತ್ಮನ ಉಪಾಸನೆ ಮಾಡತಕ್ಕವ ಯಾವನೋ ಅವನೇ ನಿರ್ಗುಣೋಪಾಸಕ ಎಂತರ್ಥ. (ಮತ್ತು ಸರ್ವಾರಂಭಗಳ ಪರಿತ್ಯಾಗಪೂರ್ವಕ ಶ್ರೀಹರಿಯ ಧ್ಯಾನದಲ್ಲಿ ಆಸಕ್ತನಾದವನೆಂತಲೂ ಎರಡನೇ ಅರ್ಥ) ಇದೇ ವಿಷಯದಲ್ಲಿ ಮಾಡಿದ ಅರ್ಜುನನ ಪ್ರಶ್ನಕ್ಕೆ ಉತ್ತರ ಹೇಳಿರುತ್ತಾನೆ. ಅದೇ ಉದಾಹರಣ ಮಾಡುತ್ತದೆ. ಉಕ್ತಂ ಚ ಗೀತಾಯಾಂ"ಅರ್ಜುನ ಉವಾಚ। ಕೈರ್ಲಿಂಗೈಸ್ತ್ರೀನ್ಗುಣಾನೇತಾನತೀತೋ ಭವತಿ ಪ್ರಭೋ । ಕಿಮಾಚಾರಃ ಕಥಂ ಚೈತಾಂಸ್ತ್ರೀನ್ ಗುಣಾನತಿ ವರ್ತತೇ। ಶ್ರೀಭಗವಾನುವಾ ಚ। ಪ್ರಕಾಶಂ ಚ ಪ್ರವೃತ್ತಿಂ ಚ ಮೋಹಮೇವ ಚ ಪಾಂಡವ। ನ ದ್ವೇಷ್ಟಿ ಸಂಪ್ರವೃತ್ತಾನಿ ನ ನಿವೃತ್ತಾನಿ ಕಾಂಕ್ಷತಿ । ಉದಾಸೀನವದಾಸೀನೊ ಗುಣೈರ್ಯೋ ನ ವಿಚಾಲ್ಯತೆ। ಗುಣಾವರ್ತಂತ ಇತ್ಯೇವ ಯೋವತಿಷ್ಠತಿ ನೇಂಗತೆ। ಸಮದುಃಖಸುಖಸ್ವಸ್ಥಃ ಸಮಲೋಷ್ಟಾಶ್ಮಕಾಂಚನಃ । ತುಲ್ಯ ಪ್ರಿಯಾಪ್ರಿಯೋ ಧೀರಸ್ತುಲ ನಿಂದಾತ್ಮ ಸಂಸ್ತುತಿಃ । ಮಾನಾಪಮಾನಯೋಸ್ತುಲ್ಯಸ್ತುಲ್ಯೋ ಮಿತ್ರಾರಿಪಕ್ಷಯೋಃ। ಸರ್ವಾರಂಭಪರಿತ್ಯಾಗೀ ಸಗುಣಾತೀತ ಉಚ್ಯತೇ। ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೆ । ಸ ಗುಣಾನ್ ಸಮತೀತ್ಯೈ ತಾನ್ಬ್ರಹ್ಮ ಭೂಯಾಯ ಕಲ್ಪ್ಯತೆ" ಇತಿ । ಮತ್ತು ಬಿಂಬಕ್ರಿಯಾದಹೊರ್ತು ಇತರಕ್ರಿಯಾ ನಡಿಯೋದೇ ಇಲ್ಲವೆಂದು ಹೇಳುತ್ತಾರೆ. ತದುಕ್ತಂ ಗೀತಾಭಾಷ್ಯೇ "ಸ ಹಿ ಬಿಂಬಕ್ರಿಯಾಯೈವ ಕ್ರಿಯಾವಾನಿತಿ". ಶಾಂಡಿಲ್ಯತತ್ವೇಪಿ. "ಯದಾ ಸ್ನಾನಿ ತದಾ ಸ್ನಾತಿ ಯದಾ ಭುಂಕ್ತೇ ತದೈವ ಸಃ । ಯದಾ ಜಿಘ್ರತಿ ಜಿಘ್ರಾತಿ ಯದಾ ಜೀವಃ ಪರಾನುಗಃ। ಯದಾಗಚ್ಛತಿ ವಾ ದೇವಸ್ತದಾ ಗಚ್ಛತಿ ದೇಹಭೃತ್। ಶೃಣೋತಿ ಚ ಯದಾ ಬ್ರಹ್ಮ ತದಾ ಜೀವಃ ಶೃಣೋತಿ ಚ । ಯದೈವ ಸ್ಪೃಶತೇ ಕಿಂಚಿತ್ತದಾಯಂ ಸ್ಪೃಶತೇ ಜನಃ । ಕಿಮತ್ರ ಬಹುನೋಕ್ತೇನ ನಾಕೃತಂ ಕ್ರಿಯತೇ ಜನೈಃ । ಏವಂ ಕರ್ತಾಂ ದೇವೇಶೆ ಕರ್ತಾಹಮಿತಿ ಮನ್ಯತೆ । ತೇನ ಸಂಸರತೆ ಜೀವೊ ದುಃಖೀ ಜನ್ಮಸು ಜನ್ಮಸು ಇತಿ । ಇದೇ ವಿಷಯದಲ್ಲಿ ಸುಳಾದಿ । ಕಟ್ಟಾಕಡೆಗೆ ಮುಕ್ತಿಯೋಗ್ಯಾಗೆ ಜ್ಞಾನ ಇದೇ ಪುಟ್ಟದಲ್ಲದೆ ಬಿಂಬದರ್ಶನವಾಗಾದು ಯಟ್ಟೇ ಮಾನವರಿಗೆ ವರದೋರದು ಕೇವಲ ಗುಟ್ಟುತಿಳಿಪಾದಾರಿಂದ ಏನಾಹದೋ ಥಟ್ಟ ದ್ವೈತಾಂಗಳರಸ ವಿಜಯವಿಠ್ಠಲ ಜಾಜಟ್ಟಿಗೆ ಪಾಪಪುಣ್ಯಲೇಪಾವೇನೊ ಎಂತ ವಿಜಯದಾಸರಾಯರು ರಹಸ್ಯವಾದ ಮಾತು ಹೇಳಿದ್ದಾರೆ. ಅದ್ದರಿಂದ ಸುಜ್ಞರು

ತಿಳಿತಕ್ಕದ್ದು. ಅಪವರ್ಗ-ಮೋಕ್ಷ. ತ್ರೈವಿಧ್ಯರು–ತ್ರಿವಿಧಸ್ಯೇದಂ ತ್ರೈವಿಧ್ಯಂ. ಸತ್ವರಜಸ್ತಮಗುಣ ಉಳ್ಳ ಜೀವರು ಎಂಬರ್ಥ. ॥ ೧೮ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ನಿರ್ಗುಣ ಇತಿ ॥ ಸರ್ವಸಮರ್ಪಣ ಸುಳಾದ್ಯರ್ಥಾನುವಾದೋಽಯಂ ನಿರ್ಗುಣೋಪಾಸನಾ ಕತುರ್ಗ ॥ ಏಕಾದಶ ತಾತ್ಪರ್ಯೇ ಚ ನೈರ್ಗುಣ್ಯ ಸಾಧನಂ ಯತ್ತತ್ ನಿರ್ಗುಣಂ ಪರಿಕೀರ್ತನಂ ॥ ಮೋಕ್ಷಸಾಧನೋಪಾಸ್ತಿಃ ಏವ ಸಾ ॥ ತತ್ಕರ್ತಾ ನಿರ್ಗುಣಃ ಭಾಗವತಃ ॥ "ಅಶ್ರುತ್ವಾಪಿ ಪ್ರಮಾಣಂ ಯಃ ವಾಸುದೇವೈಕ ಸಂಶ್ರಯಃ ॥ ಸ ನಿರ್ಗುಣೋ ಭಾಗವತಃ ಸಮುದ್ದಿಷ್ಟೋ ಮನೀಷಿಭಿಃ ॥" ಇತಿ ॥

ವಿಷ್ಣುಃ ವಾಯುಂ ಪುರಸ್ಕೃತ್ಯ ಸರ್ವೇಷ್ವೇತೇಷು ಸಂಚರನ್ ॥ ಕರೋತಿ ಕಾರಯೇತ್ಯದ್ಧಾ ಇತಿ ಶಾಂಡಿಲ್ಯೋಕ್ತ ಜ್ಞಾನಂ ನಿರ್ಗುಣಮ್ ॥

ಅನೇನ ಅನುಸಂಧಾನೇನ ತ್ವರಯಾ ಬಿಂಬದರ್ಶನಮ್ ಇತ್ಯತ್ರ ಸತ್ವಾತ್ ಗುಣಾತ್ ಜಾತಮಪಿ ವ್ಯವಧಾನಂ ವಿನೈವ ತು ॥ ನಿರ್ಗುಣಂ ನಿರ್ಗುಣಂ ಪ್ರೋಕ್ತಂ ವ್ಯವಧಾನೇನ ಸಾತ್ವಿಕಮ್ ॥ ಇತಿ ಬ್ರಾಹ್ಮೇ ॥

ಪ್ರಕೃತ್ಯೈವ ಚ ಕರ್ಮಾಣಿ ಕ್ರಿಯಮಾಣಾನಿ ಸರ್ವಶಃ ॥ ಇತಿ ಗೀತಾಯಾಮ್ ತಾತ್ಪರ್ಯೇ ಚ—ಪ್ರಕೃತ್ಯಾ ಸ್ವಯಮೇವ ಆರಭ್ಯ ವಿಷ್ಣುನಾ ಕ್ರಿಯಮಾಣಾನಿ ॥ ನರ್ತೇತ್ವದಿತಿ ಶ್ರುತೇಃ ಚ ॥ ಸರ್ವಂ ಕರೋತಿ ಪರಮಾತ್ಮಾ ತಥಾಪಿ ನ ಲಿಪ್ಯತೇ ॥ ಜನ್ಮಮೃತ್ಯಾದಿ ರಹಿತಃ ಸತ್ವಾದಿ ಗುಣ ವರ್ಜಿತಃ ॥ ವಿಷ್ಣುಃ ತದ್ವಿಪರೀತಃ ಇತಿ ॥ ಕಾರ್ಯತೇ ಹ್ಯವಶಃ ಕರ್ಮ ಇತಿ ಗೀತಾಯಾಮ್ ॥ ಸ್ವಾಭಾವಿಕ ಗುಣಾನೇತಾನ್ ಹೇತುಂ ಕೃತ್ವೈವ ವಿಷ್ಣುನಾ ॥ ಕರ್ಮಸು ಕ್ರಿಯಮಾಣೇಷು ಕರ್ತಾಹಮಿತಿ ಮೂಢಧೀಃ ॥ ಮನ್ಯತೇ ತತ್ವವಿತ್ ವಿಷ್ಣೋಃ ಗುಣಾಃ ಇಚ್ಛಾದಯಶ್ಚ ಯೇ ॥ ಸ್ವಾಭಾವಿಕೇಷು ಜೀವಸ್ಯ ಕಾಮಾದ್ಯೇಷು ಸದೈವ ತು ॥ ಪ್ರೇರಕತ್ವೇನ ವರ್ತಂತೇ ಸ್ವಾತಂತ್ರ್ಯಂ ಮಮ ನ ಕ್ವಚಿತ್ ॥ ಇತಿ ಮತ್ವಾ ನ ಸಕ್ತಃ ಸ್ಯಾತ್ ತ್ರುಟಿತೋಽಸ್ಯ ಭವತಿ ಪ್ರಭುಃ ॥ ಗೀತಾಯಾಂ ಚತುರ್ದಶಾಧ್ಯಾಯೇ ಚ—ನಾನ್ಯಂ ಗುಣೇಭ್ಯಃ ಕರ್ತಾರಂ ಗುಣೇಭ್ಯಶ್ಚ ಪರಂ ವೇತ್ತಿ

ಇತಿ ಚೋಕ್ತಮ್ ॥ ಗುಣ ಸಂಸರ್ಗ ದೋಷೇತ್ಯಸ್ಯ ಮಾನಂ ತತ್ರೈವೋಕ್ತಂ ಗುಣಾನೇ ತಾನತೀತ್ಯ ತ್ರೀನ್ ದೇಹೀ ದೇಹ ಸಮುದ್ಭವಾನ್ ॥ ಜನ್ಮಮೃತ್ಯು ಜರಾ ದುಃಖೈಃ ವಿಮುಕ್ತಃ ಅಮೃತ ಮಶ್ನುತೇ ॥ ಇತಿ ॥ ತತ್ತಾತ್ಪರ್ಯೇ ಚ ಏತೇಭ್ಯಃ। ಸತ್ವಾದಿ = ಗುಣೇಭ್ಯಃ ಅನ್ಯಂ ಕರ್ತಾರಂ ಈಶಂ ಯದಾ ಪಶ್ಯತಿ ತದೈವ ಅಯಂ ನಾಃ ಪುರುಷಃ ॥ ಅನ್ಯಥಾ ಪಶುಸಮಃ ॥ ನ ಕೇವಲಂ ಅನ್ಯತ್ವೇನ ಪ್ರಜ್ಞಾತಂ ಕರ್ತಾರಂ ತಂ ವಿಷ್ಣುಂ ॥ ಕಿಂತು ಗುಣೇಭ್ಯಃ ಉತ್ತಮತ್ವೇ ನ ಚ ॥ ಪ್ರಕೃತಿಃ ನಾಮ ಸಾ ಜ್ಞೇಯಾ ಪ್ರಕರ್ಷೇಣ ಕರೋತಿ ಯಾ ॥ ತಸ್ಯಾಸ್ತು ತ್ರೀಣಿ ರೂಪಾಣಿ ಸತ್ವಂ ನಾಮ ರಜಸ್ತಮಃ ॥ ಸೃಷ್ಟಿಕಾಲೇ ವಿಭಜ್ಯಂತೇ ಸತ್ವಂ ಶ್ರೀಃ ಸದ್ಗುಣಪ್ರಭಾ ॥ ರಜೋ ರಂಜನಕರ್ತೃತ್ವಾತ್ ಭೂಃ ಸಾ ಸೃಷ್ಟೀ ಕರೀಯತಃ ॥ ಜೀವಾನಾಂ ಗ್ಲಪನಾತ್ ದುರ್ಗಾ ತಮ ಇತ್ಯೇವ ಕೀರ್ತಿತಾ ॥ ಏತಾಭಿಃ ತ್ರಿಸೃಭಿಃ ಜೀವಾಃ ಬದ್ಧಾಃ ಸರ್ವೇ ಅಮುಕ್ತಿಗಾಃ॥ ಸರ್ವಾನ್ ಬಧ್ನಂತಿ ಸರ್ವಾಶ್ಚ ತಥಾಪಿ ತು ವಿಶೇಷತಃ ॥ ಶ್ರೀರ್ದೇವ ಬಂಧಿಕಾ ನೃಣಾಂ ಭೂಃ ದೈತ್ಯಾನಾಮಥಾಪರಾ ॥ ಏತಾಭ್ಯೋನ್ಯಂ ಪರಂ ಚೈವ ವಿಷ್ಣುಂ ಜ್ಞಾತ್ವಾ ವಿಮುಚ್ಯತೇ ॥ ಸಾಮರ್ಥ್ಯಾತಿಶಯಾತ್ ಆಸಾಂ ನೈತಾಭ್ಯಃ ವಿದ್ಯತೇ ಪರೈಃ ॥ ಇತಿ ಯಾವತ್ ವಿಜಾನಾತಿ ತಾವತ್ ತಂ ನೃಪಶುಂ ವಿದುಃ ॥ ತಸ್ಮಾದಾಭ್ಯೋಧಿಗುಣೋ ವಿಷ್ಣುಃ ಜ್ಞೇಯಃ ಸದೈವ ಚ ॥ ಇತಿ ಮಹಾವಿಷ್ಣುಪುರಾಣೇ॥ ಲಕ್ಷ್ಮ್ಯಾದಿಭಿಃ ಕೃತಃ ಬಂಧಃ ಯೋऽನಾದಿಃ ಪುರುಷಸ್ಯ ತು ॥ ತಮತ್ಯೇತೀಹ ಯೋ ವಿದ್ವಾನ್ ಸ ವಿಜ್ಞೇಯೋ ಗುಣಾತ್ಯಯೀ ॥ ಇತಿ ಪ್ರವೃತ್ತೇ ॥ ತತ್ಕೃತ ಬಂಧಾತ್ಯಯಾತ್ ತದಧಿಕವಿಷ್ಣು ಪ್ರಾಪ್ತೇಃ ಚ ತದತ್ಯಯಿ ಇತ್ಯುಚ್ಯತೇ ॥ ಯಥಾ ದ್ವಾರಪಾಲಮತೀತ್ಯ ರಾಜಾನಂ ಗಚ್ಛತಿ ಇತಿ ॥ ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಇತಿ ಗೀತಾ ॥ ತದ್ವ್ಯಾಪ್ಯೇ ಚ ವಿದ್ವದವಿದುಷೋಃ ಕರ್ಮಭೇದಮಾಹ–ಪ್ರಕೃತೇಃ ಇತಿ ॥ ಪ್ರಕೃತೇಃ ಗುಣೈಃ ಇಂದ್ರಿಯಾದಿಭಿಃ ನಹಿ ಪ್ರತಿಬಿಂಬಸ್ಯ ಕ್ರಿಯಾ ॥ ಮಯಿ ಕರ್ಮಾಣಿ ಸನ್ನ್ಯಸ್ಯ ಇತ್ಯತ್ರ ಸನ್ನ್ಯಾಸಃ ॥ ಅತಃ ಸರ್ವಾಣಿ ಕರ್ಮಾಣಿ ಮಯ್ಯೇವ ಸನ್ನ್ಯಸ್ಯ ಭ್ರಾಂತ್ಯಾ ಜೀವೇ ಅಧ್ಯಾರೋಪ ತಾನಿ ಮಯ್ಯೇವ ವಿಸೃಜ್ಯ ಭಗವಾನೇವ ಸರ್ವಾಣಿ ಕರ್ಮಾಣಿ ಕರೋತಿ ॥ ಮತ್ಪೂಜೇತಿ ಚ ॥ ಆತ್ಮಾನಂ ಅಧಿಕೃತ್ಯ ಯತ್ ಚೇತಃ ತದಧ್ಯಾತ್ಮ ಚೇತಃ ॥ ಸನ್ನ್ಯಾಸಸ್ತು ಭಗವಾನ್ ಕರೋತಿ ಇತಿ ನಿರ್ಮಮತ್ವಮ್ ॥ ನಾಹಂ ಕರೋಮಿ ಇತಿ । ನಾನ್ಯ ಮಿತ್ಯೇತತ್ಪರಿಣಾಮಿಕರ್ತಾರಂ ಗುಣೇ

ಭ್ಯೋऽನ್ಯ ನ್ನೈವ ಪಶ್ಯತಿ ಇತಿ ॥ ಅನ್ಯಥಾ ಕರ್ತಾರಮಿತಿ ಶ್ರುತಿ ವಿರೋಧಃ ॥ ನಾಹಂ ಕರ್ತಾ ನ ಕರ್ತಾತ್ವಂ ಕರ್ತಾ ಯಸ್ತು ಸದಾ ಪ್ರಭುಃ ॥ ಇತಿ ॥ ರಸ ರಂಜನ್ಯಾಂ ಮನೋದೋಷನಿರಸನಪ್ರಕರಣೇ ಚ ಭಾರತೇ ಭುವಿ ವಿಪ್ರಜನ್ಮಸು ದುರ್ಲಭಂ ಯದಿ ಮನ್ಯಸೇ ಸಾಧನಂ ಕುರು ದೇವ ಪೂರ್ವಮಹಂ ತು ತೇನ ಕರೋಮ ಲಮ್ ॥ ಇತಿ॥ ನಿರ್ಗುಣೋಪಾಸ್ತಿ ಸಂದರ್ಭೇ ಯಥಾಮತಿ ಮಯೋದಿತೇ ॥ ಸಾರಗ್ರಾಹೀ ದೂಷಯೇತ್ ಚೇತ್ ಭೂಷಣಂ ನಾಗ್ರಹೋ ಮಮ ॥

ಈಯದಲೇ = ಕೊಡದಲೇ ॥ ದುರ್ಗಮಃ ಓಂ ವಿದ್ಯಾಮಶೂರ ನವ್ಯಸಃ ವಸೋಃ ಸ್ವಾರ್ಹಸ್ಯ ಪುರುಹೂತ ರಾಧಸಃ ॥ ಇಂದ್ರ ಯಥಾಹ್ಯಸ್ತಿ ತೇऽಪರೀತಂ ನೃತೋಶ (ಶಿ) ವಃ ಓಂ ॥ ದುಃಖ ಸಂಪಾದ್ಯಃ ವಸುಗಮಯತಿ ಪ್ರಾಪಯತಿ ಇತಿ ತಥೋಕ್ತಃ ॥ ತ್ರೈವಿಧ್ಯಸ್ತ್ವಪರೋಧಮಃ ನಾನಾ ದೈವತ ಪೂಜನಮ್ ॥ ತತ್ರಾಪಿ ವಿಷ್ಣುಃ ಜ್ಞಾತವ್ಯಃ ಸರ್ವೇಭ್ಯೋऽಭ್ಯಧಿಕಃ ॥ ಗುಣೈಃ ॥ ತ್ರೈವಿದ್ಯಧರ್ಮಾ ಪುರುಷಃ ಸ್ವರ್ಗಂ ಭುಕ್ತ್ವಾ ನಿವರ್ತತೇ॥ ಪುನಃ ಕುರ್ಯಾತ್ ಪುನಃ ಸ್ವರ್ಗಂ ಯಾತಿ ಯಾವತ್ ಹರೇರ್ವಶೇ ॥ ಸರ್ವಾನ್ ದೇವಾನ್ ಪ್ರವಿಜ್ಞಾಯ ತತ್ಕರ್ಮೈವ ಸದಾ ಭವೇತ್ ॥ ಸಮ್ಯಕ್ ತತ್ತ್ವಾಪರಿಜ್ಞಾನಾತ್ ಅನ್ಯ ಧರ್ಮ ಕೃತೇರಪಿ ॥ ಸ್ವರ್ಗಾದಿ ಪ್ರಾರ್ಥನಾಚ್ಚೈವ ರಾಗಾದ್ವೇಶ್ಯಾ ಪರಿಕ್ಷಯಾತ್॥ ಸದಾ ವಿಷ್ಣೋರಸ್ಮರಣಾತ್ ತ್ರೈವಿದ್ಯಃ ನಾಪ್ನುಯಾತ್ ಪರಮ್ ॥ ಇತಿ ಗೀತಾ ತಾತ್ಪರ್ಯೇ ॥ ಅತೋವಾ ದುರ್ಗಮಃ ॥ ೧೮ ॥

**ಕನ್ನಡಾರ್ಥ**

ನಿಗುಣೋಪಾಸಕಗೆ ಎಂಬ ಪದ್ಯದಲ್ಲಿ ನಿರ್ಗುಣೋಪಾಸನೆಯನ್ನು ಮಾಡಿದವನಿಗೆ ಗುಣಸಂಸರ್ಗ ದೋಷಗಳೀಯದಲೆ ಅಪವರ್ಗದಲಿ ಸುಖವಿತ್ತು ಪಾಲಿಸುವನು ಕೃಪಾಸಾಂದ್ರ ಎಂಬುದಾಗಿ ಮಹಾಫಲವನ್ನು ಹೇಳಿರುವರು. ಹೀಗೆ ಫಲವನ್ನು ಹೇಳಿರುವ ಈ ಪದ್ಯವು ಶ್ರೀವಿಜಯದಾಸರ ಸರ್ವ ಸಮರ್ಪಣ ಸುಳಾದಿಯ ಅರ್ಥಾನುವಾದರೂಪವಾಗಿರುತ್ತದೆ. ಶ್ರೀಮದ್ಭಾಗವತ ಏಕಾದಶ ತಾತ್ಪರ್ಯದಲ್ಲಿ–

ಕೈವಲ್ಯಂ ಸಾತ್ವಿಕಂ ಜ್ಞಾನಂ ಕರ್ಮನಿಷ್ಠಂತು ರಾಜಸಮ್ ಪ್ರಾಕೃತಂ ತಾಮಸಂ ಜ್ಞಾನಂ ಮನ್ನಿಷ್ಠಂ ನಿರ್ಗುಣಂ ಸ್ಮೃತಮ್ ಎಂಬ ಭಾಗವತ ಶ್ಲೋಕ ವನ್ನು ವ್ಯಾಖ್ಯಾನಿಸುವಾಗ ಶ್ರೀಮದಾಚಾರ್ಯರು ನಿರ್ಗುಣ ಶಬ್ದಕ್ಕೆ ಅರ್ಥವನ್ನು ನಿರೂಪಿಸಿರುತ್ತಾರೆ, ಅದೇ ಅರ್ಥವನ್ನೇ ಇಲ್ಲಿ ಹೇಳಬೇಕು. ಬೇರೆ ವಿಪರೀತ ವಾದ ಅರ್ಥವನ್ನು ಹೇಳಬಾರದು. ಜೀವನು ಯಾವುದರಿಂದ ಮೋಕ್ಷವನ್ನು (ನೈರ್ಗುಣ್ಯ) ಹೊಂದುವನೋ, ಆ ಜ್ಞಾನವು ನಿರ್ಗುಣವೆಂದು ಹೇಳಿಸಿಕೊಳ್ಳು ತ್ತದೆ. ಋಗ್ವೇದ ಮುಂತಾದ ಶಾಸ್ತ್ರಗಳಲ್ಲಿ ನಿರೂಪಿಸಲಾಗಿರುವ ವಿಜ್ಞಾನವು ಕೇವಲ ಜ್ಞಾನವೆಂದು ಕರೆಯಲ್ಪಡುತ್ತದೆ. ನಿರ್ಗುಣಜ್ಞಾನದಲ್ಲಿ ಕೇವಲ ಜ್ಞಾನ ಕ್ಕಿಂತಲೂ ವೈಶಿಷ್ಟ್ಯವಿರುತ್ತದೆ. ಅದೃಷ್ಟವಾದ ಭಗವದ್ಗುಣಗಳನ್ನು ತಾನು ಅವ ಲೋಕಿಸಿದ (ಓದಿದ) ಋಗಾದಿಶಾಸ್ತ್ರಗಳಿಗನುಸಾರವಾಗಿ ಶ್ರೀಹರಿಯಲ್ಲಿ ಇರುವ ವೆಂದು ನಿಶ್ಚಯಿಸಬೇಕು. ಹೀಗೆ ಶಾಸ್ತ್ರಾನುಗುಣವಾಗಿ ಅದೃಷ್ಟ ಗುಣಗಳ ಅನು ಚಿಂತನರೂಪವಾದ ಶ್ರೀಹರಿಯ ವಿಷಯಕವಾದ ಭಕ್ತಿಯುಕ್ತವಾದ ಜ್ಞಾನವು ನಿರ್ಗುಣಜ್ಞಾನವೆನಿಸಿಕೊಳ್ಳುತ್ತದೆ. ಶಾಸ್ತ್ರದಲ್ಲಿ ಹೇಳಿದುದನ್ನು ತಿಳಿಯುವುದು, ಅಂದರೆ ಶಾಸ್ತ್ರಾಧ್ಯಯನದಿಂದ ಬರುವ ಜ್ಞಾನವು ಸಾತ್ವಿಕಜ್ಞಾನವೆಂದೂ ಅಧೀತ ಶಾಸ್ತ್ರಗಳಿಗನುಸಾರವಾಗಿ ತಾನು ಕಾಣದ ಗುಣಗಳನ್ನೂ ಸಹ ಶ್ರೀಹರಿಯಲ್ಲಿ ಚಿಂತಿ ಸುತ್ತ ಭಕ್ತಿಯಿಂದ ಶಾಸ್ತ್ರಾರ್ಥಾನುಸಂಧಾನರೂಪವಾದ ಜ್ಞಾನವು ನಿರ್ಗುಣ ಜ್ಞಾನವೆಂದೂ ಕರೆಯಲ್ಪಡುತ್ತದೆ. ಈ ನಿರ್ಗುಣೋಪಾಸನೆಯನ್ನು ಕೈಕೊಳ್ಳುವ ಅಧಿಕಾರಿಯು ಭಾಗವತನು. ವೈದಿಕಶಾಸ್ತ್ರಗಳನ್ನು ಶ್ರವಣಮಾಡದಿದ್ದರೂ ಸಹ ಯಾರು ಸ್ವರೂಪಜ್ಞಾನದಿಂದಲೇ ಸ್ವಾಭಾವಿಕ ಜ್ಞಾನದಿಂದಲೇ ವಾಸುದೇವನ ಲ್ಲಿಯೇ ನಿರತರಾಗುತ್ತಾರೋ ಅವರು ನಿರ್ಗುಣರು, ಭಾಗವತರು ಎಂದು ಜ್ಞಾನಿ ಗಳಿಂದ ಹೇಳಿಸಿಕೊಳ್ಳುತ್ತಾರೆ.

ವಿಷ್ಣುವು ವಾಯುದೇವನನ್ನು (ಮುಖ್ಯಪ್ರಾಣನನ್ನು) ಮುಂದೆ ಮಾಡಿ (ಅವನ ದ್ವಾರದಿಂದ) ಅವನಲ್ಲಿ ತಾನು ನಿಂತುಕೊಂಡು ಸಕಲ ದೇವತೆಗಳಲ್ಲಿ ಚರಾ ಚರ ಪ್ರಾಣಿ—ಜಡಗಳಲ್ಲಿ—ಅಂತರ್ಯಾಮಿಯಾಗಿ ಸಂಚರಿಸುತ್ತಾನೆ ಎಂಬುದಾಗಿ ದೃಢನಿಶ್ಚಯ ರೂಪವಾದ ಜ್ಞಾನವು ನಿರ್ಗುಣಜ್ಞಾನವೆಂದು ಶಾಂಡಿಲ್ಯದಲ್ಲಿ ಹೇಳಲಾಗಿರುತ್ತದೆ.

ಹೀಗೆ ನಿರ್ಗುಣೋಪಾಸನಾರೂಪವಾದ ಅನುಸಂಧಾನದಿಂದ ತೀವ್ರವಾಗಿ ಬಿಂಬದರ್ಶನವಾಗುತ್ತದೆ. ಪರೋಕ್ಷ ಅಪರೋಕ್ಷಜ್ಞಾನಗಳಾಗಲೀ ಸಾತ್ವಿಕ ಹಾಗೂ ನಿರ್ಗುಣ ಜ್ಞಾನಗಳಾಗಲೀ ಒಂದೇ ಸತ್ವಗುಣದಿಂದ ಜನಿಸುವವು ಅಥವಾ ಅಭಿವ್ಯಕ್ತವಾಗುವವಾದರೂ ಮಧ್ಯದಲ್ಲಿ ಕಾಲಾಂತರಗಳಿಲ್ಲದೇ ನಿರ್ಗುಣ ಹಾಗೂ ಅಪರೋಕ್ಷ ಜ್ಞಾನಗಳು ಮೋಕ್ಷವನ್ನೀಯುವವು. ಪರೋಕ್ಷ ಹಾಗೂ ಸಾತ್ವಿಕ (ಕೇವಲ) ಜ್ಞಾನಗಳು ವ್ಯವಧಾನದಿಂದ ಮಧ್ಯದಲ್ಲಿ ದ್ವಾರಗಳ ಮುಖಾಂತರ ಕಾಲಾಂತರದಿಂದ ಮೋಕ್ಷಸಾಧಕಗಳಾಗಿರುತ್ತವೆ. ಹೀಗೆ ಎರಡರಲ್ಲಿಯೂ ಅಂತರವನ್ನು ತಿಳಿಯಬೇಕು.

ಶ್ರೀಭಗವದ್ಗೀತೆಯ ೧. ನೆಯ ಅಧ್ಯಾಯದಲ್ಲಿ ಪ್ರಕೃತ್ಯೈವ ಚ ಕರ್ಮಾಣಿ ಕ್ರಿಯಮಾಣಾನಿ ಸರ್ವಶಃ ಎಂಬ ಶ್ಲೋಕದಿಂದ ಪರಮಾತ್ಮನೇ ಕರ್ತೃ ಎಂದು ನಿರೂಪಿತವಾಗಿರುತ್ತದೆ. ಈ ಗೀತಾಶ್ಲೋಕದ ತಾತ್ಪರ್ಯದಲ್ಲಿ ಶ್ರೀಮದಾನಂದತೀರ್ಥರು ಹೀಗೆ ವಿವರಿಸಿರುತ್ತಾರೆ. ಪೂರ್ವಕರ್ಮ ಮುಂತಾದವುಗಳನ್ನು ತಾನೇ ಸ್ವತಃ ಉದ್ಬೋಧಗೊಳಿಸಿ, ಶ್ರೀವಿಷ್ಣುವೇ ಸ್ವತಂತ್ರವಾಗಿ ಮುಖ್ಯವಾಗಿ ಮಾಡುತ್ತಾನೆ. ಅಂದರೆ ಜೀವರ ಸಕಲ ಪೂರ್ವಕರ್ಮ ಮುಂತಾದುವುಗಳನ್ನು ಉದ್ಬೋಧಿಸಿ ಅದರಂತೆ ಅವರವರಿಗೆ ಆಯಾ ಫಲಗಳಿಗೆ ಶ್ರೀವಿಷ್ಣುವೇ ಕಾರಣನಾಗಿರುತ್ತಾನೆ. ಆದುದರಿಂದ ಸಕಲ ಕರ್ಮವ್ಯಾಪಾರಗಳಿಗೆ ಪರಮಾತ್ಮನೇ ಮುಖ್ಯ ಕಾರಣಕರ್ತನೆಂದೂ ಆ ಪರಮಾತ್ಮನು ಮಾತ್ರ ಇನ್ನೊಬ್ಬನ (ಸ್ವತಂತ್ರನ) ಅಧೀನನಲ್ಲವೆಂದೂ ತಿಳಿದವನೇ ಜ್ಞಾನಿಯು ಎಂದು ನಿರೂಪಿಸುತ್ತಾರೆ. ಪರಮಾತ್ಮನು ಸರ್ವವನ್ನೂ ಮಾಡಿಸಿದರೂ ಸಹ ಪುಣ್ಯಪಾಪಗಳಿಂದ ಲಿಪ್ತವಾಗುವುದಿಲ್ಲ. ಜನನ ಮರಣ ಮುಂತಾದ ದೋಷರಹಿತನೂ, ಸತ್ವ ಮುಂತಾದ ಪ್ರಾಕೃತಗುಣ ಸಂಬಂಧವಿಲ್ಲದವನೂ ಶ್ರೀವಿಷ್ಣುವು ಆಗಿರುತ್ತಾನೆ. ಕರ್ಮಬದ್ಧನಾದ ಜೀವನು ಹರಿಯಿಂದ ಅತ್ಯಂತ ಭಿನ್ನನಾಗಿರುತ್ತಾನೆ.

ಗೀತೆಯಲ್ಲಿ ೧೨.ನೆಯ ಅಧ್ಯಾಯದಲ್ಲಿ ಕಾರ್ಯತೇಹ್ಯವಶಃ ಕರ್ಮ ಎಂಬ ಶ್ಲೋಕದಲ್ಲಿಯೂ ಪ್ರಕೃತೇಃ ಕ್ರಿಯಮಾಣಾನಿ ಎಂಬ ಶ್ಲೋಕದಲ್ಲಿಯೂ ಇದೇ ಸಂಗತಿಯು ನಿರೂಪಿತವಾಗಿರುತ್ತದೆ. ಎರಡು ತರಹದ ಕರ್ತೃತ್ವವಿರುತ್ತದೆ.

ಒಂದು ವಿಕಾರರೂಪವಾದ ಕರ್ತೃತ್ವ, ಇನ್ನೊಂದು ಸ್ವತಂತ್ರತ್ವರೂಪವಾದ ಕರ್ತೃತ್ವ. ವಿಕಾರರೂಪ ಕರ್ತೃತ್ವವು ಪ್ರಕೃತಿಗೇ ಇರುತ್ತದೆ. ಆದರೂ ವಿಕಾರ ಹೊಂದಿಸುವುದು ಪರಮಾತ್ಮ. ವಿಕಾರಹೊಂದುವ ಸ್ವಭಾವ ಜಡಪ್ರಕೃತಿಯದಾದರೂ ಹರಿಯ ಅಧೀನವಾಗಿರುತ್ತದೆ. ಸ್ವತಂತ್ರತ್ವರೂಪವಾದ ಕರ್ತೃತ್ವವು ಶ್ರೀವಿಷ್ಣುವಿಗೇ ಇರುತ್ತದೆ. ಹೀಗೆ ಪೈಂಗಿ ಶ್ರುತಿಯಲ್ಲಿ ಹೇಳಲಾಗಿರುತ್ತದೆ. ಅವಶಃ ಅ ಶಬ್ದಕ್ಕೆ ನಾರಾಯಣನೆಂದು ಅರ್ಥವಾಗುವುದರಿಂದ ನಾರಾಯಣನ, ಪರಮಾತ್ಮನ ಅಧೀನದಲ್ಲಿರುವವನಾಗಿಯೇ ಅಂದರೆ ಪರಮಾತ್ಮನ ಪ್ರೇರಣೆಯಿಂದಲೇ ಕರ್ಮವನ್ನು ಮಾಡುತ್ತಾನೆ ಎಂದು ಹೇಳಿರುತ್ತಾರೆ. ಪ್ರಕೃತಿಶಬ್ದಕ್ಕೆ ಕೆಲವೆಡೆಗಳಲ್ಲಿ ತ್ರಿಗುಣಾತ್ಮಕವಾದ ಜಡಪ್ರಕೃತಿ ಎಂದೂ, ಕೆಲವೆಡೆಗಳಲ್ಲಿ ಪ್ರಕೃಷ್ಟ ಕರ್ತನಾದ ಪರಮಾತ್ಮನೆಂದೂ ಅರ್ಥವಾಗುತ್ತದೆ. ಕೆಲವು ಕಡೆಗಳಲ್ಲಿ ಸ್ವಭಾವವೆಂದೂ ಸಹ ಅರ್ಥವಾಗುತ್ತದೆ. ತ್ರಿವಿಧ ಜೀವರಿಗೆ ತ್ರಿವಿಧ ಸ್ವಭಾವ ಗುಣಗಳಿರುತ್ತವೆ. ತತ್ತ್ವಜ್ಞಾನ, ವಿಷ್ಣುಭಕ್ತಿ ಮುಂತಾದುವುಗಳು ದೇವತೆಗಳಲ್ಲಿರುವ ಸ್ವಭಾವಗುಣಗಳು. ದೇವತೆಗಳು ಉತ್ತಮರು. ಮನುಷ್ಯರಲ್ಲಿ ಮಧ್ಯಮರು ಮಧ್ಯಮರೆನಿಸಿಕೊಳ್ಳುವರು. ಮನುಷ್ಯಾಧಮರು ಅಧಮರೆನಿಸಿ ಕೊಳ್ಳುತ್ತಾರೆ. ಹೀಗೆ ಅವರವರ ಸ್ವಾಭಾವಿಕ ಗುಣಗಳನ್ನು ಕೇವಲ ನಿಮಿತ್ತಮಾಡಿ ಪ್ರಕೃಷ್ಟ ಕರ್ತನಾದ ಶ್ರೀಹರಿಯು ತನ್ನ ಇಚ್ಛಾ ಮುಂತಾದ ಗುಣಗಳಿಂದ ಮಾಡಿ ಮಾಡಿಸಿರುವ ಕರ್ಮಗಳನ್ನೆಲ್ಲ ನಾನೇ ಸ್ವತಂತ್ರನಾಗಿ ಮಾಡಿರುತ್ತೇನೆ ಎಂದು ಅಜ್ಞನು ತಿಳಿಯುತ್ತಾನೆ. ತತ್ವಜ್ಞನು ಮಾತ್ರ ಹೀಗೆ ತಿಳಿಯುವುದಿಲ್ಲ. ಶ್ರೀಹರಿಯ ಇಚ್ಛಾ ಮುಂತಾದ ಗುಣಗಳು ಜೀವರ ಕಾಮ ಮುಂತಾದ ಸ್ವಾಭಾವಿಕ ಗುಣಗಳಲ್ಲಿ ಪ್ರೇರಕರೂಪದಿಂದ ಯಾವಾಗಲೂ ಇರುತ್ತವೆ. ಸ್ವಾತಂತ್ರ್ಯವು ತನಗೆ ತುಸುವಾದರೂ ಇಲ್ಲ. ಹೀಗೆ ತಿಳಿದು ಕರ್ಮಗಳ ಫಲ ಹಾಗೂ ಕರ್ತೃತ್ವದಲ್ಲಿ ಅಸಂಗನಾಗಿರುತ್ತಾನೆ. ಇಂಥ ತತ್ತ್ವಜ್ಞನ ಅಸಂಗ ಕರ್ಮಗಳಿಗೆ ಪ್ರಭುವಾದ ನಾರಾಯಣನು ಪ್ರೀತನಾಗುತ್ತಾನೆ ಎಂದು ಗೀತಾ ತಾತ್ಪರ್ಯದಲ್ಲಿ ಹೇಳಲಾಗಿರುತ್ತದೆ.

ಗೀತೆಯ ೧೪ನೆಯ ಅಧ್ಯಾಯದಲ್ಲಿ ನಾನ್ಯಂ ಗುಣೇಭ್ಯಃ ಕರ್ತಾರಂ ಎಂದು ಮುಂತಾದ ಮೂರು ಶ್ಲೋಕಗಳಲ್ಲಿ ಈ ಸತ್ವ ಮುಂತಾದ ಗುಣಗಳಿಂದ ಬೇರೆಯಾಗಿರುವ ಕರ್ತೃವಾದ ಈಶ್ವರನೆನಿಸಿದ ಶ್ರೀನಾರಾಯಣನನ್ನು ಯಾವಾಗ ತಿಳಿಯು

ತ್ತಾನೋ ಕಾಣುತ್ತಾನೋ, ಆವಾಗ ಮಾತ್ರವೇ ಅವನು ಮನುಷ್ಯನೆನಿಸಿಕೊಳ್ಳು ತ್ತಾನೆ. ಇಲ್ಲದಿದ್ದರೆ ನಾರಾಯಣನ ಕರ್ತೃತ್ವವನ್ನು ತಿಳಿಯದಿದ್ದರೆ ಅವನು ಪಶುಸಮಾನನಾಗುತ್ತಾನೆ. ಪ್ರಕೃತಿ ಗುಣಗಳಿಂದ ಭಿನ್ನನೆಂದು ತಿಳಿದಮಾತ್ರಕ್ಕಷ್ಟೆ ಅವನು ಪುರುಷನಾಗುವುದಿಲ್ಲ. ಈಶನಾದವನು ಶ್ರೀವಿಷ್ಣು, ಅವನೇ ಕರ್ತೃ, ಅವನು ಗುಣಗಳಿಂದ ಅತ್ಯಂತ ಉತ್ತಮನು ಎಂದು ಆ ಪರಮಾತ್ಮನನ್ನು ಅರಿತ ವನು ಮಾತ್ರ ಮನುಷ್ಯನೆನಿಸುತ್ತಾನೆ. ಯಾಕೆಂದರೆ, ಹೀಗೆ ತಿಳಿದವನೇ ಭಗವ ತ್ಪ್ರಾಪ್ತಿರೂಪವಾದ ಮೋಕ್ಷವನ್ನು ಹೊಂದುತ್ತಾನೆ. ಭಗವತ್ಪ್ರಾಪ್ತಿಯೋಗ್ಯನೇ ಮನುಷ್ಯನು. ಯಾವುದು ಅತಿಶಯವಾಗಿ ಬಹುವಾಗಿ ಮಾಡುತ್ತದೆಯೋ ಅದಕ್ಕೆ ಪ್ರಕೃತಿ ಎನ್ನುತ್ತಾರೆ. ಪ್ರಕೃತಿಯೆಂದು ಹೇಳಿಸಿಕೊಳ್ಳುವ ಶ್ರೀಮಹಾಲಕ್ಷ್ಮಿಗೆ ಸೃಷ್ಟಿ ಕಾಲದಲ್ಲಿ ಮೂರು ರೂಪಗಳಿರುತ್ತವೆ. ಸದ್ಗುಣ ಪ್ರಭಾಗಳಿಂದ ಕೂಡಿರು ವದರಿಂದ ಶ್ರೀರೂಪವು ಸತ್ವವೆನಿಸುತ್ತದೆ. ಭೂರೂಪವು ಮೊದಲು ಅವ್ಯಕ್ತ ವಾದುದನ್ನು ವ್ಯಕ್ತಗೊಳಿಸುವ ಸೃಷ್ಟಿಯಿಂದ ರಂಜನ ಮಾಡುವದರಿಂದ ರಜ ಎಂದು ಹೇಳಲ್ಪಡುತ್ತದೆ. ಪಂಚಭೂತಾವರವಾದ ಪೃಥ್ವಿಯಲ್ಲಿರುವ ಪೃಥ್ವಿಎಂಬ ದೇವತೆಯಲ್ಲಿ ಈ ಭೂಮಕ ಲಕ್ಷ್ಮೀರೂಪದ ಆವೇಶವಿರುವದರಿಂದ ಭೂಮಿ ಎಂದು ಕರೆಯುತ್ತಾರೆ. ಸಂಸಾರದಲ್ಲಿಟ್ಟು ಗ್ಲಾನಿಪಡಿಸುವದರಿಂದ ತಮ ಎಂದು ಶ್ರೀಮಹಾಲಕ್ಷ್ಮೀಯ ದುರ್ಗಾರೂಪಕ್ಕೆ ಹೆಸರು ಬಂದಿದೆ. ಈ ಮೂರು ರೂಪಗಳಿಂದ ಅಮುಕ್ತಿಗರು = ಮುಕ್ತರಾಗದವರೆಲ್ಲರೂ ಬಂಧಿಸಲ್ಪಟ್ಟವರೇ ಆಗಿರುತ್ತಾರೆ. ಈ ಮೂರು ರೂಪಗಳು ಎಲ್ಲರನ್ನೂ ಸಾಮಾನ್ಯವಾಗಿ ಬಂಧಿಸು ತ್ತಿದ್ದರೂ ಸಹ, ಶ್ರೀರೂಪವು ವಿಶೇಷವಾಗಿ ದೇವತೆಗಳಿಗೆ ಬಾಧಕವಾಗಿರುತ್ತದೆ. ಭೂರೂಪವು ಮನುಷ್ಯರಿಗೆ ಬಂಧಕವಾಗಿರುತ್ತದೆ. ದುರ್ಗಾರೂಪವು ದೈತ್ಯರಿಗೆ ಬಂಧಕವಾಗಿರುತ್ತದೆ. ಹೀಗೆ ಶ್ರೀಭೂದುರ್ಗಾ ದೇವತೆಗಳಾಗಿ ಸರ್ವರನ್ನೂ ಬಂಧಿಸಲು ಸಮರ್ಥರಾದುದರಿಂದ ಇವುಗಳೇ ಸರ್ವಕರ್ತೃಗಳು, ಇವುಗಳ ಹೊರ ತಾಗಿ ಬೇರೆ ಯಾರೂ ಕರ್ತರಲ್ಲ ಎಂಬುದಾಗಿ ಜ್ಞಾನವಿರುವವರೆಗೂ ಅವನು ನರ ಪಶುವೆನಿಸುತ್ತಾನೆ. ಆದುದರಿಂದ ಇವುಗಳಿಗಿಂತಲೂ ಎಂದರೆ ಶ್ರೀಮಹಾಲಕ್ಷ್ಮೀ ಯಕಿಂತಲೂ ಅತ್ಯಂತ ಅಧಿಕವಾದ ಗುಣವುಳ್ಳವನೂ, ಸರ್ವೋತ್ತಮನೂ, ಭಿನ್ನನೂ ಎಂದು ಪರಮಾತ್ಮನನ್ನ ಯಾವಾಗಲೂ ತಿಳಿಯಬೇಕು ಎಂದು ಮಹಾ ವಿಷ್ಣು ಪುರಾಣದಲ್ಲಿ ನಿರೂಪಿತವಾಗಿರುತ್ತದೆ. ಶ್ರೀ—ಭೂ—ದುರ್ಗಾ ಎಂಬ

ಮಹಾಲಕ್ಷ್ಮೀಯ ರೂಪಗಳಿಂದ ಹಾಕಲ್ಪಟ್ಟ ಸಂಸಾರರೂಪ ಬಂಧವನ್ನು ತಪ್ಪಿಸಿ ಕೊಂಡವನು ಗುಣಾತ್ಯಯೀ ಎಂದು ಹೇಳಿಸಿಕೊಳ್ಳುತ್ತಾನೆ. ಹೀಗೆ ಮಹಾಲಕ್ಷ್ಮೀ ಕೃತವಾದ ಬಂಧವನ್ನು ತಪ್ಪಿಸಿಕೊಂಡು ದಾಟಿ ಆ ಮಹಾಲಕ್ಷ್ಮೀಗಿಂತಲೂ ಅಧಿಕ ತಮನಾದ ಭಗವಂತನನ್ನು ಪಡೆದಿರುವುದರಿಂದ ಆ ಜ್ಞಾನಿಯು ಗುಣಾತ್ಯಯೀ ಲಕ್ಷ್ಮೀ—ತದ್ಗುಣಾತ್ಯಯೀ ಎಂದು ಹೇಳಿಸಿಕೊಳುತ್ತಾನೆ. ದ್ವಾರಪಾಲಕರಿಂದ ಮಾಡಲ್ಪಟ್ಟ ಬಂಧವನ್ನು ಅತಿಕ್ರಮಿಸಿ ಮುಂದೆ ಹೋಗುವವನೇ ದ್ವಾರಪಾಲಕ ನನ್ನು ಅತಿಕ್ರಮಿಸಿ ರಾಜನ ಹತ್ತಿರ ಹೋಗುತ್ತಾನೆ. ರಾಜನ ಬಳಿಗೆ ಹೋಗುವ ವನು ದ್ವಾರಪಾಲಕರನ್ನು ಅತಿಕ್ರಮಿಸಿ ಹೋಗುವವನು ಎಂದು ಹೇಗೆ ಹೇಳು ತ್ತಾರೋ ಹಾಗೆ ಲಕ್ಷ್ಮೀಕೃತ ಬಂಧನವನ್ನು ದಾಟಿ ಪರಮಾತ್ಮನನ್ನು ಹೊಂದಿದ ವನು ಲಕ್ಷ್ಮೀಯನ್ನು ಅತಿಕ್ರಮಿಸಿದವನೆಂದು ಹೇಳಿಸಿಕೊಳ್ಳುತ್ತಾನೆ. ಅಂದರೆ ಮಹಾಲಕ್ಷ್ಮೀಯನ್ನು ಹೊಂದಿ ಆಕೆಯ ಅನುಗ್ರಹವನ್ನು ಪಡೆದು ಅದರ ದ್ವಾರ ದಿಂದ ಶ್ರೀಹರಿಪ್ರಾಪ್ತಿಯನ್ನು ಹೊಂದುತ್ತಾನೆ ಎಂದು ವಿಶಿಷ್ಟ ಭಾವವಿರುತ್ತದೆ. ಲಕ್ಷ್ಮೀ ಪರಮಾತ್ಮರಿಗೆ ನಿತ್ಯಾವಿಯೋಗವಿರುವುದರಿಂದ ಲಕ್ಷ್ಮೀಯ ಹತ್ತಿರ ಬಂದು ಆಕೆಯ ಅನುಗ್ರಹದಿಂದ ಭಗವತ್ಪ್ರಾಪ್ತಿಯಾಗುತ್ತದೆ ಎಂದು ಭಗವತ್ಪ್ರಾಪ್ತಿಯ ಕ್ರಮವನ್ನು ತಿಳಿಯಬೇಕು.

ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ ಎಂಬ ಗೀತಾ ಶ್ಲೋಕದ ಭಾಷ್ಯದಲ್ಲಿ ಪ್ರಕೃತೇಃ ಎಂಬ ಶ್ಲೋಕದಿಂದ ಜ್ಞಾನಿಯು ಹಾಗೂ ಅಜ್ಞಾನಿಯ ಕರ್ಮಗಳಲ್ಲಿರುವ ಭೇದವನ್ನು ತಿಳಿಸುತ್ತಾರೆ. ಪ್ರಕೃತೇಃ ಗುಣೈಃ ಎಂಬ ಪದಗಳಿಗೆ ಪ್ರಕೃತಿಯಗಿಂತಲೂ ಅಮುಖ್ಯಗಳಾದ ಮತ್ತು ಪ್ರಕೃತಿಕಾರ್ಯ ಗಳಾದ ದೇಹ ಇಂದ್ರಿಯ ಮನೋಬುದ್ಧಿಗಳಿಂದ ಎಂದು ಅರ್ಥವನ್ನು ನಿರೂಪಿಸಿ ರುತ್ತಾರೆ. ದೇಹೇಂದ್ರಿಯ ಮನೋಬುದ್ಧಿಗಳಿಂದ ಮಾಡಲ್ಪಡುವ ಕರ್ಮಗಳಿಗೆ ಜೀವನೂ ಕರ್ತನಾಗಿರುವದರಿಂದ ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ ಅಹಂಕಾರದಿಂದ ನಾನೇ ಮಾಡುತ್ತೇನೆ ಎಂದು ತಿಳಿಯುತ್ತಾನೆ ಎಂದು ಕರ್ತೃತ್ವಜ್ಞಾನಿಯಾದವನನ್ನು ಅಜ್ಞನೆಂದು ಕರೆಯುವುದು ಹೇಗೆ ಯುಕ್ತವಾ ದೀತು ? ಎಂಬ ಸಂದೇಹಕ್ಕೆ—ನ ಹಿ ಪ್ರತಿಬಿಂಬಸ್ಯ ಕ್ರಿಯಾ ಎಂಬ ವಾಕ್ಯದಿಂದ ದಿಂದ ಶ್ರೀಮದಾಚಾರ್ಯರು ಉತ್ತರಿಸಿದ್ದಾರೆ. ಪ್ರತಿಬಿಂಬನೆನಿಸಿದ—ಪರಮಾತ್ಮನ

ಅಧೀನನೆನಿಸಿದ ಜೀವನು ಯಾವುದಕ್ಕೂ ಸ್ವತಂತ್ರ ಕರ್ತನಾಗುವುದಿಲ್ಲ. ಎಂದು ಅಭಿಪ್ರಾಯವನ್ನು ತಿಳಿಸಿ-ದೇಹೇಂದ್ರಿಯ ಮನಸ್ಸುಗಳಿಂದ ಭಗವದಿಚ್ಛೆಯಿಂದ ಆಗುವ ಕರ್ಮಗಳಿಗೆಲ್ಲ ನಾನು ಸ್ವತಂತ್ರಕರ್ತನು ಎಂದು ಅಜ್ಞಾನಿಯು ತಿಳಿಯುತ್ತಾನೆ. ಜ್ಞಾನಿಯು ಮಾತ್ರ ಹೀಗೆ ತಿಳಿಯದೇ–ಈಶ್ವರನ ಇಚ್ಛಾ ಮುಂತಾದ ಗುಣಗಳನ್ನು ತನ್ನ ದೇಹೇಂದ್ರಿಯ ಸ್ವಭಾವ ಮನಸ್ಸುಗಳಲ್ಲಿ ಪ್ರೇರಕರೂಪದಿಂದ ಇರುವವೆಂದು ತಿಳಿದು ಕರ್ಮಗಳನ್ನು ಆಚರಿಸಿ ಅವುಗಳಿಂದ ಬದ್ಧನಾಗುವುದಿಲ್ಲ. ಇದೇ ಜ್ಞಾನಿ ಅಜ್ಞಾನಿಕೃತ ಕರ್ಮಗಳಲ್ಲಿರುವ ಮಹದಂತರ.

ಮಯಿ ಸರ್ವಾಣಿ ಕರ್ಮಾಣಿ ಸನ್ಯಸ್ಯಾಧ್ಯಾತ್ಮಚೇತಸಾ ಎಂಬ ಗೀತಾ ಶ್ಲೋಕದ ಭಾಷ್ಯದಲ್ಲಿಯೂ ವಿದ್ವದನುಷ್ಠಿತವಾದ ಕರ್ಮವು ಹೀಗೆ (ಹಿಂದೆ ಹೇಳಿದಂತೆ) ಇರುವುದರಿಂದ, ಅರ್ಜುನನೇ ! ನಾನೇ ಮಾಡುವವನೆಂದು ಭ್ರಾಂತಿಯಿಂದ ತನ್ನಲ್ಲಿ ಆರೋಪಿಸಿಕೊಳ್ಳುವ ಸಕಲ ಕರ್ಮಗಳನ್ನೂ ಪರಮಾತ್ಮನೆ ನನ್ನಲ್ಲಿ ನಿಂತು ಕರ್ಮಗಳನ್ನು ಸ್ವತಂತ್ರವಾಗಿ ಮಾಡುತ್ತಾನೆ ಎಂದು ಶ್ರೀಕೃಷ್ಣನಲ್ಲಿ(ನನ್ನಲ್ಲಿ) ಸಮರ್ಪಿಸಬೇಕು. ಇದೇ ಕರ್ಮಸನ್ಯಾಸ. ಪರಮಾತ್ಮನಾದ ಶ್ರೀಕೃಷ್ಣನಲ್ಲಿ ಭಕ್ತಿಯಿಂದ ಚೇತಸ್ಸಿಗೆ ಅಧ್ಯಾತ್ಮ ಚೇತಸ್ಸು ಎಂದು ಅರ್ಥ. ಈ ಕರ್ಮಗಳನ್ನು ಭಗವತ್ಪೂಜಾ ರೂಪಗಳೆಂದು ಹರಿಯಲ್ಲಿ ಸಮರ್ಪಿಸಬೇಕು. ನಾನು ಮಾಡುವವನಲ್ಲ ಎಂದು ಮಮಕಾರವನ್ನು ಬಿಡುವುದೇ ನಿರ್ಮಮತ್ವವು. ಭಗವಂತನು ಮಾಡುತ್ತಾನೆ ಎಂದು ಭಗವಂತನಲ್ಲಿ ಕರ್ಮಕರ್ತೃತ್ವವನ್ನು ತಿಳಿಯುವದು ಕರ್ಮಸನ್ಯಾಸವೆನಿಸಿಕೊಳುತ್ತದೆ, ಎಂದು ಶ್ರೀಮದಾಚಾರ್ಯರು ನಿರೂಪಿಸಿದ್ದಾರೆ

ನಾನ್ಯಂ ಗುಣೇಭ್ಯಃ ಕರ್ತಾರಂ ಎಂಬಲ್ಲಿ ಭಾಷ್ಯದಲ್ಲಿ ವಿಕಾರ ರೂಪವಾದ ಕರ್ತೃತ್ವ ಪರಾಧೀನವಾದ ಪ್ರಕೃತಿಯ ಗುಣಗಳಿಗೇ ಹೊರತು ಉಳಿದವರಿಗಲ್ಲ. ಸ್ವತಂತ್ರರೂಪ ಕರ್ತೃತ್ವವು ಶ್ರೀಹರಿಗೇ ಎಂದು ಅರ್ಥ ಹೇಳಿರುತ್ತಾರೆ ಗುಣಗಳೇ ಸ್ವತಂತ್ರ ಕರ್ತೃಗಳು, ಉಳಿದವುಗಳಲ್ಲ ಎಂದು ಅರ್ಥ ಹೇಳಿದರೆ ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಂ ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಮ್ ಎಂಬ ಶ್ರುತಿಯಲ್ಲಿ ಪ್ರಕೃತಿಯಗುಣ ಭಿನ್ನನಾದ ಈಶನು ಕರ್ತನೆಂದು ಹೇಳುವುದ

ರಿಂದ ಶ್ರುತಿ ವಿರೋಧ ಬರುತ್ತದೆ. ಹಾಗೂ ಮೋಕ್ಷ ಧರ್ಮದಲ್ಲಿ ನಾನು (ಜೀವನು) ಸ್ವತಂತ್ರ ಕರ್ತನಲ್ಲ, ನೀನೂ (ಇನ್ನೊಬ್ಬ ಜೀವನು) ಕರ್ತನಲ್ಲ, ಸರ್ವ ಸ್ವತಂತ್ರನು ನಿಯಾಮಕ ಪ್ರಭುವೇ ಸದಾ ಸರ್ವಕರ್ತನು. ಮಿಕ್ಕವರು ಸ್ವತಂತ್ರರಲ್ಲ ಎಂದು ಹೇಳಿದುದರಿಂದ ಅದರ ವಿರೋಧವೂ ಬರುತ್ತದೆ ಎಂದು ಶ್ರೀಭಗವತ್ಪಾದರು ನಿರೂಪಿಸಿರುತ್ತಾರೆ.

ಹೀಗೆ ಪ್ರಕೃತವಾದ ಜೀವನ ಮೋಕ್ಷಸಾಧನವಾದ ನಿರ್ಗುಣೋಪಾಸ್ತಿಯನ್ನು (ಶಾಸ್ತ್ರಾನುಗುಣವಾಗಿ ಅದೃಷ್ಟ ಗುಣಗಳನ್ನು ಭಗವಂತನಲ್ಲಿ ಅನುಚಿಂತಿಸುತ್ತ ಅವನ ಕರ್ತೃತ್ವವನ್ನು ಸರ್ವತ್ರದಲ್ಲಿ ತಿಳಿಯುತ್ತ ಸರ್ವಸಮರ್ಪಣರೂಪ ಉಪಾಸನೆಯನ್ನು ಮಾಡುವದು) ಅಭಿಪ್ರಾಯದಲ್ಲಿ ತಂದು ಶ್ರೀವಿಷ್ಣುತೀರ್ಥರು ತಮ್ಮ ಅಧ್ಯಾತ್ಮರಸರಂಜನಿಯಲ್ಲಿ ಭಾರತಭೂಮಿಯಲ್ಲಿ ವಿಪ್ರಜನ್ಮವು ದುರ್ಲಭವೆಂದು ನೀನು ಬಗೆದರೆ ದೇವಪೂಜಾತ್ಮಕ ಕರ್ಮಗಳನ್ನು ಆಚರಿಸಿ ಅವುಗಳನ್ನು ಪರಮಾತ್ಮನೇ ಸ್ವತಂತ್ರವಾಗಿ ಮಾಡಿದ್ದಾನೆ, ನಾನು ಅವನ ಅಧೀನನಾಗಿ ಅವನಿಂದ ಮಾಡಿಸಿದಂತೆ ಮಾಡಿರುತ್ತೇನೆ ಎಂದು ಭಗವಂತನಲ್ಲಿ ಸಮರ್ಪಿಸು ಎಂಬುದಾಗಿ ನಿರೂಪಿಸಿರುತ್ತಾರೆ.

ನಿರ್ಗುಣೋಪಾಸನೆಯ ವಿಷಯವನ್ನು ಹೀಗೆ ಸಂಗ್ರಹಿಸಿ ನಿರೂಪಿಸಿದ್ದೇವೆ. ಸಾರಗ್ರಾಹಿಗಳಾದ ಬುಧರು ದೂಷಿಸಿದರೆ ಅದು ದೂಷಣವೆನಿಸದು ಭೂಷಣವೆನಿಸುತ್ತದೆ. ನನಗೆ ಆಗ್ರಹವಿಲ್ಲ.

ದುರ್ಗಮಃ—ದುಃಖಸಾಧ್ಯವಾದ ದ್ರವ್ಯ ಸಂಪತ್ತುಗಳನ್ನು ಒದಗಿಸಿಕೊಡುವವನು ಎಂದು ಬೃಹತೀ ಮಂತ್ರಾನುಗುಣವಾದ ಅರ್ಥ. ಅಥವಾ ಗೀತಾತಾತ್ಪರ್ಯದಲ್ಲಿ ಋಗ್ಯಜುಸ್ಸಾಮಗಳೆಂಬ ಮೂರು ವೇದಗಳಲ್ಲಿ ಹೇಳಲ್ಪಟ್ಟ ನಾನಾ ದೇವತಾಪೂಜನ ರೂಪವಾದ ಇನ್ನೊಂದು (ಅಮುಖ್ಯವಾದ) ಧರ್ಮವಿರುತ್ತದೆ. ಇದರಲ್ಲಿಯೂ ಸಹ ತನ್ನ ಗುಣಪೂರ್ಣತೆಯಿಂದ ಜೀವ-ಜಡಾತ್ಮಕ ಸಕಲ ಪ್ರಪಂಚದಿಂದ ಅತ್ಯಂತ ಉತ್ಕೃಷ್ಟನು ಎಂದು ನಾರಾಯಣನನ್ನು ತಿಳಿಯಬೇಕು. ವೇದಗಳಲ್ಲಿ ಆಪಾತತಃ (ಮೇಲೆ ಮೇಲೆ) ತೋರುವ ಸ್ವರ್ಗಾದಿಗಳನ್ನುದ್ದೇಶಿಸಿ ಅನ್ಯದೇವತೆಗಳನ್ನು ಭಜಿಸಬೇಕೆಂದು ತಿಳಿದು ಅದರಂತೆಯೇ ಆ

ಕರ್ಮಗಳನ್ನಾಚರಿಸಿ ಕೊನೆಯಲ್ಲಿ ನಾರಾಯಣನಲ್ಲಿ ಸಮರ್ಪಿಸುವವನು ತ್ರೈವಿದ್ಯ ನೆನಿಸಿಕೊಳ್ಳುತ್ತಾನೆ. ಈ ತ್ರೈವಿದ್ಯನು ಹೀಗೆ ಕರ್ಮಾನುಷ್ಠಾನ ಮಾಡಿ ಅದರಿಂದ ಸ್ವರ್ಗವನ್ನು ಕುರಿತು ಹೋಗುತ್ತಾನೆ. ಪುಣ್ಯಕ್ಷಯವಾದ ನಂತರ ಪುನಃ ಭೂಮಿಗೆ ಇಳಿದು ಪುನಃ ವೇದಗಳಲ್ಲಿ ಆಪಾತತಃ ತೋರುವ ಸಕಾಮಕರ್ಮಗಳನ್ನು ಹಿಂದೆ ಹೇಳಿದಂತೆ ಆಚರಿಸಿ ಪುನಃ ಸ್ವರ್ಗವನ್ನು ಸೇರುತ್ತಾನೆ. ಹರಿಯ ವಶದಲ್ಲಿ ಸರ್ವ ದೇವತೆಗಳಿರುವರೆಂದು ತಿಳಿದು ವಿಷ್ಣುದ್ವೇಶಕವಾದ ಕರ್ಮಗಳನ್ನು ನಿಷ್ಕಾಮ ವಾಗಿ ಮಾಡುವವರೆಗೂ ಈ ಪುನರಾವೃತ್ತಿಯನ್ನು ಹೊಂದುತ್ತಲೇ ಇರುತ್ತಾನೆ. ಭಗವಂತನ ಸ್ವರೂಪವನ್ನು ಯಥಾರ್ಥವಾಗಿ ತಿಳಿಯದಿರುವದರಿಂದಲೂ, ಅನ್ಯ ಧರ್ಮಗಳನ್ನು ಆಚರಿಸುವದರಿಂದಲೂ ಸ್ವರ್ಗ ಮುಂತಾದುವುಗಳನ್ನು ಬೇಡುವದ ರಿಂದಲೂ ರಾಗದ್ವೇಷಗಳ ನಿಶ್ಶೇಷನಾಶವಾಗದ್ದರಿಂದಲೂ ಸರ್ವಕಾರ್ಯಗಳಲ್ಲಿ ಸದಾ ವಿಷ್ಣುವಿನ ಸ್ಮರಣೆಯಾಗದಿರುವದರಿಂದಲೂ (ಮರವು ಆಗುವದರಿಂದ) ತ್ರೈವಿದ್ಯನು ಭಗವಂತನನ್ನು ಹೊಂದುವದಿಲ್ಲ ಎಂದು ಶ್ರೀಮದಾಚಾರ್ಯರು ನಿರೂಪಿಸಿರುತ್ತಾರೆ. ಆದುದರಿಂದ ತ್ರೈವಿದ್ಯರಿಗೆ ದುರ್ಗಮ (ಹೊಂದಲಶಕ್ಯವಾಗಿ ರುವದರಿಂದ) ನಾದುದರಿಂದ ದುರ್ಗಮ ಎಂದು ಕರೆಯುತ್ತಾರೆ. ॥ ೧೮ ॥

## ೫. ಶ್ರೀಗುರುಹೃದಯಪ್ರಕಾಶಿಕೆ

**ನಿರ್ಗುಣೋಪಾಸಕಗೆ** ಎಂದರೆ, ತ್ರಿಗುಣಕ್ರಿಯವೂ ದೇವರಧೀನವೆಂದು, ಜೀವಸ್ವಾತಂತ್ರ್ಯಾಭಿಮಾನವಿಲ್ಲದೆ, ದೇವರ ಸ್ವಾತಂತ್ರ್ಯಗುಣೋಪಾಸಕ ಮುಕ್ತಿ ಯೋಗ್ಯನಿಗೆ ಗುಣಸಂಸರ್ಗದೋಷವೆಂಬ ಅಭಿಮಾನಿಕ್ರಿಯಾಜನ್ಯ ಸುಖದುಃಖಾ ದಿಗಳನ್ನು ಕೊಡದೆ, ಅಪವರ್ಗವೆಂಬ ಮುಕ್ತಸ್ಥಾನದಲ್ಲಿಟ್ಟು, ಸ್ವರೂಪಸುಖ ವ್ಯಕ್ತಿಕೊಟ್ಟು ರಕ್ಷಿಸುವನು. ತ್ರೈವಿದ್ಯರೆಂಬ ತ್ರಿಗುಣಕರ್ಮ ತಮ್ಮದೆಂಬ ಅಭಿಮಾನ ಬದ್ಧಜೀವರಿಗೆ, ದುರ್ಗಮನು ಎಂದರೆ, ತ್ರಿಗುಣಾತೀತನಾದ ದೇವರು ದೊರಕುವ ನಲ್ಲ. ಸ್ವರ್ಗ ಭೂನರಕಗಳಲ್ಲಿ ಪುಣ್ಯಪಾಪ ಮಿಶ್ರಫಲಗಳನ್ನು ಕೊಡುತ್ತಾ, ಸದಾ ಎಂದರೆ, ಯಾವಾಗಲೂ ತಿರುಗಿಸುವನು. ಜೀವರ ತತ್ತತ್ಸ್ವಭಾವ ವ್ಯತ್ಯಾಸ ಮಾಡದೆ ರಕ್ಷಿಸುವುದರಿಂದ ದೇವರು ಕೃಪಾಸಾಂದ್ರ ಎಂದರೆ, ಕೃಪಾಪೂರ್ಣನೆಂದು ಅರ್ಥ. ಇದರಿಂದ,

**ಶುಭೇನಕರ್ಮಣಾ ಸ್ವರ್ಗಂ ನಿರಯಂ ಚ ವಿಕರ್ಮಣಾ ||**
**ಮಿಥ್ಯಾಜ್ಞಾನೇನ ಚ ತಮೋಜ್ಞಾನೇನೈವ ಪರಂಪದಂ ||**
ಎಂಬ ಅಣುಭಾಷ್ಯಾರ್ಥವೂ,
**ನ ಚ ರಮಂತ್ಯಹೋ ಅಸದುಪಾಸನಯಾತ್ಮಹನೋ ||**
ಎಂಬ ಭಾಗವತಾರ್ಥವೂ ಹೇಳಲ್ಪಟ್ಟಿತು. || ೧೮ ||

## ಸರ್ವವ್ಯಾಖ್ಯಾನಸಾರಸಂಗ್ರಹ

ಜೀವರು ಸತ್ತ್ವ ರಜ ಮತ್ತು ತಮ ಎಂಬ ಪ್ರಾಕೃತ ಗುಣತ್ರಯಗಳಿಂದ ಬದ್ಧರು. ಶ್ರೀಪರಮಾತ್ಮನಾದರೋ ಅಪ್ರಾಕೃತಪುರುಷ. ನಿರತಿಶಯವಾದ ಜ್ಞಾನಾನಂದಾದಿ ಅನಂತಕಲ್ಯಾಣಗುಣಸಂಪನ್ನನು. ನಿರ್ದೋಷಗಳಾದ ಜ್ಞಾನಾನಂದಮಯ ಶರೀರವುಳ್ಳವನು. ಈ ಕಾರಣದಿಂದ ಪರಮಾತ್ಮನಿಗೆ ನಿರ್ಗುಣನೆಂದು ಹೆಸರು. ನಿರ್ಗುಣನೆಂದರೆ ಗುಣರಹಿತನೆಂದರ್ಥವಲ್ಲ. ಗುಣವಿಲ್ಲದೇ ವಸ್ತುವಿಲ್ಲ. ಶ್ರೀಪರಮಾತ್ಮನು ಪ್ರಾಕೃತಗುಣಶೂನ್ಯನು, ಆದರೆ ಅಪ್ರಾಕೃತವಾದ ಅನಂತ ಕಲ್ಯಾಣಗುಣಗಣಪರಿಪೂರ್ಣನು.

ಈ ರೀತಿಯಲ್ಲಿ ಪ್ರಾಕೃತಗುಣರಹಿತನೆಂದು ಶ್ರೀಶನನ್ನು ಉಪಾಸಿಸುವವರಿಗೆ ನಿರ್ಗುಣೋಪಾಸಕರೆಂದು ಹೆಸರು. ನಿರ್ಗುಣೋಪಾಸಕರು ಶ್ರೀಹರಿಯ ಅಂತರಂಗ ಭಕ್ತರು. ಅಂತಹವರಿಗೆ ತ್ರಿಗುಣಗಳ ಸಂಪರ್ಕವನ್ನು ಕಳೆದು ಅವರ ಸ್ವರೂಪಗತ ಸುಖವನ್ನು ಅಭಿವ್ಯಕ್ತಿಗೊಳಿಸುವನು, ಮೋಕ್ಷದಶಾ ಪೂರ್ವದಲ್ಲಿ, ಅಂತಹ ನಿರ್ಗುಣೋಪಾಸಕರನ್ನು ಲಿಂಗದೇಹಗತ ತ್ರಿಗುಣಗಳ ಸಂಪರ್ಕವನ್ನು ತಪ್ಪಿಸಿ ಕರ್ಮಲೇಪವಾಗದಂತೆ ಜೀವನ್ಮುಕ್ತರನ್ನಾಗಿ ಮಾಡುವನು.

ಸಕಾಮರಾಗಿ ಸತ್ಕರ್ಮಗಳನ್ನು ಆಚರಿಸುವ ಸಾತ್ವಿಕರಿಗೆ ಸ್ವರ್ಗಲೋಕದಲ್ಲಿ ಭೋಗಭಾಗ್ಯರೂಪವಾದ ಸುಖವನ್ನು ಕೊಡುವನು. ನಿತ್ಯಸಂಸಾರಿಗಳಾದ ಮಾನವರಿಗೆ ಸುಖದುಃಖಮಿಶ್ರವಾದ ಗತಿಯನ್ನು ಪಾಲಿಸಿ ಭೂಲೋಕದಲ್ಲಿ ಸಂಚರಿಸುವಂತೆ ಮಾಡಿಸುವನು. ಭಗವದ್ದ್ವೇಷಿಗಳಾದ ತಮೋಯೋಗ್ಯರಿಗೆ ನರಕಾದ್ಯನರ್ಥಗಳನ್ನು ಕೊಟ್ಟು, ನರಕಲೋಕ, ಅಂಧಂತಮಸ್ಸು ಲೋಕಗಳಲ್ಲಿಟ್ಟು, ನಿತ್ಯ ದುಃಖಫಲರೂಪವಾದ ಗತಿಯನ್ನೀಯುವನು. || ೧೮ ||

# ಪದ್ಯ ೧೯

**ಮೂಲ**

**ಮೂವರೊಳಗಿದ್ದರು ಸರಿಯೆ ಸುಖ ।**
**ನೋವುಗಳು ಸಂಬಂಧವಾಗವು ।**
**ಪಾವನಕೆ ಪಾವನ ಪರಾತ್ಪರ ಪೂರ್ಣಸುಖವನನಿಧಿ ॥**
**ಈ ವನರುಹಭವಾಂಡದೊಳು ಸ್ವಕ ।**
**ಜೀವರ ತದಾಕಾರವಮಾಡಿ ಪ ।**
**ರಾವರೇಶ ಚರಾಚರಾತ್ಮಕ ಲೋಕಗಳ ಪೊರೆವ ॥ ॥ ೧೯ ॥**

**ಅವತರಣಿಕೆ**

ತ್ರಿವಿಧ ಜೀವರಲ್ಲಿದ್ದರೂ ಸಹ, ಶ್ರೀಹರಿಯು ಜೀವರನ್ನು ಬಾಧಿಸುವ ತ್ರಿಗುಣಗಳ ಭಾವಣೆಗಳಿಂದ ದೂರನಾಗಿದ್ದಾನೆ. ಜೀವರಲ್ಲಿ ಜೀವಾಂತರ್ಯಾಮಿಯಾಗಿ ಜೀವರನ್ನು ಸಂರಕ್ಷಿಸುತ್ತಿರುವನೆಂದು ತಿಳಿಸುತ್ತಾರೆ. ॥ ೧೯ ॥

**ಪ್ರತಿಪದಾರ್ಥ**

**ಮೂವರೊಳಗಿದ್ದರು** = ಸಾತ್ವಿಕ-ರಾಜಸ-ತಾಮಸರೆಂಬ ತ್ರಿವಿಧರಾದ ಜೀವರಲ್ಲಿ ಬಿಂಬರೂಪವಾಗಿದ್ದರೂ, **ಸರಿಯೆ** = ಕೂಡ (ಕಾಲಕ್ಕೂ), **ಸುಖ ನೋವುಗಳು** = ಮುಕ್ತಿಯೋಗ್ಯರು ಭೋಗಿಸತಕ್ಕ ಆನಂದವೇನು, ತಮೋಯೋಗ್ಯರ ಭೋಗಯೋಗ್ಯವಾದ ದುಃಖವೇನು, **ಸಂಬಂಧವಾಗವು** = ಬಿಂಬನಾದ ಪರಮಾತ್ಮನಿಗೆ ಯಾವ ರೀತಿಯಲ್ಲೂ ಸಂಪರ್ಕವಾಗುವುದಿಲ್ಲ. **ಪಾವನಕೆಪಾವನ** = ಪವಿತ್ರ ವಸ್ತುಗಳಿಗಿಂತಲೂ ಪರಮಪವಿತ್ರನಾದ, (ಸಮಸ್ತದೋಷವಿದೂರನಾದ), **ಪರಾತ್ಪರ** = ಜೀವೋತ್ತಮರಾದ ಬ್ರಹ್ಮ ವಾಯುಗಳಿಂದ ಉತ್ತಮರಾದ ರಮಾದೇವಿಯರಿಗಿಂತಲೂ ಉತ್ತಮೋತ್ತಮನಾದ, **ಪೂರ್ಣಸುಖವನನಿಧಿ** ಪರಿಪೂರ್ಣವಾದ, ನಿರತಿಶಯವಾದ ಅಪರಿಚ್ಛಿನ್ನವಾದ ಆನಂದಾದಿ ಗುಣಸಾಗರ

ನಾದ ಶ್ರೀಪರಮಾತ್ಮನು, **ಈ ವನರುಹವಾಭಂಡದೊಳು** = ಈ ಬ್ರಹ್ಮಾಂಡದಲ್ಲಿ (ವನ–ನೀರು. ವನರುಹ–ನೀರಿನಲ್ಲಿ ಉತ್ಪನ್ನವಾದ ಕಮಲ. ವನರುಹಭವ–ಕಮಲೋದ್ಭವರಾದ ಬ್ರಹ್ಮ) **ಸ್ವಕಳೇವರ** = ಸ್ವಕೀಯವಾದ ತನ್ನಿಂದ ಅಭಿನ್ನವಾದ ದೇಹವನ್ನು, **ತದಾಕಾರವಮಾಡಿ** = ಬ್ರಹ್ಮಾಂಡಗತ ಸಕಲಜೀವರಲ್ಲಿ ಜೀವಾಕಾರನಾಗಿ, ಜೀವಾಂತರ್ಯಾಮಿಯಾಗಿದ್ದು, **ಪರಾವರೇಶ** = ಶ್ರೀರಮಾದೇವಿ ಮತ್ತು ಬ್ರಹ್ಮ-ವಾಯುಗಳಿಗೆ ನಿಯಾಮಕನಾದ ಶ್ರೀಪರಮಾತ್ಮನು, **ಚರಾಚರಾತ್ಮಕ** = ಸ್ಥಾವರ ಜಂಗಮರಾದ ಚೇತನವರ್ಗ, ಜಡವಸ್ತುಗಳಿಂದ ಕೂಡಿದ, **ಲೋಕಗಳ** = ಚತುರ್ದಶಭುವನಗತ ಜೀವರನ್ನು, **ಪೊರೆವ** = ಸಂರಕ್ಷಿಸುವನು.

॥ ೧೯ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮ ತ್ರಿವಿಧರಲ್ಲಿ ವ್ಯಾಪ್ತನಾಗಿದ್ದರೂ ನಿರ್ಲಿಪ್ತನಾಗಿದ್ದು ಲೋಗರ ರಕ್ಷಿಸುತ್ತಾನೆಂತ ಹೇಳತಾರೆ.

ಲಿಂಗಭಂಗಾನಂತರ ಸುಖದುಃಖಮಿಶ್ರ ಅನುಭವ ಮಾಡತಕ್ಕ ಜೀವರಿಗೆ ಬಿಂಬನಾಗಿದ್ದ ಕಾಲಕ್ಕೂ ಆವರವರ ಸ್ವರೂಪಕ್ಕೆ ಸರಿಯಾಗಿ ಬಿಂಬನಾಗಿದ್ದಾನೆ, ವಿಷಮವಾಗಿ ಅಲ್ಲ ಎಂತ ಅರ್ಥ. ಮುಕ್ತಿಯೋಗ್ಯರು ತಮ್ಮ ಸ್ವರೂಪಯೋಗ್ಯತಾನುಸಾರ ಭೋಗಿಸತಕ್ಕ ಸುಖವೇನು, ತಮೋಯೋಗ್ಯರು ತಮ್ಮ ಸ್ವರೂಪಯೋಗ್ಯತಾನುಸಾರ ಭೋಗಿಸತಕ್ಕ, ದುಃಖವೇನು ಹಾಂಗೆ ಮಿಶ್ರಸುಖದುಃಖ ಅನುಭವಿಸತಕ್ಕ ನಿತ್ಯಸಂಸಾರಿಗಳ ಭೋಗವೇನು ಲಿಂಗಭಂಗಾನಂತರ ಜೀವರು ಭೋಗಮಾಡತಕ್ಕ ಈ ಮೂರು ಗುಣಗಳು ಅವರವರಿಗೆ ಬಿಂಬನಾದ ಪರಮಾತ್ಮಗೆ ಸಂಬಂಧವಾಗೋದಿಲ್ಲ. ಕಾರಣವೇನೆಂದರೆ ಪಾವನ ಎಂದರೆ ಅನಾದಿಯಿಂದ ತ್ರಿಗುಣಸಂಬಂಧವಿಲ್ಲದೆ ಪಾವನರಾಗಿರತಕ್ಕವರು ರಮಾದೇವಿಯರು. ಇಂಥಾ

ಪಾವನ ವಸ್ತುವಿನಕಿಂತಲೂ ಪಾವನನಾದ ಪರಮಾತ್ಮ ಪಾವನರಾದ ರಮಾದೇವಿಯರಿಗೆ ಬಿಂಬನಾಗಿ ಇದ್ದ ಕಾಲಕ್ಕೂ, ಆ ರಮಾದೇವಿಯರ ಸುಖ ಕೂಡ ತದಂತರ್ಗತನಾದ ಪರಮಾತ್ಮಗೆ ಸಂಬಂಧವಾಗೋದಿಲ್ಲ. ರಮಾಸುಖಾಪೇಕ್ಷಯಾ ಪವಿತ್ರತರವಾದ ಸ್ವಾಖ್ಯಸುಖವುಳ್ಳವ. ಇಂಥಾ ಸ್ವಾಖ್ಯವಾದ ಪಾವನಸುಖಕ್ಕೆ ಸಂಬಂಧಪಟ್ಟ ಪರಮಾತ್ಮ, ಜೀವೋತ್ತಮರಾದ್ಯ ಬ್ರಹ್ಮ ವಾಯುಗಳಿಂದ ಉತ್ತಮರಾದ ರಮಾದೇವಿಯರ ದೆಶೆಯಿಂದ ಉತ್ತಮವಾದ ಆನಂದ ಉಳ್ಳವ. ಪ್ರಳಯೋದಕ ಸಮುದ್ರದೋಪಾದಿಯಲ್ಲಿ ಆದ್ಯಂತಶೂನ್ಯಗಳಾದ ಅಪರಿಚ್ಛಿನ್ನವಾದ ಸುಖವುಳ್ಳವ. ಇಂಥಾ ಪರಮಾತ್ಮ, ನಾಭೀಕಮಲದಲ್ಲಿ ಉತ್ಪನ್ನವಾದ ಬ್ರಹ್ಮಾಭಿಮನ್ಯವಾದ ಬ್ರಹ್ಮಾಂಡದೊಳು, ತದ್ಗತ ಜೀವರ ಸ್ಥೂಲದೇಹದ ಒಳಗೆ, ಬ್ರಹ್ಮ-ವಾಯುಗಳಿಗಿಂತಲೂ ಉತ್ತಮರಾದ ರಮಾದೇವಿಯರಿಗೂ, ಅಚರವಾದ ಸಮಸ್ತ ಪದಾರ್ಥಗಳಿಗೂ ಸ್ವಾಮಿಯಾದ ಶ್ರೀಪರಮಾತ್ಮ ತನ್ನ ಸ್ವಕೀಯವಾದ ಅಭಿನ್ನವಾದ ದೇಹವನ್ನ, ಜೀವನ ಸ್ಥೂಲದೇಹಾಕಾರದಂತೆಯೂ, ಬ್ರಹ್ಮಾಂಡಾಕಾರದಂತೆಯೂ, ಈ ಬ್ರಹ್ಮಾಂಡಸ್ಥ ಅಧಿಷ್ಠಾನಭೂತವಾದ ಸಕಲ ಪದಾರ್ಥಗಳ ಆಕಾರದಂತೆಯೂ ಮಾಡಿ, ಆ ಅಧಿಷ್ಠಾನಾಂತರ್ಗತನಾಗಿ, ತದಾತ್ಮಕನಾಗಿ ಎಂದರೆ, ತದಾಕಾರ ತನ್ನಾಮದಿಂದ ಇದ್ದು, ಸ್ಥಾವರ ಜಂಗಮ ಜೀವರನ್ನು ಹಾಂಗೆ ಶುದ್ಧ ಜಡಗಳು ಏತಾದೃಶವಾದ ಪ್ರಾಣಿಗಳ ಸಂರಕ್ಷಣಮಾಡತಾನೇ ಇದ್ದ ಕಾಲಕ್ಕೂ, ಜೀವಭೋಗ್ಯವಾದ ಸುಖದುಃಖಾದಿಗಳಿಗೆ ತಾನು ಸಂಬಂಧಪಡದೆ, ಅಗ್ನಿವತ್ ಶುದ್ಧನಾಗಿ ಇರತಾನೆ ಎಂತ ತಾತ್ಪರ್ಯ. ॥ ೧೯ ॥

**೨. ಭಾವಪ್ರಕಾಶಿಕೆ**

ಶ್ರೀಪರಮಾತ್ಮನು ಬ್ರಹ್ಮಾದಿ ಸ್ಥಾವರಾಂತವಾದ ಸಕಲ ಪ್ರಾಣಿಗಳಿಗೂ ಸ್ವಾಮಿಯು. ಪೂರ್ಣ ಸುಖಸಮುದ್ರನು. ಜಲಧಿ ಎಂದು ಸಮುದ್ರನಿಗೆ ಹೆಸರುಂಟು. ವನಧಿ ಎಂದರೂ ಅದೇ ಅರ್ಥ. ಹೇಗೆಂದರೆ–ವನಂಭಾಸ ಪ್ರಕಾನನೇ ಎಂಬ ಕೋಶದಿಂದ ವನ ಶಬ್ದವು ಅಗ್ನಿ ಮೊದಲಾದವುಗಳಿಂದ ಹುಟ್ಟುವ ಪ್ರಕಾಶದಲ್ಲಿಯೂ, ನೀರಿನಲ್ಲೂ, ವನದಲ್ಲೂ ಬರುವುದು. ಆದ್ದರಿಂದ ಪೂರ್ಣಸುಖವನಧಿ ಅಂದರೆ ಪೂರ್ಣ ಸುಖಜಲಧಿ ಎಂದೇ ಅರ್ಥವೆಂದು ತಿಳಿಯಬೇಕು ವನರುಹ

ಭವಾಂಡವೆಂಬ ಶಬ್ದಕ್ಕೂ ಇದೇ ಅರ್ಥ. ಕಮಲಭವ ಅಂದರೆ ಕಮಲದಿಂದ ಹುಟ್ಟಿದವರು ಬ್ರಹ್ಮ. ಆ ಹೆಸರುಳ್ಳ ಅಂಡ ಅಂದರೆ ಬ್ರಹ್ಮಾಂಡವೆಂಬರ್ಥ. ಇಂತಹ ಬ್ರಹ್ಮಾಂಡದಲ್ಲಿ ಸ್ಥಾವರ ಜಂಗಮ ಪ್ರಾಣಿಗಳ ಆಕಾರಗಳನ್ನು ತಾನು ಧರಿಸಿ ಸಕಲರಲ್ಲಿಯೂ ಇದ್ದು ಎಲ್ಲರನ್ನೂ ರಕ್ಷಿಸುವನು. ॥ ೧೯ ॥

## ೩. ಭಾವದರ್ಪಣ

॥ ಮೂವರೊಳಗೇತಿ ॥ ೧೯ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದಿ

ಮೂವರೊಳು ಇತಿ ॥ ಸಾತ್ವಿಕಾದಿಷು ತ್ರಿಷು ॥ ವನಧಿ = ಸಮುದ್ರ. ಚರಾಚರ = ಚೇತನಾಚೇತನ ॥ ೧೯ ॥

### ಕನ್ನಡಾರ್ಥ

ಸಾತ್ವಿಕ ಮುಂತಾದ ಮೂರುವಿಧ ಜೀವರಲ್ಲಿ ಇದ್ದರೂ ಸಹ ಪವಿತ್ರ ವಸ್ತುಗಳಿಗೆ ಪವಿತ್ರತೆಯನ್ನು ತಂದುಕೊಡುವ ಪರಮಪವಿತ್ರ ಹಾಗೂ ಸರ್ವೋತ್ತಮನಾದ ಶ್ರೀಹರಿಯು ಪೂರ್ಣ ಸುಖಸಮುದ್ರನಾದುದರಿಂದ ಅವರಲ್ಲಿರುವ ಯಾವ ದೋಷಗಳ ಹಾಗೂ ಪ್ರಾಕೃತಗುಣ ಸಂಬಂಧವನ್ನು, ಲೇಪವನ್ನು ಹೊಂದುವುದಿಲ್ಲ. ಅವನು ಈ ಬ್ರಹ್ಮಾಂಡದಲ್ಲಿ ಬ್ರಹ್ಮಾಂಡಾಕಾರದ ವಿರಾಡ್ರೂಪವನ್ನು ತಾಳಿ ಜ್ಞಾನಾನಂದಮಯವಾದ ರೂಪಗಳಿಂದ ಚೇತನಾಚೇತನ ಪ್ರಪಂಚವನ್ನು ಪೊರೆಯುವನು,

ಮೂವರೊಳು = ಮೂರುವಿಧ ಜೀವರು, ಸಾತ್ವಿಕ-ರಾಜಸ-ತಾಮಸರು, ಇವರಲ್ಲಿ ಎಂದು ಅರ್ಥ. ಸುಖವನಧಿ = ಸುಖ ಸಮುದ್ರ. ಚರಾಚರ = ಚೇತನಾಚೇತನ ॥ ೧೯ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಅಂತರ್ಯಾಮಿಸ್ವಾಮಿಗೆ ಸ್ವಾತಂತ್ರ್ಯಾದಿ ಮಹಿಮೆಯಿಂದ ದುಃಖಾದಿ ಸಂಬಂಧವಿಲ್ಲವೆಂದು ಬೋಧಿಸುತ್ತಾರೆ, ಮೂವರೆಂದು. ತ್ರಿವಿಧಜೀವರಲ್ಲಿಯೂ ಪವಿತ್ರ

ಕ್ಷಿಲ್ಲ ಪವಿತ್ರತೆಯನ್ನು ಕೊಡುವ ಉತ್ತಮೋತ್ತಮನಾದ ಪೂರ್ಣಾನಂದಸಮುದ್ರನಾದ, ಪರಾವರರೆಂಬ ಶ್ರೇಷ್ಠನಿಕೃಷ್ಟಜೀವರಿಗೆಲ್ಲಾ ಸ್ವಾಮಿಯಾದ ದೇವರು ಇದ್ದಾಗ್ಯೂ, ಸುಖದುಃಖಾದಿಗಳು ಅವನನ್ನು ಬಂಧಿಸಲಾರವು. ಈ ವನರುಹಭವಾಂಡವೆಂಬ ಬ್ರಹ್ಮಾಂಡದಲ್ಲಿ ಸ್ವಕಳೇವರ ತದಾಕಾರವಮಾಡಿ ಎಂದರೆ, ಜ್ಞಾನಾನಂದಸ್ವರೂಪದಿಂದ ತತ್ತದಾಕಾರನಾಗಿ, ಜಡ ಚೇತನ ಸರ್ವರಲ್ಲಿಯೂ ಇದ್ದು ಚತುರ್ದಶ ಲೋಕಗಳನ್ನೂ ರಕ್ಷಿಸುವನು. ॥ ೧೯ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಹರಿಭಕ್ತಿಯುಳ್ಳ ಮುಕ್ತಿಯೋಗ್ಯರಾದ ಜೀವರು ಸಾತ್ವಿಕರು. ನಿತ್ಯಸಂಸಾರಿಗಳಾದ ಜೀವರು ಮಧ್ಯಮರಾದ ರಾಜಸರು. ಹರಿದ್ವೇಷ, ಹರಿಭಕ್ತರ ದ್ವೇಷ, ಹಿಂಸೆ, ಕ್ರೂರತ್ವಾದಿ ಗುಣಗಳಿಂದ ಯುಕ್ತರಾದ ತಮೋಯೋಗ್ಯ ಜೀವರು ತಾಮಸರು.

ಸರ್ವೇಶನು ಮೂರುವಿಧ ಜೀವರಲ್ಲಿ ಅಂತರ್ಯಾಮಿರೂಪದಿಂದ ವಿದ್ಯಮಾನನಾಗಿದ್ದಾನೆ. ಜೀವರ ಅಂತರ್ಗತನಾಗಿದ್ದಾಗ್ಯೂ, ಜೀವರು ಭೋಗಿಸುವ ತ್ರಿಗುಣಸಂಬಂಧವಾದ ಸುಖ, ಮಿಶ್ರ, ದುಃಖ ಇತ್ಯಾದಿ ಫಲಭೋಗಗಳು, ಅಪ್ರಾಕೃತಜ್ಞಾನಾನಂದಮಯನಾದ ಆ ಅಪ್ರಮೇಯನಿಗೆ ಲವಲೇಶವೂ ಇಲ್ಲ.

ಲೋಕದಲ್ಲಿ ಗಂಗಾನದಿ, ತುಳಸೀ, ಗೋವು, ಅಶ್ವತ್ಥ ಇತ್ಯಾದಿ ವಸ್ತುಗಳು ಪವಿತ್ರವೆನಿಸಿವೆ. ಇವುಗಳಲ್ಲಿ ಶ್ರೀಪರಮಾತ್ಮನು ವ್ಯಾಪ್ತನಾಗಿರುವುದರಿಂದಲೇ, ಅವುಗಳಿಗೆ ಪಾವಿತ್ರ್ಯಗುಣವಿರುವುದು. ಶ್ರೀರಮಾದೇವಿಯು ಪರಮಪವಿತ್ರಳು. ರಮಾದೇವಿಯಲ್ಲಿ ರಮಾರಮಣನು ಬಿಂಬನಾಗಿರುವುದರಿಂದಲೇ, ರಮಾ ಪವಿತ್ರಳೆಂದೆನಿಸುವಳು. ರಮಾದೇವಿಯರ ಸುಖವೂ ಸಹ ತದಂತರ್ಗತನಾದ ಪರಮಾತ್ಮನಿಗೆ ಸಂಬಂಧವಾಗುವುದಿಲ್ಲ. ಶ್ರೀಪರಮಾತ್ಮನು ಪವಿತ್ರತಮವಾದ ಸ್ವಾಖ್ಯಸುಖವುಳ್ಳವ. ಪರಮಾತ್ಮನು ಬ್ರಹ್ಮ ವಾಯು, ರಮಾದೇವಿಯರಿಂದ ಅನಂತಕೋಟಿ ಗುಣಾಧಿಕ್ಯವುಳ್ಳವನು. ವನನಿಧಿ ಎಂದರೆ ಸಮುದ್ರ ಎಂದರ್ಥ. ಅಪಾರವಾದ

ಸಮುದ್ರದಂತೆ ಪರಮಾತ್ಮನ ಆನಂದಾದಿ ಗುಣಗಳು ಅಪಾರ ಹಾಗೂ ಪರಿಪೂರ್ಣ.

ಪರಮಾತ್ಮನ ನಾಭೀಕಮಲದಲ್ಲಿ ಉತ್ಪನ್ನರಾದ ಬ್ರಹ್ಮದೇವರು ವನರುಹ ಭವರು. ಇದರಿಂದ ಚತ.ದರ್ಶಭುವನಾತ್ಮಕವಾದ ಬ್ರಹ್ಮಾಂಡವನರುಹಭವಾಂಡ.

ತನ್ನದೇ ಆದ ತನ್ನಿಂದ ಅಭಿನ್ನವಾದ ರೂಪಗಳಿಂದ, ಬ್ರಹ್ಮಾಂಡಗತ ಸಕಲವಸ್ತುಗಳಲ್ಲಿಯೂ ತತ್ತದಾಕಾರನಾಗಿ, ತದ್ರೂಪನಾಗಿ ಎಡಬಿಡದೆ ಪರಿ ಪೂರ್ಣನಾಗಿ ವ್ಯಾಪ್ತನಾಗಿದ್ದಾನೆ. ವಸ್ತುಗಳ ಅಂತರ್ಗತನಾಗಿದ್ದರೂ, ಶ್ರೀಪರ ಮಾತ್ಮನು ಲೋಕವಿಲಕ್ಷಣನು. ಸಕಲ ಜೀವ ಜಡವಸ್ತುಗಳಿಂದ ಅತ್ಯಂತ ಭಿನ್ನನು.

ಪರ ಎಂದರೆ ಲಕ್ಷ್ಮೀದೇವಿ. ಪರಾವರ ಎಂದರೆ, ಲಕ್ಷ್ಮೀದೇವಿಗಿಂತ ಅಧಮ ರಾದ ಬ್ರಹ್ಮವಾಯುಗಳು, (ಪರ ಅವರ) ಪರಾವರೇಶ ಎಂದರೆ ರಮಾದೇವಿ ಬ್ರಹ್ಮ-ವಾಯುಗಳಿಗೆ ಸ್ವಾಮಿಯಾದ ರಮೇಶನು. ಪರ + ಅವರ + ಈಶ ಎಂದು ಪದವಿಭಾಗ ಮಾಡಬೇಕು.

ಪರಮಾತ್ಮನು ಜೀವವರ್ಗ ಮತ್ತು ಜಡವರ್ಗಗಳಿಂದ ಕೂಡಿದ ಚತುರ್ದಶ ಭುವನಗಳಲ್ಲಿರತಕ್ಕ ಸಕಲ ಜೀವರಿಗೂ ಆಶ್ರಯಪ್ರದನು. ತನ್ನನ್ನೇ ನಂಬಿ ಸದಾ ಭಜಿಸುತ್ತಿರುವ ಸಜ್ಜನರನ್ನು ಸಂರಕ್ಷಿಸುವ ಕೃಪಾಸಮುದ್ರನು. ಅಖಿಳಕೋಟಿ ಬ್ರಹ್ಮಾಂಡನಾಯಕನಾದ ಅನಂತಮಹಿಮಾಗುಣಸಂಪನ್ನನು ಅಖಿಳಲೋಕಗತ ಜೀವರ ರಕ್ಷಕನೆಂದು ತಾತ್ಪರ್ಯ ॥ ೧೯ ॥

## ಪದ್ಯ ೨೦

### ಮೂಲ

ಅನಿಮಿತ್ತ ನಿರಂತರ ಸ್ವಾ ।
ಧೀನ ಕರ್ತೃತ್ವವನು ಮರೆದೇ ।
ನೇನು ಮಾಡುವುದೆಲ್ಲ ಹರಿ ಒಳಹೊರಗೆ ನೆಲೆಸಿದ್ದು ॥
ತಾನೆ ಮಾಡುವನೆಂದರಿದು ಮು ।
ದ್ದಾನೆಯಂದದಿ ಸಂಚರಿಸು ಪವ ।
ಮಾನವಂದಿತ ಒಂದರೆಕ್ಷಣ ಬಿಟ್ಟಗಲ ನಿನ್ನ ॥ ೨೦ ॥

### ಅವತರಣಿಕೆ

ಸಕಲಕರ್ಮಗಳನ್ನೂ ಬಿಂಬರೂಪನಾದ ಶ್ರೀಹರಿಯೇ ತಾನೇ ಮಾಡಿ, ಮಾಡಿಸುತ್ತಿರುವನೆಂದು ತಿಳಿದ ಉಪಾಸಕರಿಗೆ ಅಪ್ರಮೇಯನು ಒಂದರೆಕ್ಷಣ ಬಿಡದೆ ಸಂರಕ್ಷಿಸುವನು ಎಂದು ತಿಳಿಸುತ್ತಾರೆ.

### ಪ್ರತಿಪದಾರ್ಥ

**ಸ್ವಾಧೀನ ಕರ್ತೃತ್ವವನು** = ಜೀವನು ತಾನೇ ಸ್ವತಂತ್ರಕರ್ತನೆಂಬುದನ್ನು, **ಮರೆದು** = ಮರೆತವನಾಗಿ, **ಏನೇನು ಮಾಡುವುದೆಲ್ಲ** = ದೇಹೇಂದ್ರಿಯಗಳ ದ್ವಾರಾ ನಡೆಯುತ್ತಿರುವ ಸಕಲ ಕರ್ಮಗಳನ್ನೂ, **ಅನಿಮಿತ್ತ** = ಪ್ರತಿಫಲಾಪೇಕ್ಷೆಯಿಲ್ಲದವನಾದ, **ಹರಿ** = ಸರ್ವಪಾಪಪರಿಹಾರಕನಾದ ಶ್ರೀಪರಮಾತ್ಮನೇ, **ನಿರಂತರ** = ಪ್ರತಿಕ್ಷಣದಲ್ಲಿಯೂ (ಸರ್ವಕಾಲದಲ್ಲಿ) **ಒಳ ಹೊರಗೆ** = ಜೀವಾಂತರ್ಗತನಾಗಿ ಒಳಗೂ, ದೇಹಾಂತರ್ಗತನಾಗಿ ಹೊರಗೂ, ಬಾಹ್ಯ ದೇಹದಲ್ಲಿ ಸರ್ವತ್ರ, **ನೆಲೆಸಿದ್ದು** = ವಿದ್ಯಮಾನನಾಗಿದ್ದು,

**ತಾನೆ ಮಾಡುವನೆಂದು** = ಬಿಂಬಕ್ರಿಯಾದ್ವಾರಾ ತಾನೇ ಮಾಡಿ, ಸ್ಥೂಲದೇಹ ಗತ ತತ್ತ್ವದೇವತೆಗಳ ದ್ವಾರಾ ಪ್ರೇರಿಸಿ, ಮಾಡಿಸುತ್ತಾ ತದ್ದ್ವಾರಾ ಸ್ಥೂಲ ಕಾರ್ಯಗಳನ್ನು ಮಾಡಿ ಮಾಡಿಸುತ್ತಿರುವನು, **ಎಂದರಿತು** = ಎಂಬುದಾಗಿ ತಿಳಿದು, **ಮದ್ದಾನೆಯಂದದಿ** = ಮದಿಸಿದ ಆನೆಯಂತೆ, ನಿರ್ಭೀತನಾಗಿ ನಿಸ್ಸಂದೇಹ ಮನಸ್ಕನಾಗಿ, **ಸಂಚರಿಸು** = ದ್ವಂದ್ವಾತೀತನಾಗಿ ಈ ಲೋಕದಲ್ಲಿ ಅಡ್ಡಾಡುತ್ತಿರು. **ಪವಮಾನವಂದಿತ** = ಬ್ರಹ್ಮ-ವಾಯುಗಳಿಂದ ನಮ್ಯನಾದ ಶ್ರೀಹರಿಯು, **ನಿನ್ನ** = ಅಧಿಕಾರಿಯಾದ ಜೀವನನ್ನು, **ಒಂದರೆಕ್ಷಣ** = ಕ್ಷಣಲವ ಕಾಲವಾದರೂ, **ಬಿಟ್ಟಗಲ** = ಅವಿಯೋಗನಾಗಿ ಎಡಬಿಡದೆ ಇರುತ್ತಾನೆ. ॥೨೦॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪರಾಧೀನಕರ್ತನೆಂದು ತಿಳದು ಸರ್ವಕರ್ಮವ ಮಾಡಿದರೆ, ಪರಮಾತ್ಮ ಸಂರಕ್ಷಣ ಮಾಡತಾನಂತ ಹೇಳತಾರೆ.

ಪರಮಾತ್ಮ ಸ್ವತಂತ್ರ, ಸರ್ವಕರ್ತ, ಬ್ರಹ್ಮಾದಿ ತೃಣಾಂತ ತ್ರಿವಿಧ ಜೀವರು ಪರಾಧೀನಕರ್ತೃತ್ವ ಉಳ್ಳವರು ಎಂದು ತಿಳದು ಮತ್ತು ಅಹಂ ಕರ್ತಾ ಎಂಬುದನ್ನ ಮರೆತು, ಐಹಿಕಫಲಾಪೇಕ್ಷೆಯಿಲ್ಲದೆ ದಾವಕರ್ಮವೂ ಈಶಪ್ರೀತಿಪೂರ್ವಕವಾಗಿ, ಪ್ರತಿದಿನದಲ್ಲೂ, ಪ್ರತಿಕ್ಷಣಲವಕಾಲದಲ್ಲೂ ಮಾಡತಾ ಬರಬೇಕೆಂತಲೂ, ಸ್ವಾಧೀನಕರ್ತೃತ್ವವನ್ನು ಮರತವನಾಗಿ, ದೇಹೇಂದ್ರಿಯಗಳಿಂದ ಮಾಡತಕ್ಕ ಸಕಲ ಸತ್ಕರ್ಮಗಳೂ ತಥಾ ದುಷ್ಕರ್ಮಗಳೂ ಬಿಂಬರೂಪನಾದ ಪರಮಾತ್ಮ ಜೀವಾಂತರ್ಗತನಾಗಿಯೂ, ಸ್ಥೂಲದೇಹಾಂತರ್ಗತನಾಗಿಯೂ ಇದ್ದವನಾಗಿ, ಜೀವಸ್ವರೂಪದಲ್ಲಿ ರಮಾಸಮೇತನಾಗಿ ಇದ್ದು, ಅಲ್ಲಿ ಇಚ್ಛಾರೂಪವಾದ ಪ್ರೇರಣೆ ಮಾಡಿ ನಂತರ ಸ್ಥೂಲದೇಹದಲ್ಲಿ ತತ್ತ್ವದೇವತೆಗಳಿಗೆ ಅದರನ್ನ ಪ್ರೇರಿಸಿ, ತದ್ದ್ವಾರಾ ಸ್ಥೂಲಕಾರ್ಯಗಳ ಮಾಡಸತಾನೆ ಎಂತ ತಿಳಿಯೋವನಾಗಿ, ಈ ಪ್ರಕಾರ ಅನುಸಂಧಾನ ಮಾಡತಾ ದ್ವಂದ್ವಸಹಿಷ್ಣುವಾಗಿ ಸಂಚಾರ ಮಾಡು. ಹೀಂಗೆ ಇದ್ದರೆ ನಿನ್ನ ಉದ್ಧಾರಮಾಡೋ ವಿಷಯದಲ್ಲಿ ತತ್ತ್ವಾಭಿಮಾನಿಗಳಾದ ಬ್ರಹ್ಮ-ವಾಯು

ಗಳಿಂದ ವಂದಿತನಾಗಿರುವ ಶ್ರೀಪರಮಾತ್ಮ ಅಧಿಕಾರಿಯಾದ ನಿನ್ನ ಕ್ಷಣಲವಕಾಲವಾದರೂ ಅವಿಯೋಗನಾಗಿ ಇರತಾನೆ. ಪರಮಾತ್ಮನ ಸಂದರ್ಶನರೂಪವಾದ ಅಪರೋಕ್ಷವಾಗತದೆ ಎಂತ ತಾತ್ಪರ. ॥ ೨೦ ॥

### ೨. ಭಾವಪ್ರಕಾಶಿಕೆ

ಪವಮಾನವಂದಿತ ಎಂಬ ವಿಶೇಷಣದಿಂದ ಪರಮಾತ್ಮನು ಎಲ್ಲರಲ್ಲಿಯೂ ಮುಖ್ಯಪ್ರಾಣಾಂತರ್ಯಾಮಿಯಾಗಿ ಇದ್ದು ಅವರದ್ವಾರಾ ಸಕಲ ವ್ಯಾಪಾರವನ್ನು ಮಾಡಿಸುವನೆಂದು ತಿಳಿದು ಭಜಿಸುವುದು ಅವಶ್ಯಕವೆಂದು ಸೂಚಿಸುತ್ತಾರೆ. ॥೨೦॥

### ೩. ಭಾವದರ್ಪಣ

॥ ಅನಿಮಿತ್ತೇತಿ ॥ ೨೦ ॥

### ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಈ (ಅ) ನಿಮಿತ್ತ ಇತಿ ॥ ೨೦ ॥

### ಕನ್ನಡಾರ್ಥ

ಸರ್ವತಂತ್ರ ಸ್ವತಂತ್ರನಾದ ಶ್ರೀಹರಿಯ ಸ್ವತಂತ್ರಕರ್ತೃತ್ವ ಕಾರಯಿತೃತ್ವವನ್ನು ತಿಳಿದು ತಾನು ಮಾಡುವ ಕರ್ಮಗಳನ್ನೆಲ್ಲ ಅವನ ಅಧೀನವಾಗಿ ಮಾಡಿದ್ವೇನೆಂದು ದೃಢವಾಗಿ ನಿಶ್ಚಯಿಸಿ ಸರ್ವತ್ರ ಹಾಗೆ ಅಚಲ ಭಕ್ತಿಯಿಂದ ಧ್ಯಾನಿಸುತ್ತ ಕರ್ಮಾಚರಣೆಯಲ್ಲಿ ಮಗ್ನನಾದವನನ್ನು ಶ್ರೀಹರಿಯು ಅರಕ್ಷಣ ಬಿಡದೇ ಸಂರಕ್ಷಿಸುವನು. ॥ ೨೦ ॥

### ೫. ಶ್ರೀಗುರುಹೃದಯಪ್ರಕಾಶಿಕೆ

ಜಡಚೇತನ ಸರ್ವತ್ರದೇವರು ವ್ಯಾಪ್ತಕ್ರಿಯಾವುಳ್ಳವನಾದ್ದರಿಂದ ಸದಾ ಸ್ವತಂತ್ರಕ್ರಿಯೆ ಜೀವರಿಗೆ ಇದೆ ಎಂಬುದನ್ನು ಮರೆತು, ಏನೇನು ಮಾಡುವ ಸರ್ವ

ಕ್ರಿಯೆಯಲ್ಲೂ, ಹರಿ ಒಳಹೊರಗೂ ಸ್ಥಿರವಾಗಿದ್ದು, ಸ್ವತಂತ್ರ ತಾನೇ ಮಾಡು ವನು. ಜೀವನು ತದಧೀನಕ್ರಿಯಾ ಮದ್ದಾನೆಯಂತೆ ಪರಾಧೀನನೆಂದು ತಿಳಿದು ನಡೆದರೆ, ಪ್ರಾಣವಂದಿತ ದೇವರು ಒಂದರಕ್ಷಣ ಬಿಡದೆ ಅನುಗ್ರಹಿಸುವನು.

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ॥**

–ಎಂಬ ಗೀತಾರ್ಥವು ವಿವರಿಸಲ್ಪಟ್ಟಿತು. ॥ ೨೦ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಅನಾದ್ಯನಂತಕಾಲದಿಂದ ಶ್ರೀಪರಮಾತ್ಮನು ಸಕಲಜೀವರಿಗೆ ಬಿಂಬರೂಪ ನಾಗಿ ಎಡಬಿಡದೆ ಇದ್ದಾನೆ. ನಿತ್ಯಾವಿಯೋಗಿಯಾದ ಬಿಂಬನು ಪ್ರತಿಬಿಂಬ ಸದೃಶ ರಾದ ತ್ರಿವಿಧ ಜೀವವರ್ಗಕ್ಕೆ ಅನಿಮಿತ್ತ ಬಂಧುವಾಗಿದ್ದಾನೆ. ಜೀವರಿಂದ ಈಶ ನಿಗೆ ಯಾವ ಪ್ರಯೋಜನವೂ ಇಲ್ಲ. ಆದರೆ ಸ್ವರೂಪತಃ ಅಸ್ವತಂತ್ರನಾದ ಜೀವ ನಿಗೆ ಬಿಂಬಪ್ರೇರಣೆಯಿಲ್ಲದೆ ಯಾವ ಕ್ರಿಯಾಕಲಾಪಗಳೂ ನಡೆಯಲಾರವು. ಬಿಂಬ–ಪ್ರತಿಬಿಂಬ ನಿತ್ಯ, ಸತ್ಯ ಹಾಗೂ ಅನಾದಿ. ಸರ್ವಕಾಲಗಳಲ್ಲಿ ಜೀವರನ್ನು ಎಡಬಿಡದೆ ಶ್ರೀಪರಮಾತ್ಮನು ಬಿಂಬನೆನಿಸಿದ್ದಾನೆ.

ಜೀವರು ಸ್ವರೂಪತಃ ಅಸ್ವತಂತ್ರರು. ಶ್ರೀಹರಿಯ ಪ್ರೇರಣೆಯಿಲ್ಲದೇ ಜೀವನ ಜ್ಞಾನಶಕ್ತಿಯಾಗಲೀ, ಇಚ್ಛಾಶಕ್ತಿಯಾಗಲೀ, ಕ್ರಿಯಾಶಕ್ತಿಯಾಗಲೀ ಅಭಿವ್ಯಕ್ತವಾಗಲಾರದು. ಪರಾಧೀನಕರ್ತೃತ್ವಶಕ್ತಿಯನ್ನುಳ್ಳ ಜೀವರು, ತಾವು ಸಮಸ್ತ ಕರ್ಮಗಳಿಗೂ ಕರ್ತರಲ್ಲ. ಬಿಂಬನಾದ ಶ್ರೀಹರಿಯೇ ಸರ್ವಪ್ರವರ್ತಕ, ಸರ್ವಪ್ರೇರಕ, ಸರ್ವಕರ್ತನೆಂದು ತಿಳಿಯಬೇಕು.

ಪೂರ್ವೋಕ್ತ ಅನುಸಂಧಾನಜ್ಞಾನವುಳ್ಳ ಜೀವನು ದ್ವಂದ್ವಾತೀತನು. ಅವ ನಿಗೆ ಕರ್ಮಗಳ ಲೇಪವಿಲ್ಲ. ನಿರ್ಗುಣಭಾವಾತ್ಮಕನಾಗಿರುತ್ತಾನೆ. ಮದಿಸಿದ ಆನೆ ಯು ಹೇಗೆ ನಿರ್ಭಯವಾಗಿ ಸಂಚರಿಸುವುದೋ, ಹಾಗೆ ಲೋಕದಲ್ಲಿ ಅಡ್ಡಾಡು ತ್ತಿರು ಎಂದು ತಿಳಿಸುತ್ತಾರೆ. ಬ್ರಹ್ಮ–ವಾಯುಗಳಿಂದ ವಂದಿತನಾದ ಪರಬ್ರಹ್ಮನು ಅಂತಹ ಭಕ್ತರನ್ನು ಎಡಬಿಡದೆ ಬೆಂಗಾವಲಾಗಿದ್ದು ಸಂರಕ್ಷಿಸುವನು ॥ ೨೦ ॥

## ಪದ ೨೧

**ಮೂಲ**

ಹಲವು ಕರ್ಮವ ಮಾಡಿ ದೇಹವ
ಬಳಲಿಸದೆ ದಿನದಿನದಿ ಹೃದಯಾ
ಮಲಸದನದಿ ವಿರಾಜಿಸುವ ಹರಿಮೂರ್ತಿಯನೆ ಭಜಿಸು ||
ತಿಳಿವದೀ ಪೂಜಾಪ್ರಕರಣವ
ಫಲ ಸುಪುಷ್ಪಾಗ್ರ್ಯೋದಕ ಶ್ರೀ
ತುಳಸಿದಳವರ್ಪಿಸಲು ಒಪ್ಪೋನು ವಾಸುದೇವ ಸದಾ || ೨೧ ||

**ಅವತರಣಿಕೆ**

ಹೃತ್ಪದ್ಮದಲ್ಲಿ ವಿರಾಜಮಾನವಾಗಿರುವ ಬಿಂಬರೂಪೀ ಶ್ರೀಹರಿಯನ್ನು ಕೊಂಡಾಡಬೇಕೆಂದು ಪೂಜಾಪ್ರಕರಣ ವಿಧಾನವನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಹಲವು ಕರ್ಮವ ಮಾಡಿ** = ಸಕಾಮನಾಗಿ, ಫಲಾಪೇಕ್ಷೆಯಿಂದ ನಾನಾ ಪರಿಯಾದ ಕರ್ಮಗಳನ್ನು ಆಚರಿಸಿ. **ದೇಹವ ಬಳಲಿಸದೆ** = ಈ ಸಾಧನಶರೀರ ವನ್ನು ವ್ಯರ್ಥವಾಗಿ ದಂಡಿಸದೆ, **ದಿನದಿನದಿ** = ಪ್ರತಿನಿತ್ಯವೂ, **ಹೃದಯ** = ಹೃದಯವೆಂಬ, **ಅಮಲಸದನದಿ** = ಪರಿಶುದ್ಧವಾದ ಅಷ್ಟದಳಯುಕ್ತವಾದ ಹೃತ್ಕಮಲವೆಂಬ ಮಂದಿರದಲ್ಲಿ, **ವಿರಾಜಿಸುವ** = ಪ್ರಕಾಶಮಾನನಾಗಿರುವ, **ಹರಿಮೂರ್ತಿಯನೆ** = ಬಿಂಬರೂಪಿಯಾದ ಶ್ರೀಪರಮಾತ್ಮನನ್ನು. **ಭಜಿಸು** = ಭಕ್ತಿಯಿಂದ ಕೀರ್ತಿಸು. **ಈ ಪೂಜಾಪ್ರಕರಣವ** = ಅನುಸಂಧಾನಪೂರ್ವಕವಾಗಿ, ಮಾಡುವ ಈ ಭಗವತ್ಪೂಜಾವಿಧಾನವನ್ನು **ತಿಳಿವದು** = ಅರಿಯಬೇಕು. **ಫಲ** = ಸುರಸೋಪೇತವಾದ ಅನಿಷಿದ್ಧ ಫಲಗಳನ್ನು, **ಸುಪುಷ್ಪ** = ಪರಿಮಳಯುಕ್ತವಾದ ಪುಷ್ಪಗಳನ್ನು, **ಅಗ್ರ್ಯೋದಕ** = ನಿರ್ಮಲವಾದ ನೀರು, **ಶ್ರೀತುಳಸಿದಳವ** =

ಲಕ್ಷ್ಮ್ಯಭಿಮನ್ಯಮಾನವಾದ ಶ್ರೀತುಳಸೀದಳಗಳನ್ನು, **ಅರ್ಪಿಸಲು** = ಕೊಟ್ಟರೆ **ವಾಸುದೇವ** = ಮೋಕ್ಷಪ್ರದನಾದ, ಸರ್ವತ್ರವ್ಯಾಪಕನಾದ ವಾಸುದೇವನಾಮಕ ಶ್ರೀಪರಮಾತ್ಮನು, **ಸದಾ ಒಪ್ಪೊಳ್ಳೇನು** = ಸರ್ವಕಾಲದಲ್ಲಿಯೂ ಸ್ವೀಕಾರಮಾಡುತ್ತಾನೆ. ॥ ೨೧ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಮುಖ್ಯವಾಗಿ ಮಾಡತಕ್ಕ ಕರ್ಮವನ್ನು ಹೇಳತಾರೆ. ಸರ್ವಕರ್ಮವೂ ಪರಮಾತ್ಮನ ಪೂಜಾ ಎಂತ ಹೇಳತಾರೆ.

ಅಹಂಮಮತಾಯುಕ್ತನಾಗಿ, ಸಕಾಮನಾಗಿ ಫಲಾಪೇಕ್ಷೆಯಿಂದ ಸಹಿತನಾಗಿ, ಅನೇಕ ಪುಣ್ಯಕರ್ಮಗಳ ಮಾಡಿ, ದೇಹಕ್ಕೆ ಆಯಾಸ ತಂದುಕೋಬ್ಯಾಡ ಎಂತ ತಾತ್ಪರ್ಯ. ಆದರೆ ಎಂಥಾ ಕರ್ಮ ಮಾಡಬೇಕೆಂದರೆ, ವೇದೋಕ್ತಾನುಸಾರ ಸಕಲ ಕರ್ಮಗಳ ನಿಷ್ಕಾಮನದಿಂದ ಮಾಡಿ, ಹೃದಯಾಕಾಶದಲ್ಲಿ ವಿದ್ಯಮಾನವಾದ ಅಷ್ಟದಳಕಮಲವೆಂಬ ಮನೆಯಲ್ಲಿ ಪ್ರಕಾಶಮಾನನಾಗಿರುವ ನಿರ್ಮಲನಾದ ನಿರ್ದೋಷಿಯಾದ ಬಿಂಬಮೂರ್ತಿಯಾದ ಶ್ರೀಪರಮಾತ್ಮನ್ನ, ಅಪರೋಕ್ಷಕ್ಕಾಗಿ ಪ್ರತೀ ಪ್ರತೀ ದಿನದಲ್ಲೂ ಪ್ರಾರ್ಥನಾ ಮಾಡೋವನಾಗು, ಕೀರ್ತನ ಮಾಡೋವನಾಗು. ಶ್ರೀಪರಮಾತ್ಮನ್ನ ಪೂಜಾಮಾಡತಕ್ಕ ವಿಧಿಯನ್ನ, ತಾನು ಶಾಸ್ತ್ರೋಪದೇಶಕ ಗುರುಗಳ ದ್ವಾರಾ, ತಂತ್ರಸಾರದಲ್ಲಿ ಉಕ್ತವಾದ ಪ್ರಕಾರ, ಪ್ರಥಮತಃ ಸುಲಕ್ಷಣವಾದ ಜಡರೂಪವಾದ ವಿಷ್ಣುಪ್ರತೀಕವನ್ನ ಪೂರ್ವೋಕ್ತ ಗುರುಗಳ ದ್ವಾರಾ ಅನುಗ್ರಹಪೂರ್ವಕ ಸಂಪಾದಿಸಿ, ಆ ಪ್ರತಿಮಾದಲ್ಲಿ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀನಾರಾಯಣದೇವರನ್ನ ಚಿಂತನಮಾಡಿ, ಪೀಠಾವರಣದೇವತೆಗಳ ಸಹ ತಿಳದು, ಸುರಸೋಪೇತವಾದ ನೈವೇದ್ಯಕ್ಕೆ ಯೋಗ್ಯವಾದ ಫಲಾದಿಗಳ, ಸುಗಂಧೋಪೇತವಾದ ಸಮೀಚೀನವಾದ ಪುಷ್ಪಗಳ, ನಿರ್ಮಲವಾದ ಸರ್ವತೀರ್ಥಾವಾಹನವಾದ ಉದಕ, ಲಕ್ಷ್ಮ್ಯಭಿಮನ್ಯಮಾನವಾದ ಶ್ರೀತುಳಸೀದಳಗಳು ಇವುಗಳಿಂದ ಪೂಜಾಮಾಡಿದರೆ, ಆದರೆ ಪೂಜಾದ್ರವ್ಯಾಂತರ್ಗತ ಪರಮಾತ್ಮಗೂ,

ಸಾಲಿಗ್ರಾಮಾಭಿಮಾನಿಯಾದ ಶ್ರೀವಾಸುದೇವಾಭಿನ್ನನಾದ ಪರಮಾತ್ಮ ಸರ್ವಕಾಲ ದಲ್ಲೂ ಸ್ವೀಕಾರ ಮಾಡತಾನಂತ ತಾತ್ಪರ್ಯ.

**ತಾತ್ಪರ್ಯ**— ಮೇಲೆ ಹೇಳಿದ ಪ್ರಕಾರವೇ ಹೃದಯಾಕಾಶದಲ್ಲಿ ಇದೇ ಪ್ರತಿಮಾ ವನ್ನ ನಿರ್ಮಾಣಮಾಡಿ, ಪೂರ್ವೋಕ್ತ ಪದಾರ್ಥಗಳಿಂದ ಮಾನಸಪೂಜಾ ಮಾಡ ಬೇಕು. ಮಾನಸಪೂಜಾ ಬಹಿಃ ಪೂಜಾ ಏಕಕಾಲವಚ್ಛೇದೇನ ಮಾಡಿದರೇನೇ ಪೂಜಾವೇ ಹೊರತು, ಅನ್ಯಥಾ ಪೂಜಾ ದೇವರು ಗ್ರಾಹ್ಯಮಾಡೋದಿಲ್ಲ. ಈ ಪ್ರಕಾರ ಪೂಜಾನುಸಂಧಾನದಿಂದ ವಾಸನಾಪರೋಕ್ಷಾನಂತರ, ಪ್ರತಿಮಾಕಾರ ಚಿದಾನಂದ ಅಪರೋಕ್ಷಾನಂತರ, ಜೀವಾಕಾರ ಸ್ಥೂಲದೇಹಗತ ಅಗ್ರೇಶನಾಮಕ ಬಿಂಬಾಪರೋಕ್ಷ. ಈ ಪ್ರಕಾರ ಮಾಡತಾ ಇದ್ದರೆ, ಲಿಂಗಭಂಗಾನಂತರ ತನ್ನ ಸ್ವರೂಪಭೂತ ಬಿಂಬಾಪರೋಕ್ಷವಾಗತದೆ. ಆದಕಡಿಯಿಂದ ಮುಖ್ಯವಾದ ಅನೇಕ ಸತ್ಕರ್ಮಗಳ ನಿಷ್ಕಾಮನಾಗಿ, ಈಶಪ್ರೀತಿಪೂರ್ವಕ ಮಾಡತಾ ಬರಬೇಕೆಂತ ತಾತ್ಪರ್ಯ ॥ ೨೧ ॥

**೩. ಭಾವಪ್ರಕಾಶಿಕೆ**

ನಾನಾವಿಧವಾದ ವ್ರತಗಳು, ಉಪವಾಸಗಳನ್ನು ಮಾಡಿ ದೇಹವನ್ನು ಶುಷ್ಕಮಾಡಿ ಮುಕ್ತಿಗೆ ಸಾಧನಭೂತವಾದ ಈ ಶರೀರವನ್ನು ಕೆಡಿಸಿಕೊಳ್ಳುವುದ ರಿಂದ ಫಲವಿಲ್ಲ. ನಿನ್ನ ಹೃದಯಕಮಲಮಂದಿರದಲ್ಲಿ ಶೋಭಿಸುವ ಬಿಂಬಮೂರ್ತಿ ಯಾದ ಶ್ರೀಹರಿಯೇ ಸರ್ವಕರ್ತನೆಂದು ತಿಳಿದು ಸರ್ವಸಮರ್ಪಣೆಯಿಂದ ಭಜಿಸು. ಇದೇ ಭಗವತ್ಪೂಜೆಯು. ಈ ಪೂಜಾಪ್ರಕರಣವನ್ನು ತಿಳಿಯದೆ ಬರೇ ಹುವ್ವು, ತುಳಸಿ ಗಂಧ, ಮೊದಲಾದ ಬಾಹ್ಯಪೂಜೆಯಿಂದ ಪರಮಾತ್ಮನು ಪ್ರೀತ ನಾಗುವುದಿಲ್ಲ. ಈ ವಾಕ್ಯದಿಂದ ಬಾಹ್ಯಪೂಜೆ ಮಾಡಬಾರದೆಂಬ ಅಭಿಪ್ರಾಯ ವಲ್ಲ. ಯಾವ ಕಾರ್ಯವನ್ನು ಮಾಡಿದರೂ ಪರಮಾತ್ಮನೇ ಕರ್ತಾ ಎಂಬ ಜ್ಞಾನ ವಿಲ್ಲದೇ, ನಾನು ಪೂಜೆ ಮಾಡಿದೆನು. ಹುವ್ವು, ತುಳಸಿ ತಂದು ಲಕ್ಷಾರ್ಚನೆ ಮಾಡಿ ದೆನು. ವಿಷ್ಣುಪಂಚಕೋಪಾಸ ಮಾಡಿರುತ್ತೇನೆ. ಭೀಷ್ಮಪಂಚಕ ಮಾಡಿರುತ್ತೇ ನೆಂದು ಸ್ವತಂತ್ರಕರ್ತೃತ್ವದಿಂದ ಮಾಡಿದುದಾಗಿ ಭಾವಿಸಿದರೆ ಮಾಡಿದುದೆಲ್ಲವೂ ನಿಷ್ಫಲವೇ ಹೊರ್ತು ಭಗವತ್ಪ್ರೀತಿ ಆಗುವುದಿಲ್ಲ. ॥ ೨೧ ॥

## ೩. ಭಾವದರ್ಪಣ

ಬಿಂಬಕ್ರಿಯಾ ತಿಳಿದು ಏನು ಮಾಡಿದಾಗ್ಯೂ ಶ್ರೀಹರಿಯು ಒಪ್ಪಿಕೊಳ್ಳುತ್ತಾನೆ. ಈ ಕ್ರಿಯಾ ತಿಳಿಯದೇ ಏನು ಮಾಡಿದಾಗ್ಯೂ ವ್ಯರ್ಥವೇ ಸರಿ ಎಂದು ಹೇಳುತ್ತಾರೆ.||ಹಲವು||ಅಮಲ ನಿರ್ಮಲ, ಸದನ ಮನೆ. ॥ ೨೧ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಹಲವು ಇತಿ ॥ ಬಳಲು–ಕಷ್ಟ । ಈ ಪೂಜಾ–ಅತ್ರ ಸಂಪ್ರದಾಯಕಾರಾಃ ತು ಮನ್ಯಂತೇ ॥ ಏಕಪಾತ್ರೇ ಸಾಲಿಗ್ರಾಮಪುರತಃ ಪ್ರಾಣಂ ಸಂಸ್ಥಾಪ್ಯ ಅಂತರ್ಯಾಮಿಬುದ್ಧ್ಯಾ ಹರಿಮಾರಾಧ್ಯ । ಪುನಃ ತನ್ನಿರ್ಮಾಲ್ಯ ಶೇಷೇಣ ಪ್ರಾಣಂ ಪೂಜಯೇತ್ ॥ ಯಥಾಹ ಭಗವಾನ್ ಗಾರುಡೇ–"ಪೂಜಾಕಾಲೇ ದೇವದೇವಸ್ಯ ವಿಷ್ಣೋಃ ವಾಯೋಃ ಪ್ರತೀಕಂ ತ್ವಗ್ರಭಾಗೇ ನಿಧಾಯ ॥ ಅಂತರ್ಗತಂ ತಸ್ಯ ವಾಯೋಃ ಹರಿಂ ಚ ಲಕ್ಷ್ಮೀಪತಿಂ ಪೂಜಯಿತ್ವಾ ಸುಸಮ್ಯಕ್ ॥ ನಿರ್ಮಾಲ್ಯ ಶೇಷೇಣ ಹರೇಃ ಸಮರ್ಪಯೇತ್ (ಸಮರ್ಚಯೇತ್) ॥ ಪುನಃ ಸ್ರಗ್‌ಧೂಪವಿ- ಲೇಪನಾದ್ಯಿಃ ಪೂಜಾಂ ಪ್ರಕುರ್ವಂತಿ ಚ ಯೇ ವಿಮೂಢಾಃ ॥ ತೇಷಾಂ ದುಃಖಂ ಇಹಲೋಕೇ ಪರತ್ರ॥ ಇತಿ ॥ ಅತ್ರ||ಕೇಚಿತ್ ॥ ಹರಿಪಾದೋದಕಂ ಪಾದಯೋಃ ಪತತಿ ಇತಿ ಭ್ರಾಂತ್ಯಾ ವೃಂದಾವನಾದೀನಾಂ ಕೇಶರಾದ್ಯ ವಿಮಿಶ್ರಿತಮೇವ ಅಭಿಷೇಚಯಂತಿ ॥ ತತ್ ತುಚ್ಛಂ ॥ ಉಕ್ತಮಾನ ಕೋಪಾತ್ ॥ ೨೧ ॥

### ಕನ್ನಡಾರ್ಥ

ಈ ಪೂಜಾಪ್ರಕರಣವ ಎಂದು ದಾಸರಾಯರು ನಿರೂಪಿಸಿರುತ್ತಾರೆ– ಈ ಪೂಜೆಯ ವಿಷಯದಲ್ಲಿ ಸಂಪ್ರದಾಯಕಾರರು ಹೀಗೆ ತಿಳಿಯುತ್ತಾರೆ. ಒಂದು ಪಾತ್ರೆಯಲ್ಲಿ ಸಾಲಿಗ್ರಾಮಗಳ ಮುಂಭಾಗದಲ್ಲಿ ಇನ್ನೊಂದು ಪಾತ್ರೆಯಲ್ಲಿ ಪ್ರಾಣದೇವರನ್ನು ಸ್ಥಾಪಿಸಿ (ಇಟ್ಟು) ಅದರಲ್ಲಿ ಅಂತರ್ಯಾಮಿಯಾಗಿರುವನೆಂಬ ಬುದ್ಧಿಯಿಂದ ಶ್ರೀಹರಿಯನ್ನು ಆರಾಧಿಸಿ ಮತ್ತೆ ಸಾಲಿಗ್ರಾಮಾದಿ ಆ ವಿಷ್ಣುವಿನ ಅಭೇದಚಿಂತನರೂಪವಾದ ಪೂಜಾ ಅರ್ಪಿಸಿದರೆ, ಪರಿದೃಶ್ಯಮಾನ ಪ್ರತಿಮಾ

ನಿರ್ಮಾಲ್ಯ ಶೇಷದಿಂದ ಮುಖ್ಯಪ್ರಾಣದೇವರನ್ನು ಪೂಜಿಸಬೇಕು. ಗರುಡಪುರಾಣದಲ್ಲಿ ಭಗವಂತನ ವಚನವಿಂತಿರುತ್ತದೆ. "ಪೂಜೆಯ ಕಾಲದಲ್ಲಿ—ದೇವದೇವನಾದ ಶ್ರೀವಿಷ್ಣುವಿನ ಮುಂಭಾಗದಲ್ಲಿ ವಾಯುದೇವರ ಪ್ರತಿಮೆಯನ್ನು ಇಟ್ಟು ತದಂತರ್ಗತನಾದ ಶ್ರೀ ಮಹಾಲಕ್ಷ್ಮೀಪತಿ ಹರಿಯನ್ನು ಸರಿಯಾಗಿ ಪೂಜಿಸಿ, ನಂತರ ಹರಿಯ ನಿರ್ಮಾಲ್ಯಶೇಷದಿಂದ ವಾಯುದೇವರನ್ನು ಪೂಜಿಸಬೇಕು. ಹರಿ ನಿರ್ಮಾಲ್ಯಶೇಷವನ್ನು ವಾಯುದೇವರಿಗೆ ಸಮರ್ಪಿಸಬೇಕು. ಪ್ರತ್ಯೇಕವಾಗಿ ಹರಿಗೆ ಸಮರ್ಪಿತವಾಗದಿರುವ ಬೇರೆ ಪುಷ್ಪ, ಗಂಧ, ಧೂಪ ಮೊದಲಾದುವುಗಳಿಂದ ವಾಯುದೇವರನ್ನು ಅರ್ಚಿಸಿದವರು ಅತ್ಯಂತ ಮೂಢರು. ಅವರಿಗೆ ಇಹಪರಗಳೆರಡರಲ್ಲಿಯೂ ದುಃಖವಾಗುತ್ತದೆ.

ಈ ಪೂಜಾಸಂದರ್ಭದಲ್ಲಿ ಕೆಲವರು ಶ್ರೀಹರಿಯ ಪಾದೋದಕವು ಪಾದಗಳಲ್ಲಿ ಬೀಳುವದೆಂಬ ಭ್ರಮೆಯಿಂದ ವೃಂದಾವನ ಮುಂತಾದವುಗಳಿಗೆ ಕೇಶರ ಮುಂತಾದುವುಗಳಿಂದ ಸಮ್ಮಿಶ್ರವಾಗದ ನೀರಿನಿಂದಲೇ ಅಭಿಷೇಚನ ಮಾಡುತ್ತಾರೆ. ಆದರೆ ಅದು ಸರಿಯಲ್ಲ. ಯಾಕೆಂದರೆ "ಹರಿ ನಿರ್ಮಾಲ್ಯಶೇಷದಿಂದಲೇ ಪೂಜಿಸಬೇಕು" ಎಂಬ ಪ್ರಮಾಣವಿರೋಧ ಬರುತ್ತದೆ. ॥ ೨೦ ॥

### ೫. ಶ್ರೀಗುರುಹೃದಯಪ್ರಕಾಶಿಕೆ

ಹೀಗೆ ತಿಳಿದು ನಡೆಯುವುದೇ ದೇವರ ಪೂಜೆ ಎಂದು ದೃಢಪಡಿಸುತ್ತಾರೆ, ಹಲವು ಎಂದು. ಹಲವು ಕರ್ಮವ ಮಾಡಿ ದೇಹವ ಬಳಲಿಸದೆ ಎಂದರೆ, ದೇವರ ಸ್ವಾತಂತ್ರ್ಯ ಸ್ಮರಣೆಯಿಲ್ಲದ್ದರಿಂದ, ದೇಹಾಯಾಸ ಮಾತ್ರೋಪಯೋಗಿಯಾದ, ನಿತ್ಯ ನೈಮಿತ್ತಿಕ ಕಾಮ್ಯವೆಂಬ ಬಹುಬಗೆ ಪುಣ್ಯಕರ್ಮಗಳನ್ನು ಮಾಡಿ ದಣಿಯದೆ, ಹೃದಯಾಮಲ ಸದನವೆಂದರೆ, ತನ್ನ ಹೃತ್ಕಮಲವೆಂಬ ಒಳಮನೆಯಲ್ಲಿಯೇ ಬೆಳಗುತ್ತಿರುವ ಶ್ರೀಹರಿಮೂರ್ತಿಯನ್ನು, ಆತ ಸರ್ವಕ್ರಿಯಾಕರ್ತನೆಂದೂ ತದಧೀನನಾದ ನನ್ನ ಕ್ರಿಯಾವೆಲ್ಲವೂ ದೇವರಪೂಜೆಯೆಂದೂ, ಭಜಿಸು ಎಂದರೆ, ಉಪಾಸನಾಪೂರ್ವಕವಾಗಿ ಪೂಜಿಸಿ ಸಮರ್ಪಿಸು ಈ ಪೂಜಾವಿಧಾನ ತಿಳಿಯದೆ, ಫಲಪುಷ್ಪಾಗ್ರ್ಯೋದಕ ಶ್ರೀತುಳಸಿ ಮೊದಲಾದ್ದು ಅರ್ಪಿಸಿದರೂ, ವಾಸುದೇವನು ಸರ್ವಕ್ರಿಯಾ ಅರ್ಪಿಸಿದ ಪೂಜೆಯಂತೆ ಸದಾ ಪ್ರೀತನಾಗಿ ಒಪ್ಪುವುದಿಲ್ಲ,

**ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮ ಚಾಖಿಳಮ್ ।**
**ತಥಾಪಿ ಮತ್ಕೃತಾ ಪೂಜಾ ತ್ವತ್ಪ್ರಸಾದೇನ ನಾನ್ಯಥಾ ॥**

ಎಂಬ ಗೀತಾರ್ಥವು ಇದರಿಂದ ವರ್ಣಿಸಲ್ಪಟ್ಟಿತು.

**ಯೇ ತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ ।**
**ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ ॥**

ಎಂಬ ಗೀತಾರ್ಥವೂ ವಿವರಿಸಲ್ಪಟ್ಟಿತು. ॥ ೨೧ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಜೀವರು ವಿಧ್ಯುಕ್ತವಾಗಿ ಮಾಡುವ ಕರ್ಮಗಳು ನಾನಾಪ್ರಕಾರವಾಗಿವೆ. ಅವುಗಳಲ್ಲಿ ನಿತ್ಯಕರ್ಮಗಳೆಂದೂ, ನೈಮಿತ್ತಿಕ ಕರ್ಮಗಳೆಂದೂ ಎರಡು ವಿಧ ಕರ್ಮಗಳು. ತ್ರಿಕಾಲಸಂಧ್ಯಾವಂದನೆ, ನಿತ್ಯದೇವಪೂಜಾ, ಗುರುಹಿರಿಯರಸೇವಾ, ಅತಿಥಿ ಸತ್ಕಾರ ಇತ್ಯಾದಿಗಳು ನಿತ್ಯಕರ್ಮಗಳು. ಕಾಲಕ್ಕನುಗುಣವಾಗಿ ಮಾಡುವ ಏಕಾದಶೀ ಉಪವಾಸ ವ್ರತ, ಚಾತುರ್ಮಾಸ್ಯಾದಿವ್ರತಗಳು, ಪಿತೃಕಾರ್ಯ ಇತ್ಯಾದಿಗಳು ನೈಮಿತ್ತಿಕಕರ್ಮಗಳು. ಇದಲ್ಲದೆ ಇಷ್ಟಾರ್ಥಗಳ ಪ್ರಾಪ್ತಿಗಾಗಿ ಮಾಡುವ ಯಜ್ಞಯಾಗಾದಿಗಳು, ಪ್ರಯೋವ್ರತಾದಿಗಳು ಇತ್ಯಾದಿಗಳು ಕಾಮ್ಯಕರ್ಮಗಳೆನಿಸುವುವು.

ಸರ್ವತಂತ್ರಸ್ವತಂತ್ರನಾದ ಶ್ರೀಪರಮಾತ್ಮನೇ ಕರ್ಮಪತಿಯು. ಕರ್ಮನಾಮಕನಾಗಿ ಜೀವರಲ್ಲಿದ್ದು, ಸರ್ವಕರ್ಮಗಳ ಮುಖ್ಯಪ್ರೇರಕನಾಗಿದ್ದಾನೆ. ಅವನ ಪ್ರೇರಣೆಯಿಲ್ಲದೆ ಕರ್ಮಾಭಿವ್ಯಕ್ತಿ ಇಲ್ಲ. ಆ ಕಂಜದಳಾಯತಾಕ್ಷನು ಜೀವರಲ್ಲಿದ್ದು ತತ್ತ್ವದೇವತೆಗಳ ದ್ವಾರಾ ಶುಭಕರ್ಮಗಳನ್ನೂ ಅಸುರರ ದ್ವಾರಾ ಪಾಪಕರ್ಮಗಳನ್ನೂ ಮಾಡಿ ಮಾಡಿಸುತ್ತಿರುವನು.

ಹರಿಯೇ ಸರ್ವಕರ್ತನು. ಜೀವರು, ಈ ಜ್ಞಾನಾನುಸಂಧಾನವಿಲ್ಲದೇ, ಕೇವಲ ಅಹಂಕಾರ ಮಮಕಾರಯುಕ್ತರಾಗಿ, ಸಕಾಮರಾಗಿ ವಿಧ್ಯುಕ್ತವಾದ ಹಲವು

ಸತ್ಕರ್ಮಗಳನ್ನು ಮಾಡಿ, ದೇಹವನ್ನು ಬಳಲಿಸುತ್ತಾ ನಾನೇ ಕರ್ತನೆಂಬ ಭಾವನೆಯಿಂದ ಮಾಡಿದ ಕರ್ಮಗಳು ವ್ಯರ್ಥವೇ ಹೊರತು, ಸತ್ಫಲಪ್ರದಗಳಲ್ಲ. ಹೀಗೆ ಜ್ಞಾನಶೂನ್ಯರಾಗಿ, ಕರ್ಮಗಳನ್ನು ಮಾಡಿ ದೇಹವನ್ನು ದಂಡಿಸಬಾರದೆಂದು ಕರ್ಮದ ರಹಸ್ಯವನ್ನು ತಿಳಿಸುತ್ತಾರೆ.

ಜೀವರ ಅನಾದಿಕರ್ಮಗಳಿಗನುಸಾರ, ಶ್ರೀಹರಿಯು ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಾನೆಂದು ತಿಳಿದು ಬಿಂಬನನ್ನು ಕೊಂಡಾಡುತ್ತಿರು, ಇದೇ ನಿಜವಾದ ಪೂಜಾಪ್ರಕರಣವು. ಈ ಪೂಜಾಪದ್ಧತಿಯನ್ನು ಜ್ಞಾನಾನುಸಂಧಾನದಿಂದ ಅರಿತು, ಸುರಸೋಪೇತವಾದ ನಾನಾಫಲಗಳು, ಸುಗಂಧಯುಕ್ತವಾದ ಪುಷ್ಪಗಳು, ರಮಾಸಾನ್ನಿಧ್ಯಯುಕ್ತವಾದ ಶ್ರೀತುಲಸಿಯನ್ನು ಅರ್ಪಿಸಲು, ವಾಸುದೇವನಾಮಕನಾದ ಶ್ರೀಹರಿಯು ಸ್ವೀಕರಿಸುವನು. ಜ್ಞಾನರಹಿತವಾದ ಪೂಜೆಯನ್ನು ಶ್ರೀಪರಮಾತ್ಮನು ಒಪ್ಪುವುದಿಲ್ಲ. ॥ ೨೦ ॥

## ಪದ್ಯ ೨೨

**ಮೂಲ:-**

ಧರಣಿ ನಾರಾಯಣನು ಉದಕದಿ ।
ತುರಿಯನಾಮಕ ಅಗ್ನಿಯೊಳು ಸಂ ।
ಕರುಷಣಾಹ್ವಯ ವಾಯುಗ ಪ್ರದ್ಯುಮ್ನನನಿರುದ್ಧ ॥
ಇರುತಿಹನು ಆಕಾಶದೊಳು ಮೂ ।
ರೆರಡು ರೂಪವ ಧರಿಸಿ ಭೂತಗ ।
ಳೆರೆಸುವನು ತನ್ನಾಮರೂಪದಿ ಪ್ರಜರ ಸಂತೈಪ ॥ ೨೨ ॥

**ಅವತರಣಿಕೆ**

ಪಂಚಭೂತಾಂತರ್ಗತನಾಗಿ, ಅವುಗಳ ರೂಪದಿಂದ ಆಯಾಯಾ ನಾಮದಿಂದ ಇದ್ದು, ಸ್ಥಾವರ–ಜಂಗಮರೂಪರಾದ ಪ್ರಾಣಿಗಳನ್ನು ರಕ್ಷಿಸುತ್ತಾನೆಂದು ತಿಳಿಸುತ್ತಾರೆ. ॥ ೨೨ ॥

**ಪ್ರತಿಪದಾರ್ಥ**

**ಧರಣಿ** = ಭೂಮಿಯಲ್ಲಿ, **ನಾರಾಯಣನು** = ನಾರಾಯಣರೂಪದಿಂದ, **ಉದಕದಿ** = ಅಪ್‌ಸಾಂಕೇತವಾದ ಜಲದಲ್ಲಿ, **ತುರಿಯನಾಮಕ** = ತುರ್ಯನಾಮಕನಾದ ವಾಸುದೇವರೂಪದಿಂದ, **ಅಗ್ನಿಯೊಳು** = ತೇಜೋರೂಪವಾದ ಅಗ್ನಿಯಲ್ಲಿ, **ಸಂಕರುಷಣಾಹ್ವಯ** = ಸಂಕರ್ಷಣನಾಮದಿಂದ, **ವಾಯುಗ** = ವಾಯುವಿನಲ್ಲಿ, **ಪ್ರದ್ಯುಮ್ನ** = ಪ್ರದ್ಯುಮ್ನರೂಪದಿಂದ, **ಆಕಾಶದೊಳು** = ಆಕಾಶದಲ್ಲಿ, **ಅನಿರುದ್ಧ** = ಅನಿರುದ್ಧನಾಮಕ ಶ್ರೀಪರಮಾತ್ಮನು, **ಮೂರೆರಡು ರೂಪವ ಧರಿಸಿ** = ಐದು ರೂಪಗಳಿಂದ (೩ + ೨ = ೫), **ಇರುತಿಹನು** = ಪಂಚಮಹಾಭೂತಾಂತರ್ಗತನಾಗಿ ಇದ್ದಾನೆ. **ಭೂತಗ** = ಪಂಚಭೂತಾಂತರ್ಗತನಾಗಿ, **ತನ್ನಾಮ** = ಆಯಾಯಾ ಭೂತಗಳ ಹೆಸರಿನಿಂದಲೇ, **ರೂಪದಿ** = ತತ್ತದ್ರೂಪಗಳಿಂದ, **ಕರೆಸುವನು** = ಎನಿಸುವವನಾಗುತ್ತಾನೆ. **ಪ್ರಜರ** = ಸ್ಥಾವರ ಜಂಗಮರೂಪರಾದ ಸರ್ವ ಜೀವರಾಶಿಗಳನ್ನು, **ಸಂತೈಪ** = ಸಂರಕ್ಷಿಸುತ್ತಾನೆ. ॥ ೨೨ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವರು ಭೋಜನಮಾಡತಕ್ಕ ಸರ್ವಪದಾರ್ಥಗಳು ಪಂಚಭೂತಾತ್ಮಕವಾದ ಪದಾರ್ಥಗಳು. ಆದಕಾರಣದಿಂದ ಈ ಪಂಚಭೂತಾಂತರ್ಗತ ಶ್ರೀಪರಮಾತ್ಮನ ಉಪಾಸನಾಕ್ರಮ ಹೇಳುತಾರೆ.

ಸರ್ವಪ್ರಾಣಿಗಳು ಪಂಚಭೂತಗಳಿಂದ ಜೀವಿತರು. ಅದರಲ್ಲಿ ಪೃಥ್ವೀ ಸಾಂಕೇತವಾದ ಅನ್ನದಿಂದ, ಜಲಸಾಂಕೇತವಾದಪ್ಪ ಉದಕದಿಂದ ಮುಖ್ಯವಾಗಿ ಜೀವಿತರಾಗಿ ಇದ್ದಾರೆ. ಈ ಪಂಚಭೂತವಾದ ಭೂಮಿಯು ಎಂದರೆ ಪ್ರಥಮದಲ್ಲಿ ಭೂಮಿಯಲ್ಲಿ ನಾರಾಯಣದೇವರು, ಅಪ್ಪುಸಾಂಕೇತವಾದ ಜಲದಲ್ಲಿ ವಾಸುದೇವನು, ತೇಜೋರೂಪವಾದ ಅಗ್ನಿಯಲ್ಲಿ ಸಂಕರ್ಷಣನು, ವಾಯುವಿನಲ್ಲಿ ಪ್ರದ್ಯುಮ್ನನಾಮಕನು, ಆಕಾಶದಲ್ಲಿ ಅನಿರುದ್ಧನಾಮಕನು ಈ ಪ್ರಕಾರ ಪಂಚರೂಪನಾದ ಪರಮಾತ್ಮ ಇರೋವನಾಗಿ ಇದ್ದಾನೆ. ಪಂಚಭೂತಾಂತರ್ಗತನಾಗಿ ಐದುರೂಪಗಳಿಂದ ಇದ್ದು, ಆಯಾ ಪಂಚಭೂತಗಳ ರೂಪದಿಂದ ಆಯಾ ನಾಮದಿಂದ ಕರಿಸೋವನಾಗತಾನೆ. ಈ ಪ್ರಕಾರ ಇದ್ದು, ಸ್ಥಾವರ ಜಂಗಮರೂಪರಾದ ಪ್ರಾಣಿಗಳ ರಕ್ಷಿಸುತ್ತಾನೆಂದು ತಾತ್ಪರ್ಯ.

## ವಿಶೇಷಾರ್ಥ—ಪ್ರಮಾಣ

ಪೃಥಿವೀ ಹಿಂಕಾರೋಂತರಿಕ್ಷಂ ಪ್ರಸ್ತಾವೋ ದ್ಯೌರುದ್ಗೀಥಃ ದಿಶಃ ಪ್ರತಿಹಾರಃ ಸಮುದ್ರೋ ನಿಧನಮೇತಾಶ್ಶಕ್ವರ್ಯೋ ಲೋಕೇಷು ಪ್ರೋತಾಃ । ಸ ಏವಮೇತಾಶ್ಶಕ್ವರ್ಯೋ ಲೋಕೇಷು ಪ್ರೋತಾ ವೇದ ಲೋಕೀ ಭವತಿ ಸರ್ವಮಾಯುರೇತಿ ಜ್ಯೋಗ್ಜೀವತಿ ಮಹಾನ್ ಪ್ರಜಯಾ ಪಶುಭಿರ್ಭವತಿ ಮಹಾನ್ ಕೀರಾ ಲೋಕಾನ್ನ ನಿಂದೇತ್ ತದ್ವ್ರತಂ ।

ನಾರಾಯಣಾಖ್ಯ ಉದ್ಗೀಥಃ ಉದ್ಗೇಯಃ ಪ್ರಣವೇನ ಯತ್ । ಉದ್ಗಚ್ಛಂತಿ ಯತೋಽಸ್ಮಾದ್ವಾ ವಾಸುದೇವಾದಿ ಮೂರ್ತಯಃ । ಪ್ರಥಮಾವತಾರರೂಪತ್ವಾದ್ವಾಸುದೇವಃ ಪರಃ ಪುಮಾನ್ । ಪ್ರಸ್ತಾವೋ ನಿಧನಂ ಚಾಪಿ ಸಂಕರ್ಷಣ ಉದಾಹೃತಃ । ಸಂಕರ್ಷಣೋ ಹಿ ಸಂಹರ್ತಾ ಪ್ರದ್ಯುಮ್ನಃ ಪರಮೇಶ್ವರಃ । ಹಿಂಕಾರ ಇತಿ ಸಂಪ್ರೋಕ್ತೋ ಹೀತಿ ಸೃಷ್ಟಿರುದೀರ್ಯತೇ । ಪ್ರಸಿದ್ಧತಾ ಹಿ ಸೃಷ್ಟಿಃ ಸ್ಯಾದನಿರುದ್ಧಃ ಪರೋ ವಿಭುಃ । ಪ್ರತಿಹಾರ ಇತಿ ಪ್ರೋಕ್ತಃ ಸ ಹಿ ಕಾರ್ಯೇಷ್ವಿದಂ ಜಗತ್। ಪ್ರತಿ ಪ್ರತಿ ಹರೇರ್ನಿತ್ಯಂ ಮೂರ್ತಿ ಪ್ರತಿಹೃತೇಸ್ತಥಾ। ತೇ ಪೃಥಿವ್ಯಾದಿಷು ಸದಾ ತನ್ನಾಮಾನಃ ಪ್ರತಿಷ್ಠಿತಾಃ। ಪೃಥಿವೀತ್ಯಾದಿ ಶಬ್ದಾರ್ಥಾಃ

ತೇ ಹಿ ಮುಖ್ಯತ ಈರಿತಾಃ । ತತ್ಸಂಬಂಧಾತ್ತದರ್ಥತ್ವಂ ಪೃಥಿವ್ಯಾದೇರ ಮುಖ್ಯತಃ ॥ ಇತಿ ಛಾಂದೋಗ್ಯೋಪನಿಷದ್ಭಾಷ್ಯೇ ॥ ೨೨ ॥

## ೨. ಭಾವಪ್ರಕಾಶಿಕೆ

ಪರಮಾತ್ಮನ ಈ ವಿಭೂತಿಯನ್ನು ತಿಳಿದ ಜನರನ್ನು ವಿಶೇಷ ಕರುಣದಿಂದ ರಕ್ಷಿಸುವನು. ॥ ೨೨ ॥

## ೩. ಭಾವದರ್ಪಣ

। ಧರಣೀತಿ । ತುರ್ಯನಾಮಕ ನಾಲ್ಕನೇ ಹೆಸರು ಉಳ್ಳವ ವಾಸುದೇವ ಎಂಬರ್ಥ, ॥ ೨೨ ॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

ಧರಣಿ ಇತಿ ॥ "ನಾರಾಯಣಂ ವಾಸುದೇವಂ ಧರಾಯಾಂ ಉದಕೇ ಕ್ರಮಾತ್ ॥ ವಾಯ್ವಾಕಾಶಗತೌ ಪ್ರದ್ಯುಮ್ನಾನಿರುದ್ಧೌ ಸ್ಮರ ಪ್ರಭೂ ॥" ಇತಿ ಕರ್ಮದರ್ಪಣೇ ॥ ೨೨ ॥

## ಕನ್ನಡಾರ್ಥ

ಭೂಮಿ ಮುಂತಾದ ಐದು ಭೂತಗಳಲ್ಲಿರುವ ಭಗವನ್ಮೂರ್ತಿಗಳ ಸ್ಮರಣೋಪಾಸನವನ್ನು ತಿಳಿಸುತ್ತಾರೆ ಧರಣಿ ಎಂಬ ಪದ್ಯದಿಂದ "ಭೂಮಿಯಲ್ಲಿ ನಾರಾಯಣ, ಜಲದಲ್ಲಿ ವಾಸುದೇವ, ವಾಯುವಿನಲ್ಲಿ ಪ್ರದ್ಯುಮ್ನ, ಆಕಾಶದಲ್ಲಿ ಅನಿರುದ್ಧ, ಅಗ್ನಿಯಲ್ಲಿ ಸಂಕರ್ಷಣ ಹೀಗೆ ಭಗವದ್ರೂಪಗಳನ್ನು ಸ್ಮರಿಸಬೇಕು," ಎಂದು ಕರ್ಮದರ್ಪಣವೆಂಬ ಗ್ರಂಥದಲ್ಲಿ ಹೇಳಲ್ಪಟ್ಟಿದೆ. ॥ ೨೨ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಪಂಚಭೂತಸ್ಥ ಪಂಚಮೂರ್ತಿ ಸ್ಮರಣೋಪಸನೆ ತಿಳಿಸುತ್ತಾರೆ, ಧರಣಿ ಎಂದು. ಭೂಮಿಯಲ್ಲಿ ನಾರಾಯಣರೂಪ ಉದ್ಗೀಥ ನಾಮಕನು, ಉದಕದಲ್ಲಿ

ತುರೀಯ ಎಂದರೆ ವಾಸುದೇವರೂಪ ಪ್ರಸ್ತಾವ ನಾಮಕ. ಅಗ್ನಿಯಲ್ಲಿ ಸಂಕರುಷಣ ರೂಪ ನಿಧನ ನಾಮಕ. ವಾಯುವಿನಲ್ಲಿ ಹಿಂಕಾರ ನಾಮಕ ಪ್ರದ್ಯುಮ್ನ. ಆಕಾಶದಲ್ಲಿ ಪ್ರತಿಹಾರ ನಾಮಕ ಅನಿರುದ್ಧರೂಪನೂ, ಹೀಗೆ ಮೂರೆರಡು ಎಂದರೆ, ಐದು ಪೃಥಿವ್ಯಾದಿ ಭೂತಗಳಲ್ಲಿದ್ದು ಪ್ರಜೆಗಳನ್ನು ರಕ್ಷಿಸುವನು, ಇದರಿಂದ

ನಾರಾಯಣಾಖ್ಯ ಉದ್ಗೀಥಃ ಉದ್ಗೇಯಃ ಪ್ರಣವೇನ ಯತ್ ।
ಉದ್ಗಚ್ಛಂತಿ ಯತೋ ಯಸ್ಮಾದ್ವಾಸುದೇವಾದಿ ಮೂರ್ತಯಃ ॥

ಪ್ರಥಮಾವತಾರ ರೂಪತ್ವಾದ್ವಾಸುದೇವಃ ಪರಃಪುಮಾ಼ ।
ಪ್ರಸ್ತಾವೋ ನಿಧನಂ ಚಾಪಿ ಸಂಕರ್ಷಣ ಉದಾಹೃತಃ ॥

ಸಂಕರ್ಷಣೋ ಹಿ ಸಂಹರ್ತಾ ಪ್ರದ್ಯುಮ್ನಃ ಪರಮೇಶ್ವರಃ ।
ಹಿಂಕಾರ ಇತಿ ಸಂಪ್ರೋಕ್ತೋ ಹೀತಿ ಸೃಷ್ಟಿರುದೀರ್ಯತೇ ॥

ಪ್ರಸಿದ್ಧತಾ ಹಿ ಸ್ಸೃಷ್ಟೇಸ್ಯಾದನಿರುದ್ಧಃ ಪರೋ ವಿಭುಃ ।
ಪ್ರತಿಹಾರ ಇತಿ ಪ್ರೋಕ್ತಃ ಸ ಹಿ ಕಾರ್ಯೇಷ್ವಿದಂ ಜಗತ್ ॥

ಪ್ರತಿಪ್ರತಿ ಹರೇನ್ನಿತ್ಯಂ ಮೂರ್ತಿ ಪ್ರತಿಹೃತೇಸ್ತಥಾ ।
ತೇ ಪೃಥಿವ್ಯಾದಿಷು ಸದಾ ತನ್ನಾಮಾನಃ ಪ್ರತಿಷ್ಠಿತಾಃ ॥

ಪೃಥಿವೀತ್ಯಾದಿ ಶಬ್ದಾರ್ಥಾಃ ತೇ ಹಿ ಮುಖ್ಯತ ಈರಿತಾಃ ।
ತತ್ಸಂಬಂಧಾತ್ತದರ್ಥತ್ವಂ ಪೃಥಿವ್ಯಾದೇಶ ಮುಖ್ಯತಃ ॥

ಎಂಬ ಛಾಂದೋಗ್ಯಭಾಷ್ಯಾರ್ಥವು ವಿವರಿಸಲ್ಪಟ್ಟಿತು ॥ ೨೨ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವ ಪ್ರಾಣಿಗಳ ಸ್ಥೂಲಶರೀರವು ಮುಖ್ಯವಾಗಿ ಪೃಥ್ವ್ಯಾದಿ ಪಂಚಭೂತಗಳಿಂದ ನಿರ್ಮಿತವಾಗಿದೆ. ಅದರಲ್ಲಿ ಪೃಥ್ವಿಯ ಅಂಶವು ಅಧಿಕವಾಗಿರುವುದರಿಂದ ಪಾರ್ಥಿವ ಶರೀರವೆಂತ ಹೆಸರು,

ಅಂತೆಯೇ ಜೀವರು ಭೋಜನ ಮಾಡತಕ್ಕ ಸರ್ವಪದಾರ್ಥಗಳು ಪಂಚ ಭೂತಾತ್ಮಕವಾಗಿವೆ. ಇದರಿಂದ ಪಂಚಭೂತಾಂತರ್ಗತ ಶ್ರೀಪರಮಾತ್ಮನ ಉಪಾಸನಾಕ್ರಮ ತಿಳಿಸುತ್ತಾರೆ.

ಅನ್ನವು ಪೃಥ್ವೀ ಸಾಂಕೇತವು, ಕುಡಿಯುವ ನೀರು ಅಪ್‌ಸಾಕೇಂತವು, ತೈಲ ಘೃತಾದಿ ವಸ್ತುಗಳಲ್ಲಿರುವ ಮೇದೋವಸ್ತು ತೇಜೋ ಸಾಕೇಂತವು. ಆಹಾರ ವಸ್ತುಗತ ರಸವಿಶೇಷಗಳಿಂದ ಸ್ಥೂಲದೇಹವು ಉಪಚಯಹೊಂದುವುದು ಈ ಕ್ರಿಯೆಯು ವಾಯು ಹಾಗೂ ಆಕಾಶತತ್ತ್ವಸಾಕೇಂತವು.

ಮೂಲರೂಪೀ ನಾರಾಯಣನು ಪೃಥ್ವೀ ಎಂಬ ಭೂತದಲ್ಲಿ ವಿದ್ಯಮಾನ ನಾಗಿದ್ದಾನೆ. ಅವನೇ ಉದ್ಗೀಥನಾಮಕನು. ಅಪ್‌ಸಾಕೇಂತವಾದ ಉದಕದಲ್ಲಿ ತುರ್ಯನಾಮಕನಾದ ವಾಸುದೇವನಿದ್ದಾನೆ. ತೇಜೋ ಸಾಕೇಂತವಾದ ಅಗ್ನಿ ಯಲ್ಲಿ ಸಂಕರ್ಷಣನಾಮಕ ಪರಮಾತ್ಮನು ವಿದ್ಯಮಾನನಾಗಿದ್ದಾನೆ. ಅವನೇ ನಿಧನನಾಮಕನು. ನಾಲ್ಕನೆಯದಾದ ವಾಯುವಿನಲ್ಲಿ ಪ್ರದ್ಯುಮ್ನನಿರುವನು. ಹಿಂಕಾರನಾಮಕ ಪ್ರದ್ಯುಮ್ನನನ್ನು ವಾಯುವಿನಲ್ಲಿ ಚಿಂತಿಸಬೇಕು. ಪ್ರತಿಹಾರ ನಾಮಕನಾದ ಅನಿರುದ್ಧನು ಆಕಾಶತತ್ತ್ವದಲ್ಲಿ ವ್ಯಾಪಿಸಿದ್ದಾನೆ.

ಇಂತು ನಾರಾಯಣ–ವಾಸುದೇವ–ಸಂಕರ್ಷಣ–ಪ್ರದ್ಯುಮ್ನ–ಅನಿರುದ್ಧ ಎಂಬ ಪಂಚರೂಪಗಳಿಂದ ಭೂತಪಂಚಕಗಳಲ್ಲಿ ತದ್ರೂಪನಾಗಿ ತದಾಕಾರನಾಗಿ ಆಯಾಯಾ ಭೂತಗಳ ಹೆಸರಿನಿಂದಲೇ ಕರೆಯಿಸಿಕೊಳ್ಳುತ್ತಾ ವಿದ್ಯಮಾನನಾಗಿ ದ್ದಾನೆ. ಇಂತು ಪಂಚಭೂತಗತನಾದ ಶ್ರೀಪರಮಾತ್ಮನ ರೂಪಗಳನ್ನು ೫ ರೂಪ ಗಳಿಂದ ಎಂದು ತಿಳಿಸಿದ್ದಾರೆ.

ನಾರಾಯಣಾದಿ ಪಂಚರೂಪಗಳಿಂದ ಭೂತಪಂಚಕಗಳಲ್ಲಿದ್ದು ಸ್ಥಾವರ ಜಂಗಮ ರೂಪರಾದ ಸರ್ವ ಪ್ರಾಣಿಗಳನ್ನು ಭೋಜನ ದ್ವಾರಾ ಶರೀರಕ್ಕೆ ಉಪ ಚಯಗೈದು ಸಂರಕ್ಷಿಸುತ್ತಿರುವನು.

## ಪಂಚಭೂತಾಂತರ್ಗತ ಶ್ರೀಪರಮಾತ್ಮನ ಪಂಚರೂಪಗಳ ಸ್ಮರಣೆ

| ಕ್ರಮ ಸಂಖ್ಯೆ | ಭೂತಪಂಚಕಗಳು | ಭಗವದ್ರೂಪ | ನಾಮ |
|---|---|---|---|
| ೧. | ಪೃಥ್ವಿಯಲ್ಲಿ | ನಾರಾಯಣ | ಉದ್ಗೀಥನಾಮಕ |
| ೨. | ಅಪ್‌ನಲ್ಲಿ | ವಾಸುದೇವ | ಪ್ರಸ್ತಾವನಾಮಕ |
| ೩. | ತೇಜಸ್ಸಿನಲ್ಲಿ | ಸಂಕರ್ಷಣ | ನಿಧನನಾಮಕ |
| ೪. | ವಾಯುವಿನಲ್ಲಿ | ಪ್ರದ್ಯುಮ್ನ | ಹಿಂಕಾರನಾಮಕ |
| ೫. | ಆಕಾಶದಲ್ಲಿ | ಅನಿರುದ್ಧ | ಪ್ರತಿಹಾರನಾಮಕ |

## ಪದ್ಯ ೨೩

**ಮೂಲ**

**ಘನಗತ್ತನು ತಾನಾಗಿ ನಾರಾ ।**
**ಯಣನು ತನ್ನಾಮದಲಿ ಕರೆಸುವ ।**
**ವನದ ಗರ್ಭೋದಕದಿ ನೆಲೆಸಿಹ ವಾಸುದೇವ ಸದಾ ॥**
**ಧ್ವನಿ ಸಿಡಿಲು ಸಂಕರ್ಷಣನು ಮಿಂ ।**
**ಚಿನೊಳು ಶ್ರೀಪ್ರದ್ಯುಮ್ನ ವೃಷ್ಟಿಯ ।**
**ಹನಿಗಳೊಳಗನಿರುದ್ಧನಿಪ್ಪನು ವರುಷವೆಂದೆನಿಸಿ ॥ ೨೩ ॥**

**ಅವತರಣಿಕೆ**

ಮಿಂಚಿನಲ್ಲಿ ಮಳೆಯ ಹನಿ ಇತ್ಯಾದಿಗಳಲ್ಲಿ ನಾರಾಯಣಾದಿ ಪಂಚರೂಪಗಳಿಂದ ಶ್ರೀಪರಮಾತ್ಮನು ವಿದ್ಯಮಾನನಾಗಿದ್ದು ತತ್ಸಂಬಂಧವಾದ ಕ್ರಿಯಾಗಳನ್ನು ನಡೆಯಿಸುವನು ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಘನಗತನು**＝ಮೇಘದಲ್ಲಿ, **ತಾನಾಗಿ**＝ಮೇಘಾಂತರ್ಗತನಾಗಿ, **ನಾರಾಯಣನು**＝ಮೂಲರೂಪೀ ಶ್ರೀಮನ್ನರಾಯಣನು, **ತನ್ನಾಮದಲಿ**＝ಮೇಘನಾಮಕನಾಗಿ, **ಕರೆಸುವ**＝ಕರೆಯಿಸುವವನಾಗುತ್ತಾನೆ. **ವನದಗರ್ಭೋದಕದಿ**＝ಮೇಘದಲ್ಲಿರುವ ಮಳೆಯ ನೀರಿನಲ್ಲಿ, '**ವಾಸುದೇವ**＝ವಾಸುದೇವ ನಾಮಕನು, **ಸದಾ**＝ನಿರಂತರದಿ, **ನೆಲೆಸಿಹ**＝ಆವಾಸವಾಗಿದ್ದಾನೆ. **ಧ್ವನಿ**＝ಮೇಘಗರ್ಜನೆಯರೂಪದಲ್ಲಿ ಅಭಿವ್ಯಕ್ತವಾಗುವ ಗುಡುಗಿನಲ್ಲಿ, **ಸಿಡಿಲು**＝ಸಿಡಿಲಿನಲ್ಲಿ, **ಸಂಕರ್ಷಣನು**＝ಸಂಕರ್ಷಣ ನಾಮಕ ಶ್ರೀಪರಮಾತ್ಮನು ಇದ್ದಾನೆ. **ಮಿಂಚಿನೊಳು**＝ಕ್ಷಣಕಾಲದಲ್ಲಿ ಹೊಳೆದು ಮಾಯವಾಗುವ ಮಿಂಚಿನಲ್ಲಿ, **ಶ್ರೀಪ್ರದ್ಯುಮ್ನ**＝ಕಾಂತಿಸಂಪನ್ನನಾದ ಪ್ರದ್ಯುಮ್ನನು, **ವೃಷ್ಟಿಯ ಹನಿಗ**

**ಳೊಳಗೆ**=ಸುರಿಯುತ್ತಿರುವ ಮಳೆಯ ಪ್ರತಿ ಹನಿಗಳಲ್ಲಿ, **ಅನಿರುದ್ಧನು**= ಅನಿರುದ್ಧನಾಮಕ ಶ್ರೀಪರಮಾತ್ಮನು, **ವರುಷನೆಂದೆನಿಸಿ**=ಮಳೆ ಎಂಬ ನಾಮದಿಂದ ಕರೆಯಿಸಿಕೊಳ್ಳುತ್ತಾ, **ಇಪ್ಪನು**=ವಿದ್ಯಮಾನನಾಗಿದ್ದಾನೆ. ॥ ೨೩ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಸರ್ವಜೀವರು ಭೋಜನ ಮಾಡತಕ್ಕ ಪದಾರ್ಥಗಳು ವೃಷ್ಟಿದ್ವಾರಾ ಉತ್ಪತ್ತಿ. ಆದಕಾರಣ ಆ ವೃಷ್ಟಿಯಲ್ಲಿ ಪರಮಾತ್ಮನ ಉಪಸನಾವಿಧಿಯನ್ನ ಹೇಳತಾರೆ.

ಮಳೆಸುರಿಸುವಂಥ ಮೇಘದಲ್ಲಿ ಪರಮಾತ್ಮನಾದ ತಾನು, [ಮೂಲರೂಪನಾದ ನಾರಾಯಣ ಎಂತ ನಾಮದಿಂದ ಮೇಘಾಂತರ್ಗತನಾಗಿ ಮೇಘನಾಮದಿಂದ ಕರಸತಾನೆ, ಈ ಮೇಘಗರ್ಭಾಂತರ್ಗತ ಉದಕದಲ್ಲಿ ನಿರಂತರ ವಾಸುದೇವ ರೂಪದಿಂದ ಆವಾಸನಾಗಿದ್ದಾನೆ. ಮೇಘಗರ್ಜನೆಯಲ್ಲಿ, [ಮೇಘದಿಂದ] ಬೀಳತಕ್ಕ ಪಿಡುಗಿನಲ್ಲಿ (ಸಿಡಿಲಿನಲ್ಲಿ) ಈ ಎರಡರಲ್ಲಿ ಸಂಕರ್ಷಣನು, ಮೇಘಗತ ಮಿಂಚಿನೊಳು ಕಾಂತಿಸಂಪನ್ನನಾದ ಪ್ರದ್ಯುಮ್ನ ದೇವರು, ಮಳೆ ಸುರಿಯುತಕ್ಕ ಪ್ರತಿ ಹನಿಬಿಂದುಗಳೊಳಗೆ ಅನಿರುದ್ಧನಾಮಕನು ಮಳೆ ಎಂತ ನಾಮದಿಂದ ಕರಸಿ ಇರೋವನಾಗಿದ್ದಾನೆ.

**ತಾತ್ಪರ್ಯ**—ಮೇಲೆ ಹೇಳಿದ ಪ್ರಕಾರ ನಾರಾಯಣಾದಿ ಪಂಚರೂಪದಿಂದ ಪರಮಾತ್ಮ ವೃಷ್ಟಿದ್ವಾರಾ ಧಾನ್ಯಾದಿಗಳ ಉತ್ಪತ್ತಿ ಮಾಡಿ ತದಂತರ್ಗತನಾಗಿ ಇದ್ದು, ಜೀವರ ಸಂರಕ್ಷಿಸುತ್ತಾನೆಂದು ತಾತ್ಪರ್ಯ.

**ವಿಶೇಷಾರ್ಥ**

ಅಂಭ್ರಾಣಿ ಸಂಪ್ಲವಂತೇ ಸ ಹಿಂಕಾರಃ । ಮೇಘೋ ಜಾಯತೇ ಸ ಪ್ರಸ್ತಾವೋ ವರ್ಷತಿ ಸ ಉದ್ಗೀಥೋ ವಿದ್ಯೋತತೇ ಸ್ತನಯತಿ ಸ ಪ್ರತಿಹಾರಃ ।

ಉದ್ಗೃಹ್ಣಾತಿ ತನ್ನಿಧನಂ । ಏತದ್ವೈರೂಪಂ ಪರ್ಜನ್ಯೇ ಪ್ರೋತಂ ಸ ಯ ಏವ ಮೇವ ತದ್ವೈರೂಪಂ ಪರ್ಜನ್ಯೇ ಪ್ರೋತಂ ವೇದ ವಿರೂಪಾನ್ ಸರೂಪಾಂಶ್ಚ ಪಶೂನವರುಂಧೇ । ಸರ್ವಮಾಯುರೇತಿ ಜ್ಯೋಗ್ಜೀವತಿ ಮಹಾನ್ ಪ್ರಜಯಾ ಪಶುಭಿರ್ಭವತಿ ಮಹಾನ್ ಕೀರ್ತ್ಯಾ ವರ್ಷಂ ತಂ ನ ನಿಂದೇತ್ ತದ್ವ್ರತಂ । ಇತಿ ಛಾಂದೋಗ್ಯೇಶ್ಚ । ಪಂಚರೂಪಂ ಚ ಯೋ ವಿಷ್ಣುಂ ಪುರೋ ವಾತಾದಿಷು ಸ್ಥಿತಂ । ಉಪಾಸ್ತೇ ವೃಷ್ಟಿರಸ್ಮೈ ಸ್ಯಾದ್ವರ್ಷಯತ್ಯಸ್ಯ ಮುಕ್ತಿಗಾನ್ । ಸರ್ವ ಭೋಗಾಂಶ್ಚ ಭಗವಾನ್ ಪಂಚರೂಪೀ ಜನಾರ್ದನಃ ॥ ಇತಿ ಛಾಂದೋಗ್ಯೋಪನಿಷದ್ಭಾಷ್ಯೇ ॥ ೨೩ ॥

## ೨. ಭಾವಪ್ರಕಾಶಿಕೆ

ಮೇಘದಲ್ಲಿ ನಾರಾಯಣನು, ಮೇಘಗರ್ಭದಲ್ಲಿರುವ ಉದಕದಲ್ಲಿ ವಾಸುದೇವನು, ಗುಡುಗು ಸಿಡಿಲುಗಳಲ್ಲಿ ಸಂಕರ್ಷಣನು, ಮಿಂಚಿನೊಳಗೆ ಪ್ರದ್ಯುಮ್ನನು ಮಳೆಯ ಹನಿಗಳಲ್ಲಿ ಅನಿರುದ್ಧನು, ಹೀಗೆ ೫ ರೂಪಗಳಿಂದ ಮೇಘ, ಮಿಂಚು ಮೊದಲಾದುವುಗಳಲ್ಲಿ ಮೇಘಾದಿರೂಪಗಳಿಂದಲೂ, ಅದೇ ಹೆಸರಿನಿಂದಲೂ ಶ್ರೀಹರಿಯು ವಾಸವಾಗಿರುವನು ॥ ೨೩ ॥

## ೩. ಭಾವದರ್ಪಣ

ಘನಗತೇತಿ । ವನದ ಮೇಘ ಈ ರೀತಿ ತತ್ತತ್ಕಾಲಗಳಲ್ಲಿ ತತ್ತನ್ನಾಮದಿಂದಲೂ ಅನಿರುದ್ಧಾದಿ ರೂಪಗಳು ತಿಳಿಯಬೇಕೆಂಬ ಭಾವ ॥ ೨೩ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಘನ ಇತಿ ॥ ವನದ—ಉದಕಪ್ರದ । ವೃಷ್ಟೌ ಪಂಚವಿಧಂ ಸಾಮ ಉಪಾಸೀತ । ಪುರೋವಾತೋ ಹಿಂಕಾರಃ । ಮೇಘಃ ಜಾಯತೇ ಸ ಪ್ರಸ್ತಾವಃ । ಯಃ ವರ್ಷತಿ ಸ ಉದ್ಗೀಥಃ । ವಿದ್ಯೋತತೇ ಸ್ತನಯತಿ ಸ ಪ್ರತಿಹಾರಃ । ಉದ್ಗೃಹ್ಣಾತಿ ತನ್ನಿಧನಮ್ । ವರ್ಷತಿ ಹಾಸ್ಮೈ ವರ್ಷಯತಿ ಯ ಏತದೇವಂ ವಿದ್ವಾನ್ ವೃಷ್ಟೌ ಪಂಚವಿಧಂ ಸಾಮ ಉಪಾಸ್ತೇ ॥ ಪಂಚರೂಪಂ ತಂ ಯೋ ವಿಷ್ಣುಂ

ಪುರೋವಾತಾದಿಷು ಸ್ಥಿತಮ್ ॥ ಉಪಾಸ್ತೇ ವೃಷ್ಟಿರಸ್ಮೈ ಸ್ಯಾತ್ ವರ್ಷಯತಿ ಅಸ್ಯ ಮುಕ್ತಿಗಾನ್ ॥ ಸರ್ವ ಭೋಗಾಶ್ಚ ಭಗವಾನ್ ಪಂಚರೂಪೀ ಜನಾರ್ದನಃ॥ ಇತಿ ಛಾಂದೋಗ್ಯೇ ॥ ೨೩ ॥

**ಕನ್ನಡಾರ್ಥ**

ಘನಗತನು ಎಂಬ ಪದ್ಯದಿಂದ ವೃಷ್ಟಿಯಲ್ಲಿ–ವೃಷ್ಟಿ ಶಬ್ದ ವಾಚ್ಯನಾಗಿ ಇರುವ ಭಗವಂತನ ಐದು ರೂಪಗಳನ್ನು ನಿರೂಪಿಸುತ್ತಾರೆ. ಛಾಂದ್ಯೋಗ್ಯೋಪನಿಷತ್ತಿನ ೨ನೆಯ ಅಧ್ಯಾಯದ ಏಳನೆಯ ಮಂತ್ರ ವೃಷ್ಟಿಯಲ್ಲಿ ಉಪಾಸಿಸಬೇಕಾದ ಪಂಚಭಕ್ತಿಕ ಸಾಮ ಪ್ರತಿಪಾದ್ಯ ಪಂಚರೂಪಗಳನ್ನು ನಿರೂಪಿಸಿರುತ್ತಾರೆ

ಪುರೋವಾತದಲ್ಲಿ ಮೇಘಬರುವ ಪೂರ್ವದ ವಾಯುವಿನಲ್ಲಿ ಹಿಂಕಾರ ನಾಮಕ ಪ್ರದ್ಯುಮ್ನನು, ಮಿಲಿತವಾದ ಮೇಘದಲ್ಲಿ ಪ್ರಸ್ತಾವನಾಮಕ ವಾಸುದೇವನು, ವೃಷ್ಟಿ ಎಂಬ ಮಳೆಯು ಧಾರಾಪತನದಲ್ಲಿ ಉದ್ಗೀಥನಾಮಕ ನಾರಾಯಣನು, ವಿದ್ಯುತ್ತು ಗರ್ಜನಗಳಲ್ಲಿ ಪ್ರತಿಹಾರನಾಮಕ ಅನಿರುದ್ಧನು, ವೃಷ್ಟಿಯ ಉಪಸಂಹಾರದಲ್ಲಿ ನಿಧನನಾಮಕ ಸಂಕರ್ಷಣನು, ಹೀಗೆ ಪಂಚ ಸಾಮವೇದ್ಯವಾದ ಐದು ಭಗವದ್ರೂಪಗಳನ್ನು ತಿಳಿದು ಉಪಾಸಿಸುವವನಿಗೆ ಅವನಿಗೆ ವೃಷ್ಟಿಯಲ್ಲಿ ವೃಷ್ಟಿ ಶಬ್ದವಾಚ್ಯನಾಗಿರುವ ಹರಿಯು ಸಕಲ ಅಭೀಷ್ಟಗಳನ್ನು ಸುರಿಸುವನು ಎಂದು ಛಾಂದೋಗ್ಯ ಭಾಷ್ಯದಲ್ಲಿ ಪುರೋವಾತ ಮುಂತಾದುವುಗಳಲ್ಲಿರುವ ಶ್ರೀಹರಿಯ ಪಂಚರೂಪಗಳನ್ನು ಉಪಾಸಿಸುವವನಿಗೆ ಪಂಚರೂಪೀ ಹರಿಯು ಸಕಲಾಭೀಷ್ಟಗಳನ್ನೂ ಇಹದಲ್ಲಿಯೂ ಮೋಕ್ಷದಲ್ಲಿಯೂ ಸಹ ಕೊಡುತ್ತಾನೆ." ಎಂದು ಶ್ರೀಮದಾಚಾರ್ಯರು ನಿರೂಪಿಸಿರುತ್ತಾರೆ. ॥ ೨೩ ॥*

---

* ಈ ವೃಷ್ಟಿಗತ ರೂಪೋಪಾಸನವು ಛಾಂದೋಗ್ಯದಲ್ಲಿ ಇನ್ನೂ ಕೆಲವೆಡೆಗಳಲ್ಲಿ ತುಸು ಬೇರೆ ಬೇರೆಯಾಗಿ ನಿರೂಪಿತವಾಗಿದೆ. ಅವಾಂತರ ಪ್ರಭೇದವನ್ನು ಅವುಗಳನ್ನು ನೋಡಿ ತಿಳಿಯಬೇಕು.

## ೫. ಶ್ರೀಗುರುಹೃದಯಪ್ರಕಾಶಿಕೆ

ವೃಷ್ಟಿಗತ ಪಂಚಮೂರ್ತಿ ಉಪಾಸನೆ ನಿರೂಪಿಸುತ್ತಾರೆ. ಘನವೆಂದು, ಘನವೆಂಬ ಮೇಘದಲ್ಲಿ ನಾರಾಯಣನು ಮೇಘನಾಮಕನಾಗಿರುವನು. ವನದ ಗರ್ಭೋದಕದಿ ಎಂದರೆ, ವನವೆಂಬ ನೀರನ್ನು ಉಂಟುಮಾಡುವ ಮೇಘಗರ್ಭೋದಕದಲ್ಲಿ ಸ್ಥಿರವಾಗಿ ವಾಸುದೇವನಿರುವನು. ಧ್ವನಿ ಎಂಬ ಗುಡುಗು ಶಿಡಿಲಿನಲ್ಲಿ ಸಂಕರ್ಷಣ ರೂಪನು. ಮಿಂಚಿನಲ್ಲಿ ಶ್ರೀಪ್ರದ್ಯುಮ್ನರೂಪನು. ಮಳೆಹನಿಯಲ್ಲಿ ಅನಿರುದ್ಧನು ವೃಷ್ಟಿಶಬ್ದವಾಚ್ಯನಾಗಿರುವನು. ಇದರಿಂದ,

ಅಭ್ರಾಣಿ ಸಂಪ್ಲವಂತೇ ಸ ಹಿಂಕಾರಃ । ಮೇಘೋ ಜಾಯತೇ ಸ ಪ್ರಸಾವೋ । ವರ್ಷತಿ ಸ ಉದ್ಗಿಥೋ ವಿದ್ಯೋ ತತೇಸ್ತನಯತಿ ಸ ಪ್ರತಿಹಾರ। ಉಧ್ಗೃಣ್ಹಾತಿ ತನ್ನಿಧನಂ ॥ ಏತದ್ವೈರೂಪಂ ಪರ್ಜನ್ಯೇ ಪ್ರೋತಂ । ಸ ಯ ಏವಮೇತದ್ವೈರೂಪಂ ಪರ್ಜನ್ಯೇ ಪ್ರೋತಂ॥ ವೇದ ನಿರೂಪಾಂಶ್ಚ ಸರೂಪಾಂಶ್ಚ ಪಶೂನವರುಂಧೆ ತತ್ಸರ್ವಮಾಯುರೇತಿ । ಜೋಗ್ಜೀವತಿ ಮಹಾನ್ ಪ್ರಜಯಾ ಪಶುಭಿರ್ಭವತಿ ಮಹತ್ಕೀರ್ತ್ಯಾ ವರ್ಷಂ ನ ನಿಂದೇತ ತದ್ವ್ರತಂ ॥ ಎಂಬ ಛಾಂದೋಗ್ಯೋಪನಿಷದರ್ಥವೂ,

> ಪಂಚರೂಪಂ ಪಂಚಯೋ ವಿಷ್ಣುಂ ಪುರೋವಾತಾದಿಷು ಸ್ಥಿತಂ ।
> ಉಪಾಸ್ತೇ ವೃಷ್ಟಿರಸ್ಮೈಸ್ಯಾತ್ ವರ್ಷಯತ್ಯಸ್ಯ ಮುಕ್ತಿಗಾ ॥
> ಸರ್ವಭೋಗಾಂಶ್ಚ ಭಗವಾನ್ ಪಂಚರೂಪೀ ಜನಾರ್ದನಃ ॥
>
> ಛಾಂ ಭಾಷ್ಯ ॥ ೨೩ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸುರಿಯುತ್ತಿರುವ ಮಳೆಯಲ್ಲಿ ವೃಷ್ಟಿಶಬ್ದವಾಚ್ಯನಾಗಿರುವ ಶ್ರೀಪರಮಾತ್ಮನ ಪಂಚರೂಪೋಪಾಸನೆಯ ವಿವರಗಳನ್ನು ತಿಳಿಸುತ್ತಾರೆ.

ವೃಷ್ಟಿಯ ಕಾರ್ಯಾಚರಣೆಯಲ್ಲಿ ಐದು ಹಂತಗಳಿವೆ.

೧. ಘನೀಭೂತವಾದ ಮೇಘ ೨. ಮೇಘಗರ್ಭದಲ್ಲಿರುವ ನೀರು ೩. ಮೇಘಗಳ ಸಂಘರ್ಷಣೆಯಿಂದುಂಟಾಗುವ ಗುಡುಗು ಸಿಡಿಲು, ೪. ಕ್ಷಣಾ

ರ್ಥದಲ್ಲಿ ಮಿಂಚಿ ಮಾಯುವಾಗಿವೆ ಮಿಂಚಿನ ಪ್ರಕಾಶ, ೫. ಸುರಿಯುತ್ತಿರುವ ಮಳೆ.

ಸಾಂದ್ರವಾಗಿರುವ ಮೇಘಗಳಲ್ಲಿ ನಾರಾಯಣರೂಪೀ ಶ್ರೀಪರಮಾತ್ಮನಿದ್ದು, ಮೇಘಗಳ ನಿರ್ಮಾಣಕ್ಕೆ ಕಾರಣನಾಗಿದ್ದಾನೆ. ಇವನೇ ಉದ್ಗೀಥನಾಮಕ.

ಮೇಘಗತ ಉದಕದಲ್ಲಿ ಪ್ರಸ್ತಾವನಾಮಕ ಶ್ರೀವಾಸುದೇವನಿದ್ದು, ವೃಷ್ಟಿ ಉಂಟಾಗಲು ಕಾರಣನಾಗುವನು.

ಮೇಘಗಳ ಸಂಘಟ್ಟಣೆಯಿಂದ ವಿದ್ಯುತ್ತು ಉತ್ಪತ್ತಿಯಾಗಿ ಜಲಾಂತರ್ಗತ ಶಕ್ತಿ ವಿಶೇಷವು ಗುಡುಗು ಮತ್ತು ಸಿಡಿಲಿನ ರೂಪದಲ್ಲಿ ಅತ್ಯಧಿಕ ಗರ್ಜನಾರೂಪವಾದ ಶಬ್ದವು ಉತ್ಪತ್ತಿಯಾಗುವುದು. ಇದಕ್ಕೆ ಮೇಘಗರ್ಜನೆ ಎಂದು ಹೆಸರು. ಇದರಲ್ಲಿ ಶಬ್ದರೂಪನಾಗಿ ನಿಧನನಾಮಕನಾದ ಶ್ರೀ ಸಂಕರ್ಷಣನು ವಿದ್ಯಮಾನನಾಗಿದ್ದು, ಮೇಘಗರ್ಜನೆಗೆ ಕಾರಣನಾಗಿದ್ದಾನೆ.

ಮೇಘಗರ್ಜನೆಯ ಸಮಯದಲ್ಲಿ ಆಕಾಶದಲ್ಲಿ ಫಳಾರನೆ ಮಿಂಚು ಹೊಳೆಯುವುದು. ಮಿಂಚಿನ ಪ್ರಕಾಶವು ಕ್ಷಣದಲ್ಲಿ ಗೋಚರವಾಗಿ ಮಾಯವಾಗುವುದು. ಈ ಮಿಂಚಿನಲ್ಲಿ ಹಿಂಕಾರನಾಮಕ ಶ್ರೀಪ್ರದ್ಯುಮ್ನನಿದ್ದಾನೆ.

ಸುರಿಯುತ್ತಿರುವ ಮಳೆಯ ನೀರಿನ ಹನಿಗಳಲ್ಲಿ ಪ್ರತಿಹಾರನಾಮಕ ಶ್ರೀಅನಿರುದ್ಧನು ಇದ್ದು, ವೃಷ್ಟಿಯ ದ್ವಾರಾ ಪೃಥ್ವಿಗೆ ಒದಗುವ ಪೋಷಕ ವಸ್ತುಗಳ ಉತ್ಪತ್ತಿಗೆ ಕಾರಣನಾಗಿದ್ದಾನೆ.

ವೃಷ್ಟಿಗತ ಶ್ರೀಪರಮಾತ್ಮನ ಪಂಚಭಗವದ್ರೂಪೋಪಾಸನಾ ಕ್ರಮವನ್ನು ಛಾಂದೋಗ್ಯ ಉಪನಿಷತ್ತಿನಲ್ಲಿ ವಿವರಿಸಲಾಗಿದೆ.

## ಪುರೋವಾತದಲ್ಲಿ ಬರುವ ವೃಷ್ಟಿಗತ ಪಂಚ ಭಗವದ್ರೂಪಗಳು.

| ಕ್ರಮ ಸಂಖ್ಯೆ | ಅಧಿಷ್ಠಾನ | ಭಗವದ್ರೂಪ | ನಾಮ | ಕಾರ್ಯಾಚರಣೆ |
|---|---|---|---|---|
| ೧. | ಮೇಘಗಳಲ್ಲಿ | ನಾರಾಯಣ | ಉದ್ಗೀಥನಾಮಕ | ಮೇಘಗಳಲ್ಲಿ ನೀರಿನ ಕಣಗಳು ಘನೀ ಭೂತವಾಗುವುದು |
| ೨. | ಮೇಘಗತ ಉದಕದಲ್ಲಿ | ವಾಸುದೇವ | ಪ್ರಸ್ತಾವನಾಮಕ | ಮೇಘಗತ ಜಲಕಣಗಳಿಂದ ಧಾರಾವೃಷ್ಟಿ |
| ೩. | ಗುಡುಗು–ಸಿಡಿಲು ಮೇಘಗರ್ಜನೆಯಲ್ಲಿ | ಸಂಕರ್ಷಣ | ನಿಧನನಾಮಕ | ಶಬ್ದೋತ್ಪತ್ತಿ |
| ೪. | ಮಿಂಚಿನಲ್ಲಿ | ಪ್ರದ್ಯುಮ್ನ | ಹಿಂಕಾರನಾಮಕ | ವಿದ್ಯುತ್ತುರೂಪದಲ್ಲಿ ಮಿಂಚಿನ ಪ್ರಕಾಶ |
| ೫. | ಸುರಿಯುತ್ತಿರುವ ಮಳೆಯ ನೀರಿನ ಹನಿಗಳಲ್ಲಿ | ಅನಿರುದ್ಧ | ಪ್ರತಿಹಾರ ನಾಮಕ | ವರ್ಷೋತ್ಪತ್ತಿ |

**ವಿಶೇಷ ವಿಚಾರ**

ಸಸ್ಯಗಳ ಬೆಳವಣಿಗೆಗೆ ಪೋಷಕ ದ್ರವ್ಯಗಳು ಅತ್ಯಗತ್ಯ. ಇವು ರಾಸಾಯನಿಕರೂಪ ದಲ್ಲಿರುವ ವಸ್ತುಗಳು. ಮಿಂಚುಹೊಳೆದಾಗ ಗುಡುಗು ಸಿಡಿಲು ಉಂಟಾದಾಗ ಉತ್ಪತ್ತಿಯಾಗುವ ವಿದ್ಯುತ್ತಿನಿಂದ ಗಾಳಿಯಲ್ಲಿರುವ ಸಾರಜನಕವೆಂಬ ಮೂಲವಸ್ತುವು ಆಮ್ಲಜನಕದೊಡನೆ ಸಂಯೋಗವಾಗಿ ಸಾರಜನಕದ ಆಕ್ಸೈಡುಗಳು ಉತ್ಪತ್ತಿಯಾಗುವವು. ಇವು ಮಳೆಯ ನೀರಿನಲ್ಲಿ ವಿಲೀನವಾದಾಗ, ಸಸ್ಯಪೋಷಕ ದ್ರವ್ಯಗಳು ಉತ್ಪತ್ತಿಯಾಗಿ ವೃಷ್ಟಿಯ ದ್ವಾರಾ ಭೂಮಿಯನ್ನು ಸೇರುವುವು. ಇದೇ ಪ್ರಕೃತಿಯಲ್ಲಿ ನಡೆಯುವ ಸಾರಜನಕದಚಕ್ರ. ಇದಕ್ಕೆಲ್ಲಾ ಶ್ರೀಪರಮಾತ್ಮನ ಪಂಚರೂಪಗಳೇ ಮುಖ್ಯ ಪ್ರವೃತ್ತಿಯಿಂದ ಕಾರಣ. ಹೀಗೆ ವಿಜ್ಞಾನಶಾಸ್ತ್ರದ ಅಧ್ಯಯನದಲ್ಲಿ ಸೃಷ್ಟಿಕರ್ತನ ಕೈವಾಡವನ್ನು ಕಾಣಬೇಕು. ಆಗ ವಿಜ್ಞಾನದ ಅಧ್ಯಯನ, ವಿಶ್ಲೇಷಣೆ, ಪರಿಶೋಧನೆ ಸಾರ್ಥಕವಾಗುವುದು. ॥ ೨೩ ॥

## ಪದ್ಯ ೨೪

**ಮೂಲ**

**ಗೃಹಕುಟುಂಬ ಧನಾದಿಗಳ ಸ ।**
**ನ್ನಹಗಳುಳ್ಳವರಾಗಿ ವಿಹಿತಾ ।**
**ವಿಹಿತ ಧರ್ಮ ಸುಕರ್ಮಗಳ ತಿಳಿಯದಲೆ ನಿತ್ಯದಲಿ ॥**
**ಅಹರ ಮೈಥುನ ನಿದ್ರೆಗೊಳಗಾ ।**
**ಗಿಹರು ಸರ್ವಪ್ರಾಣಿಗಳು ಹೃ ।**
**ದ್ಗುಹನಿವಾಸಿಯನರಿಯದಲೆ ಭವದೊಳಗೆ ತೊಳಲುವರು ॥೨೪॥**

**ಅವತರಣಿಕೆ**

ಹೃತ್ಕಮಲನಿವಾಸಿಯಾದ ಶ್ರೀಹರಿಯನ್ನು ತಿಳಿಯದಲೆ. ಐಹಿಕ ಸುಖಗಳೇ ಶಾಶ್ವತವೆಂದು ತಿಳಿದು ಸಂಸಾರದಲ್ಲಿ ಮಗ್ನರಾಗಿರುತ್ತಾರೆ, ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಗೃಹ** = ತನ್ನಿಂದ ನಿರ್ಮಿತವಾದ ಸ್ವಗೃಹ ಅಥವಾ ಪಿತ್ರಾರ್ಜಿತವಾದ ಮನೆ, **ಕುಟುಂಬ** = ಪತ್ನೀ ಪುತ್ರಾದಿಪರಿವಾರದಿಂದೊಡಗೂಡಿದ ಸಂಸಾರ, **ಧನಾದಿಗಳ** = ಸ್ವಯಾರ್ಜಿತ ಅಥವಾ ಅನ್ಯಾರ್ಜಿತವಾದ ದ್ರವ್ಯ ಇತ್ಯಾದಿಗಳಲ್ಲಿ, **ಸನ್ನಹವುಳ್ಳವರಾಗಿ** = ಮಗ್ನರಾಗಿ, **ವಿಹಿತ** = ಪರಮಾತ್ಮನಿಗೆ ಪ್ರೀತಿಕರವಾದ ಹಾಗೂ ವೇದೋಕ್ತವಾದ ವಿಧಿಗಳು, **ಅವಿಹಿತ** = ನಿಷಿದ್ಧಗಳಾದ, **ಧರ್ಮ** = ವರ್ಣ ಮತ್ತು ಆಶ್ರಮೋಚಿತವಾದ ಧರ್ಮಗಳು, **ಸುಕರ್ಮಗಳ** = ಉತ್ತಮ ಕ್ರಿಯೆಗಳನ್ನು, **ತಿಳಿಯದಲೆ** = ಅರಿಯದೇ, ಅಹಂಕರ್ತೃತ್ವಾಭಿಮಾನದಿಂದ, ಮೋಹಗ್ರಸ್ತರಾಗಿ, **ನಿತ್ಯದಲಿ** = ಪ್ರತಿದಿನದಲ್ಲೂ, **ಆಹರ** = ಉದರಪೋಷಣೆಗಾಗಿ ಅಭಕ್ಷ್ಯ ಭಕ್ಷಣ, **ಮೈಥುನ** = ಸ್ತ್ರೀಸಂಭೋಗಾದಿಗಳಲ್ಲಿ, **ನಿದ್ರೆಗೆ** = ಕಾಲ ಪ್ರಜ್ಞೆಯಿಲ್ಲದೇ ನಿದ್ರೆಮಾಡುವುದು, **ಸರ್ವಪ್ರಾಣಿಗಳು** = ಎಲ್ಲಾ ಜೀವರೂ (ಪರಮಾತ್ಮನನ್ನು ಮರೆತವರು), **ಒಳಗಾಗಿಹರು** = ಇದರಲ್ಲೇ ಮಗ್ನರಾಗಿ, ಜ್ಞಾನಶೂನ್ಯರಾಗಿ ಇದ್ದಾರೆ **ಹೃದ್ಗುಹನಿವಾಸಿಯನು** = ಹೃದಯಾಕಾಶದಲ್ಲಿ ಆವಾಸವಾಗಿರುವ ಬಿಂಬರೂಪೀ ಶ್ರೀಪರಮಾತ್ಮನನ್ನು, **ಅರಿಯದಲೆ** = ತಿಳಿಯದೆ (ಅವನ ಸರ್ವಕರ್ತೃತ್ವ ಹಾಗೂ ಅಸ್ತಿತ್ವವನ್ನು ಮರೆತು), **ಭವದೊಳಗೆ** = ಜನನ ಮರಣಾಖ್ಯವಾದ ಈ ನಶ್ವರಸಂಸಾರದಲ್ಲಿ, **ತೊಳಲುವರು** = ಕ್ಲೇಶಗಳಿಂದ ಬಾಧಿತರಾಗಿ ಶ್ರಮಪಡುತ್ತಾ ಒದ್ದಾಡುತ್ತಿರುವರು ॥ ೨೪ ॥

**೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ**

ಜನರು ಸದ್ಗತಿ ಐದತಕ್ಕ ಕರ್ಮ ದಾವದೋ ಅದರನ್ನ ಅರಿಯದೆ, ಸತ್ಕರ್ಮಗಳ ಆಚರಿಸುತ್ತೇವೆ ಎಂದು ಕರ್ಮಗಳ ಮಾಡಿ ಶ್ರಮಿಸುತ್ತಾರೆಂದು ಹೇಳತಾರೆ.

ಪ್ರತಿದಿನದಲ್ಲೂ (ಜನರುಗಳು) ಪರಮಾತ್ಮಗೆ ಪ್ರೀತಿಕರವಾದ ವೇದೋಕ್ತವಾದ ಸದ್ಗತಿ ಐದತಕ್ಕ ವಿಹಿತಕರ್ಮಗಳೇನು, ಪರಮಾತ್ಮಗೆ ಪ್ರೀತಿಕರವಲ್ಲದ ಕರ್ಮಗಳೇನು ಲೋಕೋಪಕಾರಕವಾದ ಧರ್ಮಗಳೇನು, ಸಮೀಚಿನವಾದ ವ್ರತೋಪಾಸನಾದಿಗಳೇನು ಇತ್ಯಾದಿ ಪುಣ್ಯಾಪುಣ್ಯಕರ್ಮಗಳ ಸ್ವಾಧೀನಕರ್ತೃತ್ವವನ್ನು ಆರೋಪಣೆ ಮಾಡಿಕೊಂಡು ತಿಳಿಯದೇ ಅನೇಕ ಸತ್ಕರ್ಮಗಳ ಮಾಡೋಣದರಿಂದ ಪುಣ್ಯಕರ್ಮಗಳು ಬಂಧನಕ್ಕೆ ಕಾರಣವಾಗಿ ದುಃಖಕ್ಕೆ ಗುರಿಮಾಡತವೆ ಎಂತ ತಿಳಿಯದೆ, ಭಾಗವತಪ್ರಮಾಣ–

**ಸರ್ವೇಷಾಮಪಿ ಜಂತೂನಾಂ ಸತತಂ ದೇಹ ಪೋಷಣೇ ।**

**ಅಸ್ತಿ ಪ್ರಜ್ಞಾ ವಿಜಾಯತ್ತಾ ಕೋ ವಿಶೇಷಸ್ತಯಾ ನೃಣಾಂ ॥**

ಅನಿತ್ಯವಾದ ದಾರುಪಾಷಾಣಾದಿಂದ ನಿರ್ಮಿತವಾದ ಮನೆ, ದಾರಾಪುತ್ರಾದಿಗಳ, ದ್ರವ್ಯ ಮೊದಲಾದ ಅನೇಕ ಪದಾರ್ಥಗಳು, ತಾವು ಅಲ್ಪಾಯು ಎಂತ ದೃಢ ಉಳ್ಳವರಾಗಿ, ಅನೇಕವಾದ ಶಾಶ್ವತವಾದ ಪ್ರಯತ್ನಾದಿಗಳಿಂದ ಯುಕ್ತರಾಗಿ ಭಗವಂತನ ಮರತು, ಉದರ ಪೂರ್ತಿಗಾಗಿ ವಿಧಿನಿಷೇಧಗಳಿಲ್ಲದಲೆ ನಾನಾ ಪದಾರ್ಥಗಳ ಭೋಜನವೇನು, ವಿಧಿನಿಷೇಧಗಳಿಲ್ಲದೆ ಸ್ತ್ರೀಸಂಭೋಗಾದಿಗಳೇನು, ಅಹೋರಾತ್ರಿಶ್ಚ ನಿದ್ರಾಯುಕ್ತರಾಗೋದೇನು ಇವುಗಳಿಗೆ ಸಮಸ್ತ ಜನರೂ ಇದರಲ್ಲೇ ಮಗ್ನರಾಗಿ ಮೃತಿ ಜನ್ಮ ಹೊಂದತಾ, ಸದ್ಗತಿ ಐದತಕ್ಕ ಜ್ಞಾನಮಾರ್ಗ ತಿಳಿಯದೆ ಜ್ಞಾನ ಶೂನ್ಯರಾಗಿ ಇದ್ದಾರೆ. ಇನ್ನೂ ಹ್ಯಾಂಗೆ ಇದ್ದಾರೆಂದರೆ, ಹೃದಯಾಕಾಶದಲ್ಲಿ ಆವಾಸನಾಗಿ ಇರತಕ್ಕ ಪರಮಾತ್ಮನ್ನ ತಿಳಿಯದೆ, ಅಪರೋಕ್ಷಕ್ಕಾಗಿ ಸತ್ಸಾಧನೆ ಮಾಡದೆ, ಜಡವಾದ ಪದಾರ್ಥಗಳಲ್ಲಿ ಕೇವಲ ಅಭಿಮಾನಯುಕ್ತರಾಗಿ, ಸಂಸಾರದಲ್ಲಿ ಶ್ರಮಪಡುತ್ತಾ ಜನನ ಮರಣಕ್ಕೆ ಕಾರಣವಾದ ಸಾಧನಗಳ ಮಾಡತಾ, ಈ ಐಹಿಕವೇ ಶಾಶ್ವತ ಎಂದು ತಿಳಕೊಂಡು ಇರೋವರಾಗಿ ಇದ್ದಾರೆ. ಈ ಪ್ರಕಾರ ಇರಕೂಡದು ಎಂತ ಮುಖ್ಯ ತಾತ್ಪರ್ಯ ॥ ೨೪ ॥

**೨. ಭಾವಪ್ರಕಾಶಿಕೆ**

ಹೆಂಡತಿ, ಮಕ್ಕಳು, ಮನೆ, ಬಾಗಿಲು, ಆಸ್ತಿ ಮೊದಲಾದುವುಗಳನ್ನು ಸಂಪಾದಿಸುವುದಕ್ಕೆ ಬೇಕಾದ ಸನ್ನಾಹಗಳನ್ನು ಮಾಡುತ್ತಾ ಅದರಲ್ಲೇ ಮೈಮರೆತು

ಧರ್ಮವಿಷಯದಲ್ಲಾಗಲೀ, ಕರ್ಮಗಳಲ್ಲೇ ಆಗಲಿ ವಿಹಿತವಾದುದು ಯಾವುದು, ಅವಿಹಿತವಾದುದು ಯಾವುದು ಎಂಬುದನ್ನೇ ಮರೆತು ಸರ್ವ ಪ್ರಾಣಿಗಳು ಬೇಕಾದ ಆಹಾರಗಳನ್ನು ತಿಂದು ಸ್ತ್ರೀಯಾದಿ ಭೋಗಗಳನ್ನನುಭವಿಸಿ ಸುಖನಿದ್ರೆಯಲ್ಲಾಸಕ್ತರಾಗಿರುವರು. ಇವು ಲೋಕದಲ್ಲಿ ಎಲ್ಲರಿಗೂ ಸಾಮಾನ್ಯ. ಆದರೆ ಹೃತ್ಕಮಲ ನಿವಾಸಿಯಾದ ಬಿಂಬರೂಪಿ ಪರಮಾತ್ಮನ ಕ್ರಿಯಾ ವಿಶೇಷವನ್ನರಿತು ಸರ್ವತ್ರಗತ ಬಿಂಬರೂಪವನ್ನು ಏಕೀಭಾವದಿಂದ ಉಪಾಸನೆ ಮಾಡುವವರು ಮಾತ್ರ ವಿರಳ. ಆದ್ದರಿಂದಲೇ ಜನರು ಸಂಸಾರದಲ್ಲಿ ನಾನಾಪ್ರಕಾರವಾದ ಕಷ್ಟಗಳನ್ನು ಅನುಭವಿಸುತ್ತಿರುವರು. ॥ ೨೪ ॥

**೩. ಭಾವದರ್ಪಣ**

ಶ್ರೀಹರಿ ಸರ್ವತ್ರಗತನಾಗಿ ಸರ್ವಕಾರ್ಯ ನಡೆಸತಕ್ಕ ವಿವೇಚನ ಜ್ಞಾನನವಿಲ್ಲದೆ ಕೆಡುತ್ತಾರೆಂದು ಹೇಳುತ್ತಾರೆ, ಗೃಹೇತಿ. ॥ ೨೪ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದಿ**

ಗೃಹ ಇತಿ॥ ಸನ್ನುಹ –ಸಾಮಗ್ರೀ ॥ ನನು ವೇದವಿಹಿತ ತದ್ವಿರುದ್ಧಯೋಃ ಸರ್ವ ವಿದಿತತ್ವಾತ್ ಕಥಂ ವಿಹಿತಾದ್ಯ ಜ್ಞಾನಂ ಸರ್ವೇಷಾಮ್ ॥ ಇತಿ ಚೇತ್ ನ॥ ಭಗವತ್ಪ್ರಿಯಂ ವಿಹಿತಮ್, ತದಪ್ರಿಯಂ ವಿಹಿತೇತರತ್ ॥ "ಅಂಕಯು ಪ್ರವೀತ್ತ ಭಿಧಾನಾತ್ ವಿಃ ಹರಿಃ ತದ್ಧಿತಂ ಇತಿ ನಿರುಕ್ತಿಃ ಅಸೂಚಿ ॥ ಏಕಾದಶ ತಾತ್ಪರ್ಯೇ ವಿಂಶಾಧ್ಯಾಯೇ– ಸ್ವತಃ ಸರ್ವಗುಣಾತ್ಮಾ ತು ವಿಷ್ಣುರೇಕ ಸನಾತನಃ ॥ ಅನ್ಯತ್ ಸರ್ವಂ ತತ್ಪ್ರಿಯತ್ವಾತ್ ಗುಣಃ ದೋಷಃ ತಥಾಽಪ್ರಿಯಮ್ ॥ ಸರ್ವ ಜ್ಞಾನವತಾಂ ದೃಷ್ಟಿಃ (ಅಜ್ಞಃ ಸನ್ ನಾವಗಚ್ಛತಿ)ಕಾಲ ದೇಶ ವಿಶೇಷೇಷು ಪ್ರೀತಿಬೇಧಂ ಅಪೇಕ್ಷ್ಯ ತು ॥ ಅವಿಜ್ಞಾತವತಃ ತಸ್ಯ ಮರ್ಯಾದಾ ವೇದತಃ ಕೃತಾ ॥ ಗುಣ ದೋಷಭಿರಾನಾಸ್ತಿ ಭಗವತ್ಪ್ರಿಯಮಂತರಾ ॥ ಗುಣದೋಷದೃಶೇಃ ದೋಷಃ ಹ್ಯನ್ಯತ್ರ ಭಗವತ್ಪ್ರಿಯಾತ್ ॥ ಗುಣಯದ್ ದೋಷತಾಂ ಈಯುಃ ದೋಷಾಶ್ಚ ಗುಣತಾಂ ಕ್ವಚಿತ್ ॥ ಅತೋ ನ ದೋಷಃ ದೋಷಃ ಸ್ಯಾತ್ ನ ಗುಣೋಪಿ

ಗುಣಃ ಭವೇತ್ ॥ ಭಗವತ್ಪ್ರೀತಿ ವಿಜ್ಞಾನಾತ್ ಗುಣದೋಷಾಭಿಧಾಂ ಯದಿ ॥ ಪಶ್ಯೇತ್ ತತ್ರ ಗುಣಾಯೈವ ವಿಪರ್ಯಾಸಂ ನ ಕಾರಯೇತ್॥ ಗುಣ–ದೋಷ–ಭಿಧಾಂ ಕ್ವಾಪಿ ಸ್ವಾತಂತ್ರ್ಯೇಣ ನ ಹಿ ಕ್ವಚಿತ್ ॥ ಇತಿ ಬ್ರಹ್ಮನಯೇ ॥ ೨೪ ॥

**ಕನ್ನಡಾರ್ಥ**

ಸಕಲ ಸಾಮಗ್ರಿಗಳಿಂದ ಸಂಪನ್ನರಾದರೂ ಸಹ ಆಹಾರ ವಿಹಾರಗಳ ಲಾಲಸೆಯಲ್ಲಿಯೇ ಮುಳುಗಿ ವಿಹಿತಾವಿಹಿತಗಳ ವಿವೇಕದಿಂದ ಉರುಳಿ ಸರ್ವಪ್ರಾಣಿಗಳು ಪರಮಾತ್ಮವಿಷಯಕ ಅಜ್ಞಾನದಿಂದ ಸಂಸಾರದಲ್ಲಿ ಕ್ಲೇಶಪಡುತ್ತಾರೆ. ಎಂದು ದಾಸರಾಯರು ನಿರೂಪಿಸಿರುತ್ತಾರೆ. ಸರ್ವಪ್ರಾಣಿಗಳಿಗೆ ವಿಹಿತಾವಿಹಿತ ಪರಿಜ್ಞಾನವು ಇಲ್ಲವೆಂಬ ಮಾತು ಸರಿಯೆನಿಸದು. ಯಾಕೆಂದರೆ ವೇದವಿಹಿತವಾದ ವೇದದಲ್ಲಿ ನಿಷೇಧಿಸಲ್ಪಟ್ಟ ವಿಹಿತಾವಿಹಿತಗಳ ಪರಿವೆಯು ಎಲ್ಲರಿಗೂ ಸಾಮಾನ್ಯವಾಗಿ ಇದ್ದೇ ಇರುತ್ತದೆ ಎಂದು ಚಿಕ್ಕ ಸಂದೇಹವು ಕೆಲವರಿಗೆ ಉದಯಿಸಬಹುದು. ಆದರೆ ಈ ಸಂದೇಹಕ್ಕೆ ಹೀಗೆ ಉತ್ತರಿಸುತ್ತೇವೆ. ಸಾಮಾನ್ಯವಾಗಿ ಎಲ್ಲರಿಗೂ ತಿಳಿದು ಬಂದಿರುವ ವಿಹಿತ ಅವಿಹಿತಗಳು ಇಲ್ಲಿ ದಾಸರಾಯರಿಗೆ ಸಮ್ಮತಗಳಲ್ಲ. ದಾಸರಾಯರ ದೃಷ್ಟಿಯಲ್ಲಿರುವ ವಿಹಿತಾವಿಹಿತಗಳೇ ಬೇರೆ. ಅವುಗಳನ್ನು ಸಾಮಾನ್ಯವಾಗಿ ಸರ್ವರೂ ತಿಳಿದಿರುವುದಿಲ್ಲ. ದಾಸರಾಯರ ಪರಿಭಾಷೆಯಲ್ಲಿರುವ ವಿಹಿತ–ಅವಿಹಿತ ಶಬ್ದಗಳ ಅರ್ಥವನ್ನು ವೇದದಲ್ಲಿ ವಿಹಿತ–ಅವಿಹಿತ ಎಂದು ಮಾಡದೇ ಬೇರೆ ರೀತಿಯಲ್ಲಿ ಹೇಳಬೇಕು,

ಭಾಗವತ ಏಕಾದಶ ತಾತ್ಪರ್ಯದಲ್ಲಿ ಸ್ಕಂ. ೧೧. ಅ. ೨೦ರಲ್ಲಿ ವಿಹಿತಾವಿಹಿತಗಳನ್ನು ಶ್ರೀಮದಾಚಾರ್ಯರು ಬೋಧಿಸಿರುತ್ತಾರೆ. ಅದರ ಸಂದರ್ಭವನ್ನು ಇಲ್ಲಿ ವಿವರಿಸುತ್ತೇವೆ. ಕಿಂ ವರ್ಣಿತೇನ ಬಹುನಾ ಲಕ್ಷಣಂ ಗುಣದೋಷಯೋಃ॥ ಗುಣದೋಷದೃಶಿಃ ದೋಷಃ ಗುಣಸ್ತೂಭಯ ವರ್ಜನಮ್ ॥ ಎಂಬ ಶ್ಲೋಕದಿಂದ ಹಿಂದಿನ ಅಧ್ಯಾಯದ ಕೊನೆಯಲ್ಲಿ ಇದು ಗುಣ, ಇದು ದೋಷ ಎಂದು ಕಾಣುವುದು (ಎಣಿಸುವದು) ದೋಷವೆಂದೂ, ಹೀಗೆ ಗುಣದೋಷಗಳನ್ನು ಎಣಿಸದಿರುವುದು ನೋಡದಿರುವುದು ಗುಣವೆಂದೂ ಹೇಳಲಾಗಿರುತ್ತದೆ. ಈ ಅಧ್ಯಾ

ಯದಲ್ಲಿ ಉದ್ಧವನು ವಿಧಿಯಾವುದು ? ನಿಷೇಧವಾವುದು ? ಎಂದು ಶಂಕಿಸಿ ಗುಣದೋಷಗಳ ದರ್ಶನವು ದೋಷವೆನಿಸುತ್ತಿದ್ದರೆ ವಿಧಿನಿಷೇಧರೂಪ ನಿಗಮ (ಶಾಸ್ತ್ರ) ಗಳು ಯಾಕೆ ಹೊರಡಬೇಕು ? ಈ ಶಾಸ್ತ್ರವೇ ಅನಾವಶ್ಯಕ ! ಎಂಬು ದಾಗಿ ಆಕ್ಷೇಪಿಸುತ್ತಾನೆ. ಅದಕ್ಕೆ ಶ್ರೀಕೃಷ್ಣನು ಪರಿಹಾರವನ್ನು ಯೋಗಾಃ ತ್ರಯೋ ಮಯಾ ಪ್ರೋಕ್ತಾಃ ಎಂಬುದಾಗಿ ಹೇಳಿರುತ್ತಾನೆ. ಶ್ರೀಕೃಷ್ಣಪರಮಾ ತ್ಮನ ಅಭಿಪ್ರಾಯವನ್ನು ಶ್ರೀಮದಾಚಾರ್ಯರು ವಿಶದಪಡಿಸಿ ಪ್ರಮಾಣಗಳಿಂದ ಸಮರ್ಥಿಸಿರುತ್ತಾರೆ (ತಾತ್ಪರ್ಯದಲ್ಲಿ) ಸಕಲ ಗುಣ ಸಂಪೂರ್ಣನು, ಸರ್ವ ಸ್ವತಂತ್ರನು, ಸನಾತನನು ಶ್ರೀಹರಿಯೊಬ್ಬನೇ ! ಮತ್ತಾರೂ ಅಲ್ಲ. ವಿಷ್ಣುವಿ ನಿಂದ ಭಿನ್ನವಾದುದೆಲ್ಲವೂ (ದೇಶ ಕಾಲ ಮುಂತಾದುವುಗಳು) ವಿಷ್ಣುವಿಗೆ ಪ್ರಿಯ ವಾದುದರಿಂದ ಗುಣವೆನಿಸುತ್ತದೆ. ವಿಷ್ಣುವಿಗೆ ಅಪ್ರಿಯವಾದುದು ದೋಷವೆನಿ ಸುತ್ತದೆ. ಹೀಗೆ ಜ್ಞಾನಿಗಳ ದೃಷ್ಟಿಯಿರುತ್ತದೆ. ಅಂದರೆ ಜ್ಞಾನಿಗಳು ಹೀಗೆ ಗುಣಗಳನ್ನು ತಿಳಿಯುತ್ತಾರೆ ಎಂದು ತಾತ್ಪರ್ಯ. ಆದರೆ ಅಜ್ಞನಾದ ಮನುಷ್ಯನು ಹೀಗೆ ತಿಳಿಯುವುದಿಲ್ಲ. ಅಜ್ಞಾನಿಗಳಿಗೋಸ್ಕರ ವಿಶಿಷ್ಟ (ಅಮುಕ ಕಾಲ ದೇಶಗ ಳಲ್ಲಿ ಇರುವ ವಿಷ್ಣುವಿನ ಪ್ರೀತಿ, ಅಪ್ರೀತಿಗಳನ್ನು ಕಂಡು ವೇದ ವಿಹಿತವಾದುದು ಗುಣ, ವೇದ ನಿಷಿದ್ಧವಾದುದು ದೋಷ ಎಂದು (ವೇದಗಳಿಂದ) ವ್ಯವಸ್ಥೆಯು- ನಿಯಮವು ಮಾಡಲ್ಪಟ್ಟಿರುತ್ತದೆ. ಅಜ್ಞಾನಿಯು ಜ್ಞಾನಿಯಂತೆ ಹರಿಪ್ರಿಯತ್ವ ಅಪ್ರಿಯತ್ವಗಳನ್ನು ತಿಳಿಯಲು ಅಶಕ್ತನಾದುದರಿಂದ ಶಾಸ್ತ್ರಗಳಿಂದಲೇ ಅವನು ಶಾಸ್ತ್ರವಿಹಿತವಾದುದು ಗುಣ, ನಿಷಿದ್ಧವಾದುದು ದೋಷ ಎಂದು ಸಾಮಾನ್ಯವಾಗಿ ತಿಳಿಯಬೇಕಾಗುತ್ತದೆ. ಆದರೆ ಹರಿಪ್ರೀತಿಯೇ ಗುಣ, ಅಪ್ರೀತಿಯೇ ದೋಷ. ಹರಿಯ ಪ್ರೀತಿ ಅಪ್ರೀತಿಗಳನ್ನು ಬಿಟ್ಟು ಗುಣದೋಷಗಳ ಸ್ವರೂಪಗಳಿರುವುದಿಲ್ಲ. ಜ್ಞಾನಿಗಳು ಹಾಗೆ ತಿಳಿಯುವುದಿಲ್ಲ. ಹರಿ ಪ್ರೀತಿಯಾಗುವದು, ಆಗದಿರುವದು ಇವುಗಳನ್ನು ಗುಣ ಹಾಗೂ ದೋಷಗಳೆಂದು ಕ್ರಮವಾಗಿ ತಿಳಿಯದೇ—ವೇದವಿಹಿ ತವು ಗುಣ-ನಿಷಿದ್ಧವಾದುದು ದೋಷ ಎಂದು ತಿಳಿಯುವುದು ದೋಷವೆನಿಸು ತ್ತದೆ. ಯಾಕೆಂದರೆ ಸತ್ಯವಚನ ಮುಂತಾದುವುಗಳು ವೇದವಿಹಿತಗಳಾಗಿದ್ದರೂ ಗುಣಗಳೆನಿಸಿದ್ದರೂ ಸಹ ಒಮ್ಮೊಮ್ಮೆ ದೋಷಗಳಾಗುತ್ತವೆ. (ಭಗವತ್ಪ್ರಿಯತ್ವ ವಿರವಾದ) ವೇದ ನಿಷಿದ್ಧಗಳಾದ ದೋಷಗಳು (ವೃತ್ರಹನನ ಮುಂತಾದುವು)

ಒವ್ಮೊಮ್ಮೆ ಗುಣಗಳಾಗುತ್ತವೆ (ಹರಿಪ್ರಿಯತ್ವವಿರುವಾಗ) ಆದುದರಿಂದ ವೇದನಿಷಿದ್ಧರೂಪವಾದ ದೋಷವು ನಿಜವಾದ ದೋಷಸ್ವರೂಪವೆನಿಸುವುದಿಲ್ಲ. ಹರಿಪ್ರೀತಿ ಹರಿಯ ಅಪ್ರೀತಿಗಳನ್ನು ಅನುಸರಿಸಿ ಗುಣ ದೋಷಗಳನ್ನು ವಿವೇಚಿಸಿ ವಿಂಗಡವಾಗಿ ತಿಳಿಯುವದು ಶುಭಕರವಾಗಿರುತ್ತದೆ. ಭಗವಂತನಿಗೆ ಪ್ರಿಯವಾಗ ದಿರುವುದನ್ನು ಗುಣವೆಂದೂ ಹರಿಗೆ ಪ್ರಿಯವಾದುದನ್ನು ದೋಷವೆಂದೂ ವಿಪರೀತವಾಗಿ ವ್ಯತ್ಯಾಸ ಮಾಡಬಾರದು-ತಿಳಿಯಕೂಡದು. ಯಾಕೆಂದರೆ ಹರಿಪ್ರಿಯವಾಗುವುದು ಪ್ರಿಯವಾಗದಿರುವುದನ್ನು ಬಿಟ್ಟು, ಬೇರೆ ರೀತಿಯಲ್ಲಿ "ವೇದವಿಹಿತವೇ ಗುಣ, ನಿಷಿದ್ಧವು ದೋಷ ಎಂದು ಮುಂತಾಗಿ ಹೇಳಿದ ರೀತಿಯಲ್ಲಿ ಗುಣ ದೋಷಗಳ ಪ್ರಬೇಧವಿರುವದಿಲ್ಲ ಎಂದು ಬ್ರಹ್ಮನಯವೆಂಬ ಪ್ರಮಾಣಗ್ರಂಥದಲ್ಲಿ ಹೇಳಲಾಗಿರುತ್ತದೆ.

ಹೀಗೆ ಹರಿಪ್ರಿಯತೆ ಅಪ್ರಿಯತೆಗಳು, ಗುಣದೋಷಗಳು ಇವುಗಳ ವಿವೇಕವನ್ನು ಮಾಡುವುದು ಶುಭಕರ. ಇದರಲ್ಲಿ ಅಧಿಕಾರವು ಉತ್ತಮಜ್ಞಾನಿಗೆ ಇರುವದರಿಂದ ವೇದೋಕ್ತವೇ ಗುಣ, ನಿಷಿದ್ಧವೇ ದೋಷ ಎಂಬುದಾದ ರೀತಿಯಲ್ಲಿ ಗುಣದೋಷಗಳನ್ನು ಉತ್ತಮ ಜ್ಞಾನಿಯು ಪರಿಗಣಿಸಕೂಡದು. ಅಜ್ಞರಿಗೆ ಹೀಗೆ ನಿಶ್ಚಯಿಸಲು ಶಕ್ತಿ ಇರದಿದ್ದರಿಂದ ಅವರು ವೇದದಲ್ಲಿ ಹೇಳಿದ ವ್ಯವಸ್ಥೆಯಂತೆ ಗುಣದೋಷಗಳನ್ನು ವಿವೇಚಿಸಬೇಕು. ಶ್ರೀಕೃಷ್ಣನು ನಿಷೇಧಿಸಿದ ಗುಣದೋಷ ವರ್ಜನವು ಅಧಿಕಾರಿ ಪ್ರಭೇದಗಳಿಂದ ಅನ್ವಯಿಸುವದರಿಂದ ಉತ್ತಮಜ್ಞಾನಿಗೆ ಹೇಳಿದುದನ್ನು ನೀನು ತಿಳಿಯದೇ ಸಂದೇಹದಿಂದ ಆಕ್ಷೇಪಿಸಿರುತ್ತೀ ! ಅದಕ್ಕೆ ಇದು ಉತ್ತರ ಎಂದು ವಿಶದ ಅಭಿಪ್ರಾಯದಿಂದ ಶ್ರೀಕೃಷ್ಣನು "ಯೋಗಾ ತ್ರಯಃ ಮಯಾ ಪ್ರೋಕ್ತಾಃ" ಎಂಬುದಾಗಿ ಉದ್ಧವನಿಗೆ ಉಪದೇಶಿಸಿರುತ್ತಾನೆ.

ಪ್ರಕೃತ ಸರ್ವರಿಗೂ ಇಂಥ ಹರಿಪ್ರಿಯರೂಪವಾದ ವಿಹಿತಗಳು, ಹರಿಗೆ ಅಪ್ರಿಯವಾದ ನಿಷೇಧಗಳು, ಪ್ರಾಯಃ ತಿಳಿದುಬರುವುದಿಲ್ಲವಾದುದರಿಂದ ಶ್ರೀದಾಸರಾಯರು ಶ್ರೀಕೃಷ್ಣೋಕ್ತವಾದವಿಹಿತಾವಿಹಿತಗಳನ್ನು ಅನುವಾದಿಸುತ್ತ ವಿಹಿತ ಧರ್ಮ ಸುಕರ್ಮ ನಿತ್ಯದಲ್ಲಿ ಎಂದು ಹೇಳಿದ್ದು ಅತ್ಯಂತ ಸಂಗತವೆಂದು ತಿಳಿಯಬೇಕು. ॥ ೨೪ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ವೈರಾಗ್ಯ ಹುಟ್ಟುವುದಕ್ಕೆ ಅಜ್ಞಜನ ನಡತೆಯನ್ನು ತಿಳಿಸುತ್ತಾರೆ, ಗೃಹವೆಂದು. ಮನೆ ಕುಟುಂಬವೆಂಬ ಪತ್ನಿ ಮೊದಲಾದ ಸ್ವಜನ, ಧನವೆಂಬ ಸ್ವರ್ಣ ಮೊದಲಾದ ದ್ರವ್ಯ, ಇವುಗಳ ಸನ್ನಹಗಳು ಎಂದರೆ, ಸಂಗ್ರಹಿಸಿ ಸಿದ್ಧಮಾಡಿಕೊಂಡು, ಇಲಿ ಇರುವು ಮೊದಲಾದ್ದರ ಹಾಗೆ ಶರೀರಭೋಗ ಮಾತ್ರದಲ್ಲಿ ಅಭಿಪ್ರಾಯವುಳ್ಳವರಾಗಿ, ವಿಹಿತ ಅವಿಹಿತವೆಂಬ ಶಾಸ್ತ್ರವಿಧಿ–ನಿಷೇಧಗಳನ್ನು ತಿಳಿದುಕೊಳ್ಳದೆ, ಧರ್ಮವೆಂಬ ಪ್ರಾಣಿರಕ್ಷಣ ಉಪಕಾರವನ್ನೂ ಸುಕರ್ಮವೆಂಬ ವರ್ಣಾಶ್ರಮಕ್ರಿಯೆಗಳನ್ನೂ ತಿಳಿಯದೆ, ಆಹಾರ ನಿದ್ರೆ ಸಂಭೋಗಗಳಲ್ಲೇ ಮಗ್ನರಾಗಿರುತ್ತಾ ಸರ್ವ ಅಜ್ಞಜನರೂ, ಹೃದಯವೆಂಬ ಗುಹೆಯಲ್ಲಿ ಆವಾಸಮಾಡುವ ಶ್ರೀಹರಿಯನ್ನು ತಿಳಿಯದೆ, ಜನನಾದಿ ಸಂಸಾರದಲ್ಲೇ ಅಲೆಯುತ್ತಾರೆ.

**ಸರ್ವೇಷಾಮಪಿ ಜಂತೂನಾಂ ಸತತಂ ದೇಹಪೋಷಣೇ ।**
**ಅಸ್ತಿಪ್ರಜ್ಞಾನಿ ಜಾಯತ್ತಾ ಕೋ ವಿಶೇಷಸ್ತಯಾ ನೃಣಾಂ ॥**

ಎಂಬ ಭಾಗವತಾರ್ಥರೀತ್ಯಾ ಮನುಷ್ಯ ಜನ್ಮ ಬಂದಾಗ್ಯೂ ಪರತ್ವಾದಿ ತತ್ತ್ವಗಳನ್ನು ತಿಳಿಯದವರು ಪಶುಗಳಂತೆ ವ್ಯರ್ಥಜನ್ಮವುಳ್ಳವರೆಂದು ಅಭಿಪ್ರಾಯ॥೨೪॥

## ಸರ್ವವ್ಯಾಖ್ಯಾನಸಾರಸಂಗ್ರಹ

ಈ ಜಗತ್ತಿನಲ್ಲಿ ಸಾಮಾನ್ಯವಾಗಿ ಎಲ್ಲಾ ಜೀವರೂ ಸಂಸಾರದಲ್ಲಿ ಮಗ್ನರಾಗಿರುವರು. ಸ್ವಂತವಾಗಿ ಆರ್ಜಿಸಿದ, ನಿರ್ಮಿಸಿದ ಸ್ವಗೃಹ ಪಿತ್ರಾರ್ಜಿತವಾಗಿ ಬಂದ ಆಸ್ತಿರೂಪವಾದ ಭೂಮಿ, ಮನೆ ಇತ್ಯಾದಿಗಳು ಭೋಗಸಾಮಗ್ರಿಗಳು.

ಪತ್ನೀ, ಪುತ್ರರು, ಮಾತಾಪಿತೃಗಳು, ಸಹೋದರ ಸಹೋದರಿಯರು ಮತ್ತು ಇತರ ಬಂಧುಭಾಂಧವರಾದಿ ಪರಿವಾರವು ಕುಟುಂಬವು.

ತನ್ನ ಸ್ವಂತ ದುಡಿಮೆಯಿಂದ ಸಂಪಾಸಿದ ದ್ರವ್ಯ, ಹಿರಿಯರಿಂದ ಬಂದ ಆಸ್ತಿ ಇತ್ಯಾದಿ ಸಾಮಗ್ರಿ ವಿಶೇಷಗಳು ಧನವೆನಿಸುವುವು.

ಇಂತು, ಪೂರ್ವೋಕ್ತಗಳಲ್ಲಿಯೇ ಪರಮಾಸಕ್ತರಾಗಿ ಆ ಭೋಗವಿಷಯು ಗಳನ್ನು ಇನ್ನೂ ಅಧಿಕವಾಗಿ ವರ್ಧಿಸಬೇಕೆಂಬ ಪ್ರಯತ್ನದಲ್ಲಿಯೇ ಇರುವ ನರರು ವಿಹಿತಾವಿಹಿತ ಕರ್ಮಗಳನ್ನು ಅರಿಯದೆ, ಭವದಲ್ಲಿ ತೊಳಲುವರು.

ಭಗವತ್ಪ್ರೀತಿಕರವಾದ ಕರ್ಮಗಳು ವಿಹಿತಕರ್ಮಗಳೆನಿಸುವುವು. ಕೇವಲ ವಿಷ್ಣುಪ್ರೀತ್ಯರ್ಥವಾಗಿ ಮಾಡುವ ಸುಕರ್ಮಗಳೆಲ್ಲವೂ ವಿಹಿತಕರ್ಮಗಳು. ಈ ವಿಧಿಯು ಸಾಮಾನ್ಯ ನರರಿಗೆ ಅನ್ವಯಿಸುವುದು. ಆದರೆ ಉತ್ತಮಾಧಿಕಾರಿಗಳಾದ ಜ್ಞಾನಿಗಳಿಗೆ "ವಿಷ್ಣುವಿನಲ್ಲಿ ಮಾಡುವ ಭಕ್ತಿ, ಅವನೇ ಸಕಲ ಕರ್ಮಗಳ ಕರ್ತನು. ಆತನಿಂದ ಪ್ರೇರಿತವಾಗಿ ಕರ್ಮಗಳೆಸಗುವವನು ಪ್ರತಿಬಿಂಬ ಭೂತನಾದ ಜೀವನು" ಈ ಜ್ಞಾನಾನುಸಂಧಾನವಿರುವುದು.

ಶ್ರುತಿಸ್ಮೃತೀರ್ಹರೇರಾಜ್ಞಾ ಎಂಬುದು ಸಾಮಾನ್ಯವಿಧಿ. ಮಮಕಾರ ದಿಂದ ಗ್ರಸ್ತನಾಗಿ, ಅಹಂಕರ್ತೃತ್ವಾಭಿಮಾನದಿಂದ ಮಾಡುವ ಕರ್ಮಗಳು ಸುಕರ್ಮ ಗಳಾದರೂ ಅವು ವಿಹಿತ ಕರ್ಮಗಳೆನಿಸುವುದಿಲ್ಲ. ಅಂತಹ ಕರ್ಮಾನುಷ್ಠಾನದಿಂದ ದೋಷ ಪ್ರಾಪ್ತಿಯೇ ಹೊರತು ಪುಣ್ಯಫಲ ಪ್ರಾಪ್ತಿಯಾಗಲಾರದು.

ಇದನ್ನು ಸರ್ವಥಾ ಮಾಡಲೇಕೂಡದು-ಎಂಬ ನಿಷಿದ್ಧಾತ್ಮಕವಾದ ಕರ್ಮ ಗಳೆಲ್ಲವೂ ಅವಿಹಿತ ಕರ್ಮಗಳು. ಅವು ಶ್ರೀಹರಿಯ ಪ್ರೀತ್ಯಾಸ್ಪದಗಳಲ್ಲ. ಶ್ರೀಹರಿಯ ಕರ್ತೃತ್ವವನ್ನು ಮರೆತು, ವಿಹಿತಕರ್ಮಗಳನ್ನು ಮಾಡಿದರೂ, ಅವು ಅವಿಹಿತಕರ್ಮಗಳೇ ಆಗುವುವು. ಇದೇ ಕರ್ಮ-ಧರ್ಮಗಳ ರಹಸ್ಯ.

ತನ್ನ ವರ್ಣೋಚಿತ ಆಶ್ರಮೋಚಿತವಾಗಿ, ವಿಷ್ಣುಪ್ರೀತ್ಯರ್ಥವಾಗಿ ಆಚ ರಿಸುವ ವಿಧಿಗಳೆಲ್ಲವೂ ಧರ್ಮಗಳೆನಿಸುವುವು. ಆ ಧರ್ಮಕ್ಕನುಗುಣವಾಗಿ ಆಚರಿ ಸುವ ಕರ್ಮಗಳು ಸುಕರ್ಮಗಳು.

ಪೂರ್ವೋಕ್ತ ಧರ್ಮ-ಕರ್ಮಗಳ ರಹಸ್ಯವನ್ನು ತಿಳಿಯದೇ ಪ್ರತಿನಿತ್ಯದ ಲ್ಲಿಯೂ ಕೇವಲ ಸಾಂಸಾರಿಕ ವಿಷಯಭೋಗಗಳಲ್ಲಿಯೇ ಆಸಕ್ತರಾಗಿರುವ ನರರು ಉದರ ಪೋಷಣೆಗಾಗಿ, ಅವಿಹಿತ ಕರ್ಮಗಳನ್ನು ಆಚರಿಸುತ್ತಾ ದ್ರವ್ಯಾರ್ಜನೆ ಮಾಡುವರು. ಉದರಂಭರಣವೇ ಅವರ ಬಾಳಿನ ಪರಮಗುರಿಯಾಗಿರುವುದು.

ಸ್ತ್ರೀಭೋಗಾದಿಗಳಲ್ಲಿ ಆಸಕ್ತಮನಸ್ಕರಾಗಿ, ವಿಹಿತಕರ್ಮರಹಿತರಾಗಿ, ತಮ್ಮ ಅಲಭ್ಯಲಭ್ಯವಾದ ಮಾನವಜನ್ಮವನ್ನು ವ್ಯರ್ಥಪಡಿಸಿಕೊಳ್ಳುವರು.

ಕಾಲಪ್ರಜ್ಞೆಯಿಲ್ಲದೆ ಜಡಮನಸ್ಕರಾಗಿ ನಿದ್ರೆಗೆ ವಶರಾಗಿ, ತಮ್ಮ ಅತ್ಯ ಮೂಲ್ಯ ಸಮಯವನ್ನು ಹಾಳುಮಾಡಿಕೊಳ್ಳುತ್ತಿರುವರು.

ಹೃತ್ಕಮಲದಲ್ಲಿ ಆವಾಸನಾಗಿರುವ ಮೂಲೇಶನಾಮಕನನ್ನು ಮರೆತು, ಅವನ ಸರ್ವಕರ್ತೃತ್ವವನ್ನೂ ತಿಳಿಯದೆ, ವೃಥಾ ಸಾಂಸಾರಿಕ ಕರ್ಮಗಳಲ್ಲಿ ಮಗ್ನ ರಾಗಿ ಭವದೊಳಗೆ ತೊಳಲಾಡುತ್ತಿರುವರು.

ಸಕಲ ಧರ್ಮಗಳೂ, ಕರ್ಮಗಳೂ ಹೃದ್ಗುಹನಿವಾಸಿಯಾದ ಬಿಂಬನಿಂ ದಲೇ ಪ್ರೇರಿತವಾಗಿ ನಡೆಯುತ್ತಿರುವುವು ಎಂಬ ರಹಸ್ಯವನ್ನು ಅರಿತು, ಬಿಂಬಗತ ಬಿಂಬನ ಕ್ರಿಯಾರೂಪವಾದ ಜ್ಞಾನದಿಂದ ಮಾಡುವ ಕರ್ಮವೇ ವಿಹಿತಕರ್ಮ ಮತ್ತು ಧರ್ಮ. ॥ ೨೪ ॥

## ಪದ್ಯ ೨೫

**ಮೂಲ**

ಜಡಜಸಂಭವ ಖಗ ಫಣಿಪ ಕೆಂ ।
ಜೆಡೆಯರಿಂದೊಡಗೂಡಿ ರಾಜಿಸು ।
ತಡವಿಯೊಳಗಿಪ್ಪನು ಸದಾ ಗೋಜಾದ್ರಿಜನು ಎನಿಸಿ ॥
ಉಡುಪನಿಂದಭಿವೃದ್ಧಿಗಳ ತಾ ।
ಕೊಡುತ ಪಕ್ಷಿ ಮೃಗಾಹಿಂಗಳ ಕಾ ।
ರೊಡಲ ಕಾವನು ತತ್ತದಾಹ್ವಯನಾಗಿ ಜೀವನರ ॥ ೨೫ ॥

**ಅವತರಣಿಕೆ**

ಶ್ರೀಪರಮಾತ್ಮನು ಗೋಜನಾಮಕನಾಗಿ, ವನಸ್ಥ ಸಕಲ ಪಕ್ಷಿಗಳು, ಮೃಗಗಳು, ಸರ್ಪಾದಿ ಪ್ರಾಣಿಗಳನ್ನು ಸಂರಕ್ಷಿಸುತ್ತಾನೆ ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಜಡಜಸಂಭವ** = ಕಮಲೋದ್ಭವರಾದ ಬ್ರಹ್ಮದೇವರು, **ಖಗ** = ಪಕ್ಷಿಶ್ರೇಷ್ಠರಾದ ಗರುಡದೇವರು, **ಫಣಿಪ** = ಸರ್ಪಶ್ರೇಷ್ಠನಾದ ಶೇಷದೇವರು, **ಕೆಂಜೆಡೆಯರಿಂದ** = ರಕ್ತವರ್ಣವಿಶಿಷ್ಟವಾದ ಜಡೆಯುಳ್ಳ ಶ್ರೀರುದ್ರದೇವರು ಇವರುಗಳಿಂದ (ಧೂರ್ಜಟಿ), **ಒಡಗೂಡಿ** = ಸಹಿತನಾಗಿ, **ರಾಜಿಸುತ** = ಪ್ರಕಾಶಮಾನನಾಗಿ, **ಅಡವಿಯೊಳಗಿಪ್ಪನು** = ವನದಲ್ಲಿ ಶ್ರೀಪರಮಾತ್ಮನು ವಿದ್ಯಮಾನನಾಗಿದ್ದಾನೆ. **ಸದಾ** = ಯಾವಾಗಲೂ, **ಗೋಜಾದ್ರಿಜನು** = ಪರ್ವತಗಳಲ್ಲಿ ಜನಿತರಾದ ಸ್ಥಾವರಜಂಗಮ ಜೀವರನ್ನು, **ಅದ್ರಿಜನಾಮಕ** = ಪರಮಾತ್ಮನು, **ಎನಿಸಿ** = ಅದ್ರಿಜನಾಮಕನೆಂದೆನಿಸಿ, **ಉಡುಪನಿಂದ** = ನಕ್ಷತ್ರಾಧಿಪತಿಯಾದ ಚಂದ್ರನ ದ್ವಾರಾ, **ಅಭಿವೃದ್ಧಿಗಳ** = ಚಂದ್ರನ ಅಮೃತಮಯವಾದ ಕಿರಣಗಳ ದ್ವಾರಾ ವನಸ್ಪತಿಗಳಿಗೆ, ವನ್ಯಪ್ರಾಣಿಗಳಿಗೆ ವೃದ್ಧಿರೂಪವಾದ ಉಪಚಯವನ್ನು ಕೊಡುತ್ತಾ **ಪಕ್ಷಿ** = ವನದಲ್ಲಿ ಸಂಚರಿಸುವ ಪಕ್ಷಿಗಳ ವರ್ಗ, **ಮೃಗ** = ಸಿಂಹ, ಹುಲಿ ಇತ್ಯಾದಿ ವನ್ಯಮೃಗ ವರ್ಗ, **ಅಹಿಗಳ** = ಸಂಚರಿಸುವ ಸರ್ಪವರ್ಗ (ಸರೀಸೃಪಗಳು), **ಜೀವರನ** = ಇತ್ಯಾದಿ ಪ್ರಾಣಿವರ್ಗವನ್ನು, **ಕಾರೊಡಲ** = ನೀಲಮೇಘವರ್ಣಯುಕ್ತನಾದ ಶ್ರೀಕೃಷ್ಣನು (ಕಾರ್ = ಕಪ್ಪಾದ ಮೇಘಗಳು. ಒಡಲ = ಶರೀರ), **ತತ್ತದಾಹ್ವಯನಾಗಿ** = ಗೋಜ, ಅದ್ರಿಜನಾಮಕನಾಗಿ ಶ್ರೀಪರಮಾತ್ಮನು, **ಕಾವನು** = ಸಂರಕ್ಷಿಸುವನು. ॥ ೨೫ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅಡವಿಯಲ್ಲಿರುವಂಥಾ ಜೀವರನ್ನ ಶ್ರೀಪರಮಾತ್ಮ ಸಂರಕ್ಷಿಸುತ್ತಾನೆ ಎಂತ ಹೇಳತಾರೆ.

ಕಮಲೋದ್ಭವರಾದ ಬ್ರಹ್ಮದೇವರು, ಪಕ್ಷಿಶ್ರೇಷ್ಠರಾದ ಗರುಡದೇವರು, ಸರ್ಪಗಳಲ್ಲಿ ಶ್ರೇಷ್ಠರಾದ ಶೇಷದೇವರು, ರಕ್ತವರ್ಣವಿಶಿಷ್ಟವಾದ ಜಡೆಗಳುಳ್ಳ ರುದ್ರದೇವರು ಈ ದೇವತೆಗಳ ಸಹ ಶ್ರೀಪರಮಾತ್ಮ ಪ್ರಕಾಶಮಾನನಾಗುತ್ತ, ಪರ್ವತಗಳಲ್ಲಿ ಜನಿತರಾದ ಸ್ಥಾವರಜಂಗಮಜೀವರನ್ನ ಅದ್ರಿಜನಾಮಕ ಪರಮಾತ್ಮನು ಚಂದ್ರಾಂತರ್ಗತನಾಗಿ ಚಂದ್ರಕಿರಣಗಳಿಂದ ಅಡವಿಯಲ್ಲಿ ಇದ್ದು ಗೋಜ ನಾಮಕ ಪರಮಾತ್ಮನು ಅಲ್ಲಲ್ಲಿ ಇದ್ದವನಾಗಿ, ಅಡವಿಯಲ್ಲಿರುವ ಮೃಗವೃಕ್ಷಾದಿ ಜೀವರನ್ನ ಗೋಜನಾಮಕ ಪರಮಾತ್ಮ ರಕ್ಷಕನಾಗಿನ್ನೂ, ಅಶ್ವಿನ್ಯಾದಿ ನಕ್ಷತ್ರಗಳ ಪಾಲನಮಾಡುವ ಚಂದ್ರಾಂತರ್ಗತನಾಗಿ ಇದ್ದು ಚಂದ್ರಕಿರಣಗಳಿಂದ ಚಂದಾಗಿ ವೃದ್ಧಿರೂಪವಾದ ಸಂರಕ್ಷಣೆಯನ್ನು ಮಾಡುತ್ತಾ ಮತ್ತು ಸ್ಥಿತಿಕರ್ತನಾದ ನೀಲ ಮೇಘಯುಕ್ತನಾದ ಶ್ರೀಕೃಷ್ಣ ಅರಣ್ಯಗತ ಜೀವರಿಗೆ ಅನ್ನಾದಿಗಳ ಕೊಟ್ಟು ರಕ್ಷಿಸತ್ತಾ, ಗೋಜನಾಮಕ ಪರಮಾತ್ಮನು ಪಕ್ಷಿ ಮೃಗ ಸರ್ಪ ಮೊದಲಾದ ಜೀವರನ್ನ ಸರ್ವಕಾಲದಲ್ಲೂ ರಕ್ಷಿಸುತ್ತಾ ಇರುವನು. ಗೋಜ, ಅದ್ರಿಜನಾಮಕ ಪರಮಾತ್ಮನು ಆಯಾ ಜೀವರಲ್ಲಿ ಆಯಾ ಜೀವನಾಮಗಳಿಂದ ಇದ್ದವನಾಗಿ ಜೀವನಪ್ರದ ನಾಗಿತಾನೆಂದು ತಾತ್ಪರ್ಯ.

**ತಾತ್ಪರ್ಯ**— ಅದ್ರಿಜನಾಮಕ ಪರಮಾತ್ಮನು ಪರ್ವತದಲ್ಲಿರುವ ವೃಕ್ಷಾದಿಗಳ ಮೃಗಾದಿಗಳ ಸಂರಕ್ಷಕನೆಂದು ತಾತ್ಪರ್ಯ. ॥ ೨೫ ॥

**೨. ಭಾವಪ್ರಕಾಶಿಕೆ**

ಅಡವಿಯಲ್ಲಿಯೂ, ಪರ್ವತಗಳಲ್ಲಿಯೂ ಸನ್ನಿಹಿತನಾದ ಪರಮಾತ್ಮನನ್ನು ವೇದೋಕ್ತ ಗೋಜ ಅದ್ರಿಜಾ ಎಂಬ ನಾಮಗಳಿಂದ ಧ್ಯಾನಿಸುವುದು ವಿಶೇಷ॥೨೫॥

**೩. ಭಾವದರ್ಪಣ**

ಬ್ರಹ್ಮಾದಿಗಳಿಂದ ಯುಕ್ತನಾದಂಥವನಾಗಿ ಗೋಜಾದ್ರಿಜನು ಎನಿಸಿ ಅರಣ್ಯದಲ್ಲಿದ್ದು ಚಂದ್ರನಿಂದಭಿವೃದ್ಧಿ ಕೊಡುತ್ತ ತನ್ನಾಮದಿಂದ ಸಂರಕ್ಷಿಸುವನೆಂದು ಹೇಳುತ್ತಾರೆ. ಜಡಜೇತಿ. ಜಡಜ–ಕಮಲ, ಇದರಿಂದ ಸಂಭವ ಬ್ರಹ್ಮ. ಖಗ–ಗರುಡ, ಫಣಿಪ–ಶೇಷ, ಕೆಂಜಡೆಯ–ರುದ್ರ, ಅಹಿ–ಸರ್ಪ, ಕಾರೊಡಲ–ಕಪ್ಪು ದೇಹ ಉಳ್ಳವ ಶ್ರೀಕೃಷ್ಣ. ॥ ೨೫ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಜಡಜ ಇತಿ ॥ ಜಡಂ–ಉದಕಮ್ ॥ ಖಗಪಃ–ಗರುಡಃ ॥ ಕೆಂಜಡೆಯು–ರುದ್ರಃ ॥ ಗೋಜಃ–ಗೌಃ-ಪೃಥ್ವೀ । ಜನಿತೋತಃ । ಪದವರ್ಣಕಾವಸರೇ ವೃತ್ತಂ ದರ್ಶಯಿಷ್ಯಾಮಃ ॥ ಉಡುಪಃ–ಚಂದ್ರಃ ॥ ಕಾರೊಡಲ–ಕೃಷ್ಣಃ ॥ ೨೫ ॥

### ಕನ್ನಡಾರ್ಥ

ಹಂಸಃ ಶುಚಿಷತ್ ಎಂಬ ಮಂತ್ರದಲ್ಲಿ ಹೇಳಿದ ಅಬ್ಜ, ಗೋಜ, ಅದ್ರಿಜ ಎಂಬ ರೂಪಗಳಿಂದ ಶ್ರೀಕೃಷ್ಣನು ಸಂರಕ್ಷಿಸುವನೆಂಬುದಾಗಿ ನಿರೂಪಿಸುತ್ತಾರೆ, ಜಡಜಸಂಭವ ಎಂಬ ಪದ್ಯದಿಂದ. ಜಡವೆಂದರೆ ನೀರು. ಖಗಪ–ಪಕ್ಷಿರಾಜನಾದ ಗರುಡ. ಕೆಂಜಡೆಯು–ರುದ್ರ. ಗೋಜ–ಗೋ ಎಂದರೆ ಭೂಮಿ, ಅಲ್ಲಿ ಅವತರಿಸಿದವನು ಎಂದು ಅರ್ಥ. ಉಡುಪ–ಚಂದ್ರ. ಕಾರೊಡಲ–ಕೃಷ್ಣ ॥ ೨೫ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಸರ್ವತ್ರದಲ್ಲಿದ್ದು ಜೀವರನ್ನು ರಕ್ಷಿಸುವ ದೇವರೂಪಸ್ಮರಣೋಪಾಯವನ್ನು ತಿಳಿಸುತ್ತಾರೆ, ಜಡಜ ಎಂದು. ಜಡಜಸಂಭವನೆಂದರೆ ಕಮಲಜನಾದ ಬ್ರಹ್ಮ, ಖಗ ಎಂಬ ಗರುಡ, ಫಣಿಪ ಎಂಬ ಶೇಷದೇವರು, ಕೆಂಜೆಡೆಯು ಎಂಬ ಈಶ್ವರ ಈ ಅಭಿಮಾನಿದೇವತೆಗಳಿಂದ ಕೂಡಿ ಪ್ರಕಾಶಿಸುತ್ತಾ, ಅಡವಿ ಎಂಬ ಕಾಡಿನಲ್ಲೂ, ಬೆಟ್ಟದಲ್ಲೂ ಸಹ ದೇವರು, ಗೋ ಎಂಬ ಭೂಮಿಯಲ್ಲಿ ಹುಟ್ಟಿದ ವನದಲ್ಲಿ ಗೋಜ ಎಂಬ ಹೆಸರಿನಿಂದಲೂ, ಅದ್ರಿ ಎಂಬ ಬೆಟ್ಟಗಳಲ್ಲಿ ಹುಟ್ಟಿದ ಮೃಗಾದಿಗಳಲ್ಲಿ ಅದ್ರಿಜ ಎಂಬ ಹೆಸರಿನಿಂದಲೂ ಇರುವನು. ಉಡುಪ ಎಂಬ ನಕ್ಷತ್ರಪತಿ ಚಂದ್ರಕಿರಣದಿಂದ ಅಭಿವೃದ್ಧಿಯನ್ನು ಕೊಡುತ್ತಾ, ಪಕ್ಷಿ, ಮೃಗ, ಅಹಿ ಎಂಬ ಸರ್ಪಗಳು ಕಾರೊಡಲ ಎಂದರೆ, ಕಪ್ಪಾದ ಕ್ರೂರವಾದ ದೇಹಗಳನ್ನೂ, ಆಯಾಯ ಹೆಸರುಗಳಿಂದಿದ್ದು ರಕ್ಷಿಸುವನು. ಇದರಿಂದ ಗೋಜ ಅದ್ರಿಜ ಇತ್ಯಾದಿ ಶ್ರುತಿನಾಮದ ಅರ್ಥಗಳು ನಿರೂಪಿತವಾದವು. ॥ ೨೫ ॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಜಡಜಸಂಭವ ಎಂದರೆ ನಾಭೀಕಮಲದಲ್ಲಿ ಜನಿಸಿದ ಕಮಲೋದ್ಭವರಾದ ಚತುರ್ಮುಖಬ್ರಹ್ಮದೇವರು. ಖಗಶಬ್ದದಿಂದ ಪಕ್ಷಿಶ್ರೇಷ್ಠರಾದ ಗರುಡದೇವ ರೆಂದು ತಿಳಿಯಬೇಕು. ಫಣಿಪ ಎಂದರೆ ಸರ್ಪಶ್ರೇಷ್ಠರಾದ ಶೇಷದೇವರೆಂದು ತಿಳಿಯಬೇಕು. ಕೆಂಜೆಡೆಯ ಎಂದರೆ ರಕ್ತವರ್ಣವಾದ ಕೂದಲುಳ್ಳ ರುದ್ರದೇವರು. ಇಂತು ಬ್ರಹ್ಮ, ಗರುಡ, ಶೇಷ, ರುದ್ರಾದಿ ದೇವತಾವರ್ಗದಿಂದ ಸಹಿತನಾಗಿ ಶ್ರೀಪರಮಾತ್ಮನು ಅಡವಿಯಲ್ಲಿರುವ ಮಹಾವೃಕ್ಷಗಳಲ್ಲಿ, ವನ್ಯಮೃಗಗಳಲ್ಲಿ ಆವಾಸ ವಾಗಿದ್ದು ಪ್ರಕಾಶಮಾನನಾಗಿದ್ದಾನೆ.

ದೇವತಾವರ್ಗದಿಂದೊಡಗೂಡಿ ರಾಜಿಸುತ್ತಾ, ಅಡವಿ ಪರ್ವತಗಳಲ್ಲಿರುವ ಪ್ರಾಣಿಗಳಲ್ಲಿರುವ ಶ್ರೀಪರಮಾತ್ಮನಿಗೆ ಗೋಜ ಮತ್ತು ಅದ್ರಿಜನೆಂದು ಹೆಸರು.

ನಕ್ಷತ್ರಾಧಿಪತಿಯಾದ ಚಂದ್ರನಿಗೆ ಉಡುಪನೆಂದು ಹೆಸರು. ಶ್ರೀಪರಮಾತ್ಮನು ಚಂದ್ರಾಂತರ್ಗತನಾಗಿದ್ದು, ಚಂದ್ರನ ಅಮೃತಕಿರಣಗಳ ದ್ವಾರಾ ವನಸ್ಥ ಸಸ್ಯ ವರ್ಗಗಳನ್ನು ಅಭಿವೃದ್ಧಿ ಮಾಡುವನು.

ಅಡವಿಯಲ್ಲಿ ಸಂಚರಿಸುವ ಪಕ್ಷಿಗಳ ಸಮೂಹ, ವ್ಯಾಘ್ರಾದಿ ವನ್ಯಮೃಗ ಗಳು, ಸರ್ಪಜಾತಿಗೆ ಸೇರಿದ ಸರೀಸೃಪಗಳಿಗೆ ಆಯಾಯಾ ಕಾಲಕ್ಕೆ ಆಹಾರವನ್ನು ಒದಗಿಸುತ್ತಾ ನೀಲಮೇಘಶ್ಯಾಮನಾದ ಶ್ರೀಹರಿಯು ಸಂರಕ್ಷಿಸುವನು. ॥ ೨೫ ॥

## ಪದ್ಯ ೨೬

**ಮೂಲ**

ಅಪರಿಮಿತ ಸನ್ಮಹಿಮ ನರಹರಿ ।
ವಿಪಿನದೊಳು ಸಂತೈಸುವನು ಕಾ ।
ಶ್ಯಪಿಯನಳೆದವ ಸ್ಥಳಗಳಲಿ ಸರ್ವತ್ರ ಕೇಶವನು ॥
ಖಪತಿ ಗಗನದಿ ಜಲಗಳಲಿ ಮಹ ।
ಶಫರನಾಮಕ ಭಕ್ತರನ ನಿ ।
ಷ್ಕಪಟದಿಂದಲಿ ಸಲಹುವನು ಕರುಣಾಳು ದಿನದಿನದಿ ॥ ೨೬ ॥

**ಅವತರಣಿಕೆ**

ಪ್ರಕೃತಿಯು ನಾನಾಸ್ಥಳಗಳಲ್ಲಿ ವ್ಯಾಪ್ತನಾಗಿದ್ದು ಸಕಲ ಜಗತ್ತನ್ನೂ ಸಂರಕ್ಷಿಸುತ್ತಿರುವ ಶ್ರೀಪರಮಾತ್ಮನ ಭಗವದ್ರೂಪಗಳನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಅಪರಿಮಿತ** = ಎಣಿಸಲಸಾಧ್ಯವಾದ, ಮಿತಿಯೇ ಇಲ್ಲದ, ಅಪರಿಚ್ಛಿನ್ನವಾದ, **ಸನ್ಮಹಿಮ** = ನಿರ್ದೋಷವಾದ ಮಹಾಮಹಿಮಸಂಪನ್ನನಾದ, **ನರಹರಿ** = ಶ್ರೀನರಸಿಂಹ ದೇವರು, **ವಿಪಿನದೊಳು** = ಕಾಡಿನಲ್ಲಿ (ಅಟವ್ಯಾಂ **ನಾರಸಿಂಹಾಶ್ಚ**) **ಸಂತೈಸುವನು** = ರಕ್ಷಿಸಿ, ಮುಕ್ತರನ್ನಾಗಿ ಮಾಡುವನು. **ಕಾಶ್ಯಪಿಯನಳೆದವ** = ಭೂಮಿಯನ್ನು ತನ್ನ ಪಾದದಿಂದ ಅಳೆದ ಶ್ರೀವಾಮನ ದೇವರು, **ಸ್ಥಳಗಳಲಿ** = ಗ್ರಾಮಾದಿ ಪ್ರದೇಶಗಳಲ್ಲಿ (**ಸ್ಥಳೀ ರಕ್ಷತು ವಾಮನಃ**) **ಸರ್ವತ್ರ** = ಸರ್ವಸ್ಥಳಗಳಲ್ಲಿ ಸರ್ವಕಾಲಗಳಲ್ಲಿ, ಸರ್ವಾವಸ್ಥೆಗಳಲ್ಲಿ, **ಕೇಶವನು** = ಕೇಶವನಾಮಕ ಪರಮಾತ್ಮನು. **ಖಪತಿ** = ಸಕಲೇಂದ್ರಿಯ ಪ್ರೇರಕನಾದ ಹೃಷೀಕೇಶನು, **ಗಗನದಿ** = ಆಕಾಶದಲ್ಲಿ ಸಂಚರಿಸುವ ಜೀವರುಗಳನ್ನು, **ಜಲಗಳಲಿ** =

ಜಲಚರ ಪ್ರಾಣಿಗಳಾದ ಜೀವರನ್ನು, **ಮಹಶಫರನಾಮಕ**=ಸರ್ವೋತ್ತಮ ನಾದ ಶ್ರೀಮತ್ಸ್ಯರೂಪೀ ಶ್ರೀಪರಮಾತ್ಮನು, **(ಜಲೇಷು ಮಾಂ ರಕ್ಷತಿ ಮತ್ಸ್ಯಮೂರ್ತಿಃ) ಭಕ್ತರನ**=ತನ್ನ ಅಂತರಂಗ ಭಕ್ತರನ್ನು, **ನಿಷ್ಕಪಟದಿಂದಲಿ**=ನಿರ್ವಂಚನೆಯಿಂದ, **ದಿನದಿನದಿ**=ಪ್ರತಿನಿತ್ಯದಲ್ಲಿಯೂ, **ಕರುಣಾಳು**=ದಯಾಳುವಾದ ಶ್ರೀಪರಮಾತ್ಮನು, **ಸಲಹುವನು**=ಕಾಪಾಡುವನು. ॥ ೨೬ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮ ಭಕ್ತರನ್ನ ಸಂರಕ್ಷಿಸತಕ್ಕ ಸ್ಥಳಾಂತರ ಭಗವದ್ರೂಪಗಳ ಹೇಳತಾರೆ.

ಪ್ರಳಯೋದಕದೋಪಾದಿಯಲ್ಲಿ ಅಪರಿಚ್ಛಿನ್ನವಾದ ನಿರ್ದುಷ್ಟವಾದ ಮಹಿಮಾವುಳ್ಳ ಶ್ರೀನರಸಿಂಹದೇವರು ಅರಣ್ಯದೊಳು ಅಟವ್ಯಾಂ ನಾರಸಿಂಹಶ್ಚ ಎಂತ ಪ್ರಮಾಣ ಇರುವುದರಿಂದ ಅಡವಿಯಲ್ಲಿ ಸಂರಕ್ಷಣ ಮಾಡತಕ್ಕವನು ಶ್ರೀನರಸಿಂಹರೂಪಿ ಪರಮಾತ್ಮನು. ಜೀವರುಸಂಸಾರಾಖ್ಯ ಅರಣ್ಯದಲ್ಲಿರುವುದರಿಂದ ಇಂಥಾ ಅಡವಿಯಲ್ಲಿ ರಕ್ಷಕನು ಶ್ರೀನೃಸಿಂಹನು. ಇಂಥಾ ನೃಸಿಂಹದೇವರ ಉಪಾಸನಾದಿಂದ ಸಂಸಾರಾಖ್ಯ ಅಡವಿ ದಾಟಿಸಿ ಮುಕ್ತರನ್ನಾಗಿ ಮಾಡುವನು. ಗ್ರಾಮ ಪಟ್ಟಣ ಮೊದಲಾದ ಪ್ರದೇಶದಲ್ಲಿ ಸ್ಥಳೀ ರಕ್ಷತು ವಾಮನಃ ಎಂತಲೂ, ಸ್ಥಳೀ ಚ ಮಾಯಾವಟುವಾಮನೋವ್ಯಾತ್ತ್ರಿವಿಕ್ರಮಃ ಎಂತ ಭಾಗವತ ಷಷ್ಠಸ್ಕಂಧದಲ್ಲಿ ಉಕ್ತಪ್ರಕಾರ ವಾಮನರೂಪಿ ಪರಮಾತ್ಮ ರಕ್ಷಕನು. ಈ ವಾಮನನು ಎಂಥಾವನೆಂದರೆ ಕಶ್ಯಪಋಷಿಯ ಮಗಳಾದ ಭೂಮಿದೇವಿಯನ್ನ ತನ್ನ ಪಾದದಿಂದ ಅಳದವನು. ಸರ್ವತಃ ಪಾತು ಸರ್ವತ್ರದಲ್ಲೂ ಸಂರಕ್ಷಣ ಮಾಡುವನು, ಕೇಶವನು ಎಂದರೆ, ಹಿರಣ್ಯಗರ್ಭಕಃ ಪ್ರೋಕ್ತಃ ಈಶಃ ಶಂಕರ ಏವ ಚ । ಸೃಷ್ಟ್ಯಾದಿನಾ ವರ್ತಯತಿ ತೌ ಯತಃ ಕೇಶವೋ ಭವಾನ್ ॥ ಎಂತ ಹರಿವಂಶೋಕ್ತಿ ಇರುವದ್ದರಿಂದಲೂ, ಕಶ್ಚ ಈಶಶ್ಚ ಕೇಶೌ ಬ್ರಹ್ಮರುದ್ರೌ ವಾತಿ ವರ್ತಯತಿ ಇತಿ ಕೇಶವಃ ಎಂತ ಇರುವದ್ದರಿಂದಲೂ, ಸ ಏವ ಸೂರ್ಯಸಂಸ್ಥಃ ಸನ್ನೂಲೋಕಂ ತಪತಿ ಕೇಶವಃ ಎಂತ ಐತರೇಯಭಾಷ್ಯದಲ್ಲಿರುವದ್ದರಿಂದಲೂ, ಸರ್ವತ್ರದಲ್ಲೂ ಕಾಪಾಡತಕ್ಕವನು

ಕೇಶವನಾಮಕ ಪರಮಾತ್ಮನು. ಇನ್ನೂ ಎಂಥಾವನೆಂದರೆ, ಖಪತಿ, ಖಾನಾಂ ಇಂದ್ರಿಯಾಣಾಂ ಪತಿಃ ಪ್ರೇರಕಃ ಎಂತ ಅರ್ಥ. ಹೃಷೀಕೇಶ ಎಂತಅರ್ಥ. ಮಾತೃ ಕಾನ್ಯಾಸದಲ್ಲಿ ಖಂ ಖಪತಯೇ ನಮಃ ಎಂತ ಪ್ರಯೋಗವದೆ. ಈ ಪರಮಾತ್ಮ ಆಕಾಶದಲ್ಲಿ ಸಂಚಾರಮಾಡುವ ಜೀವರನ್ನ ಸಂರಕ್ಷಣ ಮಾಡತಾನೆಂತ ತಾತ್ಪರ್ಯ. ಇನ್ನೂ ಉದಕದಲ್ಲಿ ಸಂಚಾರಮಾಡತಕ್ಕ ಜೀವರನ್ನ, ಜಲೇಷು ಮಾಂ ರಕ್ಷತಿ ಮತ್ಸ್ಯಮೂರ್ತಿಃ ಯಾದೋ ಗಣೇಭ್ಯೋ ವರುಣಸ್ಯ ಪಾಶಾತ್ ಎಂತ ಇರುವ ದ್ದರಿಂದ ಶ್ರೀಮಚ್ಛರೂಪೀ ಪರಮಾತ್ಮನು ರಕ್ಷಕನು. ಸರ್ವತ್ರದಲ್ಲಿ ತನ್ನ ಭಕ್ತ ರನ್ನ ಭಕ್ತರ ಸ್ವರೂಪಸ್ವಭಾವವನುಸರಿಸಿ ತಾನು ನಿಷ್ಕಾಪಟ್ಯದಿಂದ ಯುಕ್ತನಾಗಿ ಕೇವಲ ಅಂತಃಕರಣದಿಂದ ದಿನಪ್ರತಿದಿನದಲ್ಲೂ ಬಾಹ್ಯರೂಪವಾದ ವಿಪತ್ತು ಗಳನ್ನು ಪರಿಹಾರಮಾಡಿಯೂ, ಅಂತರದಲ್ಲಿ ಇರುವ ದ್ವೇಷಿಗಳಾದ ಸತ್ಸಾಧನಿಗೆ ವಿರುದ್ಧರಾದ ದೇಹಗತ ದೈತ್ಯರನ್ನ ನಿಗ್ರಹಮಾಡಿ ಸಂರಕ್ಷಣ ಮಾಡತಾನೆಂತ ತಾತ್ಪರ್ಯ ॥ ೨೬ ॥

೨. ಭಾವಪ್ರಕಾಶಿಕೆ

ಭಾಗವತ ಷಷ್ಟಸ್ಕಂಧದಲ್ಲಿರುವ ನಾರಾಯಣವರ್ಮದಲ್ಲಿ ದುರ್ಗೇಷ್ವಟ ವ್ಯಾಜಿಮುಖಾದಿಷುಪ್ರಭುಃ ಪಾಯಾನ್ನೃಸಿಂಹೋಸುರಯೂಥಪಾರಿಃ ದುರ್ಗಗ ಳಲ್ಲೂ, ಅಡವಿಗಳಲ್ಲೂ, ಯುದ್ಧರಂಗದಲ್ಲಿಯೂ, ಪ್ರಭುವಾದ ನರಸಿಂಹನು ಪಾಲಿಸಲಿ ಎಂದು ಹೇಳಿರುವರು. ಸ್ಥಲೀ ಚ ಮಾಯಾ ವಟುವಾಮನೋವ್ಯಾತ್ ಎಂಬ ಭಾಗವತ ವಾಕ್ಯಾನುಸಾರ ಭೂಮಿಯನ್ನಳೆದ ವಾಮನರೂಪಿ ಪರಮಾ ತ್ಮನು ಸ್ಥಳಗಳಲ್ಲಿ ಪಾಲಿಪನು. ಸರ್ವತ್ರ ಕೇಶವನು ರಕ್ಷಿಸುವನು ಮೂರಡಿ ಭೂಮಿಯನ್ನು ಬೇಡಿ ತ್ರಿವಿಕ್ರಮರೂಪದಿಂದ ಅಳೆದು ಸ್ವರ್ಗವನ್ನು ಇಂದ್ರನಿಗೆ ಇತ್ತುದರಿಂದ ತ್ರಿವಿಕ್ರಮರೂಪಕ್ಕೆ ಖಪತಿ ಎಂದು ನಾಮಾಂತರ, ಮೂರು ಹೆಜ್ಜೆ ಯಿಂದ ಅಳೆದ ಪ್ರಯುಕ್ತ ತ್ರಿವಿಕ್ರಮ ಎಂತಲೂ, ಪ್ರಪಂಚವನ್ನೆಲ್ಲಾ ವ್ಯಾಪಿಸಿದ ಪ್ರಯುಕ್ತ ವಿಶ್ವರೂಪಿ ಎಂತಲೂ, ಅವಕಾಶವುಳ್ಳ ಎಲ್ಲಾ ಸ್ಥಳಗಳನ್ನೂ ೨ ಹೆಜ್ಜೆ ಗಳಿಂದ ತಾನು ಆಕ್ರಮಿಸಿ ನ ವೈ ತೃತೀಯಸ್ಯ ತದೀಯಮಣ್ವಪಿ ಮೂರನೆ ಹೆಜ್ಜೆಗೆ ಅಣುಮಾತ್ರವೂ ಸ್ಥಳವಿಲ್ಲದೆ ವ್ಯಾಪಿಸಿದ್ದರಿಂದ ಖಪತಿ ಎಂದರೆ ಆಕಾಶಕ್ಕೆ ಪತಿ

ಎಂತಲೂ ಅರ್ಥ. ಈ ಮೂರು ಹೆಸರು ತ್ರಿವಿಕ್ರಮಮೂರ್ತಿಗೆ ಎಂದು ತಿಳಿಯ ಬೇಕು. ತ್ರಿವಿಕ್ರಮಃ ಖೇವತು ವಿಶ್ವರೂಪಃ ಆದ್ದರಿಂದಲೇ ನಾರಾಯಣವರ್ಮ ದಲ್ಲಿ ವಿಶ್ವರೂಪಿಯಾದ ತ್ರಿವಿಕ್ರಮನು ಆಕಾಶದಲ್ಲಿ ರಕ್ಷಿಸಲಿ ಎಂದು ಹೇಳಿರು ವರು. ಜಲೇಷು ಮಾಂ ರಕ್ಷತು ಮತ್ಸ್ಯಮೂರ್ತಿಃ ಎಂಬ ವಾಕ್ಯಾನುಸಾರವಾಗಿ ಜಲದಲ್ಲಿ ಮತ್ಸ್ಯಮೂರ್ತಿಯು ಇದ್ದು ರಕ್ಷಿಪ. ಇಂತಹ ರೂಪಗಳನ್ನು ಧರಿಸಿ ಪರಮ ದಯಾಳುವಾದ ಸ್ವಾಮಿಯು ಭಕ್ತರನ್ನು ಸರ್ವಪ್ರಕಾರ ರಕ್ಷಿಸುವನು.

॥ ೨೬ ॥

### ೩. ಭಾವದರ್ಪಣ

ಜಲೇ ರಕ್ಷತು ವಾರಾಹಃ ಸ್ಥಲೇ ರಕ್ಷತು ವಾಮನಃ । ಅಟವ್ಯಾಂ ನಾರಸಿಂಹಶ್ಚ ಸರ್ವತಃ ಪಾತು ಕೇಶವಃ ॥ ಎಂಬ ವಚನಾನುಸಾರ ಸರ್ವರನ್ನು ಪಾಲಿಸುವನೆಂದು ಹೇಳುತ್ತಾರೆ, ಅಪರಮಿತೇತಿ. ಕಾಶ್ಯಪೀ–ಭೂಮಿ. ಶಫರ-ಮತ್ಸ್ಯ ॥೨೬॥

### ೪. ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ

ಅಪರಿಮಿತ ಇತಿ ॥ ಕಾಶ್ಯಪೀ–ಪೃಥ್ವಿ ॥ ಜಲೇ ರಕ್ಷತು ವಾರಾಹಃ ಸ್ಥಲೇ ರಕ್ಷತು ವಾಮನಃ। ಅಟವ್ಯಾಂ ನಾರಸಿಂಹಶ್ಚ ಸರ್ವತಃ ಪಾತು ಕೇಶವಃ।ಇತ್ಯುಕ್ತೇಃ

॥ ೨೬ ॥

### ಕನ್ನಡಾರ್ಥ

ಜಲ, ಸ್ಥಲ, ಅಟವೀ ಸರ್ವತ್ರ ಸ್ಮರಿಸಬೇಕಾದ ರೂಪಗಳನ್ನು ತಿಳಿಸುತ್ತಾರೆ. ಕಾಶ್ಯಪೀ–ಭೂಮಿ, ಈ ಪದ್ಯವು ಜಲೇ ರಕ್ಷತು ಎಂಬ ಶ್ಲೋಕದ ಅನುವಾದ ರೂಪವಾಗಿದೆ. (ಶ್ಲೋಕಾರ್ಥವು ಸುಗಮವಿರುತ್ತದೆ.) ॥ ೨೬ ॥

### ೫. ಶ್ರೀಗುರುಹೃದಯಪ್ರಕಾಶಿಕೆ

ಅನಂತಮಹಿಮನಾದ ನರಸಿಂಹರೂಪನು ವಿಪಿನವೆಂಬ ಅಡವಿಯಲ್ಲಿ ರಕ್ಷಿಸುವನು. ಕಾಶ್ಯಪಿ ಎಂಬ ಭೂಮಿಯನ್ನು ಒಂದೇ ಹೆಜ್ಜೆಯಲ್ಲಿ ಅಳೆದ ವಾಮನ ರೂಪ ದೇವರು ಎಲ್ಲಾ ಪ್ರದೇಶಗಳಲ್ಲೂ ಸಲಹುವನು. ನಿಂತಲ್ಲಿ ಕೂತಲ್ಲಿ

ಸರ್ವತ್ರ ಕೇಶವಮೂರ್ತಿಯು ನಿತ್ಯದಲ್ಲೂ ರಕ್ಷಿಸುವನು. ಖಪತಿ ಎಂಬ ಅಂತರಿಕ್ಷ ಸ್ವಾಮಿ ತ್ರಿವಿಕ್ರಮರೂಪನು ಆಕಾಶದಲ್ಲಿದ್ದು ರಕ್ಷಿಸುವನು. ಜಲದಲ್ಲಿ ಶಫರನೆಂಬ ಮತ್ಸ್ಯರೂಪನು ರಕ್ಷಿಸುವನು. ಹೀಗೆ ನಿಷ್ಕಪಟದಿಂದ ಎಂದರೆ ಯಾವ ಪ್ರಯೋಜನವೂ ಇಲ್ಲದೆ ಭಕ್ತರನ್ನು ರಕ್ಷಿಸುವುದರಿಂದ ದೇವರು ಕರುಣಾಳು ವೆಂದು ಸ್ಮರಿಸಬೇಕೆಂದರ್ಥ.

**ಜಲೇರಕ್ಷತು ವಾರಾಹಃ ಸ್ಥಳೇ ರಕ್ಷತು ವಾಮನಃ |**
**ಅಟವ್ಯಾಂ ನಾರಸಿಂಹಶ್ಚ ಸರ್ವತಃ ಪಾತು ಕೇಶವಃ ||**

ಎಂಬ ವಿಷ್ಣುರಕ್ಷಾಸ್ತೋತ್ರಾರ್ಥವು ವಿವರಿಸಲ್ಪಟ್ಟಿತು. ॥ ೨೬ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಪರಮಾತ್ಮನು ಸಕಲ ದೋಷಗಳಿಂದ ವಿದೂರನು. ಅನಂತಕಲ್ಯಾಣ ಗುಣಗಣಪರಿಪೂರ್ಣನು. ಇದರಿಂದಲೇ ಅಪರಿಮಿತ ಸನ್ಮಹಿಮನು.

ಅರಣ್ಯದಲ್ಲಿ ಸಂಚರಿಸುತ್ತಿರುವಾಗ ಶ್ರೀಪರಮಾತ್ಮನೇ ನಮ್ಮನ್ನು ನರಸಿಂಹ ರೂಪದಿಂದ ಸಂರಕ್ಷಿಸುವನು. ಸಂಸಾರವೆಂಬುದೇ ಒಂದು ಮಹಾ ಅರಣ್ಯ. ಜನ್ಮಾಂತರ ಪ್ರಾಪ್ತಿಯೇ ಅರಣ್ಯಸದೃಶವಾದ ಭವದಲ್ಲಿ ತಿರುಗಾಟ. ಇದರಿಂದ ಪಾರು ಮಾಡುವವನು ನೃಸಿಂಹರೂಪೀ ಶ್ರೀಪರಮಾತ್ಮನು.

ಕಶ್ಯಪ ಮಹಾಮುನಿಗಳು ಒಮ್ಮೆ ಪರಶುರಾಮನಿಂದ ಅಶ್ವಮೇಧಯಾಗ ವನ್ನು ಮಾಡಿಸಿ, ಅವನಿಂದ ದಕ್ಷಿಣೆಯ ರೂಪದಲ್ಲಿ ಭೂಮಂಡಲವನ್ನು ಪ್ರತಿಗ್ರಹ ಮಾಡಿದರು. ಇದರಿಂದ ಭೂಮಿಗೆ ಕಾಶ್ಯಪೀ ಎಂತ ಹೆಸರು ಬಂದಿತು. ಶ್ರೀಪರಮಾತ್ಮನು ಅದಿತಿ–ಕಶ್ಯಪರಲ್ಲಿ ವಾಮನನಾಮಕನಾಗಿ ಪ್ರಾದುರ್ಭವಿಸಿ, ಬಲಿಚಕ್ರವರ್ತಿಯಿಂದ ಮೂರಡಿಪಾದದಷ್ಟು ಭೂಮಿಯನ್ನು ಬೇಡಿ, ತ್ರಿವಿಕ್ರಮನಾಗಿ ಬೆಳೆದು ಚತುರ್ದಶಭುವನಗಳನ್ನು ತನ್ನ ಪಾದದ್ವಯಗಳಿಂದ ಅಳೆದನು. ಅಂತಹ ತ್ರಿವಿಕ್ರಮರೂಪೀ ಶ್ರೀವಾಮನನು ಗ್ರಾಮ, ಪಟ್ಟಣ, ನಗರ ಇತ್ಯಾದಿ ಸ್ಥಳಗಳಲ್ಲಿದ್ದು ಜನರನ್ನು ರಕ್ಷಿಸುವನು.

ಸರ್ವಸ್ಥಳಗಳಲ್ಲಿ, ಸರ್ವಕಾಲಗಳಲ್ಲಿ, ಸರ್ವಾವಸ್ಥೆಗಳಲ್ಲಿ ಕೇಶವನಾಮಕ ಶ್ರೀಪರಮಾತ್ಮನಿದ್ದು, ಸಲಹುವನು.

ಪುರುಷನ ದೇಹವು ಆಪಾದಮೌಳಿಪರ್ಯಂತ ವ್ಯಾಪಿಸಿದೆ. ಈ ದೇಹವು ಪಿಂಡಾಂಡರೂಪದ ಬ್ರಹ್ಮಾಂಡವಾಗಿದೆ. ಬ್ರಹ್ಮಾಂಡವು ಚತುರ್ದಶಭುವನಾತ್ಮಕವಾದದ್ದು. ಅಂತೆಯೇ, ಪಾದಾಗ್ರದಿಂದ ಪ್ರಾರಂಭಿಸಿ, ಶಿರಃಪರ್ಯಂತ, ಈ ಸ್ಥೂಲದೇಹದಲ್ಲಿ ಪಾತಾಳಾದಿ ಸತ್ಯಲೋಕಪರ್ಯಂತ ೧೪ ಲೋಕಗಳು ಸೂಕ್ಷ್ಮರೂಪದಲ್ಲಿ ವ್ಯಾಪ್ತವಾಗಿವೆ. ಹದಿನಾಲ್ಕು ಲೋಕಗಳನ್ನು ಅಳೆದ ತ್ರಿವಿಕ್ರಮನೇ ಈ ಶರೀರಾದ್ಯಂತ ವ್ಯಾಪಿಸಿಕೊಂಡು, ಶರೀರಗತ ಸಕಲೇಂದ್ರಿಯಗಳಿಗೆ ಪ್ರೇರಕನಾಗಿದ್ದಾನೆ. ಹೃಷೀಕ–ಎಂದರೆ, ಇಂದ್ರಿಯಗಳು. ಈಶ–ಎಂದರೆ ನಿಯಾಮಕ. ಇದರಿಂದ ಇಂದ್ರಿಯ ನಿಯಾಮಕನಾದ ಹೃಷೀಕೇಶನೇ ತ್ರಿವಿಕ್ರಮನು. ಅವನೇ ಖಪತಿಯು. ಈ ರೀತಿ ಅನ್ವಯಾರ್ಥ ಮಾಡಿಕೊಳ್ಳಬಹುದು. ಸರ್ವತ್ರ ವ್ಯಾಪಿಸಿರುವ ಆಕಾಶದಲ್ಲಿ ತ್ರಿವಿಕ್ರಮನಾಮಕ ಹೃಷೀಕೇಶರೂಪೀ ಶ್ರೀಪರಮಾತ್ಮನಿದ್ದು ಖಪತಿ ಎಂದೆನಿಸಿ ಅಂತರಿಕ್ಷದಲ್ಲಿ ಸಂಚರಿಸುವ ಪಕ್ಷಿ ಮೊದಲಾದ ಖೇಚರ ಪ್ರಾಣಿಗಳನ್ನು ಸಂರಕ್ಷಿಸುವನು.

ವೇದೋದ್ಧಾರಕನಾದ ಶ್ರೀಮತ್ಸ್ಯಮೂರ್ತೀ ಪರಮಾತ್ಮನು. ಸರ್ವಜಲಾಶಯಗಳಲ್ಲಿದ್ದು, ಜಲಚರಜಂತುಗಳ ರಕ್ಷಣೆ ಮಾಡುವನು.

**"ಜಲೇಷು ಮಾಂ ರಕ್ಷತಿ ಮತ್ಸ್ಯಮೂರ್ತಿಃ |**

**ಯಾದೋ ಗಣೇಭ್ಯೋ ವರುಣಸ್ಯ ಪಾಶಾತ್"||** ಎಂಬ ಪ್ರಮಾಣವಿದೆ.

ಜಲಾಭಿಮಾನಿ ವರುಣನಲ್ಲಿ ಅಂತರ್ಯಾಮಿರೂಪವು ಶ್ರೀಮತ್ಸ್ಯರೂಪ. ಇದರಿಂದ ಉದಕದಲ್ಲಿ ಶ್ರೀಮತ್ಸ್ಯರೂಪೀ ಹರಿಯ ಸ್ಮರಣೆ.

ಭೂಮಿ, ಉದಕ, ಆಕಾಶ, ಇತ್ಯಾದಿ ಸರ್ವದೇಶಗಳಲ್ಲಿ ವ್ಯಾಪ್ತನಾಗಿರುವ ವಿಶ್ವರೂಪೀ ಶ್ರೀಹರಿಯು ತನ್ನ ಭಕ್ತರನ್ನು ನಿರ್ವಂಚನಾಭಾವದಿಂದ ಸಂರಕ್ಷಿಸುತ್ತಿರುವನು. || ೨೬ ||

## ಪದ್ಯ ೨೭

**ಮೂಲ**

**ಕಾರಣಾಂತರ್ಯಾಮಿ ಸ್ಥೂಲವ |**
**ತಾರ ವ್ಯಾಪ್ತಾಂಶಾದಿರೂಪಕ |**
**ಸಾರ ಶುಭಪ್ರವಿವಿಕ್ತನಂದ ಸ್ಥೂಲ ನಿಸ್ಸಾರ ||**
**ಆರು ರಸಗಳನರ್ಪಿಸಲ್ಪರಿ |**
**ಗೀ ರಹಸ್ಯವ ಪೇಳದೆ ಸದಾ |**
**ಪಾರಮಹಿಮನ ರೂಪಗುಣಗಳ ನೆನೆದು ಸುಖಿಸುತಿರು || ೨೭ ||**

**ಅವತರಣಿಕೆ**

ಕಾರ್ಯಕಾರಣವಸ್ತುಗಳಲ್ಲಿ ಅಂತರ್ಯಾಮಿಯಾಗಿರುವ ಅಪಾರ ಮಹಿಮಾ ಸಂಪನ್ನನ ರೂಪಗುಣಕ್ರಿಯಾವಿಶೇಷಗಳನ್ನು ಸ್ಮರಿಸುತ್ತಾ ಆನಂದಿಸುತ್ತಿರು ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಕಾರಣ**=ಸೃಷ್ಟಿಗೆ ಕಾರಣವಾದ ವಸ್ತುಗಳಲ್ಲಿ, ಜೀವರು ಸ್ಥೂಲಶರೀರ ದಿಂದ ಸೃಷ್ಟಿಗೆಬರುವರು. ಅದಕ್ಕೆ ಅನಾದಿಲಿಂಗಶರೀರಗತ ಜಡಕರ್ಮವೇ ಕಾರಣ. **ಅಂತರ್ಯಾಮಿ**=ಅಂತಃಸ್ಥಿತನಾಗಿದ್ದು (ತ್ರಿಗುಣಾಂತರ್ಗತನಾಗಿ ಕರ್ಮವಾಚಕ ನಾಗಿರುವ) **ಸ್ಥೂಲ**=ಸ್ಥೂಲಾಕಾರವಾದ ಶರೀರದಲ್ಲಿ ಪುರುಷಾಕಾರನಾಗಿ, **ಅವತಾರ**=ಜೀವಾಕಾರನಾಗಿ ಜೀವಾಂತರ್ಯಾಮಿಯಾಗಿ, **ವ್ಯಾಪ್ತ**=ಜೀವನಲ್ಲಿ ವ್ಯಾಪ್ತನಾಗಿ ಬಿಂಬರೂಪದಿಂದ, **ಅಂಶ**=ಮೂಲನಾರಾಯಣನಿಂದ ಅಭಿನ್ನಗ ಳಾದ ವಾಸುದೇವಾದಿ ಅನಂತ ಅಂಶರೂಪಗಳಿಂದ, **ಆದಿರೂಪಕ**=ಇತ್ಯಾದಿ ರೂಪವಿಶೇಷಗಳಿಂದ ಇದ್ದು, **ಸಾರ**=ಸಾರಭೂತವಾದ ವಸ್ತುಗತ ರಸವಿಶೇಷ, **ಶುಭ**=ಶ್ರೀಪರಮಾತ್ಮನು ಸ್ವೀಕರಿಸುವ ಸ್ವಾಖ್ಯರಸ, **ಪ್ರವಿವಿಕ್ತ**=ಅಸದೃಶ

ಹಾಗೂ ಪರಿಪೂರ್ಣವಾದ ಆನಂದರಸ, **ಸ್ಥೂಲ** = ಸ್ಥೂಲರೂಪವಾದ ಜಡರಸ, **ನಿಸ್ಸಾರ** = ಸ್ವಾಖ್ಯರಸ ಸ್ವೀಕಾರಾನಂತರ, ಜೀವರ ದೇಹೋಪಚಯಕ್ಕೆ ಕೊಡುವ ಉಚ್ಛಿಷ್ಟರಸ, **ಆರು ರಸಗಳನು** = ಹೀಗಿರುವ ಆರುವಿಧವಾದ ರಸಗಳನ್ನು, **ಅರ್ಪಿಸಲು** = ರಸಾಂತರ್ಗತ ಭಗವದ್ರೂಪಗಳಿಗೂ ಸ್ವಬಿಂಬನಿಗೂ ಐಕ್ಯಚಿಂತನಾಪೂರ್ವಕ ಅರ್ಪಣೆ ಮಾಡುತ್ತಿರು. **ಅಲ್ಪರಿಗೆ** = ಅಯೋಗ್ಯರೂ, ಅನಧಿಕಾರಿಗಳೂ ಆದವರಿಗೆ **ಈ ರಹಸ್ಯವ** = ಸರ್ವರಸಾರ್ಪಣೆಯ ಕ್ರಮದ ಮರ್ಮವನ್ನು, **ಪೇಳದೆ** = ತಿಳಿಸದೇ, **ಅಪಾರಮಹಿಮನ** = ಅಗಣಿತಮಹಿಮಾಸಂಪನ್ನನಾದ ಆ ಅಪ್ರಮೇಯನ, **ರೂಪ** = ಅನಂತರೂಪವಿಶೇಷಗಳನ್ನು, **ಗುಣಗಳ** = ಅನಂತಾನಂತ ಪರಿಪೂರ್ಣವಾದ ಗುಣಸ್ತೋಮಗಳನ್ನು, **ನೆನೆದು** = ಮನಸಾ ಸ್ಮರಿಸುತ್ತಾ, ಹಾಗೂ ಧ್ಯಾನಕ್ಕೆ ವಿಷಯುವನ್ನಾಗಿ ಮಾಡಿಕೊಂಡು, **ಸುಖಿಸುತಿರು** = ಸಂತೋಷದಿಂದ ಹಿಗ್ಗುತ್ತಿರುವವನಾಗು. ॥ ೨೭ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪ್ರಾಕೃತ ಆರು ರಸಗಳ ಪರಮಾತ್ಮ ಸ್ವೀಕರಿಸೋದಿಲ್ಲ ಎಂತ ಹೇಳತಾರೆ.

ಜೀವರು ಸ್ಥೂಲದೇಹದಿಂದ ಸಹಿತರಾಗಿ ಸೃಷ್ಟಿಗೆ ಬರಬೇಕಾದರೆ ಕಾರಣದಾವದೆಂದರೆ, ಅನಾದಿಲಿಂಗಶರೀರಗತ ಅನಾದಿಜಡಕರ್ಮ ಕಾರಣ. ಈ ಕಾರಣದಿಂದ ಸೃಷ್ಟಿಯು. ಇದರಿಂದ ಪ್ರಾಣಿಗಳಿಗೆ ಇರುವ ಲಿಂಗಶರೀರ ಭಂಗಮಾಡಿಸಿ, ಅವರವರ ಸ್ವಸ್ವರೂಪಸುಖದುಃಖ ಕೊಡೋಣವೇ ಪ್ರಯೋಜನ ಹೊರತು, ಇದರಿಂದ ಪರಮಾತ್ಮಗೆ ಏನೂ ಪ್ರಯೋಜನವಿಲ್ಲ. ಜೀವರ ಪ್ರಯೋಜನಾರ್ಥವೇ ಸೃಷ್ಟಿ. ದೇವರು ಪೂರ್ಣಜ್ಞಾನಾನಂದಸ್ವರೂಪನಾದವ. ಈ ಕಾರಣದಿಂದಲೇ ಜೀವರಿಗೆ ಸ್ಥೂಲದೇಹ ಕೊಡತಾನೆ. ಸೃಷ್ಟಿಗೆ ಆದಿರೂಪನಾದ ಅಂಶಿಸಾಂಕೇತನಾದ ನಾರಾಯಣದೇವರು ಅಂಶವಿಶೇಷಗಳಿಂದ ಆಯಾ ಜೀವಾಕಾರದಂತೆ ಅವತಾರಗಳ ಮಾಡಿ, ಆಯಾ ಜೀವರ ಸ್ವರೂಪದಲ್ಲಿ ಪ್ರವೇಶಮಾಡಿ, ಜೀವಗೆ ಬಿಂಬನಾಗಿ, ಜೀವನಲ್ಲಿ ವ್ಯಾಪ್ತನಾಗಿ ಇದ್ದಾನೆ. ಅಂಶರೂಪದಿಂದ ಸ್ಥೂಲದೇಹದಲ್ಲೂ ವ್ಯಾಪ್ತ

ನಾಗಿ ಇದ್ದಾನೆ. ಈ ಪ್ರಕಾರ ಅಂತರ್ಯಾಮಿಯಾಗಿದ್ದು, ಈ ಅಂತರ್ಗತನಾದ ಪರಮಾತ್ಮ ದಾವದಕ್ಕೂ ಸಂಬಂಧಪಡದೆ ಪ್ರಕರ್ಷೇಣ ಪ್ರತ್ಯೇಕನಾದ, ಅಸದೃಶವಾದ ಪೂರ್ಣವಾದ ಆನಂದ ಉಳ್ಳವ. ಇಂಥಾ ಪರಮಾತ್ಮ ಸ್ವೀಕಾರ ಮಾಡತಕ್ಕ ಮಂಗಳಕರವಾದ ಸಾರರಸವೆಂಬೋದು, ಜೀವಭುಕ್ತಪದಾರ್ಥಗತ ತದಾಕಾರ ರಸರೂಪಗಳಾದ ತನ್ನ ಸ್ವಾಖ್ಯಗಳು ದಾವದವೆ ಇವೇನೇ ಸಾರರಸ. ಇದೇ ಪರಮಾತ್ಮ ಸ್ವೀಕಾರ ಮಾಡೋದು. ತದನ್ಯವಾದ ಜೀವರು ಭುಂಜಿಸತಕ್ಕ ಜಡರಸಗಳು ಪರಮಾತ್ಮಗೆ ನಿಸ್ಸಾರವೆಂತ ಕರಸತವೆ. ಜಡವಾದ ಷಡ್ರಸಗಳ ಪರಮಾತ್ಮ ಸ್ವೀಕಾರ ಮಾಡೋದಿಲ್ಲ ಎಂತಲೂ, ಅಪ್ರಾಕೃತವಾದ ಸ್ವಾಖ್ಯರಸಗಳ ಅರ್ಪಣೆ ಮಾಡೆಂತಲೂ, ಎರಡು ಪ್ರಕಾರ ಅನುಸಂಧಾನವಿರಬೇಕು ಎಂತ ತಾತ್ಪರ್ಯ. ಪ್ರಕಾರಾಂತರ ಅನುಸಂಧಾನಕ್ರಮ– ಪ್ರಕಾಶಾದಿಗಳಿಗೆ ಕಾರಣವಾದ ದೀಪಗತ ರೂಪಗಳಿಗೆ ಸಾರವೆಂಬ ತೈಲಾದಿಗತ ಸ್ವರಸ ಒಂದು, ಸ್ವದೇಹದಲ್ಲಿ ಅಂತರ್ಯಾಮಿ ರೂಪಕ್ಕೆ ಶುಭವೆಂಬ ಜಾತಿವಿಹಿತ ಭೋಜನಪದಾರ್ಥಗತ ಸ್ವರಸ ಎರಡು, ಸ್ಥೂಲದೇಹಸ್ವರೂಪಕ್ಕೆ ವಿವಿಕ್ತ ಎಂದರೆ, ಜಗದ್ವಿಲಕ್ಷಣ ತದಾಶ್ರಯ ರಸರೂಪ ಮೂರು, ಅವತಾರವೆಂಬ ರಾಮಕೃಷ್ಣಾದಿ ರೂಪಕ್ಕೆ ಸ್ಥೂಲಾನ್ನಗತ ಆನಂದವೆಂಬ ಸ್ವರೂಪರಸರೂಪ ನಾಲ್ಕು, ವ್ಯಾಪ್ಯನೆಂಬ ಜಗದಾವರಕ ಅಂತರ್ಬಹಿಸ್ಥಿತ ರೂಪಕ್ಕೆ ತದ್ಗತ ಸ್ಥೂಲವಸ್ತುಸ್ಥಿತಿ ಸ್ವರಸರೂಪ ಐದು, ಅಂಶವೆಂಬ ಮಾನುಷ ಪಶ್ವಾದಿರೂಪಕ್ಕೆ ಅಸಾರವೆಂಬ ತೃಣಾದಿಗತ ಸ್ವರೂಪರಸ ಆರು. ಈ ಪ್ರಕಾರ ಷಡ್ರಸಗಳ ಸಮರ್ಪಣ ಮಾಡುತಿರು. ಇದರನ್ನ, ಗೋಪ್ಯವಾದ ಈ ವಿಷಯುಗಳನ್ನ ಅಯೋಗ್ಯರಾದವರಿಗೆ ತಿಳಿಸದೆ, ನಿರಂತರದಲ್ಲಿ ಹೃದ್ಗತನಾದ ಸರ್ವಾಂತರ್ಯಾಮಿಯಾದ, ಆದ್ಯಂತಶೂನ್ಯವಾದ ಮಹಿಮಾ ಉಳ್ಳ ಪರಮಾತ್ಮನ ಧ್ಯಾನಾದಿಗಳಿಂದ ರೂಪ, ವೇದಶಾಸ್ತ್ರಾನುಸಾರ ಗುಣಗಳ ಸ್ಮರಣೆ ಮಾಡುತ್ತಾ ಸುಖದಿಂದ ಇರೋವನಾಗು ಎಂತ ತಾತ್ಪರ್ಯ. ॥ ೨೭ ॥

## ೨. ಭಾವಪ್ರಕಾಶಿಕೆ

ಭಗವದ್ರೂಪಗಳಲ್ಲಿ ಕಾರಣರೂಪ, ಅಂತರ್ಯಾಮಿರೂಪ, ಸ್ಥೂಲರೂಪ, ಅವತಾರರೂಪ, ವ್ಯಾಪ್ತರೂಪ, ಅಂಶರೂಪಗಳೆಂದು ಆರುವಿಧಗಳುಂಟು. ಇವರಂತೆ ರಸಗಳಲ್ಲಿಯೂ ಸಾರರಸ, ಶುಭರಸ, ಪ್ರವಿವಿಕ್ತರಸ, ಆನಂದರಸ, ಸ್ಥೂಲ

ರಸ, ನಿಸ್ಸಾರಗಳೆಂದು ಆರು ವಿಧಗಳುಂಟು. ಕಾರಣರೂಪವೆಂದರೆ ಕಾರ್ಯವಾದ ಒಂದೊಂದು ಪದಾರ್ಥಕ್ಕೂ ಕರ್ತಾ ಕಾರಣ ಇವೆರಡೂ ಇರುವವು. ಘಟವೆಂಬುವದು ಕಾರ್ಯ. ಇದಕ್ಕೆ ಕಾರಣವು ಮೃತ್ತಿಕೆ (ಮಣ್ಣು); ಕುಂಬಾರನು ಕರ್ತ. ಮಕ್ಕಳು ಕಾರ್ಯಭೂತರು; ತಂದೆಯು ಕರ್ತ; ರೇತಸ್ಸು ಕಾರಣ. ಇದರಂತೆ ಜಗತ್ತು ಕಾರ್ಯ; ತ್ರಿಗುಣಾತ್ಮಕಳಾದ ಪ್ರಕೃತಿಯು ಕಾರಣ; ಕರ್ತಾ ಪರಮಾತ್ಮನು. ಹೀಗೆ ಆದಿಸೃಷ್ಟಿ ಮೊದಲು, ಸ್ಥಿತಿ, ಸಂಹಾರ ಮೊದಲಾದ ಎಲ್ಲಾ ವಿಷಯಗಳಲ್ಲೂ, ಕಾರ್ಯ, ಕಾರಣ, ಕರ್ತಾ ಎಂಬ ಮೂರು ಉಂಟು. ಇವುಗಳಲ್ಲಿ ಸೃಷ್ಟಿಗೆ ಕಾರಣಳು ಪ್ರಕೃತಿ. ಹೀಗೆ ಒಂದೊಂದು ಕಾರಣವಸ್ತುವಿನಲ್ಲಿಯೂ ಇರುವ ಭಗವದ್ರೂಪಗಳಿಗೆ ಕಾರಣರೂಪವೆಂದು ಹೆಸರು. ಎಲ್ಲಾ ಕಾರಣರೂಪಗಳನ್ನು ತೆಗೆದುಕೊಂಡು ಒಂದೊಂದಕ್ಕೂ ರಸಗಳನ್ನು ಭಾಗಿಸುವದೆಂದರೆ ಗ್ರಂಥ ವಿಸ್ತಾರವಾಗುವುದು. ಆದ್ದರಿಂದ ಮುಖ್ಯ ಜಗತ್ಸೃಷ್ಟಿಗೂ, ಸ್ಥಿತಿಗೂ, ಸಂಹಾರಕ್ಕೂ, ಸಹ ಕಾರಣರೂಪವನ್ನು ಮಾತ್ರ ತೆಗೆದುಕೊಳ್ಳೋಣ. ಜಗತ್ತಿಗೆ ಕಾರಣಳು ತ್ರಿಗುಣ ಸ್ವರೂಪಳಾದ ಪ್ರಕೃತಿ. ಪರಮಾತ್ಮನೇ ಪ್ರಕೃತಿಯಲ್ಲಿದ್ದು ಪ್ರಾಕೃತಗುಣಗಳನ್ನು ಉಪಾದಾನವಾಗಿ ಸ್ವೀಕರಿಸಿ, ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವನು. ಆದ್ದರಿಂದ ಪ್ರಕೃತ್ಯಾದಿಗಳಲ್ಲಿ ಇರುವ ಭಗವದ್ರೂಪಗಳಿಗೆ ಕಾರಣರೂಪಗಳೆಂದು ಹೆಸರು. ಇವುಗಳಿಗೆ ಸಾರರಸವನ್ನರ್ಪಿಸಬೇಕು. ಸಾರರಸವೆಂದರೆ ಪರಮಾತ್ಮನು ಸಾತ್ವಿಕ, ರಾಜಸ, ತಾಮಸರೆಂಬ ತ್ರಿವಿಧದೇವರನ್ನು ಸೃಷ್ಟಿಸಿ ಅವರುಗಳು ಭೋಗಿಸುವುದಕ್ಕಾಗಿ ಸಾತ್ವಿಕ, ರಾಜಸ, ತಾಮಸ ಪದಾರ್ಥಗಳನ್ನು ಸೃಷ್ಟಿಸಿರುವನು. ಅಂದರೆ ಮಧುರವಾದ ಪದಾರ್ಥಗಳು ತುಪ್ಪ, ಹಾಲು, ಮೊದಲಾದ ಗವ್ಯಗಳು ಸಾತ್ವಿಕಗಳು. ರಾಜಸವೆಂದರೆ ತೊಗರಿ, ಕಡ್ಲೆ, ಮೆಣಸಿನಕಾಯಿ ಮೊದಲಾದವು. ಉಳ್ಳಿಗಡ್ಡೆ, ಬದನೆಕಾಯಿ ಮೊದಲಾದವು ತಾಮಸ ಪದಾರ್ಥಗಳು. ಹೀಗೆ ವಿಭಾಗಮಾಡಿ ಸೃಷ್ಟಿಸಿರುವನು. ಇವುಗಳಲ್ಲಿ ಸಾರವೆಂದರೆ ಸಾತ್ವಿಕಪದಾರ್ಥಗಳ ರಸವನ್ನೇ ತ್ರಿಗುಣರೂಪಕಾರಣನಾಗಿರುವ ಭಗವದ್ರೂಪಕ್ಕೆ ಸಮರ್ಪಿಸಬೇಕೆಂದರ್ಥ. ಅಂತರ್ಯಾಮಿ ಅಂದರೆ ಬ್ರಹ್ಮಾದಿ ಸಕಲ ಪ್ರಾಣಿಗಳ ಅಂತರ್ಯಾಮಿರೂಪ. ಈ ರೂಪಕ್ಕೆ ಶುಭರಸವನ್ನರ್ಪಿಸಬೇಕು. ಶುಭವೆಂದರೆ ಮಂಗಳಕರವಾದ ಪದಾರ್ಥವೆಂದರ್ಥ. ಅಂತರ್ಯಾಮಿಯಾದ ಭಗವಂತನಿಗೆ ನಾವು ನೋಡುವುದು, ಕೇಳುವುದು, ಭುಂಜಿಸುವುದು, ಭೋಗಿಸುವುದು ಮೊದಲಾದುವುಗಳಲ್ಲಿ ಇದು

ಒಳ್ಳೆಯದು. ಇದು ಮಂಗಳವಸ್ತು ಎಂದು ಯಾವುದು ನಮಗೆ ತೋರುವುದೋ ತಕ್ಷಣ ಅವುಗಳನ್ನು ಸಮರ್ಪಿಸಬೇಕು ಸ್ಥೂಲರೂಪ ಬ್ರಹ್ಮಾಂಡವೇ ಶರೀರವಾಗುಳ್ಳ ವಿರಾಟ್‌ರೂಪ. ಈ ರೂಪಕ್ಕೆ ಪ್ರವಿವಿಕ್ತ ರಸವನ್ನು ಸಮರ್ಪಿಸಬೇಕು. ಪ್ರವಿವಿಕ್ತವೆಂದರೆ ಬಹಳ ಏಕಾಂತವೆಂದರ್ಥ. ಮುಖ್ಯ ಜನಸಂಚಾರವಿಲ್ಲದ ಪ್ರದೇಶವೆಂಬ ತಾತ್ಪರ್ಯ. ಪ್ರಪಂಚದಲ್ಲಿ ಇಂತಹ ಏಕಾಂತವಾದ ಸ್ಥಳಗಳಲ್ಲಿ ಅನೇಕ ಪುಣ್ಯಕರವಾದ ತೀರ್ಥಗಳು, ಕ್ಷೇತ್ರಗಳು ಇರುವವು, ಯಾತ್ರಾದಿಗಳನ್ನು ಮಾಡುತ್ತಿರುವಾಗ ನದೀ ಕ್ಷೇತ್ರಗಳಲ್ಲಿ ನಾವು ಮಾಡುವ ಪುಣ್ಯಕರ್ಮಗಳು, ನಮಗಾಗುವ ಆನಂದಗಳು ಇವುಗಳನ್ನು ವಿರಾಟ್‌ರೂಪಿಯಾದ ಪರಮಾತ್ಮನಿಗರ್ಪಿಸಬೇಕೆಂಬ ತಾತ್ಪರ್ಯ. ಅವತಾರ ರೂಪಗಳು ರಾಮಕೃಷ್ಣಾದಿಗಳು. ಈ ರೂಪಗಳಿಗೆ ನಾವು ಭೋಜನ, ಪಾನ, ನಿದ್ರೆ, ಭೋಗಗಳಿಂದ ಅನುಭವಿಸುವ ಆನಂದವನ್ನು ಅರ್ಪಿಸಬೇಕೆಂಬ ಭಾವ. ವ್ಯಾಪ್ತರೂಪವೆಂದರೆ ಬ್ರಹ್ಮಾಂಡದೊಳಗೂ ಹೊರಗೂ ಚೇತನಾಚೇತನಾತ್ಮಕವಾದ ಸಕಲ ಪ್ರಪಂಚದೊಳಗೂ ವ್ಯಾಪಿಸಿಕೊಂಡಿರುವ ರೂಪ. ಈ ರೂಪಕ್ಕೆ ಸ್ಥೂಲರಸವೆಂದರೆ, ನಮ್ಮ ಸ್ಥೂಲದೃಷ್ಟಿಗೆ ಯಾವುದು ಸಾರವೆಂದು ಕಾಣುವುದೋ ಅಂದರೆ (ವೃಕ್ಷಗಳಿಗೆ = ಸಸ್ಯಗಳಿಗೆ) ಉದಕವೇ ಸಾರಭೂತವು; ಈ ಉದಕವನ್ನು ಹಾಕುವಾಗ ವೃಕ್ಷಾದಿಗಳಲ್ಲಿ ವ್ಯಾಪಿಸಿಕೊಂಡಿರುವ ಪರಮಾತ್ಮನಿಗೆ ಇದು ಪ್ರೀತಿಯಾಗಲಿ ಎಂದು ಒಪ್ಪಿಸಬೇಕು. ಹೀಗೆ ಒಂದೊಂದು ವಸ್ತುಗತ ಭಗವದ್ರೂಪಕ್ಕೂ ಅದಕ್ಕೆ ಸಾರವೆಂದು ತೋರುವ ರಸವನ್ನು ಸಮರ್ಪಿಸಬೇಕೆಂದು ಅರ್ಥ. ಅಂಶರೂಪವೆಂದರೆ ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ ಎಂಬ ಗೀತಾವಾಕ್ಯದಿಂದ ಸಕಲ ಜೀವರಾಶಿಗಳೂ ಭಗವಂತನ ಅಂಶರೂಪವೆಂದು ತಿಳಿಯಬೇಕು. ಈ ಸ್ಥಳದಲ್ಲಿ ಅಂಶವೆಂದರೆ ಪ್ರತಿಬಿಂಬನೆಂದರ್ಥ. ಇಂತಹ ಪ್ರತಿಬಿಂಬರಾದ ಜೀವರಲ್ಲೂ ತದಾಕಾರ ತದ್ರೂಪನಾಗಿ ಪರಮಾತ್ಮನು ಇರುವನು. ಅಂತರ್ಯಾಮಿರೂಪವನ್ನು ಹೇಳುವಾಗ ದೇವಮನುಷ್ಯಾದಿಗಳನ್ನು ಹೇಳಿದಂತಾಯಿತು. ಇಲ್ಲಿ ಪಶು ಮೊದಲಾದ ಜೀವರನ್ನು ತೆಗೆದುಕೊಳ್ಳಬೇಕು. ಈ ರೂಪಗಳಿಗೆ ನಮಗೆ ಯಾವುದು ನಿಸ್ಸಾರವೆಂದು ತೋರುವುದೋ ಅಂತಹ ಹುಲ್ಲು ಮೊದಲಾದುವುಗಳು ಆಹಾರವಾಗಿರುವುವು. ಪಶ್ವಾದಿರೂಪಿಯಾದ ಪರಮಾತ್ಮನಿಗೆ ಇಂತಹ ನಿಸ್ಸಾರವನ್ನು ಅರ್ಪಿಸಬೇಕು. ಶುಭಂ [illegible]ೋ ನಿತ್ಯಂ ಸಾಶುಭಂ ಪಿಬತೇ ಹರಿಃ ಎಂಬ ಪ್ರಮಾಣದಿಂದ ಪರಮಾ

ತ್ಮನು ಯಾವಾಗಲೂ ಸಾರವನ್ನೇ ಸ್ವೀಕರಿಸುವನೆಂದಿರುವುದು. ಹೀಗಿರಲು ನಿಸ್ಸಾರವನ್ನು ಏನೆಂದರ್ಪಿಸಬೇಕೆಂದರೆ, ಪಶು ಮೊದಲಾದವುಗಳಿಗೆ ಅವು ನಿಸ್ಸಾರವಾಗಿ ಕಾಣವು. ಸಾರವತ್ತಾಗಿ ಇರುವವು. ಆ ಪದಾರ್ಥಗಳು ನಮಗೆ ನಿಸ್ಸಾರ. ಅವುಗಳಲ್ಲೂ ನಿಸ್ಸಾರವೆಂದರೆ ನಿತರಾಂ ಸಾರವಾದುದು ಯಾವುದೋ ಅದನ್ನು ಸಮರ್ಪಿಸಬೇಕೆಂದರ್ಥ. ಇದು ಪರಮ ರಹಸ್ಯವಾದ ವಿಷಯು; ಇದನ್ನು ಅಯೋಗ್ಯರಿಗೆ ಹೇಳಬಾರದು. ನೀನು ಮಾತ್ರ ತಿಳಿದು, ಮೇಲೆ ಹೇಳಿದ ಷಡ್ರೂಪಿಯಾದ ಪರಮಾತ್ಮನಿಗೆ ಷಡ್ರಸಗಳನ್ನರ್ಪಿಸುತ್ತಾ ಅಪಾರ ಮಹಿಮನಾದ ಪರಮಾತ್ಮನನ್ನು ಕೊಂಡಾಡುತ್ತ ಸುಖವಾಗಿರು ಎಂದು ದಾಸಾರ್ಯರು ಆಪ್ತ ಶಿಷ್ಯರನ್ನುದ್ದೇಶಿಸಿ ಹೇಳಿದರೆಂದು ಭಾವಿಸಬೇಕು. ॥ ೨೭ ॥

**೩. ಭಾವದರ್ಪಣ**

ಈಗ ಕಾರಣರೂಪ, ಅಂತರ್ಯಾಮಿರೂಪ, ಸ್ಥೂಲರೂಪ ಎಂದರೆ ಬ್ರಹ್ಮಾಂಡಾತರ್ಯಾಮಿ ವಿರಾಟರೂಪ ಎಂಬರ್ಥ. ಅವತಾರರೂಪ, ವ್ಯಾಪ್ತ ರೂಪ, ಅಂಶರೂಪ ಹೀಗೆ ಷಡ್ರೂಪಗಳಿಗೆ ಸಾರ, ಶುಭ, ಪ್ರವಿವಿಕ್ತ, ಆನಂದ, ಸ್ಥೂಲ, ವಿಸ್ತಾರ ಈ ಷಡ್ರಸಗಳು ಅರ್ಪಿಸುತ್ತಾ ಹರಿಗುಣಾನುವಾದ ಮಾಡುತ್ತ ಇರು. ಇತರರಿಗೆ ಹೇಳಬೇಡೆಂದು ಹೇಳುತ್ತಾರೆ. ಕಾರಣೇತಿ ॥ ೨೭ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದಿ.**

ಅಥ ಉಪಾಸನಾ ವಿಶೇಷಂ ಆಹ "ಕಾರಣ" ಇತಿ ॥ ವೃಕ್ಷ–ಪತ್ರ–ಪುಷ್ಪ–ಫಲರಸ ಕಾರಣ ರಸಾದಿ ಮಾನಿಗ, ತದಭಿಮಾನಿ ರಸಾದಿಗ, ರಸಾದಿಮದಬಾದಿಗ ಸ್ವಭಾವ ಸತ್ತಾದಿ ನಿಯಾಮಕಸ್ಯ ಸಾರಾಖ್ಯೈಃ ಸಾರರಸಾರ್ಪಣಮ್ ॥ "ತಥಾ ಖಿಲಜಡಸ್ಥಾಂಶ್ಚ ಸಾರಾನ್ ಅತ್ತಿ ಅಖಿಲೇಶ್ವರಃ ॥ ಸಾರಾಭಿಮಾನಿಭಿಃ ದೇವೈಃ ಅರ್ಪಿತಾನ್ ಇತರೈಃ ತಥಾ ॥" ಇತಿ ರತ್ನಮಾಲಾಯಾಮ್॥ "ಸ್ವಮಾತ್ರಭೋಗ್ಯ ಸಾರಾಂಶ್ಚ ಕ್ರಮಾತ್ ಲಕ್ಷ್ಮ್ಯಾದಿ ಭೋಗ್ಯಕಾನ್ ॥" ಇತಿ ಚ ॥ 'ಕೇವಲಂ ಭಗವದ್ಭೋಗ್ಯಾಃ ರಮಾಭೋಗ್ಯಾಃ ಬ್ರಹ್ಮಾದಿ ಭೋಗ್ಯಾಃ ಅಪರೋಕ್ಷಿ ಭೋಗ್ಯಾಃ (ಪರೋಕ್ಷಿ ಭೋಗ್ಯಾಃ) ತದಿತರ ಮಂದಭೋಗ್ಯಾಃ ಇತಿ ತತ್ರ ತತ್ರ ಕದಲೀ ಫಲಾದೌ ಏಕಸ್ಮಿನ್ನೇವ ಷಡ್ರಸಾಃ ಸಂತಿ' ಇತಿ॥ ಯದ್ಯಪಿ ಹರಿಮಾತ್ರ ಭೋಗ್ಯಾನ್

ಅಪರೋಕ್ಷೇ ಕುರ್ವಂತಿ ಅಜಾದ್ಯಾಃ । (ತಥಾಪಿ) ಅಯೋಗ್ಯತ್ವಾತ್ ನ ಅನು ಭವಂತಿ । ತತ್ರ ತಾವತ್ ಭಗವಾನ್ ಸ್ವಮಾತ್ರ ಭೋಗ್ಯ ರಸಾನ್ ರಮಾ ಬ್ರಹ್ಮಾ ದ್ಯುತ್ತಮ ಭೋಗ್ಯಾನ್ ಚ ಸಾನಾನ್ ಭುಂಕ್ತೇ ॥ ಯದ್ಯಪಿ ತತ್ತತ್ಪದಾರ್ಥಗತ ತತ್ತದಾಕಾರಕ ಸ್ವರೂಪಭೂತ ರಸಾದೇಃ ಏವ ಮುಖ್ಯತಯಾ ಭೋಗಃ ॥ ಏವಂ ತತ್ತದ್ಗತ ರಮಾಸ್ವರೂಪರಸಾದೇಃ ಅಪಿ ತದನಂತರಂ ಭೋಗಃ ॥ ತಥಾಪಿ ಐಶ್ವರ್ಯವಶಾತ್ ಭಕ್ತಜನೇಷು ಅನುಗ್ರಹಾಯ ಜಡಪದಾರ್ಥ ಭೋಗಃ ಅಪಿ ಯುಜ್ಯತೇ ॥ ರಸಾದಿ ಭೋಕ್ತಾ ಅಪಿ ತೃಷ್ಣಾ ನಿವೃತ್ತ್ಯರ್ಥಕಾಬಾದಿಭೋಗಃ ಅಪಿ ಕೃಷ್ಣಃ ಸ್ನಾತಿ ಪಾತಿ ಚ ಅಮೃತಾಂಭಃ ॥ ವಸ್ತುತಸ್ತು ॥ ತದ್ಭೋಗ ಪ್ರಕಾರಃ ನ ಅಸ್ಮಾಭಿಃ ಮಂದಜನೈಃ ಉತ್ಪ್ರೇಕ್ಷಯಿತುಂ ಶಕ್ಯಃ ॥ ಇತಿ ರತ್ನಮಾಲಾ ಟೀಕಾ ಯಾಂ ॥

ಅಂತರ್ಯಾಮಿಣಃ ಶುಭರಸಮ್ । ಸರ್ವೈಃ ಯದ್ ಭುಜ್ಯತೇಚಾನ್ನಂ ತತ್ರ ತತ್ರ ಸ್ಥಿತಃ ವಿಭುಃ ॥ ತತ್ತದ್ಭುಂಕ್ತೇ ಇತಿ ॥ ಶುಭಮೇವ ಅತ್ತಿ ॥ ಸುರಾ ಸುರ ನರ ಪಶು ಪಕ್ಷಿ ಮೃಗ ಸರೀಸೃಪಾದಿಭಿಃ ಯದ್ಯತ್ ಸ್ವಯೋಗ್ಯಂ ಅನ್ನಾದಿಕಂ ಅದನಾಘ್ರಾಣ ದೃಷ್ಟ್ಯಾಖ್ಯ ಭೋಗತ್ರಯ ವಿಭಾಗಃ ॥ ಇತ್ಯುಕ್ತೇಃ ॥ ಅದನಾ ಘ್ರಾಣಾದಿಭಿಃ ಅನುಭೂಯತೇ ತತ್ತದ್ಭೋಗ್ಯಾನ್ನಾದಿಕಂ ತತ್ತತ್ಸುರಾಸುರ ನರಾದಿ ಭೋಕ್ತೃಷು ಸ್ಥಿತ್ವಾ ತತ್ತದಿಂದ್ರಿಯಾನುಪ್ರವಿಷ್ಟಸ್ತೇಂದ್ರಿಯೈಃ ಭುಂಕ್ತೇ ॥

ದುರ್ಗಂಧ ಪದಾರ್ಥೇಷು ಕಥಮ್ ॥ ತತ್ರಾಪಿ ಭುನಕ್ತಿ ಅಯಂ ಸೂಕರಃ ಭುಂಕ್ತೇ ॥ ವಾಗ್ಗತಃ ಭಾರ್ಗಃ ಜಿಹ್ವಾಭೋಗ್ಯಸ್ಯ ಅಪಿ ಚಕ್ಷುಷಾ ಭೋಗವಾನ್ ಚಕ್ಷುರ್ಭೋಗಸ್ಯ ಪದಾದಿಭಿಃ ಭೋಗಃ ಇವ ॥ ಅಸ್ಮದಾದಿವತ್ ನ ದುರ್ಗಂ ಧಾನುಭವಃ ॥ ನ ಏವಂ ಸುಖಪದಾರ್ಥೇ ॥ ಸುಖ ಸ್ವರೂಪಸ್ಯಾಪಿ ಚರ್ವಣಾ ದ್ಯಾತ್ಮಾ ಭೋಗಃ ಸುಗಂಧಾನುಭವಶ್ಚ ॥ ಅನುಭೂಯಮಾನಾಃ ಅಪಿ ದುರ್ಗಂ ಧಾದಯಃ ನ ಫಲ ಹೇತವಃ ಇತ್ಯಭಿಪ್ರಾಯಃ ॥ ಸುಗಂಧಸ್ತು ಸುಖಹೇತುಃ ಇತಿ ಉಪಪಾದಿತಮ್" ಇತಿ ಪ್ರಮೇಯದೀಪಿಕಾಯಾಂ ಉಕ್ತಮ್ ॥

ಸ್ಥೂಲ ತದ್ಭೋಕ್ತೃ ವಿಶ್ವಾದಿ ॥ ತಸ್ಯ ಪ್ರವಿವಿಕ್ತಾರ್ಪಣಮ್ ॥ ಅವತಾ ರಾಣಾಂ ಆನಂದಾರ್ಪಣಮ್ ॥ ವ್ಯಾಪ್ತಸ್ಯ ಸ್ಥೂಲಂ ॥ ಅಂಶಸ್ಯ ಅನ್ನಾದಿಗಸ್ಯ

ಇನ್ನು ವಾಸ್ತವವಾಗಿ ವಿಮರ್ಶಿಸಿದಲ್ಲಿ ಪರಮಾತ್ಮನ ರಸಭೋಗದ ರೀತಿಯನ್ನು ನಮ್ಮಂಥ ಮಂದಜನಗಳು ಊಹಿಸುವದು, ಉತ್ಪ್ರೇಕ್ಷಿಸುವುದು ಶಕ್ಯವಿಲ್ಲ" ಎಂದು ಸತ್ತತ್ತ್ವರತ್ನಮಾಲೆಯ ಟೀಕೆಯಲ್ಲಿ ಬರೆಯಲಾಗಿದೆ.

ಇನ್ನು ಅಂತರ್ಯಾಮಿ ರೂಪಕ್ಕೆ ಶುಭರಸವು ಶ್ರೀಹರಿಯು ಆ ಆ ವಸ್ತುಗಳಲ್ಲಿ ಸ್ಥಿತನಾಗಿ ತನ್ನ ಇಂದ್ರಿಯಗಳಿಂದ ಸ್ಥೂಲವಾದರೂ ಸಹ ಸರ್ವೋಪಭೋಜ್ಯವಾದ ಅನ್ನವನ್ನು ಭುಂಜಿಸುತ್ತಾನೆ. ಅದರಲ್ಲೂ ಶುಭವನ್ನೇ ಸ್ವೀಕರಿಸುತ್ತಾನೆ. ಸುರರು, ಅಸುರರು, ನರರು, ಪಶುಗಳು, ಮೃಗಗಳು, ಸರ್ಪಗಳು ಮುಂತಾದವುಗಳು ತಮತಮಗೆ ಉಚಿತವಾದ ಅನ್ನ ಮುಂತಾದುವುಗಳನ್ನು ತಿನ್ನುವದು, ಮೂಸಿನೋಡುವದು (ಆಘ್ರಾಣಿಸುವದು) ಕಣ್ಣಿನಿಂದ ನೋಡುವದು ಹೀಗೆ ಮೂರುವಿಧ ಭೋಗಗಳನ್ನು ಹೇಳಿರುವದರಿಂದ ಈ ಮೂರು ತರಹಗಳಿಂದ ಅನುಭೋಗಿಸುವಾಗ ಹರಿಯು ಸುರಾಸುರ ಮುಂತಾದವರಲ್ಲಿ ನಿಂತು, ಅವರವರ ಇಂದ್ರಿಯ ಮುಂತಾದುವುಗಳಲ್ಲಿ ತನ್ನ ಇಂದ್ರಿಯಗಳನ್ನು ಸೇರಿಸಿ (ಇಟ್ಟು) ಅವುಗಳಿಂದ ಅನುಭೋಗಿಸುತ್ತಾನೆ.

ಹಾಗಾದರೆ ಜೀವಭೋಗ್ಯವಾದ ವಿಷಯಗಳನ್ನೆಲ್ಲಾ ಭುಂಜಿಸುವದಾದರೆ ದುರ್ಗಂಧ ಪದಾರ್ಥಗಳ ಭೋಗವು ಪರಮಾತ್ಮನಿಗೆ ಹೇಗೆ ಯುಕ್ತವಾಗುತ್ತದೆ ? ಸಲ್ಲುತ್ತದೆ? ಎಂದು ಗೀತಾಭಾಷ್ಯದಲ್ಲಿ ಶಂಕಿಸಿದುದಕ್ಕೆ ಉತ್ತರಿಸುತ್ತಾರೆ. ದುರ್ಗಂಧಗಳಲ್ಲಿಯೂ ಪರಮಾತ್ಮನಿಗೆ ಭೋಗವಿರುತ್ತದೆ. ನೋಟದಿಂದ (ದೃಷ್ಟಿಯಿಂದ) ಉಪಭೋಗ್ಯವಾದುದನ್ನು ಪಾದ ಮುಂತಾದುವುಗಳಿಂದ ಭೋಗಿಸುವಂತೆ ಜಿಹ್ವೇಂದ್ರಿಯದಿಂದ ಉಪಭೋಗಿಸಲ್ಪಡುವುದನ್ನು ಕಣ್ಣಿನಿಂದ ಉಪಭೋಗಿಸುತ್ತಾನೆ. ದುರ್ಗಂಧಗಳಿಂದ ನಮಗೆ ಹೇಗೆ ದುಃಖಾನುಭವರೂಪ ಭೋಗವಾಗುತ್ತದೆಯೋ ಹಾಗೆ ಪರಮಾತ್ಮನು ದುರ್ಗಂಧಗಳನ್ನು ತಿಳಿಯುತ್ತಿದ್ದರೂ ಅವನಿಗೆ ಆ ಜ್ಞಾನವು ದುಃಖ ಮುಂತಾದುವು ಪರಿಣಾಮವನ್ನು ಹುಟ್ಟಿಸುವುದಿಲ್ಲ. ನಮಗೆ ದುರ್ಗಂಧ ಜ್ಞಾನದೊಡನೆಯೇ ಅದರ ಪರಿಣಾಮವು ಅನುಭವಕ್ಕೆ ಬರುತ್ತದೆ. ಹೀಗೆ ನಮಗೆ ಆದಂತೆ ಹರಿಗೆ ದುರ್ಗಂಧಾನುಭಾವವಿರುವುದಿಲ್ಲ. ಗೀತಾಭಾಷ್ಯದಲ್ಲಿ ತಿಳಿದು ಬಂದರೂ ಗಂಧ ಮುಂತಾದುವುಗಳು ಶ್ರೀಹರಿಯಲ್ಲಿ ಫಲಪರಿಣಾಮಕಾರಿಗಳಾಗುವುದಿಲ್ಲ ಎಂದು ಶ್ರೀಮದಾಚಾರ್ಯರು ಉಪದೇಶಿಸಿರುತ್ತಾರೆ.

ಸುಖಪದಾರ್ಥಗಳಲ್ಲಿ ಮಾತ್ರ ಭೋಗವು ಬೇರೆಯಾಗಿರುತ್ತದೆ. ಅಲ್ಲಿ ಬರೀ ದೃಷ್ಟಿಯಿಂದ ಭೋಗವಿರದೆ, ಚರ್ವಣ, ನುರಿಸುವುದು ಮುಂತಾದ ರೂಪವಾದ ಭೋಗವೂ ಇರುತ್ತದೆ. ಸುಗಂಧವು ಸುಖದ ಅಭಿವ್ಯಕ್ತಿಗೆ ಕಾರಣವಾದುದು ಎಂದು ಉಪಪಾದಿಸಿರುತ್ತೇವೆ ಎಂದು ಗೀತಾಭಾಷ್ಯ ಪ್ರಮೇಯ ದೀಪಿಕೆಯಲ್ಲಿ ನಿರೂಪಿತವಾಗಿರುತ್ತದೆ.

ಇನ್ನು ಸ್ಥೂಲರಸವನ್ನು ಭುಂಜಿಸುವವರು ವಿಶ್ವ ಮುಂತಾದ ಭಗವಂತನ ರೂಪಗಳು. ವಿಶ್ವ ವಿರಾಟ ಮುಂತಾದ ಭಗವದ್ರೂಪಗಳಿಗೆ ಪ್ರವಿವಿಕ್ತರಸವನ್ನು ಅರ್ಪಿಸಬೇಕು. ಅವತಾರರೂಪಗಳಿಗೆ ಆನಂದವೆಂಬ ರಸವನ್ನು ಅರ್ಪಿಸಬೇಕು. ವ್ಯಾಪ್ತರೂಪಗಳಿಗೆ ಸ್ಥೂಲವೆಂಬ ರಸವನ್ನು ಅರ್ಪಿಸಬೇಕು. ಅಂಶರೂಪಗಳಿಗೆ (ಅನ್ನ ಮುಂತಾದವುಗಳಲ್ಲಿರುವ ರೂಪಕ್ಕೆ) ನಿಸ್ಸಾರ ರಸವನ್ನು ಸಮರ್ಪಿಸಬೇಕು. ಪರಮಾತ್ಮನು ರಸಗಳಿಗೆ ನಿಯಾಮಕನು ಎಂದು ಧ್ಯಾನಿಸುವದೇ ಸಮರ್ಪಣವು.

ರಸೋಽಹಂ ಅಪ್ಸು ಕೌಂತೇಯ ಎಂಬ ಗೀತೆಯ ಭಾಷ್ಯದಲ್ಲಿ ಈ ಆರು ರಸಗಳು ಪರಮಾತ್ಮನ ಪ್ರತೀಕಗಳು. ಪರಮಾತ್ಮನು ಇವುಗಳಲ್ಲಿ ಆಯಾ ಪದಗಳಿಂದ ವಾಚ್ಯನಾಗಿದ್ದು ಅವುಗಳ ಕಾರಣ ಅಂತರ್ಯಾಮಿಯಾಗಿದ್ದು ಇವುಗಳಿಗೆ ಆಶ್ರಯನಾಗಿರುತ್ತಾನೆ ಎಂದು ಉಪಾಸಿಸಬೇಕು. ಹೀಗೆ ನಿರೂಪಿಸಿರುತ್ತಾರೆ.

ಅಪ್ಸು, ರಸಃ ಎಂಬುಧಾಗಿ ವಿಶೇಷ ಶಬ್ದಗಳನ್ನು ಪ್ರಯೋಗಿಸುವುದಕ್ಕೆ ಇರುವ ಪ್ರಯೋಜನವನ್ನು ನಿರೂಪಿಸುತ್ತಾರೆ–ಉಪಾಸನಾರ್ಥಂ ಚ ಎಂಬ ಪದದಿಂದ ಭಾಷ್ಯಕಾರರು ಎಂದು ಟೀಕಾಕಾರರು ಅವತಾರಿಸಿರುತ್ತಾರೆ. ಇದಕ್ಕೆ ಗೀತಾಕಲ್ಪದ ಆಧಾರವಿರುತ್ತದೆ. ಅದರಲ್ಲಿ ರಸಗಳಿಗೆ ರಸತ್ವಕ್ಕೂ (ರಸಭಾವ) ಅವುಗಳಿಗೆ ಆಯಾ ಸ್ವಭಾವಧರ್ಮಕ್ಕೂ, ಸಾರಭಾವಕ್ಕೂ ಎಲ್ಲ ಧರ್ಮಗಳಿಗೂ ವಿಶೇಷವಾಗಿಯೂ ಸಹ ಶ್ರೀಹರಿಯು ಕಾರಣನು. ಸರ್ವತ್ರ ಸಾರಭೋಕ್ತನು. ಆದುದರಿಂದ ಜಲ ಮುಂತಾದ ಸಕಲ ವಸ್ತುಗಳಲ್ಲಿ ರಸ ಮುಂತಾದ ಶಬ್ದಗಳಿಂದ ಹರಿಯು ಕರೆಯಲ್ಪಡುತ್ತಾನೆ. ರಸಾಭಿಮಾನಿಗಳ ದೇಹದಲ್ಲಿ ಎಲ್ಲೆಡೆಯಲ್ಲಿಯೂ ಅವನು

ವ್ಯಾಪಿಸಿರುತ್ತಾನೆ (ಇರುತ್ತಾನೆ). ಪಾರ್ಷದರು (ಸನಕಾದಿಗಳು) ಅಪ್ ಮುಂತಾದವುಗಳ ಅಭಿಮಾನಿಗಳು. ಜಗನ್ನಿಯಾಮಕ ವಾಸುದೇವನನ್ನು ರಸ-ತದಭಿಮಾನಿ-ತತ್ತ್ವಪದಾರ್ಥಗಳಲ್ಲಿ ಧ್ಯಾನಿಸಬೇಕು ಎಂದು ಹೇಳಲಾಗಿರುತ್ತದೆ.

ಈ ಭಾಷ್ಯಟೀಕೆಯಲ್ಲಿ ರಸ ಮೊದಲಾದುವುಗಳು ಪರಮೇಶ್ವರ(ಹರಿ)ನ ಪ್ರತಿಮೆಗಳೆಂದು ಅಭಿಪ್ರಾಯವಿದೆ. ಪ್ರತಿಮೆಗಳಲ್ಲಿ ಭೇದವಾಚಕ ಶಬ್ದಪ್ರಯೋಗವು ಪ್ರಸಿದ್ಧವಿದೆ. (ಆದುದರಿಂದ ನಾನು ಜಲದಲ್ಲಿ ರಸನು ಎಂಬ ಪ್ರಯೋಗವು ಯುಕ್ತವಿದೆ.) ಪರಮಾತ್ಮನು ಪದಾರ್ಥಗತ ಸಾರಭೋಕ್ತೃವೆಂದು ಹೇಳಿದರೆ ಅನಶ್ನನ್ ಅಭಿಚಾಕಶೀತಿ, ತಿನ್ನದೇ ಅತಿ ಪ್ರಕಾಶಿಸುತ್ತಾನೆ ಎಂದು ಮುಂತಾಗಿರುವ ಶ್ರುತಿವಿರೋಧ ಬರುವದೆಂದು ಆಕ್ಷೇಪಿಸಬಹುದು. ಆದರೆ ಈ ಶ್ರುತಿಗಳಲ್ಲಿ ಹೇಳಿರುವ ಅನಶನ (ತಿನ್ನದಿರುವುದು) ಶಬ್ದದ ಅರ್ಥವು ಬೇರೆಯಾಗಿರುತ್ತದೆ. ಸ್ಥೂಲವಾದ ಭೋಗವಿಲ್ಲದವನು ಎಂದು ಅರ್ಥ. ಸೂಕ್ಷ್ಮಭೋಗವು ಇದೆ ಎಂದು ಶ್ರುತಿಗಳೇ ಹೇಳುತ್ತವೆ. ಈ ಜೀವನಿಗಿಂತಲೂ ಅತ್ಯಂತ ವಿಲಕ್ಷಣವಾದ ಭೋಗವುಳ್ಳವನು ಎಂಬಂತೆ ಪರಮೇಶ್ವರನು ಇರುತ್ತಾನೆ. ಅಂದರೆ ಸೂಕ್ಷ್ಮಭೋಗವುಳ್ಳವನು ಎಂದು ತಾತ್ಪರ್ಯ. ಅವತಾರರೂಪಗಳಲ್ಲಿ ಸ್ಥೂಲಭೋಗವೂ ಇರುವದರಿಂದ ಇವ (ಎಂಬಂತೆ) ಶಬ್ದವನ್ನು ಪ್ರಯೋಗಿಸಿರುತ್ತಾರೆ. ಪರಮಾತ್ಮನು ಸೂಕ್ಷ್ಮಭೋಕ್ತೃವಾಗಿರುವುದರಿಂದ ಭೋಕ್ತೃವೂ, ಸ್ಥೂಲಭೋಗವಿಲ್ಲದ್ದರಿಂದ ಅಭೋಕ್ತೃವೂ ಎಂದು ಶ್ರುತಿಗಳಲ್ಲಿ ಹೇಳಲ್ಪಡುತ್ತದೆ. ಆದುದರಿಂದ ವಿರೋಧ ಬರುವುದಿಲ್ಲ. ॥ ೨೭ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ದೇವರ ರೂಪವಿಶೇಷಗಳಿಗೆ ರಸವಿಶೇಷಗಳ ತಿಳಿದು ಅರ್ಪಿಸುವ ಬಗೆಯನ್ನು ತಿಳಿಸುತ್ತಾರೆ, ಕಾರಣಾ ಎಂದು. ಪ್ರಕಾಶಾದಿಗಳಿಗೆ ಕಾರಣವಾದ ದೀಪಾದಿಗತ ರೂಪಗಳಿಗೆ, ಸಾರವೆಂಬ ತೈಲಾದಿಗತ ಸ್ವರಸವನ್ನು, ಸ್ವದೇಹದಲ್ಲಿ ಅಂತರ್ಯಾಮಿರೂಪಕ್ಕೆ ಶುಭವೆಂಬ ಜಾತಿವಿಹಿತ ಭೋಜನಗತ ಸ್ವರಸವನ್ನೂ, ಸ್ಥೂಲವೆಂಬ ವಿರಾಟ್‌ದೇಹಸ್ಥ ರೂಪಕ್ಕೆ, ಪ್ರವಿವಿಕ್ತ ಎಂದರೆ ಜಗದ್ವಿಲಕ್ಷಣ ತದಾಶ್ರಯ ರೂಪರಸವನ್ನೂ, ಅವತಾರವೆಂಬ ರಾಮಕೃಷ್ಣಾದಿ ರೂಪಗಳಿಗೆ ಸ್ಥೂಲಾ

ನ್ನಾದಿಗತ ಆನಂದವೆಂಬ ಸ್ವರೂಪರಸವನ್ನೂ, ವ್ಯಾಪ್ತವೇಬ ಜಗದಾವರಕ ಅಂತ ರ್ಬಹಿಸ್ಥಿತರೂಪಕ್ಕೆ, ಜಗದ್ಗತಸ್ಥೂಲವಸ್ತುಸ್ಥಿತ ಸ್ವರಸವನ್ನೂ, ಅಂಶವೆಂಬ ಮನುಷ್ಯಾಧೀನ ಪಶ್ವಾದಿ ದೇಹಸ್ಥರೂಪಕ್ಕೆ ಅಸಾರವೆಂಬ ತೃಣಾದಿಗತ ಸ್ವರಸ ವನ್ನೂ ಹೀಗೆ ಆರುರೂಪಗಳಿಗೆ ಆರು ರಸಭೇದಗಳನ್ನು ತಿಳಿದು ಅರ್ಪಿಸು ಎಂದರೆ, ಸರ್ವತ್ರದೇವರು ಸ್ವರಸವನ್ನೇ ಹೊಂದುವನೆಂದು ಭಾವಿಸೆಂದರ್ಥ. ಈ ವಿಧವಾದ ರಹಸ್ಯಸ್ಮರಣೋಪಾಸನೆಯನ್ನು ಅಲ್ಪರೆಂಬ ಅನರ್ಹಜನಕ್ಕೆ ವಿವರಿಸಿ ಹೇಳದೆ, ಸದಾ ಅಪಾರಮಹಿಮನಾದ ದೇವರ ರೂಪ ಗುಣ ಮಹಿಮೆಗಳನ್ನು ಸ್ಮರಿಸಿ ಸ್ಮರಿಸಿ ಸಂತೋಷಪಡುವುದು. ಇದರಿಂದ

> ಅಲೌಕಿಕ ಮಹಾನಂತ ರಸಗಂಧಾದಿ ಸಂಯುತೈಃ ।
> ಗುಣಕ್ರಿಯಾದಿಕೈರ್ಧರ್ಮರೂಪಾದ್ಯೈಶ್ಚ ತಥಾ ವಿಧೈಃ ॥
> ಸಂತುಷ್ಟಸ್ಸತತಂ ಸರ್ವೈಸ್ಸ್ವಾಕಾರೈಸ್ಸದಾಗತೈಃ ।
> ಭೋಜ್ಯಂ ಭೋಕ್ತಾ ಚ ಭೋಗಶ್ಚ ಭೋಜಕಶ್ಚ ಯತೋ ಭವಾನ್।
> ಏಕಂ ವಸ್ತು ತಥಾ ಭೋಕ್ತೃ ಭೋಜ್ಯಾದಿ ವ್ಯವಹಾರಭಾಕ್ ॥
> ಮಹಾಲಕ್ಷ್ಮೀ ಸ್ವರೂಪಾನಪ್ಯನಂತೇಂದ್ರಿಯ ಗೋಚರಾನ್ ॥
> ಅನಂತರಸ ಸದ್ಗಂಧ ಪೂರ್ವಧರ್ಮಾನ್ ತಥಾಖಿಲಾನ್ ।
> ಅತರ್ಕ್ಯಾನ್ ಸ್ವಾನುಭವಸಿ ತಥಾ ಮುಕ್ತಸ್ವರೂಪಕಾನ್ ॥
> ತಥಾಖಿಳ ಜಡಸ್ಥಾಂಶ್ಚ ಸಾರಾನಪ್ಯಖಿಲಾನ್ ಪ್ರಭೋ
> ಇತಿ ಪ್ರಕಾಶಸಂಹಿತೇ ॥

ಇತ್ಯಾದಿ ಮಂತ್ರಾರ್ಥಗಳು ವಿವರಿಸಲ್ಪಟ್ಟವು. ॥ ೨೭ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಭಗವದ್ರೂಪಗಳ ಆರುವಿಧಗಳನ್ನು ತಿಳಿಸುತ್ತಾರೆ. ಆ ರೂಪಗಳು ಯಾವು ವೆಂದರೆ–

೧. ಕಾರಣರೂಪ.

೨. ಅಂತರ್ಯಾಮಿರೂಪ.

೩. ಸ್ಥೂಲರೂಪ.
೪. ಅವತಾರರೂಪ.
೫. ವ್ಯಾಪ್ತರೂಪ.
೬. ಅಂಶರೂಪ.

ಹೀಗೆ ಆರುಪ್ರಕಾರವಾದ ಭಗವದ್ರೂಪಗಳ ಚಿಂತನಾಕ್ರಮ.

ಜಗತ್ತಿನಲ್ಲಿ ಕಾರಣ-ಕರ್ತ-ಕಾರ್ಯ ಎಂಬ ಮೂರು ಪ್ರಧಾನಾಂಶಗಳು ಪ್ರತಿ ವಸ್ತುವಿನ ನಿರ್ಮಾಣ (ರಚನೆ)ದಲ್ಲಿ ಅಡಕವಾಗಿವೆ. ಇವಕ್ಕೆ ಪರಸ್ಪರ ಸಂಬಂಧವಿದೆ. ಜಗತ್ಸೃಷ್ಟಿಯ ಮೂಲಭೂತವಾದ ತ್ರಿಕೋಣಸೂತ್ರವಿದು.

ಒಂದು ವಸ್ತು ನಿರ್ಮಾಣವಾಗಬೇಕಾದರೆ, ಅದಕ್ಕೆ ಕಾರಣಭೂತವಾದ ದ್ರವ್ಯವಿರಲೇಬೇಕು. ದೃಷ್ಟಾಂತವಾಗಿ, ಮಡಕೆಯನ್ನು ಮಾಡಲು ಮೂಲದ್ರವ್ಯ ಮೃತ್ತಿಕೆ (ಮಣ್ಣು) ಕಾರಣವಸ್ತುವಾಗಿದೆ. ಮಡಕೆ ನಿರ್ಮಾಣಕ್ಕೆ ಕಾರಣವಾದ ಮೃತ್ತಿಕೆಗೆ ಉಪಾದಾನ ಕಾರಣವೆನ್ನುವರು. ಅದನ್ನು ಮಾಡಲು ಕುಂಬಾರನಿರಬೇಕು. ಅವನೇ ಕರ್ತನು. ಅವನನ್ನು ನಿಮಿತ್ತಕಾರಣನೆನ್ನುವರು. ಮಡಕೆಯ ನಿರ್ಮಾಣವೇ ಕಾರ್ಯವು.

ಇದರಂತೆ ಆದಿಮೂಲಸ್ವರೂಪಿಯಾದ ಶ್ರೀಮನ್ನಾರಾಯಣನು ಮೂಲಪ್ರಕೃತಿಯನ್ನು ಉಪಾದಾನಕಾರಣ ಮಾಡಿಕೊಂಡು, ಜಗತ್ತನ್ನು ಸೃಷ್ಟಿಸುವನು. ಇಲ್ಲಿ ಭಗವಂತನು ನಿಮಿತ್ತಕಾರಣನಾದ ಕರ್ತನು. ಜಗತ್ತಿನ ಸೃಷ್ಟಿ ಎಂಬ ಕ್ರಿಯೆಯೇ ಕಾರ್ಯವು. ಹೀಗೆ ಜಗತ್ಸೃಷ್ಟಿಗೆ ಕಾರಣವಾದ ಶ್ರೀಮನ್ನಾರಾಯಣನ ರೂಪವು ಕಾರಣರೂಪವು. ಇದೇ ರೀತಿಯಲ್ಲಿ ಜೀವರ ಸೃಷ್ಟಿ. ಆದಿಸೃಷ್ಟಿ ಮೊದಲು ಸ್ಥಿತಿ, ಸಂಹಾರ ಇತ್ಯಾದಿ ಸಕಲ ವ್ಯಾಪಾರವಿಶೇಷಗಳಲ್ಲಿ ಕಾರ್ಯ-ಕಾರಣ-ಕರ್ತ ಈ ರೂಪದಲ್ಲಿ ಶ್ರೀಹರಿಯೇ ಸಮಸ್ತ ಕ್ರಿಯೆಗಳನ್ನ ತಾನೇ ಮಾಡುವನು.

ತ್ರಿವಿಧಜೀವರಲ್ಲಿ ಬಿಂಬನಾಗಿದ್ದು, ಜೀವಾಕಾರನಾಗಿ, ಆಯಾಯ ಜೀವ ನಾಮಕನಾಗಿ ಇರುವ ಭಗವದ್ರೂಪವೇ ಅಂತರ್ಯಾಮಿರೂಪವು.

ಬ್ರಹ್ಮಾಂಡಗತ ವಿರಾಡ್ರೂಪ ಮತ್ತು ಪಿಂಡಾಂಡರೂಪವಾದ ಸ್ಥೂಲಶರೀರಾದ್ಯಂತ ಆಪಾದಮೌಳಿಪರ್ಯಂತ ವ್ಯಾಪಿಸಿರುವ ಪುರುಷನಾಮಕ ಶ್ರೀಪರಮಾತ್ಮಸ್ವರೂಪಕ್ಕೆ ಸ್ಥೂಲರೂಪ ಎಂದು ಹೆಸರು. ಬ್ರಹ್ಮಾಂಡಾಕಾರನಾಗಿ ತನ್ನಾಮಕನಾಗಿ, ಶರೀರಾಕಾರನಾಗಿ ತತ್ತಚ್ಛಬ್ದವಾಚ್ಯನಾಗಿದ್ದಾನೆ.

ಮತ್ಸ್ಯ, ಕೂರ್ಮ, ರಾಮಕೃಷ್ಣಾದಿರೂಪಗಳಿಗೆ ಅವತಾರರೂಪಗಳೆಂದು ಹೆಸರು. ಶ್ರೀಪರಮಾತ್ಮನ ಮೂಲರೂಪಕ್ಕೂ, ಆದೇ ಮೂಲರೂಪದಿಂದ ಹೊರಟು ಪ್ರಾದುರ್ಭವಿಸಿರುವ ಅವತಾರರೂಪಗಳಿಗೂ ಲವಲೇಶವೂ ಭೇದವಿಲ್ಲ. ಸಕಲ ಅವತಾರರೂಪಗಳಲ್ಲಿಯೂ ಶ್ರೀಹರಿಯು ಪರಿಪೂರ್ಣನು. ಸ್ವಗತಭೇದ ವಿವರ್ಜಿತನಾದ ಆ ಸ್ವರಮಣನು ನಿತ್ಯಾನಂದಗುಣಪೂರ್ಣನು.

ಬ್ರಹ್ಮಾಂಡದ ಒಳಗೂ, ಹೊರಗೂ, ಚೇತನಾಚೇತನಾತ್ಮಕವಾದ ಪ್ರಪಂಚದಲ್ಲಿ ಅಣುರೇಣುತೃಣಕಾಷ್ಠಾದಿಗಳಲ್ಲಿ ಪರಿಪೂರ್ಣನಾಗಿ ಸರ್ವತ್ರ ವ್ಯಾಪಿಸಿರುವ ಭಗವಂತನ ರೂಪವಿಶೇಷಗಳಿಗೆ ವ್ಯಾಪ್ತರೂಪ ಎಂದು ಹೆಸರು.

ಸಕಲಜೀವರಾಶಿಗಳೂ ಶ್ರೀಪರಮಾತ್ಮನ ಪ್ರತಿಬಿಂಬಭೂತರು.

**ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ**

—ಎಂಬ ಗೀತಾವಾಕ್ಯವೇ ಇದಕ್ಕೆ ಪ್ರಮಾಣ.

ಸಮಸ್ತ ಜೀವಗಣ ಈಶನ ಅಂಶರೂಪಗಳು ಎಂದರೆ ಈಶನ ಪ್ರತಿಬಿಂಬಗಳ ಅಂತರ್ಗತರೂಪ. ಈ ಅಂಶರೂಪಗಳೂ ಜೀವರಿಂದ ಪರಮ ವಿಲಕ್ಷಣರೂಪಗಳು. ಅಂಶರೂಪನಾದ ಅಪ್ರಮೇಯನು ಜೀವಾಕಾರನಾಗಿದ್ದರೂ, ಜೀವರಿಂದ ಅತ್ಯಂತ ಭಿನ್ನನು. ಶ್ರೀಶನು ಬಿಂಬ. ಜೀವರು ಶ್ರೀಶನ ಪ್ರತಿಬಿಂಬರು.

ಪೂರ್ವೋಕ್ತ ಸ್ವರಮಣನ ಷಡ್ರೂಪಗಳಲ್ಲಿ ಷಡ್ರಸಗಳನ್ನು ಅರ್ಪಿಸಬೇಕೆಂದು ಹೇಳುತ್ತಾರೆ. ಆ ಷಡ್ರಸಗಳು ಯಾವುವೆಂದರೆ—

೧. ಸಾರರಸ
೨. ಶುಭರಸ
೩. ಪ್ರವಿವಿಕ್ತರಸ
೪. ಆನಂದರಸ
೫. ಸ್ಥೂಲರಸ
೬. ನಿಸ್ಸಾರರಸ

ವಸ್ತುಗತ ರಸಪ್ರಾಚುರ್ಯಕ್ಕೆ ಅದರ ಸಾರರಸವೇ ಮುಖ್ಯಕಾರಣವು. ಸಾರ ರಸದಲ್ಲಿ ರಸಪದವಾಚ್ಯನಾಗಿ ಆ ರಸದ ಪ್ರಾಚುರ್ಯಾಭಿವ್ಯಕ್ತಿಗೆ ಕಾರಣವಾಗಿರುವ ಶ್ರೀಪರಮಾತ್ಮನ ಕಾರಣರೂಪದಲ್ಲಿ ಸಾರರಸದ ಅರ್ಪಣೆ,

ಪರಮ ಪವಿತ್ರರೂಪದಲ್ಲಿರುವ ಮಂಗಳರಸವು ಶುಭರಸವು. ಅನಾದಿನಿತ್ಯನಾದ ಜೀವನ ಸ್ವರೂಪಾಂತರ್ಯಾಮಿಯಾಗಿರುವ ಬಿಂಬರೂಪಕ್ಕೆ ಈ ಶುಭರಸವನ್ನು ಚಿಂತನಾಪೂರ್ವಕ ಅರ್ಪಿಸಬೇಕು.

ಇಂತು ಷಡ್ರಸಗಳಲ್ಲಿ ರಸಾಂತರ್ಗತನಾಗಿ ಷಡ್ರೂಪಗಳಿಂದ ವಿರಾಜಮಾನನಾಗಿದ್ದು, ಆ ರಸಗಳಲ್ಲಿ ತಾನು ಇಟ್ಟಿರುವ ತನ್ನಿಂದ ಅಭಿನ್ನವಾದ ಸ್ವಾಖ್ಯರಸಗಳನ್ನು ಸ್ವೀಕರಿಸುವನು. ಇದರಿಂದ ಪ್ರತಿಬಿಂಬರಾದ ಜೀವರಿಗೆ ಆಯಾಯಾ ರಸಾನುಭವ. ಈ ರೀತಿ ಅಪಾರ ಮಹಿಮಾಸಂಪನ್ನನಾದ ಅಪ್ರಮೇಯನ ರೂಪ, ಕ್ರಿಯೆ ಗುಣಾದಿಗಳನ್ನು ಸ್ಮರಿಸುತ್ತಾ, ಆನಂದಿಸುತ್ತಿರು ಎಂದು ತಿಳಿಸುತ್ತಾರೆ. ॥೨೭॥

## ಪದ್ಯ ೨೮

**ಮೂಲ**

**ಜಲಗತೋಡುಪನಮಲ ಬಿಂಬವ ।**
**ಮೆಲುವೆವೆಂಬತಿ ಹರುಷದಿಂದಲಿ ।**
**ಜಲಚರಪ್ರಾಣಿಗಳು ನಿತ್ಯದಿ ಯತ್ನವಗೈವಂತೆ ॥**
**ಹಲಧರಾನುಜ ಭೋಗ್ಯರಸಗಳ ।**
**ನೆಲೆಯನರಿಯದೆ ಪೂಜಿಸುತ ಹಂ ।**
**ಬಲಿಸುವರು ಪುರುಷಾರ್ಥಗಳ ಸತ್ಕುಲಜರಾವೆಂದು ॥ ೨೮ ॥**

**ಅವತರಣಿಕೆ**

ಪುರುಷಾರ್ಥಗಳನ್ನು ಬೇಡುತ್ತಾ, ಸತ್ಕುಲಪ್ರಸೂತರು ತಾವೆಂದು ಭಾವಿಸುವ ನರರ ಪಾಡನ್ನು ಜಲಚರ ಪ್ರಾಣಿಗಳು ನೀರಿನಲ್ಲಿ ಪ್ರತಿಬಿಂಬಿತನಾದ ಚಂದ್ರನನ್ನು ಭಕ್ಷಣಮಾಡುತ್ತೇವೆಂಬ ಭ್ರಮೆಯಿಂದ ಸಂಚರಿಸುತ್ತಿರುವ ಜಲಜಂತುಗಳ ದೃಷ್ಟಾಂತಪೂರ್ವಕ ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಜಲಗತ** = ಸಮುದ್ರ, ತಟಾಕಾದಿಗಳಲ್ಲಿರುವ ನೀರಿನಲ್ಲಿ, **ಉಡುಪನ** = ನಕ್ಷತ್ರಗಳ ಅಧಿಪತಿಯಾದ ಚಂದ್ರನ, **ಅಮಲಬಿಂಬವ** = ಸ್ವಚ್ಛವಾದ ಪ್ರತಿಬಿಂಬ ವನ್ನು, **ನುಲುವೆನೆಂಬ** = ಭಕ್ಷಿಸುತ್ತೇವೆ ಎಂದು, **ಅತಿಹರುಷದಿಂದಲಿ** = ಅತ್ಯಂತ ಸಂತೋಷದಿಂದ, **ಜಲಚರಪ್ರಾಣಿಗಳು** = ಮೀನು ಇತ್ಯಾದಿ ನೀರಿನಲ್ಲಿ ಸಂಚರಿಸುವ ಪ್ರಾಣಿಗಳು. **ನಿತ್ಯದಿ** = ಸತತವಾಗಿ, **ಯತ್ನಗೈವಂತೆ** = ಪ್ರಯ ತ್ನಿಸುವಂತೆ, **ಹಲಧರಾನುಜ** = ಬಲರಾಮದೇವರಿಗೆ ತಮ್ಮನಾದ ಶ್ರೀಕೃಷ್ಣನು (ಹಲ–ನೇಗಿಲು, ಹಲಧರ–ನೇಗಿಲನ್ನು ಆಯುಧವನ್ನಾಗಿ ಧರಿಸಿರುವ ಬಲರಾಮ. ಅನುಜ–ಅವನ ತಮ್ಮ ಶ್ರೀಕೃಷ್ಣ) **ಭೋಗ್ಯರಸಗಳ** = ಪರಮಾತ್ಮ ಸ್ವೀಕಾರ ಮಾಡತಕ್ಕ ಸ್ವಾದ್ಯರಸಗಳ, **ನೆಲೆಯನರಿಯದೆ** = ರಹಸ್ಯವನ್ನು ತಿಳಿಯದೆ, **ಸತ್ಕುಲಜರಾವೆಂದು** = ಉತ್ತಮವಾದ ಕುಲದಲ್ಲಿ ನಾವು ಜನಿಸಿದ್ದೇವೆ ಎಂಬ ಭಾವನೆಯಿಂದ, **ಪೂಜಿಸುತ** = ಪೂಜೆಮಾಡುತ್ತಾ, **ಪುರುಷಾರ್ಥಗಳ** = ಕಾಮಾದಿ ಪುರುಷಾರ್ಥಗಳನ್ನು, **ಹಂಬಲಿಸುವರು** = ಬೇಕೆಂದು ಇಚ್ಛಿಸುತ್ತಾರೆ. ॥ ೨೦ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಜ್ಞಾನಶೂನ್ಯರಾಗಿ ಸತ್ಕರ್ಮ ಮಾಡಿದವರಿಗೆ ಭಗವದನುಗ್ರಹವಾಗೋದಿಲ್ಲ ಎಂತ ಹೇಳತಾರೆ.

ಸಮುದ್ರಜಲದಲ್ಲಿ ಅಥವಾ ತಟಾಕ ಮೊದಲಾದ ಜಲಪ್ರದೇಶಗಳಲ್ಲಿ ಪ್ರತಿಫಲಿಸಿದ, ನಕ್ಷತ್ರಗಳ ಪಾಲನ ಮಾಡತಕ್ಕ ಚಂದ್ರನ, ಎಂಥ ಚಂದ್ರ ಎಂದರೆ ಸ್ವಚ್ಛವಾದ ಪ್ರತಿಬಿಂಬವನ್ನ ತೋರಿಸತಕ್ಕ ಚಂದ್ರ, ಜಲಚರಜೀವರು ಆ ಪ್ರತಿ ಬಿಂಬವನ್ನ ಭಕ್ಷಣ ಮಾಡಬೇಕು ಎಂತ ಇಚ್ಛಾ ಮಾಡತವೆ. ಅತ್ಯಂತ ಸಂತೋಷ ದಿಂದ ಉದಕದಲ್ಲಿ ಅಧೋಭಾಗಗತ ಮನ ಉಳ್ಳವಾಗಿ, ಆ ಚಂದ್ರನ ಪ್ರತಿಬಿಂಬ ಐದಬೇಕೆಂದು ಸತತವಾಗಿ ಯತ್ನಮಾಡೋವಾಗತವೆ. ಈ ಜಲಚರಗಳಿಗೆ ಚಂದ್ರನು ಹ್ಯಾಂಗೆ ಅಸಾಧ್ಯನೋ ಹಾಂಗೆ, ಬಲರಾಮದೇವರಿಗೆ ತಮ್ಮನಾದ ಶ್ರೀಕೃಷ್ಣನ ಐದಬೇಕೆಂದು ಇಚ್ಛಾ ಉಳ್ಳ ಮನುಷ್ಯರು, ಪರಮಾತ್ಮ ಸ್ವೀಕಾರ

ಮಾಡುವ ಅಪ್ರಾಕೃತರಸಗಳ ಅಂತವನರಿಯದೆ ಅಂದರೆ, ಸರ್ವಪದಾರ್ಥದಲ್ಲೂ ಪರಮಾತ್ಮಗೆ ಅಭಿನ್ನವಾದ ರಸವದೆ ಅಂತ ತಿಳಿಯದೆ, ಪರಿದೃಶ್ಯಮಾನ ಜಡ ಪದಾರ್ಥಗಳಿಂದ ಪೂಜೆಮಾಡುತ್ತ ದೇಹಪ್ರಯಾಸಯುಕ್ತರಾಗಿ ಜಲಚರ ಜೀವ ರಂತೆ ಯತ್ನ ಉಳ್ಳವರಾಗಿ, ಸಮೀಚೀನವಾದ ಕುಲದಲ್ಲಿ ಹುಟ್ಟಿದವರು, ಅಲ್ಲದೆ ಪರಮಾತ್ಮನ ಪೂಜೆ ನಾವು ಸರಿಯಾಗಿ ಮಾಡಿದ್ದೇವು ಎಂದು ಅಹಂಯುಕ್ತರಾಗಿ, ಕ್ಷರಾಕ್ಷರ ವಿಲಕ್ಷಣನಾದ ಸರ್ವೋತ್ತಮನಾದ ಪುರುಷಸಾಂಕೇತನಾದ ಶ್ರೀಪರಮಾತ್ಮನ ಅಪರೋಕ್ಷವೇನು, ಅನುಗ್ರಹವೇನು ಇದಕ್ಕೆ ಅನುಸರಿಸಿದ ಇತರವಾದ ಅನೇಕ ಸುಖಗಳ ಬೇಡೋವರಾಗತಾರೆ.

**ತಾತ್ಪರ್ಯ—** ಚಂದ್ರಬಿಂಬವನ್ನ ಐದಿ ಸುಖಪಡಬೇಕು ಎಂತ ಇಚ್ಛಾ ಉಳ್ಳ ಜಲಚರಜೀವರು ಶ್ರಾಂತರಾಗಿ, ತಮ್ಮ ಮನೋಭೀಷ್ಟ ಹೊಂದದೆ ಹ್ಯಾಂಗೆ ಸಂಚಾರ ಮಾಡತಾ ಇರತಾರೋ ಹಾಂಗೆ, ಜ್ಞಾನಹೀನರಾಗಿ ಮಾಡಿದ ಸರ್ವಕರ್ಮಗಳನ್ನೂ ನಷ್ಟಹೊಂದಿ ಶ್ರಮಪಡತಾ, ಜನನಮರಣದಿಂದ ಸಂಚಾರರೂಪ ದುಃಖವನ್ನ ಅನುಭವ ಮಾಡತಾ ಇರತಾರೆ. ಇಂಥಾವರಿಗೆ ಭಗವದಪರೋಕ್ಷವೇನು, ಭಗವದನುಗ್ರಹವೇನು ಆಗೋದಿಲ್ಲ ಎಂತ ತಾತ್ಪರ್ಯ ॥ ೨೮ ॥

೨. ಭಾವಪ್ರಕಾಶಿಕೆ

ಚಂದ್ರನ ಪ್ರತಿಬಿಂಬವು ಕೆರೆ ಮೊದಲಾದುವುಗಳಲ್ಲಿ ಕಾಣುತ್ತಿರಲು, ಅಲ್ಲಿರುವ ಜಲಚರ ಪ್ರಾಣಿಗಳು ಆ ಚಂದ್ರನ ಪ್ರತಿಬಿಂಬವನ್ನು ತಮಗೆ ಉತ್ತಮಾಹಾರವೆಂದು ಭಾವಿಸಿ ಅದನ್ನು ತಿನ್ನಬೇಕೆಂದು ಬಹಳ ಸಂತೋಷದಿಂದ ಪ್ರಯತ್ನ ಮಾಡುತ್ತವೆ. ಇದು ಎಂದಿಗೂ ಸಾಧ್ಯವಾಗತಕ್ಕದ್ದಲ್ಲ. ಹಾಗೆಯೇ ಎಲ್ಲೆಲ್ಲಿರುವ ಭಗವದ್ರೂಪಗಳಿಗೆ ಯಾವ ಯಾವ ರಸಗಳನ್ನು ಯಾವ ಯಾವ ರೀತಿಯಿಂದ ಅರ್ಪಿಸಬೇಕೆಂಬ ವಿಷಯವನ್ನರಿಯದೆ ತಾವು ಸತ್ಕುಲಪ್ರಸೂತರೆಂದು ತಿಳಿದು ಪ್ರತಿಮಾದಿಗಳನ್ನು ಆಡಂಬರದಿಂದ ಪೂಜಿಸಿ ಪುರುಷಾರ್ಥಗಳನ್ನು ಬೇಡುವವರ ಪಾಡು, ಜಲಚರ ಪ್ರಾಣಿಗಳು ನೀರೊಳಗಿರುವ ಚಂದ್ರನ ಪ್ರತಿಬಿಂಬವನ್ನುಂಡು ಹೊಟ್ಟೆ ತುಂಬಿಸಿಕೊಳ್ಳುವ ಯೋಚನೆಯಿಂದ ಎಷ್ಟು ಫಲವನ್ನು ಕಾಣುವವೋ ಅಷ್ಟೇ ಫಲವು ಇದರಿಂದಲೂ ಆಗುವದೆಂಬ ಭಾವ. ॥ ೨೮ ॥

೩. **ಭಾವದರ್ಪಣ**

ಶ್ರೀಹರಿಯು ಸ್ವೀಕರಿಸತಕ್ಕ ರಸಜ್ಞಾನವಿಲ್ಲದೆ ನಾವು ದೊಡ್ಡ ಕುಲದಲ್ಲಿ ಉತ್ಪನ್ನರು ಎಂದು ಪುರುಷಾರ್ಥ ಕೇಳುತ್ತಾರೆಂದು ಹೇಳುತ್ತಾರೆ, ಜಲಗತೇತಿ. ॥ ೨೮ ॥

೪. **ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಜಲಗತ ಇತಿ ॥ ಗೈವಂತೇ–ಮಾಡುವಂತೇ ॥ ಅವು–ನಾವು ॥ ೨೮ ॥

**ಕನ್ನಡಾರ್ಥ**

ಪರಮಾತ್ಮಭೋಗ್ಯರಸಗಳನ್ನು ಸರಿಯಾಗಿ ಅರಿಯದೇ ಕೇವಲ ಸತ್ಕುಲಾಭಿಮಾನದಿಂದ ತೋರಿ ಮಾಡುವ ಪ್ರತಿಮಾದಿಗಳ ಪೂಜೆಯು ನೀರಿನಲ್ಲಿರುವ ಚಂದ್ರ ಪ್ರತಿಬಿಂಬವನ್ನು ತಿನ್ನಲು ಮಾಡುವ ಜಲಚರ ಪ್ರಾಣಿಗಳ ಯತ್ನದಂತೆ ವಿಫಲವಾಗುತ್ತದೆ ಎಂದು ಈ ಪದ್ಯದ ಭಾವ ॥ ೨೮ ॥

೫. **ಶ್ರೀಗುರುಹೃದಯಪ್ರಕಾಶಿಕೆ**

ದೇವರ ಸ್ವರೂಪರಸ ಮುಂತಾದ್ದನ್ನು ತಿಳಿಯದೆ ಮಾಡುವ ಪೂಜಾದಿ ಕರ್ಮಗಳು ವ್ಯರ್ಥವೆಂದು ಸದೃಷ್ಟಾಂತ ತಿಳಿಸುತ್ತಾರೆ, ಜಲಗತ ಎಂದು. ನೀರಿನಲ್ಲಿರುವ ಉಡುಪನೆಂಬ ನಕ್ಷತ್ರಾಧಿಪತಿಚಂದ್ರನ ಪ್ರತಿಬಿಂಬಮಂಡಲವನ್ನು ನೋಡಿ, ಜಲಚರಪ್ರಾಣಿಗಳೆಂಬ ಮೀನು ಮುಂತಾದ ಕ್ರಿಮಿಗಳು ಆ ಪ್ರತಿಬಿಂಬವನ್ನು ತಿನ್ನುವುದಕ್ಕೆ ಹರ್ಷಪಟ್ಟು ಯತ್ನಮಾಡಿ ವಿಫಲವಾಗುವಂತೆ, ಹಲಧರನೆಂಬ ಬಲರಾಮನ ತಮ್ಮನಾದ ಶ್ರೀಕೃಷ್ಣನ ಭೋಗ್ಯರಸಗಳು ಸರ್ವತ್ರವಿರುವವೆಂಬ ಸ್ಥಿತಿಯನ್ನು ತಿಳಿಯದವರು, ದೇವರು ಮಾಡಿಸುತ್ತಾನೆ, ತಾವು ಸತ್ಕುಲಪ್ರಸೂತರು, ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳ ಸೌಖ್ಯ ತಮ್ಮದೇ ಸರಿಯೆಂದೆಣಿಸಿ ಹೇಳಿಕೊಂಡು ಅಪೇಕ್ಷಿಸುವುದೂ ವ್ಯರ್ಥವಾಗುವವೆಂದು ತಾತ್ಪರ್ಯ ॥ ೨೮ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ಜಲಚರ ಜಂತುಗಳು ನೀರಿನಲ್ಲಿ ಸಂಚರಿಸುತ್ತಾ, ನೀರಿನಲ್ಲಿ ಉಂಟಾದ ಚಂದ್ರನ ಪ್ರತಿಬಿಂಬವನ್ನು ಆಹಾರವೆಂದು ಭಾವಿಸಿ, ಅತ್ಯಂತ ಸಂತೋಷದಿಂದ ಭಕ್ಷಿಸಲು ಪ್ರಯತ್ನಿಸುವುವು. ಆ ಜಲಚರ ಪ್ರಾಣಿಗಳ ಪ್ರಯತ್ನ ವ್ಯರ್ಥ. ಇದರಂತೆ ಶ್ರೀಪರಮಾತ್ಮನು ಸ್ವೀಕರಿಸುವ ಸ್ವಾಖ್ಯರಸಗಳ ವಿಷಯವನ್ನೇ ಅರಿಯದ ಸಾಮಾನ್ಯ ಜನರು ಸ್ವತಂತ್ರಕರ್ತೃತ್ವಾಭಿಮಾನವುಳ್ಳವರಾಗಿ, ತಾವೇ ಭುಂಜಿಸುತ್ತೇವೆ. ಸಕಲ ಕ್ರಿಯಾವಿಶೇಷಗಳೂ ತಮ್ಮಿಂದಲೇ ಆಗುವುವು ಎಂಬ ಭಾವನೆಯಿಂದ ಶ್ರೀಪರಮಾತ್ಮನನ್ನು ಪೂಜಿಸುವರು. ಸಕಲ ಭೋಜನವಸ್ತುಗಳಲ್ಲಿ ರಸಶಬ್ದವಾಚ್ಯನಾಗಿ ಇರುವ ಶ್ರೀಹರಿಯ ಬಿಂಬಕ್ರಿಯಭಾವವನ್ನು ಅರಿಯದೇ, ಪುರುಷಾರ್ಥಗಳನ್ನು ಹಂಬಲಿಸುತ್ತಾ ತಾವು ಸತ್ಕುಲಪ್ರಸೂತರೆಂಬ ಹೆಮ್ಮೆಯಿಂದ ದೇವತಾರ್ಚನೆ ಗೈಯ್ಯಲು ಅದನ್ನು ಶ್ರೀಕೃಷ್ಣನು ಎಂದೆಂದಿಗೂ ಸ್ವೀಕರಿಸುವುದಿಲ್ಲ.

ಸದ್ವಂಶದವರಾಗಲೀ, ಉತ್ತಮವರ್ಣದವರಾಗಲೀ, ಸತ್ಕರ್ಮಾನುಷ್ಠಾತೃಗಳೇ ಆಗಲಿ, ಅನುಸಂಧಾನರಹಿತರಾಗಿದ್ದರೆ, ಅವರ ಕರ್ಮಗಳೆಲ್ಲವೂ ಶ್ರೀಹರಿಯ ಒಲುಮೆಗೆ ಪಾತ್ರವಲ್ಲ ಎಂದು ತಾತ್ಪರ್ಯ ॥ ೨೮ ॥

* * *

## ಪದ್ಯ ೨೯

**ಮೂಲ**

**ದೇವ ಋಷಿ ಗಂಧರ್ವ ಪಿತೃ ನರ ।**
**ದೇವ ಮಾನವ ದನುಜ ಗೋಜ ಖ ।**
**ರಾವಿ ಮೊದಲಾದಖಿಳಚೇತನ ಭೋಗ್ಯರಸಗಳನು ॥**
**ಯಾವದವಯವಗಳೊಳಗಿದ್ದು ರ ।**
**ಮಾವರನು ಸ್ವೀಕರಿಪ ಯಾವ ।**
**ಜೀವಗಣಕೆ ಸ್ವಯೋಗ್ಯರಸಗಳನೀವನೆಂದೆಂದು ॥ ೨೯ ॥**

**ಅವತರಣಿಕೆ**

ಸಮಸ್ತ ಚೇತನರಲ್ಲಿದ್ದು, ಅವರವರ ಯೋಗ್ಯತಾನುಸಾರ, ಅವರ ಶರೀರ ಗತ ಇಂದ್ರಿಯಗಳಲ್ಲಿ ಇದ್ದವನಾಗಿ, ಭೋಜ್ಯರಸಗಳನ್ನು ಜೀವರಿಗೆ ಉಣಿಸುತ್ತಾ, ತಾನು ಮಾತ್ರ ಸ್ವಾಭಿನ್ನವಾದ ಆಯಾಯಾ ಭೋಜ್ಯವಸ್ತುಗಳಲ್ಲಿರುವ ರಸಾಂತ ರ್ಗತ ಸ್ವಾಖ್ಯರಸಗಳನ್ನು ಮಾತ್ರ ಎಂದೆಂದಿಗೂ ಸ್ವೀಕರಿಸುತ್ತಾನೆಂದು ತಿಳಿಸು ತ್ತಾರೆ.

**ಪ್ರತಿಪದಾರ್ಥ**

**ದೇವ** = ಬ್ರಹ್ಮದೇವರಾರಭ್ಯ ಶತಸ್ಥರಪರ್ಯಂತ ದೇವತಾಗಣ, **ಋಷಿ** = ಋಷಿವರ್ಗದಲ್ಲಿ (ಇದರಲ್ಲಿ ಪುಷ್ಕರಾಂತ ಕರ್ಮಜದೇವತೆಗಳೂ ಗ್ರಾಹ್ಯ) **ಪಿತೃ** = ಚಿರಪಿತೃವರ್ಗ, **ಗಂಧರ್ವ** = ದೇವಮಾನವಗಂಧರ್ವರ ವರ್ಗ, **ನರದೇವ** = ಶ್ರೇಷ್ಠರಾದ ಮಾನುಷಚಕ್ರವರ್ತಿಗಳ ಗಣ. **ಮಾನವ** = ಮಾನುಷೋತ್ತಮರು– ಹೀಗೆ ಪಂಚವಿಧ ಜೀವವರ್ಗ. **ಗೋ** = ಹಸುಗಳು, **ಅಜ** = ಮೇಕೆಗಳು, **ಖರ** = ಕತ್ತೆ, **ಅವಿ** = ಕುರಿಗಳು ಇತ್ಯಾದಿ ಪಶ್ವಾದಿವರ್ಗ (ಈ ವರ್ಗದಲ್ಲಿ ಕುದುರೆ, ಆನೆ ಇತ್ಯಾದಿ ಸಮಸ್ತ ಪ್ರಾಣಿಗಳೂ ಸಮಾವೇಶ), **ದನುಜ** = ರಾಕ್ಷಸರು, **ಮೊದ ಲಾದ** = ಇತ್ಯಾದಿ, **ಅಖಿಳಚೇತನ** = ಸಮಸ್ತ ತ್ರಿವಿಧಜೀವರುಗಳ, **ಭೋಗ್ಯ ರಸಗಳನು** = ಭೋಜನಯೋಗ್ಯವಾದ ರಸವಿಶೇಷಗಳನ್ನು, **ಯಾವತ್ ಅವ ಯವದೊಳಗೆ ಇದ್ದು** = ಅವರವರ ಶರೀರಗತ ಕರಚರಣಾದ್ಯವಯವಗಳಲ್ಲಿ ತಾನು ಸ್ಥಿತನಾಗಿದ್ದು, **ರಮಾವರನು** = ಲಕ್ಷ್ಮೀಪತಿಯಾದ ಶ್ರೀಮನ್ನಾರಾಯ ಣನು (ವರ–ಪದದಿಂದ ರಮಾಗಿಂತಲೂ ಅನಂತಕೋಟಿ ಗುಣಾಧಿಕ್ಯನು), **ಸ್ವೀಕ ರಿಪ** = ಆಯಾಯಾ ಭೋಗ್ಯಪದಾರ್ಥಗತ ರಸಾಂತರ್ಗತ ಸ್ವಾಖ್ಯರಸಗಳನ್ನು ಅಂದರೆ, (ತನ್ನದೇ ಆದ ಭಗವದ್ರೂಪಗಳಲ್ಲಿ ರಮಿಸುವನು)ತೆಗೆದುಕೊಳ್ಳುತ್ತಾನೆ. **ಯಾವಜ್ಜೀವಗಣಕೆ** = ಸಮಸ್ತ ತ್ರಿವಿಧಜೀವರ ಸಮೂಹಕ್ಕೆ, **ಎಂದೆಂದು** = ಅನಾದ್ಯಂತಕಾಲಕ್ಕೂ, **ಸ್ವಯೋಗ್ಯರಸಗಳನು** = ಆಯಾಯಾ ಜೀವರ ಸ್ಥೂಲ ದೇಹಕ್ಕೆ ಉಪಚಯವಾಗುವ ರಸಗಳನ್ನು, **ಈವ** = ಬಿಂಬಕ್ರಿಯಾದ್ವಾರಾ ಸ್ವಾಖ್ಯ ರಸ ತಾನು ಸ್ವೀಕರಿಸಿ, ತದ್ವಾರಾ ಜೀವರಿಗೆ ತೃಪ್ತಿಯನ್ನು ಕೊಡುವನು. ॥೨೯॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಸಮಸ್ತ ಜೀವರು ಭೋಜನ ಮಾಡತಕ್ಕ ಪದಾರ್ಥಗಳಲ್ಲಿ ಪರಮಾತ್ಮ ಇದ್ದವನಾಗಿ, ಅವರವರ ರಸ ಅವರವರಿಗೆ ಉಣಿಸಿ, ತನ್ನ ಸ್ವಾಖ್ಯರಸ ತಾನು ಸ್ವೀಕರಿಸುತ್ತಾ ಇರ್ತಾನೆ ಎಂತ ಹೇಳತಾರೆ.

ಬ್ರಹ್ಮದೇವರಾರಭ್ಯ ಶತಸ್ಥರ ಪರಿಯಂತ ದೇವತೆಗಳು, ಋಷಿ ಶಬ್ದದಿಂದ ಪುಷ್ಕರಾಂತ ಕರ್ಮಜದೇವತೆಗಳು, ಪಿತೃ ಶಬ್ದದಿಂದ ಚಿರಪಿತೃಗಳು ಹಾಂಗೇ ದೇವಗಂಧರ್ವಾಂತ ಆಜಾನಜದೇವತೆಗಳು, ಮಾನುಷಗಂಧರ್ವರು, ಮಾನುಷಚಕ್ರವರ್ತಿಗಳು, ಮನುಷ್ಯೋತ್ತಮರು, ಆಕಳು ಎತ್ತುಗಳು ಮೇಕೆ ಕತ್ತೆ ಕುರಿಗಳು ರಾಕ್ಷಸರು ಇವರೇ ಮೊದಲಾದ ಸಮಸ್ತರಾದ ತ್ರಿವಿಧಜೀವರುಗಳ ಭೋಜನಯೋಗ್ಯವಾದ ಯಾವತ್ತೂ ರಸಗಳನ್ನು ಲಕ್ಷ್ಮೀದೇವಿಯರಿಗೆ ಪತಿಯಾದ ನಾರಾಯಣದೇವರು, ಆಯಾ ಪ್ರಾಣಿಗಳ ಕರಚರಣಾದಿ ಅವಯುವಗಳೊಳಗೆ ತದಾಕಾರ ತದ್ಭಿನ್ನನಾಗಿದ್ದು, ತನ್ನ ಸ್ವಾಖ್ಯವಾದ ರಸರೂಪಾಭಿನ್ನವಾದ ರೂಪಗಳಿಂದ ಐಕ್ಯ ಐದಿ, ಜಡರಸಗಳ ಜೀವರಿಗೆ ಉಣಸತಾನೆ. ಆ ಉಣಿಸುವ ಬಗೆ ಹ್ಯಾಂಗೆಂದರೆ, ಸಮಸ್ತರಾದ ತ್ರಿವಿಧಜೀವರ ಸಮೂಹಕ್ಕೆ ಯೋಗ್ಯವಾದ ಭೋಜನೋಪಯುಕ್ತವಾದ ಅವರವರ ಸ್ವಕೀಯ ಸ್ಥೂಲದೇಹಕ್ಕೆ ಉಪಚಯವಾಗತಕ್ಕ ಪದಾರ್ಥಗಳ, ಈ ಪದಾರ್ಥಗಳಲ್ಲಿ ಜಡರಸ ಇಟ್ಟವನಾಗಿ ಜೀವರಿಗೆ ಬಿಂಬಕ್ರಿಯಾದ್ವಾರಾ ಪ್ರತಿಬಿಂಬಕ್ರಿಯಾದಿಂದ ಉಣಿಸಿ, ಸ್ಥೂಲದೇಹಕ್ಕೆ ಉಪಚಯ ಮಾಡಿಕೊಡತಾನೆಂದು ತಿಳದು, ಅನಾದ್ಯನಂತಕಾಲಕ್ಕೂ ಜೀವಭೋಗ್ಯ ಈಶಗಿಲ್ಲ, ಈಶಭುಕ್ತ ಜೀವಗಿಲ್ಲ ಎಂತ ತಿಳಿಯಬೇಕು. ಸರ್ವಜೀವರೂ ಭೋಜನಮಾಡೋ ಪದಾರ್ಥದಲ್ಲಿ ಪರಮಾತ್ಮ ಇರತಾನೆ. ಆದರೆ ನಿಷಿದ್ಧವಾದ ಪದಾರ್ಥಗಳಲ್ಲಿ ಪರಮಾತ್ಮನ ಚಿಂತನೆಯೇ ಹೊರತು, ಅಲ್ಲಿ ವಂದನಾದಿಗಳು ಕೂಡದು ಎಂತಲೂ, ಅನಿಷಿದ್ಧವಾದ ಪದಾರ್ಥಗಳ ಸೇವನಪೂರ್ವಕ ಪದಾರ್ಥಾಂತರ್ಗತ ಭಗವಂತನ ಪೂಜಾ ಮಾಡಬಹುದೆಂತಲೂ ತಾತ್ಪರ್ಯ. ॥ ೨೯ ॥

**೨. ಭಾವಪ್ರಕಾಶಿಕೆ**

ದೇವತೆಗಳು, ಋಷಿಗಳು, ಪಿತೃಗಳು, ಚಕ್ರವರ್ತಿಗಳು, ಮನುಷ್ಯರು, ದೈತ್ಯರು, ಗೋವುಗಳು, ಮೇಕೆಗಳು, ಕತ್ತೆಗಳು, ಕುರಿ ಮೊದಲಾದ ಸಕಲ ಪ್ರಾಣಿಗಳ ಭೋಗ್ಯವಸ್ತುಗಳೆಂದರೆ, ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಮನಸ್ಸು ಮೊದಲಾದ ಅವಯವಗಳಿಂದ ಅನುಭವಿಸುವ ಎಲ್ಲ ವಸ್ತುಗಳೆಂದರ್ಥ. ಕಣ್ಣಿನಿಂದ ನೋಡಿ ಆನಂದಪಡುವುದು ಕೆಲವು, ಕಿವಿಯಿಂದ ಕೇಳಿ ಸುಖಪಡುವುದು, ಭುಂಜಿಸುವುದು ಮೊದಲಾದ ಎಲ್ಲ ಭೋಗ್ಯವಸ್ತುಗಳ ಸಾರವನ್ನೂ ಶ್ರೀಪರಮಾತ್ಮನು ತತ್ತತ್ಪ್ರಾಣಿಗಳ ತತ್ತದ್ದಂಗಗಳಲ್ಲಿದ್ದು ಆಯಾವಸ್ತುಗಳ ಸಾರವನ್ನು ಸ್ವೀಕರಿಸಿ, ಎಲ್ಲಾ ಜೀವಗಣಗಳಿಗೂ ಅವರವರ ಯೋಗ್ಯತಾನುಸಾರವಾಗಿ ಅವರವರಿಗೆ ರಸಗಳನ್ನು ಉಣಿಸುವನೆಂಬ ಭಾವ ॥ ೨೯ ॥

**೩. ಭಾವದರ್ಪಣ**

ಸಮಸ್ತರಲ್ಲಿ ನಿಂತು ತನ್ನ ರಸ ಸ್ವೀಕರಿಸುತ್ತಾನೆಂತಲೂ, ಲಕ್ಷ್ಮ್ಯಾದಿಗಳಿಗೆ ಕೊಡನೆಂತಲೂ ಸೂಚಿಸುತ್ತಾರೆ–ದೇವೇತಿ. ॥ ೨೯ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ದೇವ ಇತಿ ॥ ಗೋಜ–ಪೃಥ್ವೀಜ ॥ ಅವಿ–ಕುರೀ॥ ಈಯು–ಕೊಡ ॥೨೯॥

**ಕನ್ನಡಾರ್ಥ**

ಸಮಸ್ತ ಜೀವರ ಎಲ್ಲ ಅವಯವ ಇಂದ್ರಿಯಗಳಲ್ಲಿದ್ದು ಅವರೆಲ್ಲರೂ ಭುಂಜಿಸಬೇಕಾದ ಸಕಲ ರಸಗಳನ್ನೂ ತಾನು ಸ್ವೀಕರಿಸಿ ಯಾವ ಜೀವನಿಗೂ ತನ್ನ ಭೋಗ್ಯರಸವನ್ನು ಎಂದಿಗೂ ಕೊಡದೇ ಅವರವರ ಯೋಗ್ಯ ಭೋಗ್ಯ ರಸಗಳನ್ನಷ್ಟೇ ಅವರಿಗೆ ಕರುಣಿಸುವನು ಎಂದು ದಾಸರಾಯರ ಭಾವ ॥ ೨೯ ॥

**೫. ಶ್ರೀಗುರುಹೃದಯಪ್ರಕಾಶಿಕೆ**

ಆದ್ದರಿಂದ ಹಾಗೆ ತಿಳಿಯದೆ ಸರ್ವತ್ರ ದೇವರ ಸ್ವರೂಪರಸ ಬೇರೆ ಆತ

ಜೀವಯೋಗ್ಯರಸಗಳು ಬೇರೆ ಬೇರೆ ಇರುವವೆಂದು ತಿಳಿಯಬೇಕೆಂದು ಹೇಳು ತ್ತಾರೆ. ದೇವ ಎಂದು, ದೇವತೆಗಳು ಋಷಿಗಳು ಗಂಧರ್ವರು ಪಿತೃಗಣದವರು, ಮನುಷ್ಯರು ನರದೇವರೆಂಬ ದೊರೆಗಳು, ದನುಜರೆಂಬ ಅಯೋಗ್ಯಜನರು, ಗೋವುಗಳು ಅಜ ಎಂಬ ಮೇಕೆಗಳು, ಖರವೆಂಬ ಕತ್ತೆಗಳು, ಆವಿ ಎಂಬ ಕುರಿ ಗಳು ಮೊದಲಾದ ಜಾತಿಭೇದವಿರುವ ಸರ್ವಜೀವಭೋಗ್ಯರಸಗಳನ್ನು, ಬೇರೆ ಬೇರೆ ಸರ್ವತ್ರವಿರುವುದನ್ನೆಲ್ಲಾ ಸರ್ವದೇಹಗಳಲ್ಲೂ ರಮಾಪತಿಯಾದ ಸ್ವಾಮಿ ಯು ಸ್ವೀಕರಿಸಿ ಅವರವರಿಗೆ ಕೊಡುವನು. ಸ್ವಯೋಗ್ಯರಸಗಳನ್ನು ಎಂದಿಗೂ ಇತರರಿಗೆ ಕೊಡುವುದಿಲ್ಲವೆಂದರ್ಥ. ಇದರಿಂದ ಮೇಲೆ ೨೭ನೇ ಪದ್ಯದಲ್ಲಿ ಉದ ಹರಿಸಿದ ಮಂತ್ರಾರ್ಥ ವಿವರಿಸಿತು. ॥ ೨೯ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಮುಕ್ತಿಯೋಗ್ಯರಾದ ಸಾತ್ವಿಕಜೀವವರ್ಗದಲ್ಲಿ ಮುಖ್ಯವಾಗಿ ಐದುಪ್ರಕಾರ. ಈ ಗಣಕ್ಕೆ **ಪಂಚಜೀವವರ್ಗ**ವೆಂದು ಹೆಸರು.

ಚತುರ್ಮುಖಬ್ರಹ್ಮದೇವರು ದೇವತಾವರ್ಗದಲ್ಲಿ ಪರಮಶ್ರೇಷ್ಠರು. ಅವ ರಾರಭ್ಯ ಶತಸ್ಥರೆಂಬ ದೇವತಾವರ್ಗ ಪರ್ಯಂತ ಇರುವ ಗಣವು **ದೇವಗಣ.**

ಸುಪ್ರಸಿದ್ಧ ಜ್ಞಾನಿಗಳಾದ ವಸಿಷ್ಠಾದಿ ಸಪ್ತಋಷಿವರ್ಗ ಮತ್ತು ಇತರ ಬ್ರಹ್ಮಜ್ಞಾನಿಗಳಾದ ಋಷಿಗಳು, ಈ ವರ್ಗವು **ಋಷಿವರ್ಗವು.** ಈ ವರ್ಗದಲ್ಲಿ **ಪುಷ್ಕರಾಂತ ಕರ್ಮಜದೇವತೆಗಳೂ ಇದ್ದಾರೆ. (ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನದಂತೆ)**

ಚಿರಪಿತೃವರ್ಗಕ್ಕೆ **ಪಿತೃಗಣ**ವೆಂತ ನಾಮ. ಈ ವರ್ಗದಲ್ಲಿ ದೇವಗಂಧ ರ್ವಾಂತ ಅಜಾನಜ ದೇವತೆಗಳಿದ್ದಾರೆ.

ಮಾನುಷ ಗಂಧರ್ವವರ್ಗ ಮುಂದಿನದು.

ಪೃಥು, ನಳ, ಮಾಂಧಾತಾದಿ ಮಾನುಷ ಚಕ್ರವರ್ತಿಗಳ ವರ್ಗವು **ನರದೇವ ಗಣವು.** ಇಂತು ದೇವ–ಋಷಿ–ಪಿತೃ–ನರಪ–ಮಾನುಷೋತ್ತಮರು ಎಂದು

ಪಂಚವಿಧ ಜೀವರು.

ಕಶ್ಯಪಮಹಾಮುನಿಗಳಿಂದ **ದನು** ಎಂಬ ಪತ್ನಿಯಲ್ಲಿ ಜನಿಸಿದ ರಾಕ್ಷಸ ವರ್ಗವು **ದನುಜರು.**

ಹಸುಗಳು, **ಗೋಶಬ್ದದಿಂದ** ಆಕಳು, ಎತ್ತು, ವೃಷಭ ಇತ್ಯಾದಿ ಪ್ರಾಣಿಗಳು ಗ್ರಾಹ್ಯ.

ಅಜ ಶಬ್ದದಿಂದ ಆಡು, ಮೇಕೆ, ಹೋತ ಇತ್ಯಾದಿ ಪ್ರಾಣಿವರ್ಗ.

**ಖರ** ಶಬ್ದದಿಂದ ಕತ್ತೆ, ಸಜಾತೀಯ ಕುದುರೆ ಇತ್ಯಾದಿ ಪ್ರಾಣಿಗಳು.

ಆವಿ–ಕುರಿ, ಮೇಷ ಇತ್ಯಾದಿ ಪ್ರಾಣಿಗಳು.

ಚೇತನಾತ್ಮಕವಾದ ಜಡ-ಜಂಗಮಜೀವರಾದ ಸಕಲ ತ್ರಿವಿಧರಾದ ಚೇತನವರ್ಗದಲ್ಲಿ ಬಿಂಬರೂಪನಾಗಿ ಶ್ರೀರಮಣನು ನೆಲೆಸಿದ್ದಾನೆ. ಬೇರೆ ಬೇರೆ ಪ್ರಾಣಿಗಳ ಆಹಾರ ಬೇರೆ-ಬೇರೆಯಾಗಿವೆ. ವೈವಿಧ್ಯಪೂರ್ಣವಾದ ಆಹಾರ ಪದಾರ್ಥಗಳಲ್ಲಿ ಆಯಾಯ ಜೀವರು ತಮ್ಮ ಯೋಗ್ಯತೆಗನುಗುಣವಾಗಿ ಭುಂಜಿಸುವ ಸಾರಭೂತವಾದ ರಸವಿಶೇಷಗಳು ವಿಧವಿಧವಾಗಿವೆ. ಈ ಸಕಲ ರಸಗಳಲ್ಲಿ ರಸಾಂತರ್ಗತನಾಗಿ, ರಸಪದವಾಚ್ಯನಾಗಿ, ರಸಕ್ಕೆ ರಸರೂಪನಾಗಿ ಶ್ರೀರಮಾವರನಿದ್ದಾನೆ. ಆ ರಸಾಂತರ್ಗತ ಭಗವದ್ರೂಪಗಳೇ ಸ್ವಾಖ್ಯರಸಗಳೆನಿಸುವುವು. ಈ ಸ್ವಾಖ್ಯವು ಪರಮಾತ್ಮನಿಂದ ಅಭಿನ್ನ. ಇದನ್ನು ಸ್ವೀಕರಿಸುವುದೆಂದರೆ, ರಸಾಂತರ್ಗತ ತನ್ನದೇ ಆದ ಭಗವದ್ರೂಪಗಳಲ್ಲಿ ರಮಿಸುವುದು (ಕ್ರೀಡೆ) ಎಂದರ್ಥ. ಆಗ ಬಿಂಬಕ್ರಿಯೆಯು ನಡೆಯುವುದು. ತದ್ದ್ವಾರಾ ಪ್ರತಿಬಿಂಬರಾದ ಜೀವರಿಗೆ ತೃಪ್ತಿ ಎಂಬ ಅನುಭವ ಉಂಟಾಗುವುದು. ಇದೇ ಭೋಜನಕ್ರಿಯೆಯ ರಹಸ್ಯ.

ರಮಾದೇವಿಯರಿಗಿಂತ ಅನಂತಕೋಟಿಗುಣಗಳಿಂದ ಉತ್ತಮೋತ್ತಮನಾದ್ದರಿಂದ, ರಮಾವರನು. ಅಂತಹ ಲಕ್ಷ್ಮೀರಮಣನು ಸ್ವಾಖ್ಯರಸಸ್ವೀಕಾರದ್ವಾರಾ, ವಿವಿಧ ಪ್ರಾಣಿಗಳ ಶರೀರದ ಪೋಷಣಕ್ಕೆ ತಕ್ಕಂತೆ, ಜಡರಸಗಳನ್ನು ನೀಡಿ, ದೇಹೋಪಚಯ ಮಾಡಿಸುತ್ತಿರುವನು.

ಸರ್ವಪ್ರಾಣಿಗಳ ಶರೀರಗತ ಕರಚರಣಾದಿ ಸಕಲ ಅವಯವಗಳಲ್ಲಿ ವ್ಯಾಪ್ತನಾಗಿದ್ದು, ತದ್ದ್ವಾರಾ ದೇಹೋಪಚಯ ಮಾಡಿಸುತ್ತಿರುವನು. ಭೋಜನಕ್ರಿಯೆ

ಎಂದರೆ, ಕೇವಲ ಭೋಜನಮಾಡುವುದು ಎಂಬರ್ಥವಲ್ಲ. ಈ ಶಬ್ದವು ಅರ್ಥ ವೈಶಾಲ್ಯವುಳ್ಳದ್ದು. ಕಿವಿಯಿಂದ ಶಬ್ದಗ್ರಹಣಕ್ರಿಯೆ, ನೇತ್ರದ್ವಾರಾ ರೂಪ ಗ್ರಹಣ, ತ್ವಗೀಂದ್ರಿಯದ್ವಾರಾ ಸ್ಪರ್ಶಗ್ರಹಣ, ನಾಸಿಕೇಂದ್ರಿಯದ್ವಾರಾ ಗಂಧ ಸ್ವೀಕಾರ, ರಸನೇಂದ್ರಿಯದ್ವಾರಾ ರುಚಿಯ ಅನುಭವ, ಅಂತೆಯೇ ಪಂಚಕರ್ಮೇಂ ದ್ರಿಯಗಳ ದ್ವಾರಾ ವಿವಿಧ ಕ್ರಿಯಾರೂಪವಾದ ವ್ಯಾಪಾರಗಳು, ಮನಸ್ಸಿನಿಂದ ವಿಷಯಗ್ರಹಣಕ್ರಿಯೆ, ಚಿತ್ತದದ್ವಾರಾ ಸಂಕಲ್ಪಶಕ್ತಿ, ಬುದ್ಧಿದ್ವಾರಾ ಜ್ಞಾನವಿಶ್ಲೇ ಷಣಾಕಾರ್ಯ ಇತ್ಯಾದಿ ಸಮಸ್ತ ಕ್ರಿಯೆಗಳೂ ಭೋಜನವೆನಿಸುವುವು. ಸಕಲ ಜೀವರ ಶರೀರಗತ ಅವಯವಗಳಲ್ಲಿ ತಾನು ವ್ಯಾಪ್ತನಾಗಿದ್ದು, ಆಯಾಯಾ ಇಂದ್ರಿಯಗತ ವ್ಯಾಪಾರಗಳನ್ನು ಮಾಡಿ, ಮಾಡಿಸುವುದರಿಂದ, ಜೀವರ ಶರೀರವ್ಯಾಪಾರ ನಡೆ ಯುತ್ತಿರುವುದು. ಇದೇ ಶ್ರೀಪರಮಾತ್ಮನ ಅಚಿಂತ್ಯಾದ್ಭುತ ವ್ಯಾಪಾರ. ಅವನ ಬಿಂಟಕ್ರಿಯಾರೂಪವಾದ ವ್ಯಾಪಾರವಿಶೇಷಗಳೆಂದು ಜ್ಞಾನಿಗಳು ತಿಳಿಯುವರು.

|| ೨೯ ||

## ಪದ್ಯ ೩೦

**ಮೂಲ**

**ಒರಟುಬುದ್ಧಿಯ ಬಿಟ್ಟು ಲೌಕಿಕ |**
**ಹರಟೆಗಳನೀಡಾಡಿ ಕಾಂಚನ |**
**ಪರಟಿ ಲೋಷ್ಟಾದಿಗಳು ಸಮನೆಂದರಿದು ನಿತ್ಯದಲಿ ||**
**ಪುರುಟಗರ್ಭಾಂಡೋದರನು ಸ |**
**ತ್ಪುರುಟನೆಂದೆನಿಸೆಲ್ಲರೊಳಗಿ |**
**ದ್ದುರುಟ ಕರ್ಮವ ಮಾಳ್ಪನೆಂದಡಿಗಡಿಗೆ ನೆನೆವುತಿರು || ೩೦ ||**

**ಅವತರಣಿಕೆ**

ಶ್ರೀಹರಿಯೇ ಸಮಸ್ತ ಜೀವರಲ್ಲಿದ್ದು, ಕರ್ಮಗಳನ್ನು ತಾನೇ ಮಾಡಿ, ಮಾಡಿಸುತ್ತಿರುವನೆಂದರಿತು, ಅವನ ನಾಮಸ್ಮರಣೆಯನ್ನು ಎಡಬಿಡದೆ ಮಾಡುತ್ತಿರು ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ನಿತ್ಯದಲಿ** = ಪ್ರತಿನಿತ್ಯದಲ್ಲಿಯೂ, **ಒರಟುಬುದ್ಧಿಯ** = ಅಹಂಕಾರ ಮಮಕಾರಗಳಿಂದ ಗ್ರಸ್ತನಾಗಿ, ನಾನೇ ಹೇಳಿದ ವಿಷಯವೇ ಗ್ರಾಹ್ಯ ಎಂಬ ಹಠ ಸ್ವಭಾವದಿಂದ ಸಾಧಿಸುವ ಮೂರ್ಖಬುದ್ಧಿಯನ್ನು, **ಬಿಟ್ಟು** = ತ್ಯಜಿಸಿ, **ಲೌಕಿಕ ಹರಟೆಗಳ** = ಲೋಕಸಂಬಂಧವಾದ ವಿಷಯಗಳನ್ನು ಕಾಲಹರಣಕಾಗಿ ಮಾತುಗಳನ್ನಾಡುವ ವ್ಯರ್ಥಾಲಾಪರೂಪವಾದ ಹರಟೆಗಳನ್ನು, **ಈಡಾಡಿ** = ದೂರ ಮಾಡಿ. **ಕಾಂಚನ** = ಚಿನ್ನ, **ಪರಟಿ** = ಚಿಪ್ಪು, **ಲೋಷ್ಠ** = ಮಣ್ಣು ಹೆಂಟೆ ಇತ್ಯಾದಿ ದ್ರವ್ಯಗಳಲ್ಲಿ, **ಸಮನೆಂದರಿತು** = ಅನಾಸಕ್ತ ಭಾವವನ್ನು ಹೊಂದಿ, (ಸುಖದುಃಖಸಹಿಷ್ಣುತ್ವ ಧರ್ಮ), **ಪುರುಟಗರ್ಭಾಂಡೋದರನು** = ಹಿರಣ್ಯಗರ್ಭನಾಮಕರಾದ ಚತುರ್ಮುಖ ಬ್ರಹ್ಮದೇವರಿಗೆ ಪಿತನಾದ, ಹಾಗೂ ಅನಂತಾನಂತ ಬ್ರಹ್ಮಾಂಡಗಳನ್ನು ತನ್ನ ಉದರದಲ್ಲಿ ಧರಿಸಿರುವ ಶ್ರೀಪರಮಾತ್ಮನು, (**ಪುರುಟ** = ಚಿನ್ನ, **ಗರ್ಭ** = ಉತ್ಪತ್ತಿ. ಶ್ರೀಪದ್ಮನಾಭನ ನಾಭೀಕಮಲದಲ್ಲಿ ಉತ್ಪನ್ನರಾದ ಬ್ರಹ್ಮದೇವರು ಹಿರಣ್ಯಗರ್ಭನಾಮಕರು), **ಸತ್ಪುರುಷನೆಂದೆನಿಸಿ** = ಚರಾಚರಾತ್ಮಕವಾದ ಜಗತ್ತಿಗಿಂತ ಸರ್ವೋತ್ಕೃಷ್ಟನೆಂದೆನಿಸಿ, **ಎಲ್ಲರೊಳಗಿದ್ದು** = ಸಮಸ್ತ ತ್ರಿವಿಧಜೀವರಲ್ಲಿ ಬಿಂಬನಾಗಿದ್ದು, **ಉರುಟ** = ಸರ್ವೋತ್ತಮನಾದ ಶ್ರೀಪರಮಾತ್ಮನು, **ಕರ್ಮವ ಮಾಳ್ಪನು** = ಕರ್ಮಪ್ರೇರಕನಾಗಿ, ಜೀವರದ್ವಾರಾ ಸಕಲ ಕರ್ಮಗಳನ್ನೂ ಮಾಡಿಸುತ್ತಾನೆ, **ಎಂದು** = ಎಂಬ ವಿಷಯವನ್ನು ತಿಳಿದು, **ಅಡಿಗಡಿಗೆ** = ಪದೇ ಪದೇ, **ನೆನೆವುತಿರು** = ಆ ಸರ್ವಕರ್ಮಕರ್ತನನ್ನು ಮರೆಯದೇ ಸ್ಮರಿಸುತ್ತಿರು. ॥ ೩೦ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಸಮಚಿತ್ತನಾಗಿ ಕರ್ಮಗಳ ಮಾಡು ಎಂತ ಹೇಳತಾರೆ.

ಪ್ರತಿನಿತ್ಯದಲ್ಲೂ ಅಹಂಮಮತಾ ಎಂಬ ಮೂರ್ಖಬುದ್ಧಿಯನ್ನು ತ್ಯಾಗ ಮಾಡಿ, ಲೋಕಸಂಬಂಧವಾದ, ವಿಷಯಾದಿಗಳಲ್ಲಿ ಮೋಹ ಹುಟ್ಟಿಸತಕ್ಕ ಮಾತುಗಳ ನೀನು ಆಡದೆ, ಇಂಥಾ ಮಾತುಗಳ ಆಡತಕ್ಕವರ ದೂರಮಾಡಿ, ಆ ಮಾತುಗಳಿಗೆ, ಅಂಥಾವರ ಸಾಂಗತ್ಯಕ್ಕೆ ಸಂಬಂಧಪಡದೆ, ಬಂಗಾರ, ಈ ಬಂಗಾರದಿಂದ ನಿರ್ಮಿತ ಆಭರಣಗಳು, ಚಿಪ್ಪು ಕಬ್ಬಿಣ ಇವೇ ಮೊದಲಾದ ದ್ರವ್ಯಗಳು, ಕಬ್ಬಿಣ ಚಿಪ್ಪು ಓಡು (ಹೆಂಚು) ಇವುಗಳಲ್ಲಿರುವ ಅನಾದರ ಸ್ವರ್ಣರಚಿತ ಆಭರಣಗಳಲ್ಲಿ ಇರಬೇಕೆಂದು ತಾತ್ಪರ್ಯ. ಇಂಥಾ ಸಮಾನಬುದ್ಧಿಯಿಂದ, ಹಿರಣ್ಯಗರ್ಭನಾದ ಚತುರ್ಮುಖಬ್ರಹ್ಮನಿಗೆ ತಂದೆಯಾದ, ಅನಂತಾನಂತಬ್ರಹ್ಮಾಂಡಗಳನ್ನು ಉದರದಲ್ಲಿ ಉಳ್ಳ ಪರಮಾತ್ಮನು, ನಿರ್ದುಷ್ಟವಾದ ಲೋಕವಿವಕ್ಷಯಾ ಬಂಗಾರ ನವರತ್ನಗಳು ಹ್ಯಾಂಗೆ ಸರ್ವಶ್ರೇಷ್ಠವೋ, ತದ್ವತ್ ಚರಾಚರಗಳಿಂದ ಉತ್ತಮನಾದವ ಶ್ರೀಪರಮಾತ್ಮನೆಂದು ಕರಸಿದವನಾಗಿ, ಸರ್ವಪ್ರಾಣಿಗಳೊಳಗೆ ಬಿಂಬನಾಗಿದ್ದು, ಸರ್ವೋತ್ಕೃಷ್ಟನಾದ ಶ್ರೀಪರಮಾತ್ಮ, ಅನಾದಿಕರ್ಮವನ್ನನುಸರಿಸಿ ಆಯಾ ಜನ್ಮಗಳಲ್ಲಿ ಕ್ಷಣಲವಾದಿ ಕಾಲಗಳಲ್ಲಿ ಭೋಗಮಾಡುವ ಕರ್ಮಫಲಗಳ, ಹಾಂಗೆ ಮಾಡತಕ್ಕ ಕರ್ಮಗಳ ವ್ಯಕ್ತಮಾಡತಾ ಇರತಾನೆ, ಎಂತ ಪದೇ ಪದೇ ಮರೆಯದೆ ಪರಮಾತ್ಮನ ಸ್ಮರಣೆಮಾಡುತ್ತಾ ಇರೋವನಾಗು. ಇದೇ ಮಹಾಸಾಧನ ಎಂತಲೂ, ಮೋಕ್ಷಮಾರ್ಗಕ್ಕೆ ಸೋಪಾನ ಎಂತಲೂ ತಿಳಿಯಬೇಕು ಎಂತ ತಾತ್ಪರ್ಯ. ॥೩೦॥

## ೨. ಭಾವಪ್ರಕಾಶಿಕೆ

ಇಲ್ಲೇ ದೇವರು ಇದ್ದಾನೆ. ಅಲ್ಲೇನಿದೆ. ಪ್ರತಿಮೆಯೇ ದೇವರು. ಈ ದೇವರೇ ದೇವರು ಎಂಬಿವೇ ಮೊದಲಾದ ಒರಟು ಬುದ್ಧಿಯನ್ನು ಬಿಟ್ಟು, ಲೌಕಿಕ ಹರಟೆಗಳಲ್ಲೇ ಕಾಲವನ್ನು ಕಳೆಯದೇ ಬಂಗಾರ ಬೇಕು, ಬೆಳ್ಳಿ ಬೇಕು ಎಂಬ

ದುರಾಶೆಯನ್ನು ಮಾಡದೇ ಇವೆಲ್ಲವೂ ನಶ್ವರವೆಂದು ತಿಳಿದು ಹೆಂಚು, ಕಲ್ಲು, ಚಿಪ್ಪು ಮೊದಲಾದುವುಗಳಿಗೆ ಸಮವೆಂದು ಬಂಗಾರ ಮೊದಲಾದುವುಗಳನ್ನೂ ಸಹ ತಿಳಿದು ಪರಮಾತ್ಮನನ್ನು ಭಜಿಸು. ಬ್ರಹ್ಮಾಂಡವನ್ನೇ ಉದರದಲ್ಲಿಟ್ಟುಕೊಂಡಿರುವ ಪರಮಾತ್ಮನು ಸರ್ವೋತ್ತಮನು. ಸರ್ವ ಪ್ರಾಣಿಗಳಲ್ಲೂ ಇದ್ದು ನೀಚೋಚ್ಚ ಭಾವದಿಂದ ಸಕಲ ಕರ್ಮಗಳನ್ನು ಮಾಡಿಸುವನು ಎಂದು ಭಾವಿಸಿ ಸರ್ವದಾ ಪರಮಾತ್ಮನನ್ನು ಸ್ಮರಿಸಬೇಕೆಂಬ ತಾತ್ಪರ್ಯ ॥ ೩೦ ॥

**೩ ಭಾವದರ್ಪಣ**

ಪುರುಟ–ಬಂಗಾರ, ಸತ್ಪುರುಟ–ಸತ್ಪುರುಷ ॥ ೩೦ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಒರಟು ಇತಿ ॥ ಒರಟು–ಕೆಟ್ಟ ॥ ಪುರುಟ–ಭಂಗಾರ । ಉರುಟ–ಸರ್ವ ॥ ೩೦ ॥

**ಕನ್ನಡಾರ್ಥ**

ದುರ್ಬುದ್ಧಿಯನ್ನು ಬಿಟ್ಟು ಸದ್ಬುದ್ಧಿಯಿಂದ ಲೋಷ್ಟ ಕಾಂಚನಗಳು ಹೇಯಬುದ್ಧಿಯಿಂದ ಸಮವೆಂದು ತಿಳಿದು–ಶ್ರೀಹರಿಯೇ ಸರ್ವೋತ್ತಮನೆಂಬ ಸುಜ್ಞಾನದಿಂದ ಅವನು ಮಾಡಿಸಿದಂತೆ ಸ್ಥೂಲಕರ್ಮವನ್ನು ನಾನು ಮಾಡುವೆನು ಎಂದು ಅಡಿಗಡಿಗೆ ನೆನೆಯುವದೇ ಮಹಾ ಕರ್ತವ್ಯವೆಂದು ದಾಸರ ಆಶಯ ॥೩೦॥

**೫. ಶ್ರೀಗುರುಹೃದಯಪ್ರಕಾಶಿಕೆ**

ಸರ್ವಕರ್ತೃತ್ವ ಸರ್ವಸಾರಭೋಕ್ತೃತ್ವ ಸಹ ದೇವರಿಗೆ ಉಂಟೆಂದು ದೃಢಪಡಿಸಿ ತಿಳಿಸುತ್ತಾರೆ, ಒರಟು ಎಂದು. ಶಾಸ್ತ್ರನಿಬಂಧನೆ ಬಿಟ್ಟು ಮನಸ್ಸಿಗೆ ತೋರಿದ ಹಾಗೆಲ್ಲಾ ನಿಶ್ಚೈಸುವ ಒರಟುಬುದ್ಧಿ ಎನ್ನು ವರ್ಜಿಸಿ, ಇಹಪರಕ್ಕೆ ಸಹಾ ಅನುಪಯೋಗವಾದ ಲೋಕವಾರ್ತೆಗಳನ್ನು ತೊರೆದು, ಕಾಂಚನವೆಂಬ ಬಂಗಾರ, ಪರಟೆ ಎಂಬುವ ಹೆಂಚಿನ ಚೂರು, ಲೋಷ್ಟ ಎಂಬ ಕಬ್ಬಿಣವೇ ಮೊದ

ಲಾದ ಲೋಹಗಳೂ ಸಮವೆಂದರಿತು ಎಂದರೆ, ದೇವರ ಅಧೀನವಾಗಿ ಒಂದರ ಗುಣ ಮತ್ತೊಂದರಲ್ಲಿ ಇಲ್ಲದ ಕಾರಣ, ತತ್ತದ್ಯೋಗ್ಯತಾನುಸಾರವಿರುವುದೇ ಸಮವೆಂತಲೂ, ದೇವರ ಸಂಕಲ್ಪಾಧೀನ ಜೀವಕರ್ಮಾನುಸಾರ ಸುಖದುಃಖವೆರಡಕ್ಕೂ ಉಪಯೋಗ ಸರ್ವವೂ ಆಗುವುದರಿಂದ ಸಮವೆಂತ ಸಹಾ ತಿಳಿದು, ಪುರುಟ ಗರ್ಭಾಂಡೋದರನು ಎಂದರೆ, ಹಿರಣ್ಯಗರ್ಭನೆಂಬ ಬ್ರಹ್ಮಾಂಡವನ್ನು ಉದರದಲ್ಲಿಟ್ಟುಕೊಂಡಿರುವ ದೇವರು ಸತ್ಪುರುಟನೆಂದೆನಿಸಿ ಎಂದರೆ, ಚೊಕ್ಕಬಂಗಾರದಂತೆ ಹಿರಣ್ಮಯಶರೀರನೆನಿಸಿಕೊಂಡು ಸರ್ವಜೀವರಲ್ಲೂ ಉದ್ಪುರುಟ ಎಂದರೆ, ಉತ್ಕೃಷ್ಟ ಸ್ವತಂತ್ರಕ್ರಿಯೆಗಳನ್ನು ಮಾಡುವನೆಂದೂ, ಮೇಲೆ ಹೇಳಿದರೀತಿ ಸ್ವರಸ ಭೋಕ್ತನೆಂದೂ ಸಹ ಪದೇ ಪದೇ ಸ್ಮರಿಸುತ್ತಿರುವುದು. ॥ ३೦ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಆದರಲ್ಲೇನಿದೆ ? ಇದರಲ್ಲೇನಿದೆ ? ನಾನು ಹೇಳಿದುದೇ ಪ್ರಮಾಣ. ಪರಮಗ್ರಾಹ್ಯ ಎಂದು ತರ್ಕಬದ್ಧವಲ್ಲದ ವಿತಂಡವಾದಗಳನ್ನು ಮಾಡುವ ಮೂರ್ಖಬುದ್ಧಿಯನ್ನು ತ್ಯಜಿಸಬೇಕೆಂದು ತಿಳಿಸುತ್ತಾರೆ.

ಯಾವಾಗಲೂ ಪ್ರಾಪಂಚಿಕವಿಷಯಗಳನ್ನೇ ಮಾತನಾಡುತ್ತಾ, ಅಮೂಲ್ಯವಾದ ಸಮಯವನ್ನು ವ್ಯರ್ಥಮಾಡುವವರೇ ಈ ಜಗತ್ತಿನಲ್ಲಿ ಬಹುಮಂದಿ. ಪ್ರಪಂಚದ ವಿಷಯಗಳಲ್ಲಿ ಮೋಹವನ್ನು ತ್ಯಜಿಸಿದ ಸಾಧಕರಿಗೆ ಬಂಗಾರ ಶ್ರೇಷ್ಠವಲ್ಲ. ಚಿಪ್ಪು, ಹೆಂಚಿನ ಚೂರು ಹೇಯವಲ್ಲ. ಅವುಗಳನ್ನು ಸಮಾನಭಾವದಿಂದ ನೋಡುತ್ತಾರೆ. ಅಂದರೆ ಅವುಗಳ ಮೌಲ್ಯ, ತಾರತಮ್ಯ ಅವರಿಗೆ ಗೊತ್ತಿಲ್ಲವೆಂದು ಅರ್ಥವಲ್ಲ. ಅವರು ದ್ವಂದ್ವಾತೀತರಾದ್ದರಿಂದ, ಅವುಗಳ ಸಂಬಂಧವಾದ ಮೋಹ ಅವರಿಗಿಲ್ಲ. ಸುಖದಿಂದ ಹಿಗ್ಗುವುದಿಲ್ಲ. ದುಃಖ ಬಂದಾಗ ಕುಗ್ಗುವುದಿಲ್ಲ. ಇಂತಹ ಭಗವದ್ಭಕ್ತರು ಸಮದರ್ಶಿಗಳೆಂತ ಭಾವವು.

ಅಖಿಳಕೋಟಿಬ್ರಹ್ಮಾಂಡನಾಯಕನು ಸರ್ವೋತ್ತಮನು. ಅತ್ಯುತ್ಕೃಷ್ಟನು. ಅಂತಹ ಸತ್ಪುರುಷನು ಸಮಸ್ತತ್ರಿವಿಧಜೀವರಲ್ಲಿದ್ದು, ಉತ್ಕೃಷ್ಟವಾದ ಸ್ವತಂತ್ರ

ಕ್ರಿಯೆಗಳನ್ನು ಜೀವರ ಉದ್ಧಾರಕ್ಕಾಗಿ ಅವರಿಗೆ ಉತ್ತಮ ಗತಿಯ ನೀಡಲೋಸುಗ, ಜೀವರ ಹೆಸರಿನಲ್ಲಿ ತಾನೇ ಮಾಡಿ ಮಾಡಿಸುತ್ತಿರುವನೆಂದು ಪದೇ ಪದೇ ಅವನ ಪಾದಪದ್ಮಗಳನ್ನು ಸ್ಮರಿಸುತ್ತಿರು ಎಂದು ಸತ್ಸಾಧನೆಯ ಮಾರ್ಗವನ್ನು ನಿರ್ದೇಶಿಸಿರುತ್ತಾರೆ, ಜ್ಞಾನಿಗಳಾದ ದಾಸವರೇಣ್ಯರು. ॥ ೩೦ ॥

## ಪದ್ಯ ೩೧

**ಮೂಲ**

ಭೂತಳದಿ ಜನರುಗಳು ಮರ್ಮಕ ।
ಮಾತುಗಳನಾಡಿದರೆ ಸಹಿಸದೆ ।
ಘಾತಿಸುವರತಿಕೋಪದಿಂದಲಿ ಎಚ್ಚರಿಪತೆರದಿ ॥
ಮಾತುಳಾಂತಕ ಜಾರ ಹೇ ನವ ।
ನೀತಚೋರನೆ ಎನಲು ತನ್ನ ನಿ ।
ಕೇತನದೊಳಿಟ್ಟವರ ಸಂತೈಸುವನು ಕರುಣಾಳು ॥ ೩೧ ॥

**ಅವತರಣಿಕೆ**

ಲೋಕವಿಲಕ್ಷಣನಾದ ಆ ಲೋಕೇಶನನ್ನು ನಿಂದಾಸ್ತುತಿಗಳಿಂದ ವರ್ಣಿಸಿದಾಗ್ಯೂ, ಕರುಣಾಮೂರ್ತಿಯಾದ ಆ ಕಂಜದಳಾಯತಾಕ್ಷನು ತನ್ನ ಭಕ್ತರ ಅಪರಾಧವನ್ನು ಮನ್ನಿಸಿ, ಮುಕ್ತಧಾಮಗಳಲ್ಲಿಟ್ಟು ಸಂರಕ್ಷಿಸುವನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

ಭೂತಳದಿ = ಭೂಮಿಯಲ್ಲಿ, ಜನರುಗಳು = ಸಾಮಾನ್ಯ ಮಾನವರು, ಮರ್ಮಕ = ಮರ್ಮಘಾತಕವಾದ (ಮನಸ್ಸನ್ನು ನೋಯಿಸುವ), ಮಾತುಗಳನಾಡಿದರೆ = ನುಡಿಗಳನ್ನು ಆಡಿದರೆ, ಸಹಿಸದೆ = ಆ ಮಾತುಗಳನ್ನು ಸಹನ

ಮಾಡದೆ, ಅತಿಕೋಪದಿಂದಲಿ = ಬಹಳವಾದ ಸಿಟ್ಟಿನಿಂದ, ಘಾತಿಸುವರು = ಹೊಡೆಯುವವರಾಗುತ್ತಾರೆ. ಎಚ್ಚರಿಪತೆರದಿ = ಇನ್ನು ಪುನಃ ಅಂತಹ ಮಾತುಗಳನ್ನಾಡಬಾರದೆಂದು ಎಚ್ಚರಿಸುವ್ರೋಪಾದಿಯಲ್ಲಿ. ಮಾತುಳಾಂತಕ = ಸೋದರ ಮಾವನಾದ ಕಂಸನನ್ನು ಕೊಂದವನೇ, ಜಾರ = ಗೋಪಸ್ತ್ರೀಯರಲ್ಲಿ ಜಾರತ್ವವನ್ನು ಮಾಡಿದವನೇ, ಹೇ ನವನೀತಚೋರ = ಗೋಪಿಕಾಸ್ತ್ರೀಯರ ಮನೆಗಳಲ್ಲಿ ಬೆಣ್ಣೆ ಕದ್ದವನೇ, ಎನಲು = ನಿಂದಾಸ್ತುತಿಗಳಾಗಿ ಕಂಡರೂ, ಶ್ರೀಪರಮಾತ್ಮನ ಮಹಿಮಾತಿಶಯಗಳನ್ನು ತಿಳಿದು, ದೋಷರಹಿತನೆಂದು ಅರಿತು ನುಡಿವವರ, ತನ್ನ ನಿಕೇತನದೊಳು = ವೈಕುಂಠಾದಿ ಮುಕ್ತಮಂದಿರದಲ್ಲಿ, ಇಟ್ಟು = ಇಡುವವನಾಗಿ, ಅವರ = ಅಂತಹ ಅಂತರಂಗಭಕ್ತರನ್ನು, ಕರುಣಾಳು = ಕರುಣಾಮಯನಾದ ಶ್ರೀಪರಮಾತ್ಮನು, ಸಂತೈಸುವನು = ಆನಂದಪಡಿಸುವನು ॥೩೦॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ್ನ ಹ್ಯಾಂಗೆ ಸ್ತೋತ್ರ ಮಾಡಿದರೆ ರಕ್ಷಿಸುತ್ತಾನೋ ಅದರನ್ನ ಹೇಳತಾರೆ.

ಭೂಮಿಯಲ್ಲಿ ವಿದ್ಯಮಾನರಾದ ಮನುಷ್ಯರು ದಾರಿಗೂ ತಿಳಿಯದಂತೆ ಮರ್ಮವಾಗಿ ಅನ್ಯರನ ವಿಷಾದಿ ಪ್ರಯೋಗಗಳಿಂದ ಸಂಹಾರ ಮಾಡೋಣ, ಜಾರತನ ಮಾಡೋಣ, ಚೌರ್ಯ ಮಾಡೋಣ ಇತ್ಯಾದಿಗಳ ಮಾಡಿ ಬಾಹ್ಯದಲ್ಲಿ ಮಹಾ ಯೋಗ್ಯ ಎಂತ ಪ್ರದರ್ಶನ ಮಾಡಿ, ಯೋಗ್ಯ ಎಂತ ಕರಸತಾ ಇರತಕ್ಕ ಮನುಷ್ಯನನ್ನ, ಈ ಮರ್ಮಗಳು ತಿಳಿದವನೊಬ್ಬ ಮನುಷ್ಯ ಬಹಿರಂಗವಾಗಿ ಬಹುಜನಸಂಘದಲ್ಲಿ ಇವರು ಮಾಡಿದ ಮರ್ಮಕರವಾದ ಆ ಕೃತ್ಯವನ್ನ ಮಾತುಗಳಿಂದ ಎತ್ತ್ಯಾಡಿದರೆ ಆ ಮಾತುಗಳು ಕೇಳೋಣ, ಆ ಕೃತ್ಯಮಾಡಿದ ಮನುಷ್ಯರು ಸಹಿಸಲಾರದೆ ಬಹಳವಾದ ಕೋಪದಿಂದ ಬಡಿಯೋವರಾಗತಾರೆ. ಇನ್ನು ಇಂಥಾ ಮಾತುಗಳು ಪುನಃ ಆಡದ ಹಾಂಗೆ ಇರುವುದಾಗಿ ದೃಢ ಮಾಡ

ತಾರೆ. ಈ ಪ್ರಜರನ್ನ, ಜಾರ ಚೋರನೆಂದು ಉಚ್ಚರಿಸಿದೋಪಾದಿಯಲ್ಲಿ, ಸೋದರ ಮಾವನ ಕೊಂದವನೇ ಎಂತಲೂ, ಅನ್ಯರಾದ ಗೋಪಸ್ತ್ರೀಯರ ಜಾರತನದಲ್ಲಿ ಕೆಡಿಸಿದವನೇ ಎಂತಲೂ, ಗೋಪಸ್ತ್ರೀಯರುಗಳ ಮನೆಯಲ್ಲಿ ಬೆಣ್ಣೆ ಕದ್ದವನೇ ಎಂತಲೂ, ರಾಮಾವತಾರದಲ್ಲಿ ಅಗ್ನಿಪುತ್ರರಾದ ಋುಷಿಗಳಿಗೆ ವರಕೊಟ್ಟು ಆ ಋುಷಿಗಳು ಗೋಪಸ್ತ್ರೀಯರಾಗಿ ಜನಿಸಿದ ಕಾಲದಲ್ಲಿ ನೀನು ಅವರಿಗೆ ಅಂಗಸಂಗ ಕೊಟ್ಟು, ಅವರ ಅಭೀಷ್ಟ ಪೂರ್ಣಮಾಡಿದವನೇ, ನವ=ನವಸಂಖ್ಯಾಕವಾದ, ನೀತ=ನೀತವಾಗಿ ನಿನ್ನಲ್ಲಿ ಭಕ್ತಿಮಾಡತಕ್ಕ ಭಕ್ತರ ಪಾಪಗಳ ಅಪಹಾರಮಾಡ ತಕ್ಕವನೇ ಎಂತ ಭಕ್ತಿಪೂರ್ವಕ ಉಚ್ಚಾರ ಮಾಡಲು, ಇಂಥಾ ಭಕ್ತರಲ್ಲಿ ವಾಂಛ ಲ್ಯವುಳ್ಳ ಪರಮಾತ್ಮ, ಈ ಪ್ರಕಾರ ಸ್ತೋತ್ರಮಾಡಿದವರನ್ನ ತನ್ನ ವೈಕುಂಠ ಲೋಕದಲ್ಲಿ ಇಟ್ಟು ಆನಂದಪಡಿಸುವನು. ಇಂಥಾ ಭಕ್ತ ಮುಕ್ತಿಯೋಗ್ಯನೇ ಹೊರತು ಅನ್ಯನಾದವನಲ್ಲ, ಇಂಥಾ ಮುಕ್ತಿಯೋಗ್ಯನಾದವನನ್ನೇ ದೇವರು ರಕ್ಷಿ ಸುವನು ಎಂದು ಭಾವ. ಇತರರಾದವರಿಗೆ ಇಂಥಾ ಭಕುತಿ ಇರೋದಿಲ್ಲ. ಇಂಥಾ ಸುಖವೂ ಅವರಿಗಿಲ್ಲ ಎಂತ ತಾತ್ಪರ್ಯ. ॥ ೩೦ ॥

## ೩. ಭಾವಪ್ರಕಾಶಿಕೆ

ಲೋಕದಲ್ಲಿ ಸಾಮಾನ್ಯವಾಗಿ ಯಾರಲ್ಲಾದರೂ ಸ್ವಲ್ಪ ಜಾರತ್ವ ಚೋರ ತ್ವಾದಿ ಅಪವಾದ ಇರುವುದನ್ನು ಎತ್ತಿ ಮರ್ಮೋದ್ಘಾಟನೆಯಾಗಿ ಮಾತನಾಡಿದರೆ ತಕ್ಷಣ ಅವರಿಗೆ ಸಿಟ್ಟುಬಂದು ಮರ್ಮವನ್ನು ಎತ್ತಿ ಮಾತನಾಡಿದವನನ್ನು ಹೊಡೆ ಯುವರು. ಶ್ರೀಪರಮಾತ್ಮನು ಹಾಗಲ್ಲ. ಎಲೈ ಮಾತುಳಾಂತಕ ! ಹೇ ಜಾರ ! ನವನೀತಚೋರ ಎಂದು ಮರ್ಮವನ್ನೆತ್ತಿ ಸ್ಮರಿಸಿದರೆ, ಕೃಪೆಯಿಂದ ದಿವ್ಯವಾದ ಮುಕ್ತಿಯನ್ನು ಕೊಟ್ಟು ಸಂರಕ್ಷಿಸುವನು. ಆದ್ದರಿಂದಲೇ ಕರುಣಾಳು ಅಂದರು.

॥ ೩೦ ॥

## ೪. ಭಾವದರ್ಪಣ

ಹ್ಯಾಗೆ ಮಾತಾಡಿದರೂ ಶ್ರೀಹರಿಯು ಸಹಿಸುತ್ತಾನೆಂದು ಹೇಳುತ್ತಾರೆ– ಭೂತಳೇತಿ ॥ ೩೦ ॥

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಭೂತಲ ಇತಿ ॥ ೩೧ ॥

## ಕನ್ನಡಾರ್ಥ

ಮಾವನ್ನ ಕೊಂದವ–ಗೋಪೀಜಾರ–ನವನೀತಚೋರ ಮುಂತಾದ ನಾಮಗಳಿಂದ (ಅಜ್ಞ) ಲೋಕದೃಷ್ಟಿಯಿಂದ ಮರ್ಮಭೇದಕವೆನಿಸಿದ್ದರೂ ಸಹ ಲೋಕವಿಲಕ್ಷಣ ಹರಿಯ ಮಹಿಮಾದ್ಯೋತಕವಾಗಿರುವುದರಿಂದ ಈ ನಾಮಗಳಿಂದ ಹರಿಯನ್ನು ಭಕ್ತಿಪುರಸ್ಸರವಾಗಿ ಸ್ಮರಿಸಬೇಕೆಂದೂ, ಆ ಸ್ಮರಣವು ಮಹಾಪುರುಷಾರ್ಥದಾಯಿಯೆಂದೂ ದಾಸರಾಯರ ಅಭಿಪ್ರಾಯ. ॥ ೩೧ ॥

೫. ಶ್ರೀಗುರುಹೃದಯಪ್ರಕಾಶಿಕೆ

ದೇವರಲ್ಲಿರುವ ಸ್ವಾತಂತ್ರ್ಯಾದಿ ಗುಣಸ್ಮರಣೆಯಿಂದ ಸರ್ವದೋಷ ಪರಿಹಾರ ಶಾಸ್ತ್ರಸಮ್ಮತವೆಂದೂ, ದೇವರು ಲೋಕವಿಲಕ್ಷಣನೆಂದೂ ಸಹ ತಿಳಿಸುತ್ತಾರೆ, ಭೂತಳದಿ ಎಂದು. ಭೂಲೋಕದಲ್ಲಿ ಜನರುಗಳು ಮರ್ಮದ ಮಾತುಗಳನ್ನಾಡಿದರೆ ಎಂದರೆ, ಜಾರ ಚೋರರು ಒಳ್ಳೆಯವರಲ್ಲ ಎಂದು ಒಬ್ಬರಲ್ಲಿದ್ದ ದುರ್ಗುಣವನ್ನು ಹೆಸರು ಹೇಳದೆ ಅಂದಾಗ್ಯೂ, ಆ ಗುಣವಿದ್ದವರು ನೀನು ಮಹಾಶುದ್ಧನೋ ಎಂದು, ಹಾಗೆ ಮಾತಾಡಬಾರದೆಂದು ಎಚ್ಚರಿಸುವಂತೆ, ಅತಿ ಕೋಪದಿಂದ ಘಾತಿಸುವರೆಂದರೆ, ಕೂಗ್ಯಾಡುವರು ಉಪದ್ರವಪಡಿಸುವರು. ಆದರೆ ದೇವರನ್ನು ಹೆಸರ ಹೇಳದೇನೇ, ಸೋದರಮಾವ ಕಂಸನನ್ನು ಕೊಂದವನೇ! ಗೋಪಿ ಜಾರನೆ ! ಬೆಣ್ಣೆಗಳ್ಳನೆ ! ಎಂದು ಸಂಬೋಧಿಸಿ ಕರೆದಾಗ್ಯೂ, ಕರುಣಾಳುವಾದ್ದರಿಂದ ದೇವರು ತನ್ನನ್ನು ಬೈದವರನ್ನೂ ತಪ್ಪೆಣಿಸದೆ, ತನ್ನ ನಿಕೇತನವೆಂಬ ವೈಕುಂಠಾದಿ ಲೋಕಗಳಲ್ಲಿಟ್ಟು ರಕ್ಷಿಸುವನು. ॥ ೩೧ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಈ ಜಗತ್ತಿನಲ್ಲಿ ಚೋರತ್ವ, ಜಾರತ್ವ, ವಂಚನೆ ಇತ್ಯಾದಿ ಪಾಪಭಾಜನವಾದ, ಅನೇಕ ದುಷ್ಕರ್ಮಗಳನ್ನು ಮಾಡುವವರು ಮಂದಿ ಬಹಳ, ಅವರ ಕೃತ್ಯಗಳನ್ನು

ಬಯಲುಮಾಡಿ, ಅವರ ಮರ್ಮವನ್ನು ಭೇದಿಸಿ, ಬಹಿರಂಗಮಾಡಿದಾಗ ಅವರಿಗೆ ಅತ್ಯಧಿಕವಾದ ಕೋಪ ಬರುತ್ತದೆ. ಜಗತ್ತಿನಲ್ಲಿ ಅಂತಹವರು ಸಾಧುಗಳಂತೆ ಜನರಿಗೆ ತೋರಿಸಿಕೊಳ್ಳುತ್ತಾ, ತಮ್ಮ ದುಷ್ಕರ್ಮಗಳನ್ನು ಜನರಿಗೆ ತಿಳಿಯದಂತೆ ಮುಚ್ಚಿಟ್ಟುಕೊಳ್ಳುತ್ತಾರೆ. ಈ ಕೃತ್ಯ ನಿಶ್ಚಯವಾಗಿಯೂ ಆತ್ಮವಂಚನೆ. ಆದರೆ, ಅವರ ರಹಸ್ಯ ಬಯಲಾದಾಗ, ಕೋಪದಿಂದ, ಬಹಿರಂಗ ಮಾಡಿದವರನ್ನು ಬಡಿಯುತ್ತಾರೆ. ಶ್ರೀಪರಮಾತ್ಮನ ವಿಷಯದಲ್ಲಿ ಹೀಗಲ್ಲ. ಅವನು ಅನಂತಕಲ್ಯಾಣ ಗುಣಗಣಪರಿಪೂರ್ಣನು. ಸರ್ವದೋಷವಿದೂರನು. ಜಾರತ್ವ, ಚೋರತ್ವ, ವಂಚನೆ, ಪಕ್ಷಪಾತ ಇತ್ಯಾದಿ ದೋಷಗಳು ಅವನಲ್ಲಿ ಲವಲೇಶವಾದರೂ ಇಲ್ಲವೇ ಇಲ್ಲ. ನಿರ್ದೋಷವಸ್ತುವಾದ ಆ ನಿರಂಜನನಲ್ಲಿ ಯಾರಾದರೂ ವಿನೋದಕ್ಕಾಗಿಯೂ ದೋಷಗಳನ್ನೆಣಿಸಬಾರದು. ಸಾಮಾನ್ಯರಾಗಿ ಜನರಿಗೆ ಅವರ ಸೋದರ ಮಾವಂದಿರಲ್ಲಿ ಗೌರವ, ವಿಶ್ವಾಸ ಬಹಳವಾಗಿರುವುದು ಸಹಜ. ಅಂತೆಯೇ ಸೋದರಮಾವಂದರಿಗೂ ತಮ್ಮ ಅಕ್ಕತಂಗಿಯರ ಪುತ್ರರಲ್ಲಿ ವಿಶೇಷವಾದ ಅಕ್ಕರೆ, ವಾತ್ಸಲ್ಯ ಇರುವುದು ಸ್ವಾಭಾವಿಕ. ಈ ನಿಯಮಕ್ಕೇ ಹೊರತಾಗಿ ಶ್ರೀಕೃಷ್ಣನು ಸೋದರಮಾವನಾದ ಕಂಸನನ್ನು ಸಂಹರಿಸಿದನು. ಇವೆಲ್ಲವೂ ಲೋಕದ ದೃಷ್ಟಿಯಿಂದ ಸಾಮಾನ್ಯಮಾನವರಲ್ಲಿ ದೋಷಗಳೇ ಆದರೂ, ಲೋಕವಿಲಕ್ಷಣನಾದ, ಸರ್ವೋತ್ತಮನಾದ ಆ ಸ್ವರಮಣನಲ್ಲಿ ದೋಷಗಳ ಬದಲು ಗುಣಗಳೇ ಆಗಿವೆ.

ಗೋಪಿಕಾಸ್ತ್ರೀಯರು ಅನ್ಯಸ್ತ್ರೀಯರು. ಪರಸ್ತ್ರೀಯರಾದ ಅವರು ಶ್ರೀಕೃಷ್ಣನ ಅಂಗಸಂಗವನ್ನು ಬಯಸಿದರು. ರಾಮಾವತಾರದಲ್ಲಿ ಶ್ರೀರಾಮಚಂದ್ರನು ವನವಾಸದಲ್ಲಿದ್ದಾಗ, ಋಷಿಗಳು ಅಂಗಸಂಗವನ್ನು ಬಯಸಲು, ಅಗ್ನಿಪುತ್ರರಾದ ಆ ಋಷಿಗಳಿಗೆ ವರ ಕೊಟ್ಟನು. ಆ ಋಷಿಗಳೇ ಗೋಕುಲದಲ್ಲಿ ಗೋಪಸ್ತ್ರೀಯರಾಗಿ ಜನಿಸಿದರು. ಅವರ ಅಭೀಷ್ಟೆಯಂತೆ ಜಲಕ್ರೀಡೆ, ರಾಸಕ್ರೀಡಾದಿಗಳಿಂದ ಅವರಿಗೆ ತನ್ನ ಅಂಗಸಂಗವನ್ನು ಕೊಟ್ಟು, ಉದ್ಧರಿಸಿದನು.

### ವಿಶೇಷ ವಿಚಾರ

ಶ್ರೀಪರಮಾತ್ಮನು ಸ್ವರಮಣನು. ಶ್ರೀಹರಿಯಿಂದ ಇತರ ಜೀವರಿಗೆ ಆನಂದವೇ ಹೊರತು, ಪರಾಪೇಕ್ಷಾರಹಿತನಾದ ಪರಾತ್ಪರನಿಗೆ ಇತರರಿಂದ ಸುಖಪ್ರಾಪ್ತಿ

ಯಾಗಬೇಕಾದ ಅಗತ್ಯವಿಲ್ಲ. ಗೋಪಸ್ತ್ರೀಯರಲ್ಲಿ ವಿದ್ಯಮಾನರಾಗಿದ್ದ ಶ್ರೀಲಕ್ಷ್ಮೀದೇವಿಯರಲ್ಲಿ ಸ್ತ್ರೀರೂಪದಿಂದ ಬಿಂಬನಾಗಿರುವ ಸ್ವರಮಣನು ತನ್ನ ರೂಪಗಳಲ್ಲಿಯೇ ರಮಿಸಿದನು. ಇದರಿಂದ ಸ್ವರಮಣನು. ಆದರಿಂದ ಲಕ್ಷ್ಮಿಯದ್ವಾರಾ ಪ್ರತಿಬಿಂಬರಾದ ಗೋಪಸ್ತ್ರೀಯರಿಗೆ ಆನಂದವುಂಟಾಯಿತು. ಇದರಿಂದ ಜಾರತ್ವ ಎಂಬ ದೋಷವು ಶ್ರೀಪರಮಾತ್ಮನಿಗಿಲ್ಲ.

ಇನ್ನು ಗೋಪಸ್ತ್ರೀಯರ ಮನೆಗಳನ್ನು ಬಾಲಕತನದಲ್ಲಿ ಹೊಕ್ಕು, ಅವರು ಮುಚ್ಚಿಟ್ಟಿದ್ದ ಹಾಲು, ಮೊಸರು, ಬೆಣ್ಣೆಗಳನ್ನು ಕದ್ದು ಲೀಲೆಯಾಡಿದನು. ಇದರಿಂದ ನವನೀತಚೋರನೆಂದು ಪ್ರಸಿದ್ಧನಾದನು. ಸರ್ವತ್ರವ್ಯಾಪ್ತನಾದ ಸರ್ವೇಶ್ವರನಿಗೆ ಸೇರದೇ ಇದ್ದ ವಸ್ತುವೇ ಜಗತ್ತಿನಲ್ಲಿಲ್ಲ. ಜಗತ್ತೇ ಅವನ ಅಧೀನವಾಗಿದೆ. ತನಗೆ ಸಂಬಂಧಪಡದ ವಸ್ತುವನ್ನು ಕದ್ದಾಗ, ಆ ಕಾರ್ಯವನ್ನು ಚೋರತ್ವವೆನ್ನುತ್ತೇವೆ. ಇಲ್ಲಿ ಆ ವಿಷಯವೇ ಇಲ್ಲ. ತನಗೆ ಸೇರಿದ ತನ್ನಿಂದ ಸೃಷ್ಟವಾದ ವಸ್ತುಗಳನ್ನು ತಾನು ಸ್ವೀಕರಿಸಿದ ಶ್ರೀಕೃಷ್ಣನೆಂದಿಗೂ ಚೋರನಲ್ಲ.

ಅಲ್ಲದೇ ನವ–ಎಂದರೆ, ನವಸಂಖ್ಯಾಕವಾದ, ನೀತ–ಎಂದರೆ ನೀತವಾಗಿ ನಿನ್ನಲ್ಲಿ ಭಕ್ತಿಮಾಡತಕ್ಕ ಭಕ್ತರ ಪಾಪಗಳನ್ನು, ಚೋರ–ಎಂದರೆ ಅಪಹರಿಸುವವನು ಎಂದು ವಿಶೇಷಾರ್ಥ (ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನದಂತೆ). ಇದರಿಂದ ಭಕ್ತರ ಪಾಪಪರಿಹಾರಕನೆಂದರ್ಥ. ಈ ವಿಷಯವನ್ನೇ ಸಮರ್ಥಿಸುತ್ತಾ, ಶ್ರೀವ್ಯಾಸರಾಜರು–"ಜಾರತ್ವವನು ಮಾಡಿದಾ ಪಾಪಂಗಳಿಗೆಲ್ಲಾ ಗೋಪೀಜನ ಜಾರನೆಂದರೆ ಸಾಲದೇ" ಎಂದು ಉಗಾಭೋಗದಲ್ಲಿ ಆ ಸ್ವರಮಣನ ಗುಣೋತ್ಕರ್ಷಮಾಡಿದ್ದಾರೆ. ನವನೀತಚೋರನೆಂದರೆ ಚೋರತ್ವದೋಷ ಪರಿಹಾರ. ಹೇ, ಮಾನವಕೊಂದವನೇ ಎಂದರೆ, ಅಂದಂದಿಗೆ ಮಾಡಿದ ಪಾಪ ಪರಿಹಾರ.

ಈ ರೀತಿ ಶ್ರೀಪರಮಾತ್ಮನ ಅಪಾರ ಗುಣೋತ್ಕರ್ಷಗಳ ಮಹಾಮಹಿಮೆಗಳನ್ನು ಅನುಸಂಧಾನಪೂರ್ವಕ ತಿಳಿದು, ನಿಂದಾಸ್ತುತಿಮಾಡಿದರೂ ಕೂಡ, ಅವು ಭಗವಂತನಲ್ಲಿ ಗುಣಸ್ತೋತ್ರಗಳಾಗುವುವೇ ಹೊರ್ತು, ದೋಷಸೂಚಕವಾಗುವುದೇ ಇಲ್ಲ. ಲೋಕವಿಲಕ್ಷಣನಾದ, ಲೋಕೈಕನಾಥನ ವ್ಯಾಪಾರವಿಶೇಷಗಳೆಲ್ಲವೂ ಜಗದ್ವಿಲಕ್ಷಣಗಳೇ. ಸಾಮಾನ್ಯನರರ ಕೃತ್ಯಗಳಂತೆ ಭಾವಿಸಲೇಕೂಡದು. ಕರು

ಣಾಳುವಾದ ಆ ಕಮಲದಳಾಯತಾಕ್ಷನು ಅಂತಹ ಭಕ್ತರನ್ನು ತನ್ನೆಡೆಗೆ ಕರೆದು, ಅವರ ಸಮಸ್ತ ಪಾಪಪ್ರಕ್ಷಾಳನೆಗೈದು, ಪವಿತ್ರರನ್ನಾಗಿಸಿ, ತನ್ನ ನಿಜಮಂದಿರವಾದ ವೈಕುಂಠಾದಿ ಮುಕ್ತಧಾಮಗಳಲ್ಲಿಟ್ಟು, ಸಂತೋಷಪಡಿಸುವನು. ॥ ೩೦ ॥

## ಪದ್ಯ ೩೨

### ಮೂಲ

ಹರಿಕಥಾಮೃತಸಾರವಿದು ಸಂ ।
ತರು ಸದಾ ಚಿತ್ತೈಸುವುದು ನಿ ।
ಷ್ಠುರಿಗಳಿಗೆ ಪಿಶುನರಿಗಯೋಗ್ಯರಿಗಿದನು ಪೇಳದಲೆ ॥
ನಿರುತ ಸದ್ಭಕ್ತಿಯಲಿ ಭಗವ ।
ಚ್ಚರಿತೆಗಳ ಕೊಂಡಾಡಿ ಹಿಗ್ಗುವ ।
ಪರಮ ಭಗವದ್ದಾಸರಿಗೆ ತಿಳಿಸುವುದು ಈ ರಹಸ್ಯ ॥ ೩೨ ॥

### ಅವತರಣಿಕೆ

ಹರಿಕಥಾಮೃತಸಾರವೆಂಬ ಈ ಗ್ರಂಥೋಕ್ತಿಯ ತತ್ತ್ವರಹಸ್ಯಗಳನ್ನು ಅಯೋಗ್ಯಜನರಿಗೆ ತಿಳಿಸಬಾರದು. ಕೇವಲ ಭಗವಂತನ ನಿರ್ಮತ್ಸರರಾದ ಅಂತ ರಂಗ ಭಕ್ತರಿಗೆ ಮಾತ್ರ ತಿಳಿಸಬೇಕೆಂದು ತಿಳಿಸುತ್ತಾರೆ.

### ಪ್ರತಿಪದಾರ್ಥ

**ಹರಿ** = ಸಕಲಪಾಪಪರಿಹಾರಕನಾದ, ಜೀವಾಂತರ್ಗತ ಬಿಂಬರೂಪಿಯಾದ ಶ್ರೀಹರಿಯನ್ನೇ ಮುಖ್ಯವಿಷಯವನ್ನಾಗಿ ಉಳ್ಳ, **ಕಥಾ** = ಅವನ ಮಹಿಮಾ

ವಿಶೇಷಗಳನ್ನು ಚರಿತ್ರರೂಪದಲ್ಲಿ ಪ್ರತಿಪಾದಿಸುವ ಕಥಾಪ್ರಸಂಗಗಳಿಂದ, **ಅಮೃತ** = ಮಂಥಿಸಿ ತೆಗೆಯಲ್ಪಟ್ಟ ಅಮೃತರೂಪವಾದ, **ಸಾರವು** = ಸಾರ ಭೂತವಾದ ವಿಷಯ ಎನಿಸತಕ್ಕ, **ಇದು** = ಪ್ರಸಕ್ತ ಗ್ರಂಥವು, **ಸಂತರು** = ಭಗವ ದನುಗ್ರಹಾಪೇಕ್ಷಿಗಳಾದ ಭಗವದ್ಭಕ್ತರು, **ಸದಾ** = ನಿರಂತರದಲ್ಲಿ, **ಚಿತ್ತೈಸು ವುದು** = ಈ ಗ್ರಂಥವನ್ನು ಅವಲೋಕಿಸಬಹುದು. **ನಿಷ್ಠುರಿಗಳಿಗೆ** = ತದನ್ಯ ರಾದ ಜನರಿಗೆ, ಅಂದರೆ, ಈ ಗ್ರಂಥೋಕ್ತವಾಕ್ಯಗಳನ್ನು ನಿರಾಕರಿಸುವ, ದುಷ್ಟ ವಚನಗಳನ್ನು ಆಡುವವರಿಗೆ, **ಪಿಶುನರಿಗೆ** = ಕೇವಲ ದೋಷಾನ್ವೇಷಣೆಮಾಡುತ್ತಾ, ಚಾಡೀಮಾತುಗಳನ್ನು ಆಡುವವರಿಗೆ (ಗುಣಗ್ರಾಹಿಗಳಲ್ಲದವರಿಗೆ), **ಅಯೋಗ್ಯ ರಿಗೆ** = ವಿಷಯಾಸಕ್ತರಾಗಿ, ಶ್ರೀಪರಮಾತ್ಮನನ್ನು ಮರೆತು, ಈ ಗ್ರಂಥದಲ್ಲಿ ಅನಾದರ ತೋರಿಸುವ ಅಯೋಗ್ಯಜನರಿಗೆ (ಅನಧಿಕಾರಿಗಳಿಗೆ), **ಇದನು** = ಈ ಗ್ರಂಥೋಕ್ತ ವಿಷಯಗಳನ್ನು, **ಪೇಳದಲೆ** = ಉಪದೇಶಿಸದೆ, **ನಿರುತ** = ಯಾವಾ ಗಲೂ, **ಸದ್ಭಕ್ತಿಯಲಿ** = ನಿರ್ಮಲವಾದ ಮನಸ್ಸಿನಿಂದ ಭಕ್ತಿಪರವಶರಾಗಿ, **ಭಗವಚ್ಚರಿತೆಗಳ** = ಶ್ರೀಪರಮಾತ್ಮನ ಲೀಲಾವೈಭವಯುಕ್ತವಾದ ಮಹಿಮೋ ಪೇತವಾದ ಚರಿತ್ರೆಗಳನ್ನು, **ಕೊಂಡಾಡಿ** = ತ್ರಿಕರಣಪೂರ್ವಕವಾಗಿ ಸ್ತೋತ್ರ ಮಾಡುತ್ತಾ, **ಹಿಗ್ಗುವ** = ಆನಂದೋದ್ರೇಕದಿಂದ ಉಬ್ಬುವ, **ಪರಮ** = ಉತ್ತ ಮಾಧಿಕಾರಿಗಳಾದ, **ಭಗವದ್ದಾಸರಿಗೆ** = ಭಗವದ್ಭಕ್ತರಿಗೆ, **ಈ ರಹಸ್ಯ** = ಈ ಗ್ರಂಥಸ್ಥ ಗೋಪ್ಯವಾದ ತತ್ತ್ವಾರ್ಥಪ್ರಮೇಯಗಳನ್ನು, **ತಿಳಿಸುವುದು** = ಉಪ ದೇಶಿಸಬೇಕು. ॥ ೩೨ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅನಾರ್ಯಕಾಯ ಋಜವೇ ಶಠಾಯ ಮಾಸ್ಮಾದ್ ಬ್ರೂಯಾದ್ರುಜವೇ ಬ್ರೂಹಿ ನಿತ್ಯಂ ಎಂಬ ಶ್ರುತ್ಯರ್ಥವನ್ನು ಅನುಸರಿಸಿ ಈ ಹರಿಕಥಾಮೃತಸಾರವನ್ನು ಭಗವದ್ಭಕ್ತರಿಗೆ ತಿಳಿಸುವುದೆಂತಲೂ, ಅಯೋಗ್ಯರಿಗೆ ತಿಳಿಸಬ್ಯಾಡ ಎಂತಲೂ ಹೇಳುತಾರೆ.

ಪಾಪಪರಿಹಾರಕನಾದ ಜೀವಾಂತರ್ಗತನಾದ ಬಿಂಬ ಮೂರ್ತಿಯ ವ್ಯಾಪಾರ ರೂಪವಾದ ಕಥಾದಲ್ಲಿ ಮುಖ್ಯವಾಗಿ ತೆಗೆಯಲ್ಪಟ್ಟು, ಅಮೃತರೂಪವಾದ ರಸ ಎಂತ ಎನತಕ್ಕ ಈ ಗ್ರಂಥವು ನಿರಂತರದಲ್ಲೂ ನಿಶ್ಚಯವಾಗಿ ಭಗವದನುಗ್ರಹ ಪಡೆಯಬೇಕೆಂಬ ಅಪೇಕ್ಷೆ ಉಳ್ಳ ಭಗವದ್ಭಕ್ತರು ಈ ಗ್ರಂಥವನ್ನ ಅವಲೋಕನ ಮಾಡಬಹುದು. ತದನ್ಯರಾದ, ಈ ಗ್ರಂಥದಲ್ಲಿರುವ ವಾಕ್ಯಗಳ ನಿರಾಕರಿಸಿ ಶಬ್ದ ಸ್ಪಷ್ಟತ್ವ ಇಲ್ಲ ಎಂತ ದುಷ್ಟಮಾತುಗಳ ಆಡತಕ್ಕವರಿಗೆ, ಈ ಗ್ರಂಥದಲ್ಲಿ ಇಲ್ಲದ ದೋಷಗಳನ್ನು ಹುಡುಕಿ ವಿಶ್ವಾಸಹುಟ್ಟದಂತೆ ಮಾಡಿ, ಭಗವದ್ಭಕ್ತರಲ್ಲಿ ಚಾಡೀ ಮಾತುಗಳು ಆಡತಕ್ಕವರಿಗೆ, ಸದಾ ವಿಷಯಾಸಕ್ತರಾಗಿ ಐಹಿಕಸುಖವೇ ಶಾಶ್ವತ ವೆಂದು ಪರಮಾತ್ಮನ ವಿಸ್ಮೃತಿಪೂರ್ವಕ ಈ ಗ್ರಂಥದಲ್ಲಿ ಅನಾದರ ಉಳ್ಳ ಅಯೋಗ್ಯರಿಗೆ, ಈ ಗ್ರಂಥಾಂತರ್ಗತ ರಹಸ್ಯಾರ್ಥಗಳೇನು, ಇದನ್ನ ಶ್ರವಣ ಮಾಡೆಂದು ಹೇಳೋಣವೇನು ಈ ಪ್ರಕಾರ ಹೇಳಧಾಂಗೆ ಇರಬೇಕು. ಇನ್ನೂ ಎಂಥಾವರಿಗೆ ಹೇಳಬೇಕೆಂದರೆ, ಸದಾ ಶ್ರೀಪರಮಾತ್ಮನಲ್ಲಿ ಸಮೀಚೀನವಾದ ತಾರತಮ್ಯ ಪಂಚಭೇದ ಸತ್ಯವೆಂದು ತಿಳದು ಇರುವ ಭಗವದ್ಭಕ್ತರಾದವರಿಗೆ, ಶ್ರೀಪರಮಾತ್ಮ ಮಾಡಿದ ಲೀಲಾಗಳನ್ನು ಕೊಂಡಾಡಿ, ಮಾಹಾತ್ಮ್ಯಜ್ಞಾನಸುದೃಢ ಸ್ನೇಹಪೂರ್ವಕವಾಗಿ ಪರಮಾತ್ಮನ ಮಹಿಮಾಗಳ ಕಾಯೇನ ಮನಸಾ ಉಚ್ಚಾರ ಮಾಡಿ, ಆನಂದೋದ್ರೇಕದಿಂದ ದೇಹದಲ್ಲಿ ಸ್ಮೃತಿರಹಿತರಾಗಿ ಇರುವ ಭಗವದ್ಭಕ್ತ ರಿಗೇನು, ಉತ್ತಮರಾದ ಭಗವದ್ದಾಸರಿಗೇನು, ಈ ಗ್ರಂಥಗತ ಅನುಸಂಧಾನ ರೂಪವಾದ ಮರ್ಮಗಳಾದ ರಹಸ್ಯಗಳನ್ನು ತಿಳಿಸೋವನಾಗಬೇಕು ಎಂತ ತಾತ್ಪರ್ಯ. ಈ ಗ್ರಂಥ ಮಹಾಗೋಪ್ಯವಾದ ಅರ್ಥಗಳಿಂದ ಯುಕ್ತವಾದದ್ದು ಎಂತಲೂ, ಅನ್ಯರು ಇದಕ್ಕೆ ಅರ್ಹರಲ್ಲ ಎಂತಲೂ ಭಾವವು. ॥ ೩೨ ॥

೨. ಭಾವಪ್ರಕಾಶಿಕೆ

ಈಗ ನಾವು ಹೇಳಿದುದೆಲ್ಲವೂ ಕೇವಲ ರಹಸ್ಯವಾದ ಹರಿಕಥೆ ಎಂಬ ಅಮೃತದ ಸಾರವು. ಇದಕ್ಕೆ ಅಧಿಕಾರಿಗಳು ಕೇವಲ ಸಜ್ಜನರೇ ಹೊರತು ಇತರರಲ್ಲ. ಆದುದರಿಂದ ಇದನ್ನು ಭಗವನ್ಮಹಿಮೆ ಕೇಳುವುದರಲ್ಲಿ ವಿಶ್ವಾಸವಿಲ್ಲದೆ ಆಕ್ಷೇಪ ವಾಗಿ ಮಾತಾಡುವವರಿಗೆ ಹೇಳಬಾರದು. ಪರಮಾತ್ಮನಲ್ಲಿ ದ್ವೇಷಮಾಡುವವ

ರಿಗೂ, ಅನ್ಯಥೋಪಾಸನೆಯನ್ನು ಮಾಡುವ ತಮೋಯೋಗ್ಯರಿಗೂ ಹೇಳ ಬಾರದು. ಯಾರು ಕೇವಲ ಭಕ್ತಿಯಿಂದ ಭಗವಚ್ಚರಿತ್ರೆಗಳನ್ನು ಕೇಳಿ ಕೊಂಡಾಡಿ ಹಿಗ್ಗುವರೋ ಅಂತಹ ಭಗವದ್ದಾಸರಿಗೆ ಮಾತ್ರವೇ ಈ ರಹಸ್ಯವನ್ನು ಉಪದೇಶ ಮಾಡತಕ್ಕದ್ದು. ॥ ೩೨ ॥

**೩. ಭಾವದರ್ಪಣ**

ಅನಾರ್ಯಕಾಯಾ ಋಜವೇ ಶಠಾಯ ಮಾಸ್ಮದ್ಬ್ರೂಯಾದ್ಯಜವೇ ಬ್ರೂಹಿನಿತ್ಯಂ ಎಂಬ ಶ್ರುತ್ಯರ್ಥವನ್ನು ಮನಸಿನಲ್ಲಿಟ್ಟು ಈ ಕಥಾಮೃತಸಾರ ಇತರರಿಗೆ ಹೇಳಬೇಡೆಂದು ಹೇಳುತ್ತಾರೆ. ಹರಿಕಥೇತಿ ॥ ೩೨ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಹರಿ ಇತಿ ॥ ಚಿತೈಸುವದು–ಕೇಳುವದು. ಪಿಶುನಃ ಹಿಂಸಕಃ ॥ ೩೨ ॥

**ಕನ್ನಡಾರ್ಥ**

ಅತಿ ರಹಸ್ಯವಿಷಯಭರಿತವಾದ ಈ ಹರಿಕಥಾಮೃತಸಾರವನ್ನು ಕಂಡವ ರಿಗೆ ಉಪದೇಶಿಸದೇ ಅಧಿಕಾರಿಗಳಾದ ಸುಜೀವರಿಗೆ ಮಾತ್ರ ಉಪದೇಶಿಸಬೇಕೆಂದು ಈ ಪದ್ಯದಿಂದ ದಾಸರಾಯರು ಬೋಧಿಸುತ್ತಾರೆ. ॥ ೩೨ ॥

**೫. ಶ್ರೀಗುರುಹೃದಯಪ್ರಕಾಶಿಕೆ**

ಈ ಗ್ರಂಥ ಸಜ್ಜನರಿಂದಲೇ ಗ್ರಹಿಸಸಕ್ಕದ್ದೆಂದು ತಿಳಿಸುತ್ತಾರೆ, ಹರಿ ಎಂದು. ಹರಿಕಥೆ ಎಂಬ ವೇದಾಂತರೂಪ ಮೋಕ್ಷಸಾಧನಸಾರ ಈ ಗ್ರಂಥ, ಸಜ್ಜನರು ಚಿತ್ತಕ್ಕೆ ಸದಾ ತರಬೇಕು. ಮಧ್ವಶಾಸ್ತ್ರಹೃದಯ ತಿಳಿಯದೆ, ಏಕದೇಶ ನೋಡಿ, ಈ ಗ್ರಂಥ ಶಾಸ್ತ್ರವಿರುದ್ಧವೆಂದು ಕ್ರೂರ ಮಾತನಾಡುವ ನಿಷ್ಠುರಿಗಳಿಗೂ, ಇಲ್ಲದ ದೋಷಕಲ್ಪಿಸಿ ಚಾಡಿ ಹೇಳುವ ಪಿಶುನರಿಗೂ, ಈ ಗ್ರಂಥದಲ್ಲಿ ವಿಶ್ವಾಸವಿಲ್ಲದ ಅಯೋಗ್ಯರಿಗೂ ಇದನ್ನ ಹೇಳದೆ ಸದಾ ಸದ್ಭಕ್ತಿಯಿಂದ ದೇವರ ಮಹಾತ್ಮ್ಯೆ ಗಳೆಂಬ ಶಾಸ್ತ್ರರಹಸ್ಯ ತಿಳಿದು ಸ್ತುತಿಸುತ್ತಾ, ಸಂತೋಷಿಸುವ ಪರಮಭಗವದ್ಭಕ್ತ

ರಿಗೆ ಎಂದರೆ, ಶ್ರೀಹರಿಯ ಚರಣಾರವಿಂದದಲ್ಲಿ ಅತ್ಯುನ್ನತ ಭಕ್ತಿಯುಳ್ಳ ಭಕ್ತ ಶಿರೋಮಣಿಗಳಿಗೆ ಈ ರಹಸ್ಯ ಎಂದರೆ, ಈ ಗ್ರಂಥದಲ್ಲಿ ಪ್ರತಿಪಾದಿಸಿರುವ ಏಕಾಂತ ಭಗವನ್ಮಹಿಮೆಗಳನ್ನು ತಿಳಿಸುವುದು ಎಂದರೆ ಹೇಳುವುದು ಎಂದರ್ಥ ॥ ೩೨ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಗ್ರಂಥದ ಹೆಸರು ಶ್ರೀಹರಿಕಥಾಮೃತಸಾರವೆಂದು. ಈ ಗ್ರಂಥ ಪ್ರತಿಪಾದ್ಯದೇವತಾ ಸಾಕ್ಷಾತ್ ಶ್ರೀಹರಿಯೇ. ಸಜ್ಜನರ ಸರ್ವಪಾಪಪರಿಹಾರ ಕನೂ, ಸರ್ವಜೀವರ ಬಿಂಬರೂಪಿಯೂ ಆದ ಶ್ರೀಪರಮಾತ್ಮನಿಗೆ ಹರಿ ಎಂದು ಹೆಸರು. ಕಥಾ–ಎಂದರೆ ಆ ಅಚಿಂತ್ಯಾದ್ಭುತಚರಿತನ ಗುಣ, ರೂಪ, ಕ್ರಿಯಾ ವಿಶಿಷ್ಟವಾದ ಅನಂತಾವತಾರಗಳು. ಆಯಾಯಾ ಅವತಾರಗಳಲ್ಲಿ ಅವನು ಮಾಡಿದ ತೋರಿದ ಲೀಲಾವೈಭವಗಳು ಇವುಗಳ ಪ್ರತಿಪಾದಕವಾದ ಕಥಾವಸ್ತು. ಭಗವಂತನ ಚರಿತ್ರಾನುವಾದ ಅವನ ಗುಣಕಥನಗಳನ್ನು ಮನಸಾ ಚಿಂತಿಸುತ್ತಾ, ಶ್ರೀಹರಿಯ ಚರಿತ್ರೆಗಳನ್ನು ನಮ್ಮ ಧ್ಯಾನಕ್ಕೆ ವಿಷಯವನ್ನಾಗಿ ಮಾಡಿ, ಮಂಥನ ಮಾಡಿ ತೆಗೆದ ಸಾರಭೂತವಾದ ಅಂಶವೇ ಹರಿಕಥಾಮೃತಸಾರವು. ಇದರ ಶ್ರವಣ ನಿಧಿಧ್ಯಾಸನಾದಿಗಳಿಂದ, ಭವರೋಗ ಪರಿಹಾರವು. ಕರ್ಮವಿಮೋಚನೆಗೆ ಮುಖ್ಯ ಕಾರಣವು. ಅದರಿಂದ ಸ್ವರೂಪಗತ ಆನಂದಾಭಿವ್ಯಕ್ತಿ. ಈ ಆನಂದಾನುಭವವೇ ಅಮೃತಸಾರವು.

ಇಂತಹ ಮಹಿಮೋಪೇತವಾದ ಗ್ರಂಥೋಕ್ತ ವಿಷಯಗಳನ್ನು ಉತ್ತಮಾಧಿಕಾರಿಗಳಾದ ಭಗವದ್ಭಕ್ತರು ಮಾತ್ರ ತಿಳಿಯಬಲ್ಲರೇ ಹೊರ್ತು, ಅನ್ಯರು ಅದಕ್ಕೆ ಪಾತ್ರರಲ್ಲ. ಅಂತಹ ಸಜ್ಜನರೇ ಸಂತರು. ಸಂತರಾದ ಭಗವದ್ಭಕ್ತರು ಮಾತ್ರ ಈ ಗ್ರಂಥವನ್ನು ಆಸಕ್ತಿಯಿಂದ ಕೇಳಲು ಅಧಿಕಾರಿಗಳು.

ಈ ಗ್ರಂಥವನ್ನು ನಿಷ್ಠುರವಾಕ್ಯಗಳಿಂದ ನಿರಾಕರಿಸುವ, ಮಾತ್ಸರ್ಯದಿಂದ ತುಂಬಿದ ನಿಷ್ಠುರಿಗಳಿಗೆ ಸರ್ವಥಾತ್ಮನಾ ಹೇಳಕೂಡದು.

ಗ್ರಂಥೋಕ್ತ ವಿಷಯದಲ್ಲಿ ಯಾವಾಗಲೂ ತಪ್ಪುಗಳನ್ನೇ ಹುಡುಕುತ್ತಾ,

ಗುಣಗ್ರಹಣಶಕ್ತಿ ಇಲ್ಲದೇ, ಕೇವಲ ಚಾಡೀಮಾತನ್ನು ಹೇಳುವ ಜನರು ಈ ಗ್ರಂಥಾವಲೋಕನಕ್ಕೆ ಅಧಿಕಾರಿಗಳಲ್ಲ.

ದುರಾಚಾರಿಗಳಾಗಿ, ಸದಾ ವಿಷಯಭೋಗಗಳಲ್ಲಿಯೇ ಆಸಕ್ತ ಮನಸ್ಸುಳ್ಳ ಅಯೋಗ್ಯರು ಇದಕ್ಕೆ ಅನಧಿಕಾರಿಗಳು.

ನಿರಂತರವೂ ಶ್ರೀಶನ ಚರಣಾರವಿಂದಗಳಲ್ಲಿ ಅತಿಶಯ ಭಕ್ತಿಯನ್ನು ಮಾಡುತ್ತಾ, ಶುದ್ಧಾಂತಃಕರಣವುಳ್ಳ ಭಗವದ್ಭಕ್ತರು ಭಗವಚ್ಚರಿತೆಗಳನ್ನು ಕೇಳಿದಷ್ಟೂ, ಅವರ ಮನಸ್ಸು ಭಕ್ತಿಭಾವದಿಂದ ಹಿಗ್ಗುವುದು. ಶ್ರೀಹರಿಯ ಗುಣಗಳನ್ನು ಸದಾ ಆನಂದಾತಿಶಯದಿಂದ ಕೊಂಡಾಡುತ್ತಿರುವ ನಿರ್ಮತ್ಸರಿಗಳಾದ, ನಿರ್ಮಲಚಿತ್ತವುಳ್ಳ, ತ್ರಿಕರಣಶುದ್ಧಿ ಹೊಂದಿರುವವರಿಗೆ ಮಾತ್ರ ಈ ಗ್ರಂಥದಲ್ಲಿ ಪ್ರತಿಪಾದಿಸಿರುವ ತತ್ತ್ವಾರ್ಥಪ್ರಮೇಯರಹಸ್ಯಗಳನ್ನು ತಿಳಿಸಬೇಕೆಂದು, ಈ ಗ್ರಂಥಕ್ಕೆ ಅಧಿಕಾರಿಗಳ ಲಕ್ಷಣವನ್ನು ತಿಳಿಸುತ್ತಾರೆ ॥ ೩೨ ॥

## ಪದ್ಯ ೩೩

**ಮೂಲ**

**ಸತ್ಯಸಂಕಲ್ಪನು ಸದಾ ಐ ।**
**ನಿತ್ತುದೇ ಪುರುಷಾರ್ಥವೆಂದರಿ ।**
**ದತ್ಯಧಿಕ ಸಂತೋಷದಲಿ ನೆನೆವುತ್ತ ಭುಂಜಿಸುವುದು ॥**
**ನಿತ್ಯ ಸುಖಸಂಪೂರ್ಣ ಪರಮ ಸು ।**
**ಹೃತ್ತಮ ಜಗನ್ನಾಥವಿಠ್ಠಲ ।**
**ಬತ್ತಿಸಿ ಭವಾಂಬುಧಿಯ ಚಿತ್ಸುಖವ್ಯಕ್ತಿ ಕೊಡುತಿಪ್ಪ ॥ ೩೩ ॥**

**ಅವತರಣಿಕೆ**

ಸತ್ಯಸಂಕಲ್ಪನಾದ ಸರ್ವತಂತ್ರಸ್ವತಂತ್ರನು ಜೀವರಿಗೆ ಆಯಾಯಾ ಕಾಲಕ್ಕೆ

**ಅವತರಣಿಕೆ**

ತನ್ನ ಇಚ್ಛಾನುಸಾರ ಏನನ್ನು ಕೊಡುತ್ತಾನೋ, ಅದರಿಂದ ತೃಪ್ತರಾಗಿ, ಅನವರತ ಅವನನ್ನು ಕೊಂಡಾಡುತ್ತಿರುವ ಭಕ್ತರನ್ನು ಸಂಸಾರಬಂಧನದಿಂದ ಬಿಡಿಸಿ, ಮೋಕ್ಷಾನಂದವನ್ನು ಕರುಣಿಸುವನೆಂದು, ಪರಮದಯಾಳುತನವನ್ನು ಕೊಂಡಾಡುತ್ತಾ, ಪ್ರಸಕ್ತ ಸಂಧಿಯನ್ನು ಉಪಸಂಹರಿಸುತ್ತಾರೆ.

**ಪ್ರತಿಪದಾರ್ಥ**

**ಸತ್ಯಸಂಕಲ್ಪನು** = ಶ್ರೀಪರಮಾತ್ಮನ ಇಚ್ಛೆ ಸತ್ಯಭೂತವಾದದ್ದು. ಸಕಲವೂ ಶ್ರೀಹರಿಯ ಚಿತ್ತದಂತೆಯೇ ನಡೆಯುವುದು. ಇದರಿಂದ ಸತ್ಯಸಂಕಲ್ಪನಾದ ಆ ಸರ್ವಪ್ರೇರಕನು, **ಸದಾ** = ನಿರಂತರದಲ್ಲಿ (ಸೃಷ್ಟಿಪೂರ್ವಾರಭ್ಯ ಮುಕ್ತಿಪ್ರಾಪ್ತಿ ಪರ್ಯಂತ), **ಏನಿತ್ತುದೇ** = ಅವನ ಇಚ್ಛಾನುಸಾರ, ಜೀವರ ಯೋಗ್ಯತೆಗನುಗುಣವಾಗಿ ಏನನ್ನು ಕೊಡುವನೋ, **ಪುರುಷಾರ್ಥವೆಂದರಿತು** = ಅದನ್ನೇ ಮಹಾಪ್ರಸಾದವೆಂದು ತಿಳಿದು, **ಅತ್ಯಧಿಕ ಸಂತೋಷದಲಿ** = ಹೆಚ್ಚಾದ ಆನಂದದಿಂದ, **ನೆನೆವುತ್ತ** = ಅವನ ಮಹಾಮಹಿಮೆಗಳನ್ನು ಸ್ಮರಿಸುತ್ತಾ, **ಭುಂಜಿಸುವುದು** = ಲಾಭಾಲಾಭ, ಜಯಾಪಜಯಗಳನ್ನು ದ್ವಂದ್ವಾತೀತನಾಗಿ ಸಹಿಸುತ್ತಾ, ಸಂತೋಷದಿಂದ ಸ್ವೀಕರಿಸಿ, ಅನುಭವಿಸಬೇಕು. **ನಿತ್ಯಸುಖಸಂಪೂರ್ಣ** = ನಿತ್ಯಾನಂದ್ಯುದ್ರಿಕ್ತನಾದ ಶ್ರೀಪರಮಾತ್ಮನು, **ಪರಮಸುಹೃತ್ತನು** = ಜೀವರಿಗೆ ಆಪ್ತಬಂಧುವಾಗಿ, **ಜಗನ್ನಾಥವಿಠ್ಠಲ** = ಜಗತ್ಸ್ವಾಮಿಯಾದ ದಾಸರಾಯರ ಅಂಕಿತನಾಮಕನಾದ ಶ್ರೀಜಗನ್ನಾಥವಿಠ್ಠಲಸ್ವಾಮಿಯು, **ಭವಾಂಬುಧಿಯ** = ಸಂಸಾರವೆಂಬ ಈ ಮಹಾಸಮುದ್ರವನ್ನು, **ಬತ್ತಿಸಿ** = ಒಣಗಿಸಿ, ಅಂದರೆ, ಸಂಸಾರಸಾಗರದಿಂದ ಉತ್ತರಿಸಿ, **ಚಿತ್ಸುಖವ್ಯಕ್ತಿ** = ಜೀವರ ಸ್ವರೂಪಗತ ಆನಂದವನ್ನು ಅಭಿವ್ಯಕ್ತಮಾಡಿ, **ಕೊಡುತಿಪ್ಪ** = ನಿತ್ಯಾನಂದರೂಪವಾದ ಮುಕ್ತಿಸುಖವನ್ನೀಯುವನು. ॥ ೩೩ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮ ದಾವ ದಾವ ಕಾಲದಲ್ಲಿ ಏನೇನು ಕೊಡತಾನೋ ಅದರಿಂದ ತೃಪ್ತನಾಗಿರಬೇಕೆಂದು ಹೇಳತಾರೆ.

ಪ್ರಾಣಿಗಳ ಜನನಾದಾರಭ್ಯ ಮುಕ್ತರಾಗೋವರಿಗೂ ಎತ್ತತಕ್ಕ ಜನ್ಮಗಳೇನು, ಆಯಾ ಜನ್ಮಗಳಲ್ಲಿ ಕ್ಷಣಲವಾದಿ ಕಾಲಗಳಲ್ಲಿ ಮಾಡತಕ್ಕ ಕರ್ಮಗಳೇನು, ಭೋಗಮಾಡತಕ್ಕ ಸುಖದುಃಖಾದಿ ಫಲಗಳೇನು ಅನಾದಿಯಿಂದ ಲಿಂಗದೇಹದ ಮೂರನೇ ಪರಿಚ್ಛೇದವಾದ ತಮಃ ಪರಿಚ್ಛೇದದಲ್ಲಿ ವಿದ್ಯಮಾನಗಳಾಗಿ ಅವೆ. ಇವು ಈಶ್ವರನಿಂದ ರಚಿತವಲ್ಲ. 'ಅದರಂತೆ ಭೋಗಗಳ ಕೊಡತೇನೆ' ಎಂತ ಪರಮಾತ್ಮ ನಿಶ್ಚಯವಾದ ಸಂಕಲ್ಪಮಾಡಿದ್ದಾನೆ. ಆದಕಡಿಯಿಂದ ಇಂಥಾ ಪರಮಾತ್ಮನು, ಮುಕ್ತನಾಗೋವರಿಗೂ ನಿರಂತರದಲ್ಲೂ ಜೀವಗೆ ಆಯಾ ಕರ್ಮಗಳ ವ್ಯಕ್ತ ಮಾಡಿ ನಡಸತಾ ಇರತಾನೆ. ಈ ಕರ್ಮಾನುಗುಣ್ಯವಾಗಿ ಬಾಹ್ಯರೂಪಗಳಿಂದ ಭೋಗಯೋಗ್ಯಗಳ ಅನುಕೂಲ ಮಾಡತಾ ಇರತಾನೆ. ಅನ್ಯಥಾ ಮಾಡೋದಿಲ್ಲ. ಈ ಅನುಸಂಧಾನ ಸರ್ವದಾ ಮನಸ್ಸಿನಲ್ಲಿ ಇಟ್ಟವನಾಗಿ, ತನ್ನ ಯೋಗ್ಯತಾ ದೇವರು ಏನು ಕೊಡತಾನೋ ಅದೇ ಮಹಾಪ್ರಸಾದವೆಂದು ತಿಳಿದಿರಬೇಕು. ಇದಕ್ಕೆ ಅನ್ಯಥಾ ಬಯಸಿದರೆ ಪರಮಾತ್ಮನ ಸಂಕಲ್ಪಕ್ಕೆ ಅನ್ಯಥಾ ನಡಸಿದಂತಾಗುತ್ತದೆ, ಮಹಾದೋಷ ಪ್ರಾಪ್ತವಾಗತದೆ ಎಂತ.

**ಅಲ್ಪಯತ್ನೇನ ವಾ ಪುನಃ** ಎಂಬ ವಿಷ್ಣುರಹಸ್ಯ ರೀತ್ಯಾ,

**ಯಸ್ಯ ಯದ್ದೈವ ವಿಹಿತಂ ಸ ತೇನ ಸುಖದುಃಖಯೋಃ ।**
**ಆತ್ಮಾ ಸಂತೋಷಯನ್ ದೇಹಿ ತಮಸಃ ಪಾರಮೃಚ್ಛತಿ ॥**

ಪ್ರಮಾಣರೀತ್ಯಾ ತಿಳಿದವನಾಗಿ, ದೇವರು ಅತ್ಯಂತ ಮಹಾಮಹಿಮನೆಂದು ಅತ್ಯಂತ ಸಂತೋಷದಿಂದ ಹೃದಯಾಕಾಶದಲ್ಲಿ ಉಪಾಸ್ಯ ಮೂರ್ತಿಯನ್ನ ಪೂಜಾದಿಗಳಿಂದ ಸ್ಮರಣ ಮಾಡತ ಪ್ರತಿದಿನದಲ್ಲೂ ಲಾಭಾಲಾಭ ಜಯಾಪಜಯಗಳು

ಸುಖದುಃಖಾದಿಗಳು ಅನುಭವಿಸುವದು, ಮನುಷ್ಯರಿಗೆ ಇವು ಸದ್ಗತಿಯಾಗತಕ್ಕದ್ದೆಂದು ತಿಳಿದುಇರುವ ಅಧಿಕಾರಿಗೆ, ಶ್ರೇಷ್ಠನಾದ ಅತ್ಯಂತ ಸ್ನೇಹತನಾದ ಆನಂದದಿಂದ ಸಂಪೂರ್ಣನಾದ ಜಗತ್ತಿಗೆ ಸ್ವಾಮಿಯಾದ ಶ್ರೀಪರಮಾತ್ಮ, ಸಂಸಾರಾಖ್ಯ ಸಮುದ್ರವನ್ನ ಶೋಷಣಮಾಡಿ, ಜೀವನ್ಮುಕ್ತರನ್ನಾಗಿ ಮಾಡಿ ಮಹರಾದಿ ಲೋಕಗಳಲ್ಲಿ ಇಟ್ಟದ್ದು ಬ್ರಹ್ಮನ ಸಹ ಲಿಂಗಭಂಗ ಐದಿಸಿ, ಜೀವನಸ್ವರೂಪಯೋಗ್ಯತಾ ಸುಖವನ್ನ ಪ್ರಕಾಶರೂಪದಿಂದ ವ್ಯಕ್ತಮಾಡಿ, ವೈಕುಂಠಾದಿ ಸ್ಥಳಗಳಲ್ಲಿ ಕ್ಲಪ್ತವಾದ ಸುಖಗಳ ಕೊಡತಾ ಇರತಾನೆ. ಅಸ್ವತಂತ್ರನಾದ ಜೀವ ಈಶಾಧೀನನಾದವ, ದೇವರ ಹೊರತು ದಾವ ಕಾರ್ಯ ಮಾಡಲಿಕ್ಕೂ ಶಕ್ತನಲ್ಲ. ಕರ್ಮವೈಚಿತ್ರ್ಯದಿಂದ ಜ್ಞಾನಾಜ್ಞಾನಗಳ ಜೀವರ ಕರ್ಮಾನುಸಾರ ಕೊಡತಾ ಕಲ್ಪಾಂತಕ್ಕೆ ಸರ್ವಕರ್ಮಗಳು ಭೋಗದಿಂದ ನಾಶ. ಕೆಲವಕ್ಕೆ ತನ್ನ ಅಪರೋಕ್ಷದಿಂದ ನಾಶ, ಈ ಪ್ರಕಾರ ಮಾಡಿ ಜೀವರನ್ನ ಉದ್ಧಾರ ಮಾಡತಾನೆ. ಈ ಕಾರಣದಿಂದ ಜೀವಗೆ ಸಂಬೋಧನಿಯೋ ಹೊರತು, ಸ್ವತಃ ಪ್ರವೃತ್ತಿ ಜೀವಗೆ ಉಂಟು, ಆದ್ದರಿಂದ ಸ್ವತಃ ಪ್ರವರ್ತಿಸಬೇಕೆಂಬ ತಾತ್ಪರ್ಯದಿಂದ ಸಂಬೋಧನವಲ್ಲವೆಂದು ತಾತ್ಪರ್ಯ ॥ ೩೩ ॥

## ೨. ಭಾವಪ್ರಕಾಶಿಕೆ

ಸತ್ಯಸಂಕಲ್ಪನೆಂದರೆ, ತನ್ನ ಮನಸ್ಸಿಗೆ ಮೊದಲು ಯಾವುದು ಬಂದಿರುವುದೋ ಅದನ್ನೇ ಸತ್ಯವಾಗಿ ನಡೆಸುವವನು. ಅದನ್ನು ಅನ್ಯಥಾ ಮಾಡಲು ಬ್ರಹ್ಮಾದಿಗಳಿಂದಲೂ ಆಗುವುದಿಲ್ಲ. ಆದ್ದರಿಂದಲೇ ಸತ್ಯಸಂಕಲ್ಪನೆಂದು ಪರಮಾತ್ಮನಿಗೇ ಹೆಸರು. ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ । ತೇನ ತ್ಯಕ್ತೇನ ಭುಂಜೀಥಾಃ ಎಂಬ ಈಶಾವಾಸ್ಯೋಪನಿಷತ್ತಿನ ವಾಕ್ಯದಂತೆ, ಇಂಥ ಸ್ವಾಮಿಯು ತನ್ನ ಸಂಕಲ್ಪಕ್ಕೆ ಬಂದುದನ್ನು ಸದಾ ನಮಗೆ ಕೊಡುವನು. ಆದ್ದರಿಂದ ನಮ್ಮ ಯೋಗ್ಯತಾನುಸಾರವಾಗಿ ಅವನು ಕೊಟ್ಟುದುದೇ ಪುರುಷಾರ್ಥ. ಅಂದರೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂದು ಪುರುಷಾರ್ಥಗಳು ೪ ಪ್ರಕಾರಗಳುಂಟು. ದೇವರು ಕೊಟ್ಟುದೇ ನಮಗೆ ಪುರುಷಾರ್ಥವೆಂದು ಭಾವಿಸಿ ಇಲ್ಲದ ಪದಾರ್ಥಗಳಲ್ಲಿ ದುರಾಶೆಯನ್ನು ಬಿಡಬೇಕೆಂಬ ಭಾವ. ಯದೃಚ್ಛಾಲಾಭತುಷ್ಟಸ್ಯ ತೇಜೋವಿಪ್ರಸ್ಯ ವರ್ಧತೇ, ಈಶ್ವರಪ್ರೇರಣೆಯಿಂದ ಲಬ್ಧವಾದುದರಲ್ಲಿ

ಯಾವನು ಸಂತೋಷಪಡುತ್ತಿರುವನೋ ಅವನಿಗೆ ತೇಜಸ್ಸು ವೃದ್ಧಿಯಾಗುವುದು. ಅಸಂತುಷ್ಟಃ ಸುಖವಿಪ್ರ ನಾಪ್ನೋತ್ಯಪಿ ಸುರೇಶ್ವರಃ ಎಲೈ ಬ್ರಾಹ್ಮಣನೇ ! ಅಸಂತುಷ್ಟನಾಗಿದ್ದರೆ ಅವನು ದೇವೇಂದ್ರನಾದರೂ ಸುಖವಿಲ್ಲ ಎಂದು ಭಾಗವತ ದಶಮಸ್ಕಂಧದಲ್ಲಿ ರುಕ್ಮಿಣೀದೇವಿಯು ಕಳುಹಿಸಿದ ಪತ್ರವನ್ನು ತೆಗೆದುಕೊಂಡು ಕೃಷ್ಣನಲ್ಲಿ ಬಂದಿದ್ದ ಬ್ರಾಹ್ಮಣನನ್ನು ನೋಡಿ ಶ್ರೀಕೃಷ್ಣನು ಹೇಳಿದ ಶ್ಲೋಕ. ಈ ರೀತಿಯಾಗಿ ಕೊಟ್ಟುದುದನ್ನು ಸಂತೋಷದಿಂದ ಭೋಗಿಸುತ್ತ, ಪರಮಾತ್ಮನನ್ನು ಭಜಿಸುತ್ತಿದ್ದರೆ ಪರಮ ಸಖನಾದ ಶ್ರೀಹರಿಯು ಸಂಸಾರವೆಂಬ ಸಮುದ್ರವನ್ನು ಒಣಗಿಸಿ (ಸಂಸಾರದಿಂದ ಮುಕ್ತನನ್ನಾಗಿ ಮಾಡಿ) ಮುಕ್ತಿಯಲ್ಲಿ ಸ್ವರೂಪಾನಂದವನ್ನು ವ್ಯಕ್ತಿಮಾಡಿ ಸಂರಕ್ಷಿಸುವನು. ॥ ೩೩ ॥

## ೩. ಭಾವದರ್ಪಣ

ಶ್ರೀಶನು ಏನು ಕೊಟ್ಟರೂ ಅದೇ ಪುರುಷಾರ್ಥವೆಂದು ತಿಳಿದು ಇದ್ದರೆ ಸಂಸಾರಾಬ್ಧಿಯಿಂದ ದಾಟಿಸುವನೆಂದು ಹೇಳುತ್ತಾರೆ–ಸತ್ಯೇತಿ ॥ ಬತ್ತಿಸಿ–ಅಟ್ಟಿಸಿ ॥ ೩೩ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಸತ್ಯ ಇತಿ ॥ ಇತ್ತುದೇ–ಕೊಟ್ಟಿದ್ದೇ ॥ ಅರಿದು–ತಿಳಿದು ॥ ಭುಂಜಿಪುದು–ಭುಂಜಿಸುವದು ॥ ೩೩ ॥

### ಕನ್ನಡಾರ್ಥ

ಸಂಧಿಯನ್ನು ಉಪಸಂಹರಿಸುತ್ತಾರೆ–ಸತ್ಯಸಂಕಲ್ಪನು ಎಂಬ ಪದ್ಯದಿಂದ. ರಸಸಮರ್ಪಣೋಪಾಸನೆಯಿಂದ ಪರಮಾತ್ಮನು ಪ್ರಸನ್ನನಾಗಿ ಸಂಸಾರಸಮುದ್ರವನ್ನು ಬತ್ತಿಸಿ ಸ್ವರೂಪಭೂತ ಚಿದಾನಂದವನ್ನು ಅಭಿವ್ಯಕ್ತಿಗೊಳಿಸುವನು ಎಂಬುದು ಈ ಪದ್ಯದ ಭಾವ ॥ ೩೩ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಸ್ವಲ್ಪ ಯತ್ನದಿಂದ ಬಂದಷ್ಟರಲ್ಲಿ ಸಂತುಷ್ಟರಾಗಿ ಭಜಿಸುವವರಿಗೆ ದೇವರು ಒಲಿಯುವನೆಂದು ಅಧ್ಯಾಯಾಭಿಪ್ರಾಯ ಮುಗಿಸುತ್ತಾರೆ, ಸತ್ಯನೆಂದು. ಚ್ಯುತಿ

ಇಲ್ಲದ ಅಭಿಪ್ರಾಯವುಳ್ಳ ದೇವರು, ಸದಾ ಎಂದರೆ ಯಾವಾಗ್ಯೂ. ಎಲ್ಲಕಾಲದಲ್ಲಿಯೂ ಏನಿತ್ತರೆ ಎಂದರೆ, **ಅಯಾಚಿತೇನ ಲಬ್ಧೇನ ಅಲ್ಪಯತ್ನೇನ ವಾ ಪುನಃ** ಎಂಬ ವಿಷ್ಣುರಹಸ್ಯೋಕ್ತಿಯಂತೆ, ಅನಾಯಾಸವಾಗಿ ದೊರಕಿದಷ್ಟರಲ್ಲೇ ಸಂತೋಷಪಟ್ಟು ಪುರುಷಾರ್ಥವೆಂದರಿತು ಎಂದರೆ, ಹೀಗೆ ಬರತಕ್ಕದ್ದೇ ಸಂಪ್ರಾಪ್ತವೆಂದು ತಿಳಿದು ದೇವರನ್ನು ಸ್ಮರಿಸುತ್ತಾ ಅನುಭವಿಸುತ್ತಿರುವುದು. ನಿತ್ಯಸುಖಪೂರ್ಣನಾದ ಪರಮ ಅನಿಮಿತ್ತ ಬಂಧುವಾದ ಜಗನ್ನಾಥವಿಠ್ಠಲನೆಂಬ ಸ್ವಾಮಿಯು ಭವಾಂಬುಧಿ ಎಂಬ ಜನ್ಮಾದಿ ಸಂಸೃತಿಯನ್ನು ಬತ್ತಿಸಿ ಪರಿಹರಿಸಿ, ಚಿತ್ಸುಖವೆಂಬ ಜ್ಞಾನಾನಂದವ್ಯಕ್ತರೂಪ ಮುಕ್ತಿಯನ್ನು ಕೊಡುತ್ತಾ ಇರುವನು.

**ಯಸ್ಯ ಯದ್ದೈವ ವಿಹಿತಂ ಸ ತೇನ ಸುಖದುಃಖಯೋಃ ।**
**ಆತ್ಮಾನಂ ತೋಷಯನ್ದೇಹೀ ತಮಸಃ ಪಾರಮೃಚ್ಛತಿ ॥**

ಎಂಬ ಭಾಗವತಾರ್ಥವು ಹೇಳಲ್ಪಟ್ಟಿತು. ॥ ೩೩ ॥

## ಈ ಸಂಧಿಯ ಮುಖ್ಯ ಸಾರಾಂಶ

ಈ ಸಂಧಿಯಲ್ಲಿ ಹರಿನಾಮಮಾಹಾತ್ಮ್ಯ, ಸರ್ವಕರ್ಮಸಮರ್ಪಣೆ ಎಂಬ ಪರಮಾತ್ಮನ ಮುಖ್ಯಪೂಜೆಯ ಅನುಸಂಧಾನ, ನಿರ್ಗುಣೋಪಾಸನೆಯ ಮಾಹಾತ್ಮ್ಯ, ಧಾರುಣಿ ಮೊದಲಾದ್ದರಲ್ಲಿರುವ ಭಗವದ್ರೂಪಗಳು, ಛಾಂದೋಗ್ಯೋಪನಿಷತ್ತಿನಲ್ಲಿ ವರ್ಣಿಸಿರುವ ಉದ್ಗೀಥಾದಿ ರೂಪಗಳ ಮಹಿಮೆ, ದೃಷ್ಟಿಗತ ಭಗವದ್ರೂಪಗಳು, ಗೋಜ ಅದ್ರಿಜಾದಿ ರೂಪಗಳು, ಪರಮಾತ್ಮನ ಸರ್ವಜೀವಭೋಗ್ಯ ಪದಾರ್ಥಗತ ಷಡ್ವಿಧರಸಗಳಲ್ಲಿರುವ ಸ್ವರೂಪರಸವೆಂಬ ಭಗವದ್ಭೋಗ್ಯರಸಗಳ ಜ್ಞಾನವಿಚಾರ, ಸರ್ವಸಮರ್ಪಣೆ ಎಂಬ ಅನುಸಂಧಾನದಿಂದ ಅನಾದಿಸಂಸಾರವೆಂಬ ಸಮುದ್ರವನ್ನು ಬತ್ತಿಸಿ ಸ್ವರೂಪವ್ಯಕ್ತಿ ಎಂಬ ಮೋಕ್ಷವನ್ನು ಶ್ರೀಪರಮಾತ್ಮ ಅನುಗ್ರಹಿಸುತ್ತಾನೆಂತ ವರ್ಣಿಸಿರುತ್ತಾರೆ. ಇದು ಅತ್ಯುತ್ಕೃಷ್ಟವಾದ ಮಹಾಪ್ರಮೇಯಗಳು ಅಡಗಿರುವ, ಸದಾ ಅನುಸಂಧಾನಕ್ಕೆ ತರಬೇಕಾದ ಮಹಾಪುರುಷಾರ್ಥಪ್ರದವಾದ ಶಾಸ್ತ್ರರಹಸ್ಯವು.

# ಸರ್ವವ್ಯಾಖ್ಯಾನಸಾರಸಂಗ್ರಹ

ಜಗತ್ತಿನಲ್ಲಿ ನಡೆಯುತ್ತಿರುವ ವ್ಯಾಪಾರಗಳೆಲ್ಲವೂ ಶ್ರೀಪರಮಾತ್ಮನ ಇಚ್ಛೆಯಂತೆ ನಡೆಯುತ್ತಿರುವುವು. ತೇನ ವಿನಾ ತೃಣಮಪಿ ನ ಚಲತಿ–ಎಂಬಂತೆ ಅವನ ಸಂಕಲ್ಪವಿಲ್ಲದೆ ಒಂದು ಹುಲ್ಲುಕಡ್ಡಿಯೂ ಸಹ ಚಲಿಸಲಾರದು. ಅವರವರ ಸ್ವರೂಪಯೋಗ್ಯತೆಗನುಗುಣವಾಗಿ, ಸರ್ವತಂತ್ರಸ್ವತಂತ್ರನಾದ ಜಗನ್ನಿಯಾಮಕನು ಕ್ರಿಯಾಭಿವ್ಯಕ್ತಿಯನ್ನುಂಟುಮಾಡುವುದರಿಂದ, ಅವನಿಗೆ ಸತ್ಯಸಂಕಲ್ಪನೆಂದು ಹೆಸರು. ಅವನ ಸಂಕಲ್ಪರೂಪವಾದ ಇಚ್ಛೆಯು ನಿತ್ಯಸತ್ಯಭೂತವಾದುದು. ಅದಕ್ಕೆ ಪ್ರತಿಬಂಧಕಗಳು ಎಂದೆಂದಿಗೂ ಇಲ್ಲ.

ಚರಾಚರಾತ್ಮಕವಾದ ಈ ಸಮಗ್ರ ಜಗತ್ತು ಈಶಾವಾಸ್ಯವಾದದ್ದು. ಅವನ ಅಧೀನದಲ್ಲಿದೆ. ಜಗತ್ತಿನಲ್ಲಿ ಎಲ್ಲೆಲ್ಲಿಯೂ ವ್ಯಾಪ್ತನಾಗಿರುವ, ಸತ್ಯಸಂಕಲ್ಪನಿಂದ ನಮಗೆ ಏನು ಕೊಡಲ್ಪಟ್ಟಿದೆಯೋ ಅದೇ ನಮಗೆ ಪರಮಪ್ರಸಾದವು "ಅಯಾಚಿತೇನ ಲಬ್ಧೇನ ಅಲ್ಪಯತ್ನೇನ ವಾ ಪುನಃ ॥" ಎಂಬ ವಿಷ್ಣುರಹಸ್ಯೋಕ್ತಿಯಂತೆ ಅನಾಯಾಸವಾಗಿ ದೊರೆತಷ್ಟರಲ್ಲಿಯೇ ಸಂತೋಷಪಡುತ್ತಿರಬೇಕು. ಅವನ ಚಿತ್ತವೇ ನಮ್ಮ ಪಾಲಿನ ಭಾಗ್ಯವೆಂಬ ಉತ್ತಮಾನುಸಂಧಾನವಿರಬೇಕು. ಅಂತಹ ಜನರೇ ಸದಾ ಸಂತೋಷವಾಗಿರುತ್ತಾರೆ. ನಮ್ಮ ಮನೋಭೀಷ್ಟಗಳನ್ನು ಪ್ರಚೋದಿಸುವವನೂ ಅವನೇ. ನಮಗೆ ಏನು ಲಭ್ಯವೋ ಅಷ್ಟುಮಾತ್ರ ಅವನ ಸಂಕಲ್ಪದಿಂದ ಪ್ರಾಪ್ತಿ.

"ಯದೃಚ್ಛಾಲಾಭ ತುಷ್ಟಸ್ಯ ತೇಜೋ ವಿಪ್ರಸ ವರ್ಧತೇ" ಎಂಬ ಭಾಗವತ ದಶಮಸ್ಕಂಧೋಕ್ತಿ ವರ್ಣನದಂತೆ, ಈಶ್ವರಪ್ರೇರಣೆಯಿಂದ ಲಬ್ಧವಾದುದರಲ್ಲಿಯೇ ಯಾವನು ಸಂತುಷ್ಟಿಯಿಂದ ಸಂತೋಷಪಡುವನೋ, ಅವನಿಗ ತೇಜಸ್ಸು ವೃದ್ಧಿಯಾಗುವುದು.

"ಅಸಂತುಷ್ಟಃ ಸುಖಂ ವಿಪ್ರ ನಾಪ್ನೋತ್ಯಪಿ ಸುರೇಶ್ವರಃ". ಅವನು ದೇವೇಂದ್ರನೇ ಆಗಿರಲಿ, ಅಸಂತುಷ್ಟನಾದರೆ, ಅಂತಹವನು ಸುಖವನ್ನು ಹೊಂದುವುದಿಲ್ಲ ಎಂದು ಶಾಸ್ತ್ರೋಕ್ತಿ.

ಆ ಸತ್ಯಸಂಕಲ್ಪನು ಏನಿತ್ತುದೇ, ಮಹಾಭಾಗ್ಯವೆಂದು ತಿಳಿದು, ಅಧಿಕವಾದ ಸಂತೋಷದಿಂದ ಶ್ರೀಪರಮಾತ್ಮನನ್ನು ಭಜಿಸುತ್ತಾ, ಅವನಿಂದ ದತ್ತವಾದ ಷ್ಟನ್ನು ಅನುಭವಿಸಬೇಕು.

ಶ್ರೀಹರಿಯು ನಿತ್ಯನು. ಶಾಶ್ವತನು. ಅಚ್ಯುತನಾಮಕನಾದ ಆ ಅಪ್ರಮೇಯನು ನಿತ್ಯತೃಪ್ತನು. ಸ್ವರಮಣನು. ಆಪ್ತಕಾಮನು. ನಿತ್ಯಸುಖಸಂಪೂರ್ಣನು. ಸರ್ವೋತ್ತಮನು. ಸಮಾಧಿಕಶೂನ್ಯನು. ಪರಮ ಸುಹೃತ್ತಮನು. ಪುರುಷೋತ್ತಮನು. ಜಗತ್ಸ್ವಾಮಿಯು. ಸ್ಥಾವರಜಂಗಮಾತ್ಮಕವಾದ ಸಮಗ್ರ ಬ್ರಹ್ಮಾಂಡಕ್ಕೆ ಪ್ರಭುವು. ಇಂತಹ ಜಗನ್ನಾಥವಿಠಲನು ಪೂರ್ವೋಕ್ತ ಜ್ಞಾನಾನುಸಂಧಾನವುಳ್ಳ ಅಂತರಂಗಭಕ್ತರನ್ನು ದುಸ್ತರವಾದ ಸಂಸಾರಾಖ್ಯವಾದ ಭವಸಾಗರದಿಂದ ದಾಟಿಸಿ ನಿಜಧಾಮವಾದ ಮುಕ್ತಸ್ಥಾನಗಳಲ್ಲಿಟ್ಟು ನಿತ್ಯಾನಂದರೂಪವಾದ ಮುಕ್ತಸುಖವನ್ನೀಯುವನು.

ಸತ್ಯಸಂಕಲ್ಪನ ಇಚ್ಛೆಯಂತೆ ನಡೆಯುವ ಸರ್ವಸಮರ್ಪಣಾಭಾವದಿಂದ ಇರುವ ಸಜ್ಜನರೇ ನಿಜವಾದ ಭಗವದ್ಭಕ್ತರು. ಅವರಿಗೆ ದುಃಖಾದಿಗಳ ಸಂಪರ್ಕವು ಎಂದೆಂದಿಗೂ ಇಲ್ಲ, ಎಂಬ ಪರಮೋತ್ಕೃಷ್ಟತತ್ವವನ್ನು ತಿಳಿಸುತ್ತಾರೆ.

ಸರ್ವವ್ಯಾಖ್ಯಾನಸಾರಸಂಗ್ರಹವು ಸಮಾಪ್ತಿಯಾಯಿತು.

॥ ಶ್ರೀಗರುಡವಾಹನಲಕ್ಷ್ಮೀನರಸಿಂಹಾರ್ಪಣಮಸ್ತು ॥

## ಶ್ರೀ ಹರಿದಾಸಸಾಹಿತ್ಯ ಪ್ರಚಾರ ಗ್ರಂಥಮಾಲೆ

# ನಮ್ಮಲ್ಲಿ ದೊರೆಯುವ ಪುಸ್ತಕಗಳು

| | | |
|---|---|---|
| ೧. | ಮಂಗಳಾಚರಣಸಂಧಿ (ಸಂಪುಟ ೧–ತೃತೀಯ ಮುದ್ರಣ) | ರೂ. ೧೫–೦೦ |
| ೨. | ಕರುಣಾಸಂಧಿ (ಸಂಪುಟ ೨–ದ್ವಿತೀಯ ಮುದ್ರಣ) | ರೂ. ೨೫–೦೦ |
| ೩. | ಪಂಚಮಹಾಯಜ್ಞಸಂಧಿ (ಸಂಪುಟ ೬) | ರೂ. ೨೦–೦೦ |
| ೪. | ಪಂಚತನ್ಮಾತ್ರಾಸಂಧಿ (ಸಂಪುಟ ೭) | ರೂ. ೨೦–೦೦ |
| ೫. | ಮಾತೃಕಾದಿ (ಸಂಪುಟ ೮) | ರೂ. ೨೦–೦೦ |
| ೬. | ವರ್ಣಪ್ರಕ್ರಿಯ ಸಂಧಿ (ಸಂಪುಟ ೯) | ರೂ. ೨೦–೦೦ |
| ೭. | ಸರ್ವಪ್ರತೀಕಸಂದಿ (ಸಂಪುಟ ೧೦) | ರೂ. ೩೦–೦೦ |
| ೮. | ಸ್ಥಾವರಜಂಗಮಸಂಧಿ (ಸಂಪುಟ ೧೧) | ರೂ. ೩೦–೦೦ |
| ೯. | ನಾಡೀಪ್ರಕರಣಸಂಧಿ (ಸಂಪುಟ ೧೨) | ರೂ. ೩೦–೦೦ |
| ೧೦. | ನಾಮಸ್ಮರಣಸಂಧಿ (ಸಂಪುಟ ೧೩) | ರೂ. ೩೦–೦೦ |

### ಇತರ ಗ್ರಂಥಗಳು

೧. ಶ್ರೀ ವಾದಿರಾಜಯತಿಕೃತ
**ಶ್ರೀ ಸ್ವಾಪ್ನವೃಂದಾವನಾಖ್ಯಾನಮ್** — ರೂ. ೨೦–೦೦
ಕನ್ನಡಲಿಪಿ ಮೂಲ ಮಾತ್ರ

೨. ಶ್ರೀ ವಿಜಯದಾಸರಿಂದ ರಚಿತ
**ತಾರತಮ್ಯ ಸುಳಾದಿಗಳು** — ರೂ. ೨೦–೦೦

೩. **ಶ್ರೀ ಹನುಮದ್ವೈಭವ** (ಸುಂದರಕಾಂಡ ಕಥಾವಿವರಣೆ) — ರೂ. ೨–೫೦

**ವಿನಂತಿ**

ವ್ಯಾಪ್ತಿಸಂಧಿ(ಸಂಪುಟ ೨), ಭೋಜನರಸವಿಭಾಗಸಂಧಿ (ಸಂಪುಟ ೪) ಮತ್ತು ವಿಭೂತಿಸಂಧಿ (ಸಂಪುಟ ೫) ಈ ಮೂರು ಸಂಧಿಗಳು **ಪುನರ್ಮುದ್ರಿತವಾಗಬೇಕಾಗಿವೆ.** ಉದಾರ ಧನಸಹಾಯ ದೊರೆತರೆ, ಪುನರ್ಮುದ್ರಿಸಲಾಗುವುದು.

**ಮುಂದಿನ ಪ್ರಕಟಣೆ :**

**ಪಿತೃಗಣಸಂಧಿಯು** ೧೪ನೆಯ ಸಂಪುಟದ ರೂಪದಲ್ಲಿ ಶೀಘ್ರದಲ್ಲಿಯೇ ಪ್ರಕಟವಾಗಲಿದೆ.